ಅಧ್ಯಕ್ಷರು : ಉತ್ತರ ಕೊಟ್ಟರೆ ಸಾಕು. ಬಿಡಿ.

5. ವಿತ್ತೀಯ ಕಾರ್ಯಕಲಾಪಗಳು

2014-15ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ (ಬೇಡಿಕೆ ಸಂಖ್ಯೆ-1) ಅನುದಾನ ಬೇಡಿಕೆಯ ಮೇಲೆ ಮುಂದುವರೆದ ಚರ್ಚೆ

ಅಧ್ಯಕ್ಷರು : ವಡ್ನಾಳ್ ರಾಜಣ್ಣನವರ ಹೆಸರನ್ನು ಕರೆದಿದ್ದೇವೆ. ತಲಾ 10 ನಿಮಿಷ ಸಮಯಾವಕಾಶ ಕೊಡೋಣ.

ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ) : ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳು. ನಮ್ಮಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ವ್ಯವಸಾಯ ಮಾಡುವ ಮನೆಮಂದಿಯೆಲ್ಲಾ ಸಾಯಿ' ಎಂದು ಹೇಳುತ್ತಾರೆ. ವ್ಯವಸಾಯ ಮನೆಮಂದಿಯೆಲ್ಲಾ ಸಾಯ ಎಂದು ಹೇಳುತ್ತಾರೆ. ಅದರ ಅರ್ಥ ಆ ರೈತನ ಕಷ್ಟ ಮತ್ತು ಸುಖ, ನೋವು-ನಲಿವು ಅವೆಲ್ಲವೂ ಅದರಲ್ಲಿ ಅಡಕವಾಗಿರುತ್ತವೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಅಧ್ಯಕ್ಷರೆ, ರೈತನ ಬಗ್ಗೆ ನಾವು ಸಾಕಷ್ಟು ಮಾತುಗಳನ್ನು ಆಡುತ್ತೇವೆ. ಈ ದೇಶದ ಬೆನ್ನೆಲುಬು ರೈತ, ಈ ರಾಷ್ಟ್ರಕ್ಕೆ ಅನ್ನವನ್ನು ಕೊಡುವಂತಹವನು ರೈತ ಎನ್ನುವ ಮಾತುಗಳನ್ನು ಪುಂಖಾನುಪುಂಖವಾಗಿ ಚುನಾವಣೆಯ ಸಂದರ್ಭದಲ್ಲಿ ಮಾತನಾಡಿ ಅವರಿಂದ ವೋಟುಗಳನ್ನು ಗಿಟ್ಟಿಸಿಕೊಂಡು ಬಂದಿರುತ್ತೇವೆ. ಆದರೆ, ಹಿಂದೆ ಆ ರೈತ ಯಾವರೀತಿ ಕೃಷಿಯಲ್ಲಿ ಕೆಲಸ ಮಾಡುತ್ತಿದ್ದ, ಇವತ್ತು ಯಾವ ರೀತಿ ಬದಲಾವಣೆಯಾಗಿದೆ ಎನ್ನುವುದನ್ನು ಗಮನಿಸಿದಾಗ, ಹಿಂದೆ ರೈತ ಪಟ್ಟಂತಹ ಕಷ್ಟ, ಅವನು ಮಾಡತಕ್ಕಂತಹ ವಿಧಾನಗಳನ್ನು ನೋಡಿದಾಗ ಬಹಳ ಕಷ್ಟಕರವಾದಂತಹ ಕೆಲಸವನ್ನು ಮಾಡಿರುವಂತಹ ಸಮುದಾನ ಯಾವುದಾದರೂ ಇದ್ದರೆ ಅದು ರೈತ ಸಮುದಾಯ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ರೈತರ ಪರಿಸ್ಥಿತಿ ಯಾವ ಹಂತವನ್ನು ಮುಟ್ಟಿದೆ ಎಂದರೆ, ರೈತನ ಮಗ ಇವತ್ತು ಮತ್ತೆ ರೈತನಾಗುವುದಕ್ಕೆ ಬಯಸುವುದಿಲ್ಲ. ನನ್ನ ಮಗ ಮತ್ತೆ ಕೃಷಿಯನ್ನು ಮಾಡಬೇಕು ಎನ್ನುವ ಬಯಕೆ ಇಲ್ಲದಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ.

ಅದೇ ಒಬ್ಬರು ಡಾಕ್ಟರ್ ತನ್ನ ಮಗನನ್ನು ಡಾಕ್ಟರ್ ಮಾಡಬೇಕೆಂದು ಅಪೇಕ್ಷೆ ಪಡುತ್ತಾನೆ. ಒಬ್ಬ ಇಂಜಿನಿಯರ್ ತನ್ನ ಮಗನನ್ನು ಇಂಜಿನಿಯರ್ ಮಾಡಬೇಕೆಂದು ಅಪೇಕ್ಷೆಪಡುತ್ತಾನೆ. ಒಬ್ಬ ರಾಜಕಾರಣಿ ನನ್ನ ಮಗ ರಾಜಕಾರಣಿ ಆಗಬೇಕು ಎನ್ನುವ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಆದರೆ, ಇವತ್ತು ಒಬ್ಬ ರೈತ ತನ್ನ ಮಗ ರೈತ ಆಗಲಿ ಎಂದು ಬಯಸಲಿಕ್ಕೆ ಸಾಧ್ಯವಿಲ್ಲದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣ ಅವರಿಗೆ ಸರ್ಕಾರ ಸರಿಯಾದ ರೀತಿಯ ಸಹಕಾರವನ್ನು ಇಲ್ಲಿಯವರೆಗೆ ಕೊಟ್ಟಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಹಿಂದೆ ಇದ್ದಂತಹ ರೈತ ಅವನು ಎಲ್ಲಾ ಕೆಲಸಗಳನ್ನು ಅವನೇ ಮಾಡಿಕೊಳ್ಳುತ್ತಿದ್ದ. ಅವನು ಕಷ್ಟಪಟ್ಟು ಭೂಮಿಯ ಉಳುಮೆ ಮಾಡುತ್ತಿದ್ದ. ಅವನಿಗೆ ಬೇಕಾದಂತಹ ಸಲಕರಣೆಗಳನ್ನು ಹಾಗೂ ಮುಟ್ಟುಗಳನ್ನು ಅವನೇ ಸ್ವತಃ ತಯಾರು ಮಾಡಿಕೊಳ್ಳುತ್ತಿದ್ದ. ಸ್ವತಃ ಬಿತ್ತನೆ ಬೀಜಗಳನ್ನು ತಯಾರು ಮಾಡಿಕೊಳ್ಳುತ್ತಿದ್ದ. ಅವನ ಜಮೀನಿಗೆ ಬೇಕಾದಂತಹ ಗೊಬ್ಬರವನ್ನು ಅಂದರೆ ಅವನೇ ಸ್ವಂತ ಗೊಬ್ಬರವನ್ನು ತಯಾರು ಮಾಡಿಕೊಳ್ಳುತ್ತಿದ್ದ. ಅಂದರೆ ಸರಿಯಾದ ರೀತಿಯಲ್ಲಿ ಬೆಳೆಯನ್ನು ಬೆಳೆದು ಈ ರಾಷ್ಟ್ರಕ್ಕೆ ಅನ್ನವನ್ನು ಕೊಡುವಂತಹ ರೈತ ಮುಂಚೆ ಇದ್ದ. ಏನೇ ಕಷ್ಟ ಬರಲಿ ನೆಮ್ಮದಿಯಿಂದ, ತೃಪ್ತಿಯಿಂದ ಬದುಕುತ್ತಿದ್ದ. ಅವನು ಬೆಳೆ ಬೆಳೆಯಲಿಕ್ಕೆ ಎಷ್ಟು ಕಷ್ಟ ಪಡುತ್ತಿದ್ದ. ಅವೆಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಹೋದರೆ ಒಬ್ಬ ರೈತ ಅವನ ಮನೆಯಲ್ಲಿರತಕ್ಕಂತಹ ಹೆಂಗಸರು, ಮಕ್ಕಳು ಜಮೀನಿನಲ್ಲಿ ಕೆಲಸ ಮಾಡಿ ಉತ್ತಮವಾದಂತಹ ಬೆಳೆಯನ್ನು ಬೆಳೆಯುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದ. ಅವತ್ತಿನ ಬೆಳೆಯ ಪದ್ಧತಿ ಹೇಗಿತ್ತು ಎಂದರೆ ಅವನಿಗೆ 10–20 ಎಕರೆ ಜಮೀನು ಇಲ್ಲದೇ ಇರಬಹುದು, ಅವನಿಗೆ 5–6 ಎಕರೆ ಜಮೀನಿದ್ದರೆ ಆ ಜಮೀನಿನಲ್ಲಿ ಅವನು ಒಂದೊಂದು ಬೆಳೆಯನ್ನು ಎರಡು ಎರಡು ಎಕರೆಯಲ್ಲಿ ಬೆಳೆಯುವಂತಹ ಪದ್ಧತಿಯನ್ನು ರೂಢಿ ಮಾಡಿಕೊಂಡಿದ್ದ. ಒಂದೆರಡು ಎಕರೆಯಲ್ಲಿ ರಾಗಿ, ಎರಡು ಎಕರೆಯಲ್ಲಿ ಜೋಳ, ಎರಡು ಎಕರೆಯಲ್ಲಿ ಹತ್ತಿ, ಒಂದೆರಡು ಎಕರೆಯಲ್ಲಿ ಮೆಣಸು ಈ ರೀತಿಯ ಬೇರೆ ಬೇರೆ ಬೆಳೆಗಳನ್ನು ಬೆಳೆಯುವಂತಹ ಪದ್ಧತಿಯನ್ನು ರೂಢಿ ಮಾಡಿಕೊಂಡು ಬಂದಿದ್ದಂತಹ ರೈತನ ಪರಿಸ್ಥಿತಿ ಈಗ ಏನಾಗಿದೆ ಎಂದರೆ, ಎಲ್ಲವನ್ನೂ ಬಿಟ್ಟು ಹೋಗೆ ಬೇರೆ ದಾರಿಯನ್ನು ಹಿಡಿಯುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಪ್ರತಿಯೊಬ್ಬ ರೈತನೂ

ಸಹ ಅವನ ಹೊಲದಲ್ಲಿ ಒಂದು ವರ್ಷ ಹಾಕಿದ ಬೆಳೆಯನ್ನು ಮುಂದಿನ ವರ್ಷ ಹಾಕುತ್ತಿರಲಿಲ್ಲ. ಆ ಬೆಳೆಯನ್ನು ಬದಲಾಯಿಸಬೇಕು ಎನ್ನುವ ಪದ್ಧತಿ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯಬೇಕು ಎನ್ನುವ ಪದ್ಧತಿ, ಅವಲಂಬನೆಯನ್ನು ಮಾಡಿಕೊಂಡು ಬಂದಿದ್ದ ರೈತ ಉತ್ತಮವಾದಂತಹ ಅವತ್ತಿನ ಕಾಲಕ್ಕೆ ಪರವಾಗಿಲ್ಲವೆನ್ನುವ ಜೀವನವನ್ನು ನಡೆಸಿಕೊಂಡು ಬರುತ್ತಿದ್ದ. ಆ ಪದ್ಧತಿಗಳಿಗೆ ಇವತ್ತು ತಿಲಾಂಜಲಿಯನ್ನು ಇಟ್ಟಿರುವುದನ್ನು ನಾವು ಕಾಣುತ್ತೇವೆ. ಇವತ್ತಿನ ಪರಿಸ್ಥಿತಿಗೂ ಹಾಗೂ ಅವತ್ತಿನ ಪರಿಸ್ಥಿತಿಗೂ ಎಷ್ಟು ವ್ಯತ್ಯಾಸವಿದೆ ಎಂದರೆ ಹೇಳುವುದಕ್ಕೆ ಸಾಧ್ಯವಿಲ್ಲದಷ್ಟು ವ್ಯತ್ಯಾಸಗಳನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ಒಬ್ಬ ರೈತ ಅವನಿಗೆ ಬೇಕಾದಂತಹ ಅಂದರೆ ಜಮೀನಿನಲ್ಲಿ ಕೆಲಸ ಮಾಡಲು ಬೇಕಾದಂತಹ ಎಲ್ಲಾ ಉಪಕರಣಗಳನ್ನು ಅವನು ಸ್ವತಃ ಅವನ ಹಳ್ಳಿಯಲ್ಲಿಯೇ ತಯಾರು ಮಾಡಿಕೊಳ್ಳುತ್ತಿದ್ದ. ಪೇಟೆಗೆ ಬರಬೇಕಾದಂತಹ ಅವಶ್ಯಕತೆ ಇರಲಿಲ್ಲ. ಅವನಿಗೆ ಬೇಕಾದಂತಹ ಬಿತ್ತನೆ ಬೀಜಗಳನ್ನು ಅವನೇ ರೆಡಿ ಮಾಡಿಕೊಳ್ಳುತ್ತಿದ್ದ. ಅವನ ಹೊಲದಲ್ಲಿಯೇ ಬೆಳೆದಂತಹ ಬೆಳೆಯಲ್ಲಿ ಯಾವ ಬಿತ್ತನೆ ಬೀಜವನ್ನು ತೆಗೆದಿಟ್ಟುಕೊಳ್ಳಬೇಕೆಂದು ನೋಡಿಕೊಂಡು ಆ ಬಿತ್ತನೆಬೀಜಗಳನ್ನು ಇಟ್ಟುಕೊಳ್ಳುವಂತಹ ಕೆಲಸ ಮಾಡುತ್ತಿದ್ದ. ಅವನಿಗೆ ಬೇಕಾದಂತಹ ಉಪಕರಣಗಳನ್ನು ನೇಗಿಲು ಇರಬಹುದು, ಕುಂಟೆ ಇರಬಹುದು, ಕೊರಡು ಇರಬಹುದು, ವ್ಯವಸಾಯಕ್ಕೆ ಬೇಕಾದಂತಹ ಎಲ್ಲಾ ಉಪಕರಣಗಳನ್ನು ಅವನೇ ಹಳ್ಳಿಯಲ್ಲಿ ತಯಾರು ಮಾಡಿಕೊಳ್ಳುವಂತಹ ಪದ್ಧತಿಯಿಂದ ವ್ಯವಸಾಯ ಮಾಡುತ್ತಿದ್ದ. ಮಾನ್ಯ ಉಪಾಧ್ಯಕ್ಷರೆ, ತಾವು ಮುಖ್ಯವಾಗಿ ಗಮನಿಸಬೇಕಾದಂತಹ ವಿಚಾರ ಅವನು ಹೊಲದಲ್ಲಿ ಒಂದು ಸಾಲನ್ನು ಹೊಡೆದರೆ ಒಬ್ಬ ಇಂಜಿನಿಯರ್ white paper ಮೇಲೆ ಲೈನ್ ಎಳೆಯುವುದಕ್ಕೆ ಸ್ಕೇಲ್ ತೆಗೆದುಕೊಳ್ಳುತ್ತಾನೆ. ಆದರೆ ಆ ರೈತ ಸುಮಾರು 300–400 ಮೀಟರ್ ಉದ್ದ ಲೈನ್ ಅನ್ನು ಎಷ್ಟು ಸಲೀಸಾಗಿ ಮಾಡುತ್ತಿದ್ದ ಎಂದರೆ, ಅವಿದ್ಯಾವಂತರಾದರೂ ಅಷ್ಟು ಅಚ್ಚುಕಟ್ಟಾಗಿ, ನೀಟ್ ಆಗಿ, ನಿಷ್ಠೆಯಲ್ಲಿ ಕೆಲಸ ಮಾಡಿರುವುದನ್ನು ನಾವು ಕಾಣುತ್ತೇವೆ. ಅವನಿಗೆ ಜೊತೆಗೆ ಸಹಕಾರಿಗಳಾಗಿ ಎತ್ತುಗಳೂ ಸಹ ಅಷ್ಟೇ ಒಂದು ರೀತಿಯಲ್ಲಿ ಸಹಕಾರ ಮಾಡಿರುವುದನ್ನು ನಾವು ಹಳ್ಳಿಗಳಲ್ಲಿ ಗಮನಿಸುತ್ತಿದ್ದೇವೆ. ಇಷ್ಟೆಲ್ಲಾ ಕಷ್ಟಪಟ್ಟು ಅವನು ಉಳುಮೆ ಮಾಡಿ, ಬಿತ್ತನೆ ಮಾಡಿ, ಪೈರನ್ನು ಬೆಳೆದು ಕಣ ಸುಗ್ಗಿಯನ್ನು

ಮಾಡತಕ್ಕಂತಹ ವಿಧಾನ ಹಳ್ಳಿಗಳಲ್ಲಿ ಬಹಳ ವಿಶೇಷವಾಗಿರುವಂತಹದ್ದು. ಆದರೆ, ಆವತ್ತು ಹಳ್ಳಿಗಳಲ್ಲಿರತಕ್ಕಂತಹ ಕಣಗಳನ್ನು ಅವನೇ ಮಾಡಿಕೊಳ್ಳುತ್ತಿದ್ದ. ಹರಳು ಕಣ ಎಂದು ಮಾಡಿಕೊಂಡು, ನೀರು ಹಾಕಿಕೊಂಡು, ದನ-ಕರುಗಳಿಂದ ತುಳಿಸಿಕೊಂಡು ಸಗಣಿಯನ್ನು ಸಾರಿಸಿಕೊಂಡು ಕಣವನ್ನು ಮಾಡಿದರೆ, ಆ ಕಣದಲ್ಲಿ ಸುಗ್ಗಿಯನ್ನು ಮಾಡಿದರೆ, ಸುಗ್ಗಿಯನ್ನು ಮಾಡಿದಂತಹ ರಾಗಿ ಇರಬಹುದು, ಜೋಳವಿರಬಹುದು, ಬೇರೆ ಯಾವುದೇ ಪದಾರ್ಥಗಳನ್ನು ಬೆಳೆದು ಅವನು ಕಣಸುಗ್ಗಿಯನ್ನು ಮಾಡಿದರೆ, ಅದರಲ್ಲಿ ಒಂದು ಕಲು ಕೂಡ ಸಿಗದಂತಹ ರೀತಿಯಲ್ಲಿ ಅವನು ಕಣ ಸುಗ್ಗಿಯನ್ನು ಮಾಡುತ್ತಿದ್ದ. ಆದರೆ, ಇವತ್ತು ಅವೆಲ್ಲಾ ಹೋಗಿ ಬಿಟ್ಟಿವೆ. ಆ ಕಣ ಸುಗ್ಗಿಯಿಲ್ಲ. ಬಿತ್ತನೆಯಂತಹ ಕೆಲಸಗಳಲ್ಲಿ ಆ ರೀತಿಯ ಒಂದು ಸಂತೋಷನ್ನು ಕಾಣದೇ ಇರತಕ್ಕಂತಹ ಪರಿಸ್ಥಿತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಸರ್ಕಾರಗಳು ಬರುತ್ತಾ, ಬರುತ್ತಾ ಏನಾಗಿವೆ? ಚುನಾವಣೆ ಸಂದರ್ಭದಲ್ಲಿ ರೈತನಿಗೆ ಅನೇಕ ಆಶ್ವಾಸನೆಗಳನ್ನು, ಭರವಸೆಗಳನ್ನು ಕೊಡುತ್ತಾ ಚುನಾವಣೆಯಲ್ಲಿ ಗೆದ್ದು ಬಂದು ಸರ್ಕಾರವನ್ನು ನಡೆಸುವಂತಹ ಸಂದರ್ಭದಲ್ಲಿ ಅವರನ್ನು ಮರೆತಿರುವುದನ್ನು ನಾವು ಕಾಣುತ್ತೇವೆ. ಇವತ್ತಿನ ಪರಿಸ್ಥಿತಿಯಲ್ಲಿ ನಿಮಗೆ ಬಿತ್ತನೆ ಬೀಜ ಕೊಡುತ್ತೇವೆ, ಗೊಬ್ಬರ ಕೊಡುತ್ತೇವೆ ಎಂದು ಹೇಳಿ ಕಳಪೆ ಬಿತ್ತನೆ ಬೀಜಗಳನ್ನು ಕೊಟ್ಟಿರುವುದನ್ನು ನಾವು ನೋಡುತ್ತಿದ್ದೇವೆ. ಸಮಯಕ್ಕೆ ಸರಿಯಾಗಿ ರೈತನಿಗೆ ಗೊಬ್ಬರ ಸಿಗದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ನಾವು ಹೇಳುವುದು ಒಂದು, ಮಾಡುವುದು ಒಂದು ಆಗಬಾರದು. ಇವತ್ತು ಸರ್ಕಾರ ಯಾವುದೇ ಒಂದು ಸಂದರ್ಭದಲ್ಲಿ ರೈತನನ್ನು ಕಡೆಗಾಣಿಸದ ರೀತಿಯಲ್ಲಿ ನೋಡಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನೋಡಿ ಒಬ್ಬ ರೈತ ಬಿತ್ತನೆ ಬೀಜ ತರುವುದಕ್ಕೆ ಹೋದರೆ ಅವನಿಗೆ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜ ಸಿಗುವುದಿಲ್ಲ. ಗೊಬ್ಬರ ತರುವುದಕ್ಕೆ ಹೋದರೆ ಸಮಯಕ್ಕೆ ಸರಿಯಾಗಿ ಗೊಬ್ಬರ ಸಿಗುವುದಿಲ್ಲ. ಇವತ್ತು ಮುಂಗಾರು ಮಳೆ ಬಿದ್ದರೆ ಅವನಿಗೆ ಗೊಬ್ಬರ ಬೇಕು, ಬಿತ್ತನೆ ಬೀಜ ಬೇಕು, ಅವುಗಳು ಮನೆಯಲ್ಲಿ ಇರಬೇಕು. ಅವುಗಳನ್ನು ಯಾವ ಸಂದರ್ಭದಲ್ಲಿ ಬಿತ್ತಬೇಕೋ ಅಂದರೆ ನಾಳೆ ಬಿತ್ತಬೇಕು ಎಂದರೆ ನಾಳೆಗೆ

ಬಿತ್ತಲಿಕ್ಕೆ ಅವಕಾಶ ಇರಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾಗಬೇಕಾಗುತ್ತದೆ. ಆದರೆ, ಅದು ಯಾವುದೂ ಆಗದೇ ಇರತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡುತ್ತೇವೆ. ಇವತ್ತಿನ ದಿವಸ ಅನೇಕ ಬಾರಿ ನಾವು ನೋಡಿದ್ದೇವೆ.

ಇವತ್ತಿನ ದಿವಸ ಅನೇಕ ಘಟನೆಗಳನ್ನು ನೋಡಿದ್ದೇವೆ. ಬೀಜಕ್ಕೋಸ್ಕರ ಗೊಬ್ಬರಕ್ಕೋಸ್ಕರ ಗಲಾಟೆಯಾಗಿರುವುದು, ರೈತರ ಮೇಲೆ ಗೋಲಿಬಾರ್ ಆಗಿ ರೈತರು ಸತ್ತಿರುವ ಉದಾಹರಣೆಗಳು ನಮ್ಮ ಕಣ್ಣು ಮುಂದೆ ಇವೆ. ಯಾವುದೇ ಸರ್ಕಾರವಿರಬಹುದು, ಆ ಸರ್ಕಾರ ಈ ಸರ್ಕಾರ ಎಂದು ಟೀಕೆ ಮಾಡುವ ಬದಲು ಸರ್ಕಾರಗಳು ರೈತರನ್ನು ಗಮನದಲ್ಲಿಟ್ಟುಕೊಂಡು ಅವನಿಗೆ ಬೇಕಾದಂತಹ ಸಲಕರಣೆಗಳನ್ನು, ಸವಲತ್ತುಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಕೃಷಿ ಸಚಿವರು ಯುವಕರಾಗಿದ್ದು, ಕೆಲಸ ಮಾಡುವ ಉತ್ಸಾಹ ಅವರಲ್ಲಿದೆ. ಆದ್ದರಿಂದ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಮುಂಗಾರು ಮಳೆ ಬಿದ್ದ ತಕ್ಷಣ ರೈತರು ಉಪಕರಣಗಳನ್ನು ಕೇಳುವುದಕ್ಕೆ ಕೃಷಿ ಇಲಾಖೆಗೆ ಹೋದರೆ ಉಪಕರಣ ಬಂದಿಲ್ಲವೆಂದು ಎಂಟು ದಿವಸ ಹೇಳುತ್ತಾರೆ, ಬಂದಿದೆಯೆಂದು ಎಂಟು ದಿವಸವಾದ ಮೇಲೆ ಹೇಳುತ್ತಾರೆ, ಅದಾದ ನಂತರ ಬಂದಿದೆ ಕೊಡಿಯೆಂದು ಕೇಳಿದರೆ ಇನ್ನೂ ಆದೇಶ ಬಂದಿಲ್ಲವೆಂದು ಎಂಟು ದಿವಸ ಹೇಳುತ್ತಾರೆ. ನಂತರ ನಾಲ್ಕೈದು ರೈತರಿಗೆ ಉಪಕರಣಗಳನ್ನು ಕೊಟ್ಟು ಐದನೆಯವರಿಗೆ ಇಲ್ಲವೆಂದು ಹೇಳುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಯಾವ ರೈತ, ಕೃಷಿಕರಿದ್ದಾರೆ ಅವರಿಗೆ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಉತ್ತಮ ಗುಣಮಟ್ಟದ ಬೀಜವನ್ನು ಕೊಡುವ ಕೆಲಸವಾಗಬೇಕು. ಒಂದು ಬಾರಿ ರೈತ ಭೂಮಿಗೆ ಬೀಜವನ್ನು ಹಾಕಿದರೆ ಧೈರ್ಯವಾಗಿರುವ ಪರಿಸ್ಥಿತಿ ನಿರ್ಮಾಣವಾಗುತ್ತಿಲ್ಲ. ಆ ಬೀಜ ಒಳ್ಳೆಯದೋ ಕೆಟ್ಟದೋ ಎಂಬ ಅನುಮಾನದಿಂದ ಬೀಜವನ್ನು ಹಾಕಿರುವುದನ್ನು ನೋಡುತ್ತಿದ್ದೇವೆ. ಒಂದು ಬಾರಿ ಬೀಜವನ್ನು ಭೂಮಿಗೆ ಹಾಕಿದರೆ ಒಂದು ವರ್ಷದ ಅವಧಿ ಹೋಗುತ್ತದೆ. ಆದ್ದರಿಂದ ಉತ್ತಮ ಗುಟಮಟ್ಟದ ಬೀಜವನ್ನು ಸಮರ್ಪಕವಾಗಿ ವ್ಯವಸ್ಥಿತವಾಗಿ ಸಮಯಕ್ಕೆ ಸರಿಯಾಗಿ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಅದೇ ರೀತಿ ರಾಸಾಯನಿಕ ಗೊಬ್ಬರಗಳ ವಿಚಾರವಾಗಿ ಹೇಳುವುದಾದರೆ, ರೈತರಿಗೆ ಯಾವ ಗೊಬ್ಬರ ಬೇಕೋ ಆ ಗೊಬ್ಬರವನ್ನು ಕೊಡುವ ವ್ಯವಸ್ಥೆಯಾಗಬೇಕು. ಅವನು

ಒಂದು ರಾಸಾಯನಿಕ ಗೊಬ್ಬರವನ್ನು ಕೇಳಿದರೆ ಇಲಾಖೆಯವರು ಇನ್ನೊಂದು ಗೊಬ್ಬರವನ್ನು ಕೊಡುತ್ತಾರೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಕೆಲಸವನ್ನು ಮಾಡಬೇಕು. ಅದರ ಜೊತೆಗೆ ಸರ್ಕಾರ ರೈತರಿಗೆ ಬೇಕಾದ ಕುಂಟೆ, ಕೊರಡು, ಗಾಡಿ ಇತ್ಯಾದಿ ಉಪಕರಣಗಳನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕೆಂಬ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇಷ್ಟೆಲ್ಲಾ ಕೆಲಸಗಳನ್ನು ಮಾಡಬೇಕಾದರೆ ಹಣಕಾಸಿನ ಸಹಕಾರ ಬೇಕಾಗುತ್ತದೆ. ಯಾವತ್ತೋ ಹಣ ಕೊಟ್ಟರೆ ಅವನಿಗೆ ಉಪಯೋಗವಾಗುವುದಿಲ್ಲ. ಮುಂಗಾರು ಮಳೆ ಬೀಳುವುದಕ್ಕೆ ಮೊದಲು ಸರಿಯಾದ ಸಮಯಕ್ಕೆ ಹಣವನ್ನು ಕೊಡುವ ಕೆಲಸವಾಗಬೇಕು. ಹಿಂದೆ ಇದ್ದಂತಹ ಸರ್ಕಾರ ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಬಹಳ ಸಾಲಗಳನ್ನು ಕೊಡುತ್ತೇವೆಂದು ಹೇಳಿದ್ದು, ಅದು ಎಷ್ಟರಮಟ್ಟಿಗೆ ಮುಟ್ಟಿದೆಯೆಂದು ಗೊತ್ತಿಲ್ಲ. ಬಡ್ಡಿ ರಹಿತವಾಗಿ ಮೂರು ಲಕ್ಷ ರೂಪಾಯಿಗಳವರೆಗೆ ಹಣವನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದು, ಅದನ್ನು ಕೊಡುವುದಕ್ಕೆ ತಯಾರಿದ್ದಾರೆ. ಈ ಹಣ ರೈತರಿಗೆ ಮುಟ್ಟುತ್ತದೆಯೋ ಇಲ್ಲವೋ ಎಂಬ ಬಗ್ಗೆ ಯೋಚನೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಸೇವಾ ಸಹಕಾರಿ ಸಂಘಗಳಲ್ಲಿ ಒಬ್ಬ ರೈತನಿಗೆ ಮೂರು ಲಕ್ಷ ರೂಪಾಯಿಗಳವರೆಗೆ ಸಾಲವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಯಾವುದೇ ಸೇವಾ ಸಹಕಾರಿ ಸಂಘದಲ್ಲಿ ಕೇವಲ 20,000, 30,000 ಹೆಚ್ಚೆಂದರೆ ಒಬ್ಬ ರೈತನಿಗೆ 50,000 ರೂಪಾಯಿಗಳಿಗಿಂತ ಹೆಚ್ಚು ಹಣ ಸಿಗುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ತಾವು ಮಾಡಿರುವ ಕಾರ್ಯಕ್ರಮವೇನಿದೆ ಅದರಿಂದ ನಿಜವಾದ ಬಡ ರೈತರಿಗೆ ಮೂರು ಲಕ್ಷ ರೂಪಾಯಿಗಳು ಸಿಕ್ಕರೆ ಮಾತ್ರ ಉತ್ತಮ ರೀತಿಯಲ್ಲಿ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿದೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ಖಡಾಖಂಡಿತವಾಗಿ ಎಲ್ಲಾ ರೈತರಿಗೆ ಬಡ್ಡಿ ರಹಿತವಾಗಿ ಮೂರು ಲಕ್ಷ ರೂಪಾಯಿಗಳ ಹಣ ಅವರಿಗೆ ದೊರೆಯುವ ವ್ಯವಸ್ಥೆಯಾಗಬೇಕು. ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಗೆ ರೈತರು ಹೋಗುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಯಾವುದೇ ಸಂದರ್ಭದಲ್ಲಿ ಸಾಲ ಕೊಡುವುದಕ್ಕಾಗುವುದಿಲ್ಲ. ಈ ಬ್ಯಾಂಕುಗಳು ಐದು ಲಕ್ಷ, ಹತ್ತು ಲಕ್ಷ ರೂಪಾಯಿಗಳವರೆಗೆ ರೈತರಿಗೆ ಸಾಲವನ್ನು ಕೊಡುತ್ತವೆ ಅಂತಹ ಪರಿಸ್ಥಿತಿಯಿದೆ ಇಲ್ಲವೆಂದು ಹೇಳುವುದಿಲ್ಲ.

ರೈತ ಅಷ್ಟು ನಂಬಿಕೆಯನ್ನು ಉಳಿಸಿಕೊಂಡಿದ್ದಾನೆ. ಆದರೆ ಈ ಬ್ಯಾಂಕುಗಳು ಹೆಚ್ಚು ಬಡ್ಡಿಯನ್ನು ತೆಗೆದುಕೊಳ್ಳುತ್ತವೆ. ಹಿಂದೆ ರೈತ ಹಳ್ಳಿಗಳಲ್ಲಿ ಸಾಲವನ್ನು ಮಾಡುವ ಸಂದರ್ಭದಲ್ಲಿ ದುಬಾರಿ ಬಡ್ಡಿಯನ್ನ ಕೊಡುತ್ತಿದ್ದ ಅದೇ ರೀತಿ ಇವತ್ತು ಬ್ಯಾಂಕುಗಳ ಪರಿಸ್ಥಿತಿಯಿರುವ ಸಂದರ್ಭದಲ್ಲಿ ಕೃಷಿ ಸಚಿವರು ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಘೋಷಣೆ ಮಾಡಿರುವ ಬಡ್ಡಿರಹಿತವಾದ ಮೂರು ಲಕ್ಷ ರೂಪಾಯಿಗಳು ಬಡ ರೈತರಿಗೆ ಸರಿಯಾದ ಸಮಯಕ್ಕೆ ಮುಟ್ಟುವ ವ್ಯವಸ್ಥೆಯಾಗಬೇಕು. ಆ ರೀತಿ ಆದರೆ ಮಾತ್ರ ರೈತರ ಬದುಕು ಹಸನಾಗುವುದಕ್ಕೆ ಸಾಧ್ಯವಾಗುತ್ತದೆ. ರೈತ ಕಷ್ಟಪಟ್ಟು ಬೆಳೆಯನ್ನು ಬೆಳೆಯುತ್ತಾನೆ ಬೆಳೆಯನ್ನು ಬೆಳೆಯುವಾಗ ಅನೇಕ ಕಷ್ಟಗಳು ಬರುತ್ತವೆ. ಒಮ್ಮೆ ಉತ್ತಮವಾದ ಬೆಳೆ ಬರುತ್ತದೆ ಆದರೆ ಮಳೆ ಕಾಲಕ್ಕೆ ಸರಿಯಾಗಿ ಬರದೇ ಬೆಳೆ ಬರದಿರುವಂತಹ ಪರಿಸ್ಥಿತಿಯಿದೆ. ಮಳೆ ಚೆನ್ನಾಗಿ ಬಂದು ಉತ್ತಮವಾದ ಫಸಲು ಬರುತ್ತದೆ ಆದರೆ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಿರುವ ಪರಿಸ್ಥಿತಿಯಿದೆ. ಆದ್ದರಿಂದ ಸರ್ಕಾರ ಇದೆಲ್ಲವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ರೈತ ಬೆಳೆದ ಬೆಳೆಯನ್ನು ರಕ್ಷಣೆ ಮಾಡುವುದಕ್ಕೆ ಅವನದೇ ಆದ ವಿಧಾನಗಳನ್ನು ಇಟ್ಟುಕೊಂಡಿದ್ದ.

ಉಪಾಧ್ಯಕ್ಷರು : ಬೇಗ Conclude ಮಾಡಿ.

ಶ್ರೀ ವಡ್ನಾಳ್ ರಾಜಣ್ಣ: ಅವನು ಬೆಳೆದ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕೆ, ಶೇಖರಣೆ ಮಾಡುವುದಕ್ಕೆ ಗೋಡೌನ್ ಇರಲಿಲ್ಲ. ಆದರೆ ಅವನದೇ ಆದ ವಿಧಾನದಲ್ಲಿ ನೆಲದಲ್ಲಿ ಹಗೇವುಗಳನ್ನು ಮಾಡಿ ರಕ್ಷಣೆಯನ್ನು, ಶೇಖರಣೆ ಮಾಡುತ್ತಿದ್ದ ಪಣತಗಳನ್ನು ಮಾಡಿ ಶೇಖರಣೆ ಮಾಡುತ್ತಿದ್ದ ಬೇಕಾದಂತಹ ಸಮಯದಲ್ಲಿ ಮಾರಾಟ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದ. ಇವತ್ತು ಕಾಲ ಬದಲಾವಣೆಯಾಗಿರುವ ಸಂದರ್ಭದಲ್ಲಿ ಅದಕ್ಕೆ ತಕ್ಕಂತೆ ಗೋಡೌನ್ ವ್ಯವಸ್ಥೆಯನ್ನು ಮಾಡುವ ಕೆಲಸವನ್ನು ನಮ್ಮ ಕೃಷಿ ಸಚಿವರು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಅದರ ಜೊತೆಯಲ್ಲಿ ಯಾವ್ಯಾವ ಜಮೀನಿನಲ್ಲಿ ಯಾವ್ಯಾವ ಬೆಳೆಯನ್ನು ಬೆಳೆಯಬೇಕು ಎಂಬ ಬಗ್ಗೆ ರೈತರಿಗೆ ಸಹಕಾರ ನೀಡಿ ಮಾಹಿತಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ರೈತರಿಗೆ ಪ್ರೋತ್ಸಾಹ ನೀಡುವುದಕ್ಕೋಸ್ಕರ ಇತ್ತೀಚಿನ ದಿನಗಳಲ್ಲಿ ಪ್ರಗತಿಪರ ರೈತ ಎಂದು ಹೇಳಿ ಕೃಷಿ ಜಾತ್ರೆಯನ್ನು ಮಾಡುವ ಮೂಲಕ ಮತ್ತು ವಸ್ತು ಪ್ರದರ್ಶನ

ಮಾಡುವ ಮುಖಾಂತರ ಅವನಿಗೆ ಬೇಕಾಗಿರುವ ಉಪಕರಣಗಳೇನು ಸಿಗುತ್ತವೆಂದು ತೋರಿಸುವುದಕ್ಕೋಸ್ಕರ ಇವತ್ತು ಆಧುನಿಕವಾಗಿ ಕೃಷಿ ತಾಂತ್ರಿಕತೆಗಳನ್ನು ಬಳಸಿಕೊಳ್ಳುವುದಕ್ಕೋಸ್ಕರ ರೈತರನ್ನು ಜಾಗೃತಿ ಮಾಡುವಂತಹ ಕೆಲಸ ನಡೆಯುತ್ತಿದೆ. ಇದನ್ನು ಮಾಡುವಂತಹ ಸಂದರ್ಭದಲ್ಲಿ ಯಾರು ಚೆನ್ನಾಗಿ ಬೆಳೆಯನ್ನು ಬೆಳೆಯುತ್ತಾರೋ ಅಂತಹ ರೈತರಿಗೆ ಪ್ರಗತಿಪರ ರೈತ ಎಂದು ಕೃಷಿ ಪ್ರಶಸ್ತಿ ಕೊಡುತ್ತಿರುವುದು ಸಂತೋಷದ ಸಂಗತಿಯಾಗಿದೆ. ಕೃಷಿ ಪ್ರಶಸ್ತಿ ನಿಜವಾದ ರೈತರಿಗೆ ಸಿಗಬೇಕು. ಯಾರೋ ಒಬ್ಬ ಎಂ.ಎಲ್.ಎ., ಎಂ.ಪಿ ಅಥವಾ ಮಂತ್ರಿಗಳು ಹೇಳಿದ್ದಾರೆಂದು ಅವರಿಗೆ ಸಿಗುವಂತಹ ವ್ಯವಸ್ಥೆಯಾಗಬಾರದು. ನಿಜವಾದ ಪ್ರಗತಿಪರ ರೈತರಿಗೆ ಪ್ರಶಸ್ತಿ ಸಿಗುವ ಕೆಲಸವಾಗಬೇಕು. ಈ ಮೂಲಕ ರೈತರಿಗೆ ಪ್ರೋತ್ಸಾಹ ನೀಡಿ ಕೃಷಿಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಏನು ವ್ಯವಸ್ಥೆ ಬೇಕೋ ಅದನ್ನು ಮಾಡಬೇಕೆಂಬ ವಿನಂತಿಯನ್ನು ಮಾನ್ಯ ಕೃಷಿ ಸಚಿವರಲ್ಲಿ ಮಾಡಿಕೊಳ್ಳುತ್ತೇನೆ. ಕೃಷಿಕನಾಗಲಿ ಅಥವಾ ಕಾರ್ಮಿಕನಾಗಲಿ ಅವನ ಹೊಲದಲ್ಲಿ, ಗದ್ದೆಯಲ್ಲಿ, ಜಮೀನಿನಲ್ಲಿ ರೈತ ಕೆಲಸ ಮಾಡುವ ಸಂದರ್ಭದಲ್ಲಿ ಹಾವು ಕಡಿತದಿಂದ, ಮರದಿಂದ ಬಿದ್ದು ಅಥವಾ ಕೃಷಿ ಸಂಬಂಧವಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಆಕಸ್ಮಿಕ ಘಟನೆಗಳು ಘಟಿಸಿ ಸಾವನ್ನಪ್ಪಿದರೆ ಅವರಿಗೆ ಸರಿಯಾದ ರೀತಿಯಲ್ಲಿ ಪರಿಹಾರ ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕು. ಅದೇ ರೀತಿ ಮನೆಯ ಹಿತ್ತಲಿನಲ್ಲಿರಬಹುದು, ಹೊಲದಲ್ಲಿರಬಹುದು ರೈತ ಬೆಳೆದ ಫಸಲಿಗೆ ಬೆಂಕಿ ಬಿದ್ದು ಬವಣೆಗಳು ಸುಟ್ಟಂತಹ ಸಂದರ್ಭದಲ್ಲಿ ಅದಕ್ಕೆ ಸರಿಯಾದ ಪರಿಹಾರ ಕೊಡುವುದಕ್ಕೆ ಆಗುತ್ತಿಲ್ಲ. 500, 1,000, 2,000, ರೂಪಾಯಿಗಳ ಪರಿಹಾರವನ್ನು ಕೊಟ್ಟರೂ ಕೂಡ ಅದು ರೈತರಿಗೆ ತಲುಪುವಷ್ಟರಲ್ಲಿ ಆರು ತಿಂಗಳು ಅಥವಾ ಒಂದು ವರ್ಷವಾಗುತ್ತದೆ. ಅದು ಜಾಗೃತವಾಗಿ ತಲುಪುವ ವ್ಯವಸ್ಥೆಯಾಗಬೇಕು. ಕೆಲವು ಸಂದರ್ಭದಲ್ಲಿ ಮಳೆಯ ಅಭಾವದಿಂದ, ಅತಿವೃಷ್ಟಿಯಿಂದ ಬೆಳೆ ನಷ್ಟವಾಗುತ್ತದೆ. ಇಂತಹ ಸಂದರ್ಭದಲ್ಲಿ ಹಳೆ ಪದ್ಧತಿಯಂತೆ 1,000, 2,000 ರೂಪಾಯಿಗಳ ಪರಿಹಾರವನ್ನು ಕೊಡುವ ಬದಲು ಸರಿಯಾಗಿ, ರೈತನಿಗೆ ತೃಪ್ತಿಯಾಗುವ ರೀತಿಯಲ್ಲಿ ಪರಿಹಾರ ಕೊಡುವ ಮತ್ತು ಸಮಯಕ್ಕೆ ಸರಿಯಾಗಿ ಕೊಡುವಂತೆ ಮತ್ತು ಈ ವರ್ಷದ ಪರಿಹಾರವನ್ನು ಮುಂದಿನ ವರ್ಷ ಕೊಡುವ ಬದಲು ಆದಷ್ಟು ಜಾಗ್ರತೆಯಾಗಿ ಕೊಡಿಸುವ ಕೆಲಸ ಮಾಡಬೇಕು.

ಉಪಾಧ್ಯಕ್ಷರು : Conclude ಮಾಡಿ. ಇನ್ನೂ ಬಹಳ ಶಾಸಕರು ಮಾತನಾಡಬೇಕು.

ಶ್ರೀ ವಡ್ನಾಳ್ ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ನಾನೂ ಕೂಡ ಒಬ್ಬ ರೈತ, ರೈತನಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲವೆಂದರೆ ರೈತನ ಪಾಡು ಇನ್ನೇನಾಗುತ್ತದೆ? ನಾನು ಸ್ವತಃ ರೈತನಾಗಿ ಮಾತನಾಡುವುದಕ್ಕೆ ಬಯಸುತ್ತಿದ್ದೇನೆ. ಅದರ ಕಷ್ಟಸುಖ ಏನು ಎಂಬ ಅನುಭವದ ಮಾತುಗಳನ್ನು ಇಲ್ಲಿ ಹಂಚಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಕೃಷಿಗೆ ಸಂಬಂಧಪಟ್ಟಂತೆ ಈ ವಿಷಯವಾದರೆ, ತೋಟಗಾರಿಕೆಗೆ ಸಂಬಂಧಪಟ್ಟ ಹಾಗೆ ಅಡಿಕೆ ಮತ್ತು ತೆಂಗು....

ಶ್ರೀ ಕೆ. ಶಿವಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ರಾಜಣ್ಣರವರು ಹಗೇವು ಪಣತ ಮಾಡಿಕೊಳ್ಳುತ್ತಾರೆಂದು ಹೇಳಿದರು. NREG scheme ನಲ್ಲಿ ಕಣ ಮಾಡುವುದಕ್ಕೆ ರೈತರಿಗೆ ಅವಕಾಶವಿದೆ. ಆದರೆ ಪಣತ ಅಥವಾ ಹಗೇವು ಮಾಡುವುದಕ್ಕೆ ಏನಾದರೂ provision ಇದೆಯೇ? ಅಥವಾ scientific ಆಗಿ ಮಾಡಿಕೊಂಡು ಧಾನ್ಯಗಳನ್ನು ಅಲ್ಲೇ ಶೇಖರಣೆ ಮಾಡಿಕೊಳ್ಳಬಹುದು ಅದನ್ನು ಮಾಡುವುದಕ್ಕೆ ಅವಕಾಶವಿದೆಯೇ ಎಂಬ ಬಗ್ಗೆ ತಾವು ಸಲಹೆ ಕೊಡಬೇಕು.

ಶ್ರೀ ವಡ್ನಾಳ್ ರಾಜಣ್ಣ: ಹಿಂದಿನ ಪದ್ಧತಿಗಳು ಹೇಗಿದ್ದವೆಂದರೆ, ಅವನು ಹೊರಗೆ ಗೋಡೌನ್ ಕಟ್ಟಬೇಕಾದ ಅವಶ್ಯಕತೆಯಿರಲಿಲ್ಲ. ಅವನಿಗೆ ಜಾಗದ ಅವಶ್ಯಕತೆಯಿರಲಿಲ್ಲ. ಮನೆ ಮುಂದೆ ಹಗೇವನ್ನು ಮಾಡಿಕೊಂಡು ಹಗೇವಿನಲ್ಲಿ ಬೆಳೆದ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವುದಕ್ಕೆ ಬಹಳ safety ಯಾಗಿದ್ದ ಕಾಲವಿತ್ತು.

ಇವತ್ತು ಬದಲಾವಣೆಗಳು ಆಗಿವೆ. ಬದಲಾವಣೆಗಳು ಆಗಿ ಗೋಡೌನ್ ಕಟ್ಟುವುದಕ್ಕೆ ಜಾಗವಿಲ್ಲ. ನೂರೆಂಟು ಸಮಸ್ಯೆಗಳಿವೆ. ವೈಜ್ಞಾನಿಕವಾಗಿ ಹಿಂದೆ ಇದ್ದಂಥ ಪದ್ಧತಿಗಳನ್ನು ಮಾಡಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಆದರೆ ಅದಕ್ಕೆ ಹಣದ ಅವಶ್ಯಕತೆಯಿರತಕ್ಕಂಥ ಸಂದರ್ಭದಲ್ಲಿ ಆ ಹಣದ ಅವಶ್ಯಕತೆಯನ್ನು ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಮಾಡಿಕೊಳ್ಳಲು ಅವಕಾಶವಿದೆ. ಆ ಮೂಲಕ ರೈತನಿಗೆ ಹಣ ಕೊಡುವಂಥ ಕೆಲಸ ಆಗಬೇಕಾಗಿದೆ. ಕಣಕ್ಕೆ ಉದ್ಯೋಗ ಖಾತರಿ ಯೋಜನೆಯಲ್ಲಿ ಹಣವನ್ನು ಕೊಡುತ್ತಾರೆ. ಆದರೆ ಅವತ್ತು ಮಾಡಿದಂಥ ಕಣಕ್ಕೂ, ಇವತ್ತು ಮಾಡುತ್ತಿರುವ

ಕಣಕ್ಕೂ ಸಂಬಂಧವಿಲ್ಲ. ಅಷ್ಟೊಂದು ಅಚ್ಚುಕಟ್ಟಾಗಿ, ಸ್ವಚ್ಛವಾಗಿ ಕಣವನ್ನು ಮಾಡುವಂಥ ವಿಧಾನ ಅವತ್ತಿನ ದಿವಸ ಗೊತ್ತಿತ್ತು. ಆದರೆ ಇವತ್ತಿನ ಕಣ ಮಾಡತಕ್ಕಂಥ ವಿಧಾನದಲ್ಲಿ ತುಂಬಾ ವ್ಯತ್ಯಾಸವಿದೆ. ಆದರೂ ಸಹ ರೈತರಿಗೆ ಇವತ್ತು ಅವಶ್ಯಕತೆಯಿರತಕ್ಕಂಥದ್ದು ಕಣ. ಹೀಗೆ ಅವಶ್ಯಕತೆಯಿರತಕ್ಕಂಥದ್ದನ್ನು ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಅದು ರೈತರಿಗೆ ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ರೈತರು ಕಣವನ್ನು ಮಾಡುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಅವರು ರಾಗಿಯನ್ನೋ, ಬತ್ತವನ್ನೋ, ಜೋಳವನ್ನೋ ಟಾರ್ ರಸ್ತೆಯ ಮೇಲೆ ಹಾಕುತ್ತಾರೆ. ವಾಹನಗಳು ಅದರ ಮೇಲೆ ಓಡಾಡಿ, ಅಲ್ಲೇ ಸುಗ್ಗಿಯನ್ನು ಮಾಡತಕ್ಕಂಥದ್ದನ್ನು ನಾವು ನೋಡುತ್ತೇವೆ. ವಾಹನಗಳು ಓಡಾಡುವಂಥ ಸಂದರ್ಭದಲ್ಲಿ ಅಪಘಾತಗಳು ಆಗಿ ಅನಾಹುತಗಳು ಆಗಿರುವುದನ್ನು ನಾವು ಕಂಡಿದ್ದೇವೆ. ಹಾಗಾಗಿ ಇವುಗಳನ್ನು ತಪ್ಪಿಸಬೇಕಾದರೆ ರೈತರಿಗೆ ಶಾಶ್ವತವಾಗಿ ಕಣವನ್ನು ಮಾಡಿಕೊಡುವುದಕ್ಕೆ ಏನು ಅವಕಾಶ ಮಾಡಿಕೊಡಬೇಕೋ, ಆ ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ತೋಟಗಾರಿಕೆಗೆ ಸಂಬಂಧಪಟ್ಟ ಹಾಗೆ, ಅಡಿಕೆ ಮತ್ತು ತೆಂಗುಗಳನ್ನು ಸುಮಾರು 15–20 ಜಿಲ್ಲೆಗಳಲ್ಲಿ ಹೇರಳವಾಗಿ ಬೆಳೆಯುತ್ತಿದ್ದೇವೆ. ಸಾಮಾನ್ಯವಾಗಿ ಶಿವಮೊಗ್ಗದಿಂದ ಬೆಂಗಳೂರಿಗೆ ಬಂದರೆ, ತೆಂಗು ಅರಸೀಕೆರೆಯಿಂದ ಪ್ರಾರಂಭವಾಗಿ ಕಡೂರು, ತಿಪಟೂರು, ತುಮಕೂರು ಈ ಕಡೆಗಳಲೆಲ್ಲಾ ಇದ್ದು ತೆಂಗಿನ ಬೆಳೆಗಳನ್ನು ನೋಡಿದರೆ ಅಷ್ಟು ಆನಂದವಾಗುತ್ತಿತ್ತು. ಆದರೆ ಇವತ್ತು ತೆಂಗು ಬೆಳೆಗಾರರ ಪರಿಸ್ಥಿತಿ ಏನಾಗಿದೆ ಎಂದರೆ, ನಾವು ಸ್ವಾಭಾವಿಕವಾಗಿ ತೆಂಗಿನಕಾಯಿ ಇದ್ದ ಹಾಗೆ ಇರಬೇಕೆಂದು ಹೇಳುತ್ತಿದ್ದೆವು. ಅಂದರೆ ತೆಂಗಿನಕಾಯಿಯ ಗಾತ್ರ ಅಷ್ಟು ದಪ್ಪವಾಗಿತ್ತು. ಆದರೆ ಇವತ್ತು ತೆಂಗಿನಕಾಯಿಯ ಗಾತ್ರ ಏನಾಗಿದೆ ಎಂದರೆ, ಕಂಚಿಕಾಯಿ ಗಾತ್ರ ಆಗಿಬಿಟ್ಟಿದೆ. ಆ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣ ತೆಂಗಿನ ಮರಗಳಿಗೆ ಹಾಗೂ ಅಡಿಕೆ ಮರಗಳಿಗೆ ಅನೇಕ ರೋಗಗಳು ಬಂದಿವೆ. ಆ ರೋಗ ನಿರ್ಮೂಲನೆಗಾಗಿ ಸರಿಯಾದಂಥ ಔಷಧಿಗಳನ್ನು ಕೊಡುವಂಥದ್ದು ಮತ್ತು ತೆಂಗಿನ ಮರಗಳನ್ನು ಕಾಪಾಡುವಂಥ ಕೆಲಸ ಆಗಬೇಕಾಗಿದೆ. ತೋಟಗಾರಿಕೆ ಇಲಾಖೆಯವರು ಬಹಳ ಜವಾಬ್ದಾರಿಯನ್ನು ತೆಗೆದುಕೊಂಡು ರೈತರಿಗೆ ವಿಶೇಷವಾಗಿ ಯಾವ ಯಾವ ಔಷಧಿಗಳನ್ನು

ಸಿಂಪಡಿಸಬೇಕೆಂದು ಸಲಹೆ ಕೊಡಬೇಕಾಗಿತ್ತು. ಅದು ಇವತ್ತಿನವರೆಗೂ ಕಾಣುತ್ತಿಲ್ಲ. ಸಲಹೆ ಮಾಡಿದ್ದಾರೆ. ಮಾಡಿಲ್ಲ ಅಂಥ ಅಲ್ಲ. ಆದರೆ ಅದರಿಂದ ಸರಿಯಾದಂಥ ಪ್ರತಿಫಲ ಸಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಇವತ್ತಿನ ಪರಿಸ್ಥಿತಿಯಲ್ಲಿ ಒಬ್ಬ ರೈತ ತೆಂಗನ್ನು ಬೆಳೆಯಬೇಕಾದರೆ ಕನಿಷ್ಠ ಪಕ್ಷ ಒಂದು ತೆಂಗಿನ ಸಸಿಯನ್ನು ಹಾಕಿ 10 ವರ್ಷ ಕಾಯಬೇಕು. ಹೀಗೆ ತೆಂಗಿನ ಸಸಿಯನ್ನು ನೆಟ್ಟು ಮಕ್ಕಳನ್ನು ಸಾಕುವಂತೆ ಸಾಕಿದರೆ ಮಾತ್ರ ಅದರಿಂದ ಪಸಲು ಬರುವುದಕ್ಕೆ ಸಾಧ್ಯ. ಹೀಗಾಗಿ ತೆಂಗಿನ ಬೆಳೆಗಾರರಿಗೆ ತೆಂಗಿನ ಬೆಳೆಯನ್ನು ಸರಿಯಾದಂಥ ರೀತಿಯಲ್ಲಿ ಕಾಪಾಡುವುದಕ್ಕೆ ಏನು ಮಾಡಬೇಕು ಆ ಕೆಲಸವನ್ನು ತೋಟಗಾರಿಕೆ ಇಲಾಖೆಯಿಂದ ಮಾಡಬೇಕಾಗಿದೆ. ನನ್ನ ಕ್ಷೇತ್ರದಲ್ಲೂ ಸುಮಾರು 80 ಎಕರೆ ಜಮೀನು ಇದೆ. ಆ ಜಮೀನನ್ನು ನೋಡಿದರೆ 90 ವರ್ಷದವರು ಸಹ ಈ ಜಮೀನು ಎಷ್ಟು ಚೆನ್ನಾಗಿದೆ, ಇದರಲ್ಲಿ ಬಂಗಾರ ಬೆಳೆಯಬಹುದೆಂದು ಬಹಳ ಸಂತೋಷಪಡುವಂಥ ಭೂಮಿ. ಅಂಥ ಫಲವತ್ತಾದ ಭೂಮಿ ಆಗಿದೆ. ಅಲ್ಲಿ ನಾವು ಹೋಗಿ ನೋಡಿದರೆ ಅವರು ತೆಂಗಿನ ಸಸಿಗಳನ್ನು ಹಾಕಿದ್ದಾರೆ ಅವುಗಳನ್ನು ಗೊತ್ತಿರತಕ್ಕಂಥ, ತಿಳಿವಳಿಗೆ ಇರುವಂಥ, ಅನುಭವವಿರುವಂಥ ಒಬ್ಬ ರೈತ ತೆಗೆದುಕೊಂಡು ಹೋಗಿ ಹಾಕುವುದಕ್ಕೆ ಸಾಧ್ಯನೇ ಇಲ್ಲ. ತೋಟಗಾರಿಕೆ ಇಲಾಖೆಯವರು ಮಾಡುತ್ತಿರುವಂಥ ಕೆಲಸ ಇದಾಗಿದೆ. ಅಂಥ ಭೂಮಿಯನ್ನು ಇವತ್ತು ಯಾವುದೇ ಕೆಲಸಕ್ಕೆ ಬಾರದ ರೀತಿಯಲ್ಲಿ ಬಿಟ್ಟಿರುವುದು ಸರಿಯಾದಂಥ ಕ್ರಮವಲ್ಲ. ನನ್ನ ತಾಲ್ಲೂಕಿನಲ್ಲಿಯೇ ಕೃಷಿ ಇಲಾಖೆಗೆ ಸುಮಾರು ನೂರಾರು ಎಕರೆ ಜಮೀನು ಇದೆ. ಇದು ಮಾನ್ಯ ಶಿವಮೂರ್ತಿ ನಾಯಕರವರ ಕ್ಷೇತ್ರವಾದ ಕತ್ತಲಿಗೆರೆ ಮತ್ತು ಹೊಸಹಳ್ಳಿಯಲ್ಲಿ ಕೃಷಿ ಇಲಾಖೆ ಜಮೀನು ಇದೆ. ತ್ಯಾವಣಗಿಯಲ್ಲೂ ಇದೆ. ಆ ಜಮೀನು ಏನಾಗಿದೆ? ಅದರಲ್ಲಿ ಏನು ಬೆಳೆಯನ್ನು ಬೆಳೆಯುತ್ತಾರೆ? ನಮ್ಮ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಯಿಂದ 200 ಎಕರೆ ಜಮೀನು ಇದೆ. 200 ಎಕರೆ ಜಮೀನಿನಲ್ಲಿ ಎಷ್ಟು ಕೋಟಿ ರೂಪಾಯಿಗಳ ಆದಾಯವನ್ನು ಇವತ್ತು ರೈತನಾಗಿದ್ದರೆ ಮಾಡುತ್ತಿದ್ದನು? ಆದರೆ ತೋಟಗಾರಿಕೆ ಇಲಾಖೆಯಾಗಲಿ, ಕೃಷಿ ಇಲಾಖೆಯಾಗಲಿ, ಅಲ್ಲಿರತಕ್ಕಂಥ ಬಹಳ ತಜ್ಞರು ಏನಿದ್ದಾರೆ ಅವರು ಏನು ಮಾಡುತ್ತಿದ್ದಾರೆ? ಅಲ್ಲಿ ಅವರು ಮಾಡತಕ್ಕಂಥ ಕೆಲಸವೇನು ? ಅಲ್ಲಿ ರೈತರಿಗೆ ಅನುಕೂಲವಾಗುವಂಥ

ಯಾವುದೇ ರೀತಿಯ ಚಟುವಟಿಕೆಗಳು ಆಗಿಲ್ಲ. ರೈತರಿಗೆ ಅನುಕೂಲವಾಗುವಂಥ ಕೆಲಸಗಳನ್ನು ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ರೈತರಿಗೆ ಒಳ್ಳೆಯ ಸಸಿಗಳನ್ನು ಹಾಗೂ ತಳಿಗಳನ್ನು ಕೊಡುತ್ತಾರೆನ್ನುವಂಥ ವಿಧಾನಗಳು ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ಅದಕ್ಕೆ ತಕ್ಕಂತೆ ಸಿಬ್ಬಂದಿಗಳು ಇಲ್ಲ. ನಾವು ಕೇಳಿದರೆ, ಏನು ಮಾಡುವುದು ಸಾರ್, ನಾವು 2 ಜನ ಮಾತ್ರ ಇದ್ದೇವೆ, 10 ಜನ ಇರಬೇಕಾಗಿತ್ತು ಎಂದು ಹೇಳುತ್ತಾರೆ. ಅದಕ್ಕೆ ನಾವು ಸುಮ್ಮನಾಗಿರುವಂಥ ಪರಿಸ್ಥಿತಿ ಇದೆ. ಕೃಷಿ ಇಲಾಖೆ ಜಮೀನು ಇರಬಹುದು ಅಥವಾ ತೋಟಗಾರಿಕೆ ಇಲಾಖೆಯ ಜಮೀನು ಇರಬಹುದು, ಬಂಗಾರದಂಥ ಜಮೀನು ಆ ಎರಡು ಇಲಾಖೆಗಳ ಕೈಕೆಳಗೆ ಇರುವಂಥ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಸಿಬ್ಬಂದಿ ಏನೂ ಮಾಡುವುದಕ್ಕೆ ಆಗದೆ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದೃಷ್ಟವಶಾತ್, ದೇವರು ಕಣ್ಣು ಬಿಟ್ಟಿದ್ದಾನೆಂದು ಹೇಳಬೇಕು. ಏಕೆಂದರೆ ತೆಂಗಿಗೆ ಆಗಲಿ, ಕೊಬ್ಬರಿಗೆ ಆಗಲಿ ಒಳ್ಳೆಯ ಧಾರಣೆ ಸಿಕ್ಕಿದೆ. ಇಷ್ಟು ವರ್ಷಗಳ ಕಾಲ ತೆಂಗಿನ ಬೆಳೆಗೆ 2 ಸಾವಿರ, 3 ಸಾವಿರ, 4 ಸಾವಿರ, 5 ಸಾವಿರ ಧಾರಣೆಯಿತ್ತು. ಇವತ್ತು 15 ಸಾವಿರ, 16 ಸಾವಿರ, 20 ಸಾವಿರ ಧಾರಣೆ ಇದೆ. ಇದು ಒಂದು ವರ್ಷಕ್ಕೆ ಸಿಕ್ಕಿರಬಹುದು ಅಥವಾ ಒಂದು ತಿಂಗಳು, ಎರಡು ತಿಂಗಳು ಹೇಳುವುದಕ್ಕೆ ಬರುವುದಿಲ್ಲ. ರೈತ ಕಷ್ಟ ಪಟ್ಟಿದ್ದಕ್ಕಾಗಿ ಇವತ್ತು ರೈತನಿಗೆ ದೇವರು ಕಣ್ಣು ಬಿಟ್ಟಿದ್ದಾನೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. ಅದೇ ರೀತಿ ಇವತ್ತಿನ ದಿವಸ ಸುಮಾರು 16 ಜಿಲ್ಲೆಗಳಲ್ಲಿ ಅಡಿಕೆ ಬೆಳೆಯನ್ನು ಬೆಳೆಯುತ್ತಿದ್ದೇವೆ. ಅಡಿಕೆ ಪರಿಸ್ಥಿತಿ ಹೇಗಿತ್ತು ಎಂದರೆ ಅಡಿಕೆ ಬೆಳೆಗಾರರ ಕಥೆ ಇನ್ನೇನು ಮುಗಿಯಿತು. ಮುಂದೆ ಏನು ಮಾಡುವುದಕ್ಕೆ ಆಗುವುದಿಲ್ಲವೆನ್ನುವಂಥ ಪರಿಸ್ಥಿತಿ 2002 ರಿಂದ ಪ್ರಾರಂಭವಾಗಿದ್ದು, 12 ವರ್ಷವಾಯಿತು. 12 ವರ್ಷಗಳಿಂದ ಒಂದಲ್ಲ ಒಂದು ಸಮಸ್ಯೆಗಳು ನಮಗೆ ಬರುತ್ತಿದ್ದವು. ಆ ಸಮಸ್ಯೆಗಳಲ್ಲಿ ಗುಟ್ಕಾ ಸಮಸೆಯ ಪ್ರತಿ ವರ್ಷ ನಮ್ಮನ್ನು ಕಾಡುತ್ತಿತ್ತು. ಅಡಿಕೆ ಬೆಳೆ ಬಂತು ಎಂದ ತಕ್ಷಣ ಟಿ.ವಿ. ಯಲ್ಲಿ ಗುಟ್ಕಾ ಬ್ಯಾನ್ ಎಂದು ಪ್ರಚಾರ ಆಗಿ ಅಡಿಕೆ ಬೆಳೆಗಾರರ ಧೈರ್ಯವನ್ನು ಕುಂದಿಸುವಂಥ ಕೆಲಸ ಪ್ರತಿ ವರ್ಷ ನಡೆಯುತ್ತಿತ್ತು. ಕಳೆದ ವರ್ಷನೂ ಇದೇ ರೀತಿ ನಡೆಯಿತು. ನಮ್ಮ ವಿರೋಧ ಪಕ್ಷದವರು ಬಹಳ ಕಸರತ್ತನ್ನು ಮಾಡಿದರು. ಸುಪ್ರೀಂ

ಕೋರ್ಟ್ ಅಡಿಕೆಯನ್ನು ಬ್ಯಾನ್ ಮಾಡುತ್ತದೆ, ಸುಪ್ರೀಂ ಕೋರ್ಟ್ ಆರ್ಡರ್ ಆಗಿದೆ ಎನ್ನತಕ್ಕಂಥ ಮಾತುಗಳನ್ನು ಎಲ್ಲಾ ಕಡೆ ಹೇಳುತ್ತಿದ್ದರು. ಅದೃಷ್ಟವಶಾತ್ ಈ ವರ್ಷದ ಅಡಿಕೆ ಬೆಳೆಗಾರನಿಗೆ ಉತ್ತಮವಾದಂಥ ಧಾರಣೆ ಸಿಕ್ಕಿದೆ. ಈ ಧಾರಣೆ ಇತಿಹಾಸದಲ್ಲಿ ಎಂದೂ ಸಿಕ್ಕಿರಲಿಲ್ಲ. ಗುಟ್ಕಾ ಬ್ಯಾನ್ ಎಂದು ಹೇಳಿದ್ದರೂ ಸಹ ಒಂದು ಕ್ವಿಂಟಾಲ್ ಅಡಿಕೆಗೆ 50 ಸಾವಿರ ರೂಪಾಯಿಗಳ ಧಾರಣೆ ಇದೆ. ಒಂದು ಚೀಲಕ್ಕೆ 35 ಸಾವಿರ ರೂಪಾಯಿ.

ಉಪಾಧ್ಯಕ್ಷರು: Conclude ಮಾಡಿ.

ಶ್ರೀ ವಡ್ನಾಳ್ ರಾಜಣ್ಣ : ಅಡಿಕೆ ಬೆಳೆಗಾರನಿಗೆ ಇಂಥ ಅವಕಾಶ ಸಿಕ್ಕಿರುವಂಥ ಸಂದರ್ಭದಲ್ಲಿ ದಯಮಾಡಿ, ಸರ್ಕಾರ ರೈತರಿಗೆ ಬೆಂಬಲವಾಗಿ ನಿಲ್ಲಬೇಕು. ರೈತರಿಗೆ, ಅಡಿಕೆ, ಬೆಳೆಗಾರನಿಗೆ ಟ್ರ್ಯಾಕ್ಟರ್‌ಗೆ ಅವಶ್ಯಕತೆ ಇದೆ. ಟ್ರ್ಯಾಕ್ಟರ್‌ಗೆ ಕೊಡುವಂಥ ಸಬ್ಸಿಡಿಯನ್ನು ನಿಲ್ಲಿಸುವುದು ಸರಿಯಲ್ಲ. ಆದ್ದರಿಂದ ಟ್ರ್ಯಾಕ್ಟರ್‌ಗೆ ಸಬ್ಸಿಡಿಯನ್ನು ಕೊಡಬೇಕೆಂದು ಮಾನ್ಯ ಸಚಿವರಿಗೆ ಒತ್ತಾಯವನ್ನು ಮಾಡುತ್ತೇನೆ. ಹನಿ ನೀರಾವರಿಗೆ ಸಬ್ಸಿಡಿಯನ್ನು ತೆಗೆದು ಹಾಕುತ್ತೇವೆಂದು ಹೇಳಿದ್ದಾರೆ. ದಯಮಾಡಿ, ಇವತ್ತಿನ ದಿವಸದಲ್ಲಿ ನಾವು ನೀರಿನ ಕಡಿಮೆ ಬಳಕೆ ಆಗಬೇಕಾದರೆ, ನೀರನ್ನು ಉಳಿಸಬೇಕಾದರೆ ರೈತರಿಗೆ ಹನಿ ನೀರಾವರಿಗೆ ಕೊಡುತ್ತಿರುವಂಥ ಸಬ್ಸಿಡಿಯನ್ನು ಮುಂದುವರೆಸಬೇಕು. ಇನ್ನೂ ಹೆಚ್ಚಿನ ಸಬ್ಸಿಡಿಯನ್ನು ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ವಿದ್ಯುತ್ತಿನ ಅಭಾವ ನಮಗೆಲ್ಲಾರಿಗೂ ಗೊತ್ತಿದೆ. ವಿದ್ಯುತ್‌ನ್ನು ನಾಳೆ ಬೆಳಿಗ್ಗೆ ಹೋಗಿ ತರುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ರೈತರಿಗೆ ಸೋಲಾರ್ ಸಿಸ್ಟಮ್ ಅಳವಡಿಸಿ ಅವರಿಗೆ ಸಬ್ಸಿಡಿಯನ್ನು ಕೊಟ್ಟರೆ ಮುಂದಿನ ದಿನಗಳಲ್ಲಿ ನಮಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗುತ್ತೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಕೆ.ಎಂ. ಶಿವಲಿಂಗೇಗೌಡರವರೆ, ತಾವು ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಉಪಾಧ್ಯಕ್ಷರೆ, ಕೃಷಿ ಇಲಾಖಾವಾರು ಬೇಡಿಕೆ ಮೇಲೆ ಚರ್ಚೆಯನ್ನು ನಾವು ಬಂದ ಮೇಲೆ ಇದೇ ಪ್ರಥಮ ಬಾರಿಗೆ ತಂದಿದ್ದೀರಿ. ಹಿಂದೆ ಹೇಗೆ ನಡೆಯುತ್ತಿತ್ತೋ ಗೊತ್ತಿಲ್ಲ. ಬಹಳ ಸಂತೋಷ.

ಕೃಷಿ ಮತ್ತು ತೋಟಗಾರಿಕೆ ವಿಷಯದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಇಲಾಖೆ ಬೇಡಿಕೆ ಮತ್ತು ಸರ್ಕಾರಕ್ಕೆ ಕೆಲವು ಸಲಹೆ ಸೂಚನೆಗಳು ಕೊಡುಬಯಸುತ್ತೇನೆ. ನಾವು ಗ್ರಾಮೀಣ ಭಾಗದಿಂದ ಬಂದವರು. ರೈತರ ಒಕ್ಕಲುತನದಿಂದ ಬಂದವರು. ಅಲ್ಲಿರುತಕ್ಕಂಥ ದಿನನಿತ್ಯದ ಸಮಸ್ಯೆಗಳು ಮತ್ತು ಕೃಷಿ ಎನ್ನುವುದನ್ನು ಯಾವ ರೀತಿ ಮಾರ್ಪಡಿಸಿಕೊಂಡಿದ್ದೇವೆ ?

ಕೃಷಿ ಯಾವ ರೀತಿ ಜನರಿಂದ ಓಡಿ ಹೋಗುತ್ತಿದೆ ? ರೈತರು ಕೃಷಿಯನ್ನು ಬಿಟ್ಟು ಬೇರೆ ಕಡೆ ಏಕೆ ವಲಸೆ ಹೋಗುತ್ತಿದ್ದಾರೆ ? ಈ ಸಮಸ್ಯೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಬೇಕಾಗಿದೆ.

ಸರ್ಕಾರದ ಗಮನವನ್ನು ಸೆಳೆದು ಈ ನಿಟ್ಟಿನಲ್ಲಿ ಸರ್ಕಾರ ಯಾವ ರೀತಿ ಚಿಂತನೆ ಮಾಡಿದರೆ ಈ ಕೃಷಿಯನ್ನು ಬಹಳ ಪ್ರಬುದ್ಧವಾಗಿ ಈ ರಾಜ್ಯದಲ್ಲಿ ಉಳಿಸಿಕೊಳ್ಳಬಹುದು, ಇಲ್ಲವೆಂದರೆ ಈ ಕೃಷಿ ಇಲಾಖೆ, ಕೃಷಿ ಕಸುಬು ಯಾವ ರೀತಿ ಮಾಯವಾಗುತ್ತದೆ ಎನ್ನುವುದರ ಬಗ್ಗೆ ಸ್ವಲ್ಪ ಸಂಕ್ಷಿಪ್ತವಾಗಿ ನಾನು ಹೇಳಬಯಸುತ್ತೇನೆ.

ಈ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 73%ರಷ್ಟು ಜನ ಕೃಷಿಯನ್ನು ಅವಲಂಬಿಸಿ ಜೀವನ ಮಾಡುತ್ತಿದ್ದಾರೆನ್ನುವ ದಾಖಲಾತಿ ಈ ರಾಜ್ಯದ ವ್ಯವಸ್ಥೆಯೊಳಗಡೆ ಇದೆ. ಆದರೆ, ಅಲ್ಲಿ ನಿಜವಾಗಿಯೂ 73% ಜನ ಕೃಷಿಯನ್ನು ಅವಲಂಬನೆ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆಯೇ ? ಅವರು ಯಾವ ಯಾವ ಮಾರ್ಗವನ್ನು ಹುಡುಕಿಕೊಂಡು ಹೊರಟುಹೋಗಿದ್ದಾರೆ. ನಿಜವಾಗಿಯೂ ಜಮೀನು ಮಾತ್ರ ಇದೆ. ಆದರೆ, ಅವರು ಕೃಷಿಯನ್ನು ಬಿಟ್ಟು ಬೇರೆ ಕಡೆಗೆ ಪಲಾಯನ ಮಾಡಿದ್ದಾರೆ. ಏತಕ್ಕೋಸ್ಕರ ಪಲಾಯನ ಮಾಡಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾವು ಚರ್ಚೆ ಮಾಡಬೇಕು.

ಮಹಾತ್ಮ ಗಾಂಧೀಜಿಯವರು 'ಭಾರತದ ಬೆನ್ನೆಲುಬು ರೈತ' ಎಂದು ಹೇಳಿದರು. ಆ ರೈತನ ಕಣ್ಣಿನಲ್ಲಿ ಕಣ್ಣೀರು ತರಿಸಿದರೆ, ಯಾರೇ ಪ್ರಬುದ್ಧರಿಗೆ, ಯಾರೇ ರಾಜ್ಯವನ್ನಾಗಲೀ, ರಾಷ್ಟ್ರವನ್ನಾಗಲೀ ಆಳುವಂಥ ಸಂದರ್ಭದಲ್ಲಿ ಅವರಿಗೆ ಶ್ರೇಯಸ್ಸು ದೊರೆಯುವುದಿಲ್ಲ ಎನ್ನುವಂಥ ಮಾತನ್ನು ಅವತ್ತಿನ ಕಾಲದಲ್ಲೇ ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. ಈ ಭಾರತ ದೇಶಕ್ಕೆ ಮಾನವ ಸಂಪತ್ತು ಎನ್ನುವುದು ಆ ಭಗವಂತ ಕೊಟ್ಟವರ. ಅಧಿಕವಾಗಿರುವಂಥ ಮಾನವ ಸಂಪತ್ತು ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಪ್ರಮಾಣದಲ್ಲಿ

ವಿನಿಯೋಗವಾಯಿತು. ಎಲ್ಲರೂ ಕೃಷಿಯನ್ನು, ಒಕ್ಕಲುತನವನ್ನು ಅವಲಂಬನೆ ಮಾಡಿದರು. ತಮ್ಮ ಬದುಕನ್ನು, ಜೀವನವನ್ನು ಸೃಷ್ಟಿ ಮಾಡಿಕೊಂಡು ಬಹಳ ಪ್ರಮಾಣದಲ್ಲಿ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದುದನ್ನು ನಾವು ಸಣ್ಣ ಹುಡುಗರಾಗಿದ್ದಾಗ ನೋಡುತ್ತಿದ್ದೆವು. ಅವತ್ತಿನ ಕಾಲದಲ್ಲಿ ಬೆಲೆ ಇಲ್ಲದೇ ಇರಬಹುದು, ಆಧುನಿಕ ಬೇಸಾಯ ಪದ್ಧತಿ ಇಲ್ಲದೇ ಇರಬಹುದು, ಇವತ್ತೇನು ಸಾವಯವ ಪದ್ಧತಿ ಎಂದು ಕರೆಯುತ್ತಾರೆ ಅದನ್ನೇ ನಾಡ ಪದ್ಧತಿ ಎಂದು ಕರೆಯುತ್ತಿದ್ದರು. ಅವತ್ತಿನ ನಾಡ ಪದ್ಧತಿಯಲ್ಲಿ ನಾವೆಲ್ಲರೂ ಬಹಳ ನೆಮ್ಮದಿಯಿಂದ 500 ತೆಂಗಿನಕಾಯಿಯನ್ನು ಸುಲಿದುಕೊಂಡು ಗಂಡಸಿ ಸಂತೆಗೆ ಹೋದರೆ ಮನೆಮಂದಿಗೆಲ್ಲಾ ಬಟ್ಟೆ, ಮನೆಮಂದಿಗೆಲ್ಲಾ ಏನು ಬೇಕು ಪ್ರತಿಯೊಂದು ಪದಾರ್ಥಗಳನ್ನು ಕೊಂಡುಕೊಂಡು, ಎತ್ತಿನಗಾಡಿಯನ್ನು ಹೂಡಿಕೊಂಡು, ಹೊಡೆದುಕೊಂಡು ನೆಮ್ಮದಿಯಾಗಿ ಬರುತ್ತಿದ್ದೆವು. ನನಗೆ ಇಂಥ ಬಟ್ಟೆ ಬೇಕು ಎಂದರೆ ಅಂಥದ್ದೇ ಬಟ್ಟೆಯನ್ನು ತೆಗೆದುಕೊಡುತ್ತಿದ್ದರು. ಇವತ್ತು ಆಧುನಿಕ ಬೇಸಾಯ, ಆಧುನಿಕ ಕನಸುಗಳು ಎಲ್ಲೋ ಒಂದು ಕಡೆ ಮಾಯವಾಗಿ ಹೋಗುತ್ತಿವೆ ಎನ್ನುವುದು, ಆಧುನಿಕತೆಗೆ ತಕ್ಕಂಥ ವ್ಯವಸಾಯವನ್ನು, ವ್ಯವಸಾಯ ಪದ್ಧತಿಯನ್ನು, ಆ ವ್ಯವಸಾಯ ಪದ್ಧತಿ ಏಕೆ ನಶಿಸಿ ಹೋಗುತ್ತಿದೆ ಎನ್ನುವಂಥ ವಿಚಿತ್ರ ಸನ್ನಿವೇಶಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಏತಕ್ಕೋಸ್ಕರ ಎಂದರೆ, ಇವತ್ತು ಬದ್ಧತೆ ಇಲ್ಲ. ವ್ಯವಸಾಯವನ್ನು ಮಾಡಿದರೆ ನಾನು ಮುಂದೆ ಸುಖವಾದ ಜೀವನವನ್ನು ಮಾಡುತ್ತೇನೆ ಎನ್ನವಂಥ ನಂಬಿಕೆ ರೈತನಲ್ಲಿ ಉಳಿದಿಲ್ಲ. ಅದಕ್ಕೆ ಸರ್ಕಾರವನ್ನೇ ನಾವು ಹೊಣೆ ಮಾಡುವುದಕ್ಕೆ ಆಗುವುದಿಲ್ಲ. ಕಾರಣಗಳು ಬೇಕಾದಷ್ಟಿವೆ. ಇವತ್ತು ಪರಿಸರ ನಮ್ಮ ಜೊತೆ ಮುನಿಸಿಕೊಂಡಿದೆ. ಅವತ್ತಿನ ದಿವಸ ನಮ್ಮ ಜನಗಳಲ್ಲಿ ಇಂಥ ಮಳೆಗೆ ಇಂಥ ಬೆಳೆಯನ್ನು ಹಾಕಬೇಕೆನ್ನುವ ನಿರ್ಣಯವಿತ್ತು. ದೊಡ್ಡ ರಾಗಿಯನ್ನು ಈ ಮಳೆಗೆ ಹಾಕಬೇಕು, ಗಿಡ್ಡ ರಾಗಿಯನ್ನು ಮತ್ತೊಂದು ಮಳೆಗೆ ಹಾಕಬೇಕು, ಇಂಥ ಬೀಜಗಳನ್ನು ಇಂತಿಂಥ ಮಳೆಗೆ ಹಾಕಬೇಕೆನ್ನುವ ನಿರ್ಣಯ ಅಂದು ನಮ್ಮ ಮನೆಗಳಲ್ಲಿ ಇದ್ದಿತು. ನಾಳೆ ಇಂಥ ಮಳೆ ಹುಟ್ಟುತ್ತಿದೆ, ಈ ಮಳೆ ಹುಟ್ಟುತ್ತಿರುವ ಸಂದರ್ಭದಲ್ಲಿ ನೀವು ಇಂಥ ರಾಗಿಯ ಬೀಜವನ್ನು ತಯಾರು ಮಾಡಿಕೊಳ್ಳಿ ಎಂದು ಹೇಳಿ, ಕಣದಲ್ಲಿಯೇ ಬೀಜವನ್ನು ತಯಾರು ಮಾಡಿ, ವಾಡೆಯೊಳಗೆ ಹೂಡಿಕೊಂಡು ಅವತ್ತು ಬಾಯಿ ಕೀಳುತ್ತಿದ್ದರು.

ನಾಳೆ ಮಳೆ ಬೀಳುತ್ತಿದೆಯೆಂದರೆ, ನಾಳೆ ಬಿತ್ತುವುದಕ್ಕೆ ಸಮಯ ಬಂದಿತು ಎಂದು ಅರ್ಥ. ನಾಡಿದ್ದು ಬೆಳಿಗ್ಗೆ ಎದ್ದು, ರೈತರು ಹೋಗಿ ಸಡ್ಡೆ ತೆಗೆದುಕೊಂಡು ಹೊಲ ಬಿತ್ತಿ, ದನದ ಗೊಬ್ಬರವನ್ನು ಹಾಕಿ, ನಿಜವಾದ ಬೆಳೆಯನ್ನು ಬೆಳೆಯುತ್ತಿದ್ದರು. ಆ ಸೊಗಡು ಆ ರೀತಿಯಿತ್ತು. ಆದರೆ, ನಾವು ಎಲ್ಲೋ ಒಂದು ಕಡೆ ಆರ್ಥಿಕ ಭದ್ರತೆಯನ್ನು ಈ ಪ್ರಪಂಚದಲ್ಲಿ ತೋರಿಸುತ್ತೇವೆ, ಆಹಾರ ಭದ್ರತೆಯನ್ನು ಈ ಪ್ರಪಂಚದಲ್ಲಿ ತೋರಿಸುತ್ತೇವೆಂದು ಹೇಳಿ ಆಧುನಿಕ ಬೇಸಾಯ ಪದ್ಧತಿಯನ್ನು ನಾವು ರೂಡಿಸಿಕೊಂಡೆವು. ಪ್ರಪಂಚಕ್ಕೆ ಪೈಪೋಟಿ ಕೊಡಬೇಕೆಂದು, ಪ್ರಪಂಚಕ್ಕೆ ಸರಿಸಾಟಿಯಾಗಬೇಕು, ಪ್ರಪಂಚಕ್ಕೆ ನಾವು ಭಾರತ ದೇಶದವರು ನಾವೂ ಇದ್ದೇವೆ ಎಂದು ತೋರಿಸುವ ರೀತಿಯಲ್ಲಿ ಆಧುನಿಕ ಬೇಸಾಯವನ್ನು ನಾವು ಕೈಗೂಡಿಸಿಕೊಂಡೆವು. ನಮ್ಮ ಈ ಸಾವಯವ ಪದ್ಧತಿಯನ್ನು ಮರೆತೆವು. ಕೃಷಿ ಇಲಾಖೆಯವರು ರೈತರಿಗೆ ಬಂದು ಹೇಳಿದರು, ಅವನ್ಯಾರೋ ಒಬ್ಬ ರೈತ ಒಂದು ಎಕರೆಗೆ 30 ಚೀಲ ಬೆಳೆದನು. ಅವನು 30 ಚೀಲ ಬೆಳೆದಿದ್ದಾನೆ, ನಾನೂ ಬೆಳೆಯಬೇಕೆಂದು ಹೊರಟು ಈ ರಾಸಾಯನಿಕ ಗೊಬ್ಬರದ ಸೋಗನ್ನು ಮೈಗೆ ಅಂಟಿಸಿಕೊಂಡನು. ಈ ರಾಸಾಯನಿಕ ಗೊಬ್ಬರದ ಸೋಗನ್ನು ಮೈಗೆ ಅಂಟಿಸಿಕೊಂಡ ಮೇಲೆ ಈ ಸಾವಯವ ಬೇಸಾಯವನ್ನು ಮರೆತರು. ಆ ರಾಸಾಯನಿಕ ಗೊಬ್ಬರದ ಅಮಲಿನಲ್ಲಿ ಸುಮಾರು 25–30 ವರ್ಷಗಳ ಕಾಲವನ್ನು ನಾವು ಕಳೆದಿದ್ದೇವೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಈಗ ಮತ್ತೆ ಪುನಃ ಕೃಷಿಯಲ್ಲಿ ಸಾವಯವ ಬೇಸಾಯಕ್ಕೆ ಹೋಗೋಣ ಎನ್ನುತ್ತಿದ್ದಾರೆ. ಸಾವಯವ ಬೇಸಾಯಕ್ಕೆ ಹೋಗಬೇಕಾದರೆ ಆ ಭೂಮಿಯನ್ನು ಸಂಪೂರ್ಣವಾಗಿ ನಾವು ಹಾಳು ಮಾಡಿದ್ದೇವೆ. ಆ ಭೂಮಿಯ ಸಾರಾಂಶ, ಆ ಭೂಮಿಯ ವೈಪರೀತ್ಯವನ್ನು ನಾವು ಹಾಳು ಮಾಡಿದ್ದೇವೆ. ಅದರ ಲಕ್ಷಣಗಳನ್ನು, ಗುಣಮಟ್ಟವನ್ನು ಅದರ ಎಲ್ಲಾ ರೀತಿಯ ಆರೋಗ್ಯಕರವಾದ ಪರಿಸ್ಥಿತಿಯನ್ನು, ಈ ಮನುಷ್ಯರು ಹೇಗೆ adulterated food ಅನ್ನು ತಿಂದು ಅನಾರೋಗ್ಯಕ್ಕೆ ತುತ್ತಾಗಿದ್ದಾರೆಯೋ ಅದೇ ರೀತಿ ಭೂಮಿಗಳು ಸಹ ಅನಾರೋಗ್ಯಕ್ಕೆ ತುತ್ತಾಗಿವೆ. ಇದನ್ನು ನಾವು ಸ್ವತಃ ಅನುಭವಿಸಿದ್ದೇವೆ. ಯಾವುದೇ ಬೆಳೆಯನ್ನು ಹಾಕಬೇಕಾದರೆ, ಆ ಭೂಮಿಯ ತಯಾರಿ, ಆ ಭೂಮಿಯಲ್ಲಿದ್ದಂಥ ಅಂಶಗಳು ಅವೆಲ್ಲವೂ ಸೀಮೆ ಗೊಬ್ಬರದಿಂದ, ರಾಸಾಯನಿಕ ಗೊಬ್ಬರದಿಂದ ಸಂಪೂರ್ಣವಾಗಿ

ನಾಶವಾಗಿ ಹೋಗಿದೆ. ಆ ಸತ್ವಭರಿತ ಅಂಶಗಳು ಭೂಮಿಯಲ್ಲಿ ಉಳಿದಿಲ್ಲ. ಇವತ್ತು ನಾವು ಭೂಮಿಯನ್ನು ಸಾವಯವ ಕೃಷಿಗೆ ತಯಾರು ಮಾಡಬೇಕಾದರೆ ಸುಮಾರು ವರ್ಷಗಳ ಕಾಲ ಬೇಕಾಗುತ್ತದೆ. ಈಗ ನಾವು ಸಾವಯವ ಕೃಷಿಗೆ ಸಾಮೂಹಿಕವಾಗಿ ಹೋಗುತ್ತಿದ್ದೇವೆಂದು ಹೇಳುವುದಾದರೆ, ಸುಮಾರು ವರ್ಷಗಳ ಕಾಲ, ಆ ಭೂಮಿಯನ್ನು ನಾವು ಹದ ಮಾಡುವುದಕ್ಕೆ ಸಮಯ ತೆಗೆದುಕೊಳ್ಳುತ್ತದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೃಷಿ ಸಿಲುಕಿಕೊಂಡಿದೆ. ಈ ರೀತಿ ಕೃಷಿ ಸಿಲುಕಿಕೊಂಡಿರುವ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ರೈತ ಇವತ್ತು ಆಧುನಿಕವಾಗಿ ಬೇಸಾಯ ಮಾಡುವುದಕ್ಕೆ ಏನು ಹೊರಟಿದ್ದಾನೆ, ಅವನು ಬೆಳೆದಿರುವಂಥ ಪ್ರತಿಯೊಂದು ಪದಾರ್ಥಗಳು ಕೂಡ ಕೈಗಾರಿಕೆಯ ಕಚ್ಚಾ ಸಾಮಗ್ರಿಗಳಾಗಬೇಕು. ಯಾವ ಪದಾರ್ಥವನ್ನು ರೈತ ಬೆಳೆಯುತ್ತಾನೆಯೋ ಆ ಬೆಳೆಗೆ ಯೋಗ್ಯ ಬೆಲೆ ಸಿಗಬೇಕು. ಉದಾಹರಣೆಗೆ ಕಬ್ಬು, ಕಬ್ಬು ಬೆಳೆ ಒಂದು ಉದ್ಯಮವಾಗಿ ಪರಿವರ್ತನೆಯಾಗಿದೆ. ಅದಕ್ಕೊಂದು ಗುರಿಯಿದೆ. ಬೆಲೆ ಏರಬಹುದು, ಇಳಿಯಬಹುದು, ಅದು ತಾತ್ಕಲಿಕವಾದ ಪರಿಸ್ಥಿತಿ, ಆದರೆ, ಕಬ್ಬು ಬೆಳೆಯನ್ನು ಹಾಕಿದರೆ ನನಗಿಷ್ಟು ಆದಾಯ ಬರಬಹುದು, ಅದು ನನಗೆ ನೆಲೆ ಕೊಡುತ್ತದೆನ್ನುವ ಭಾವನೆ ಇದೆ. ಅದೇ ರೀತಿಯಲ್ಲಿ ಯಾವುದೇ ಕೃಷಿಯನ್ನು, ಕೃಷಿಯ ಬೆಳೆಯ ಮೇಲೆ ನಾವು ಅವಲಂಬಿತರಾಗಬೇಕಾದಾಗ ಆ ಕೃಷಿಯಲ್ಲಿ ಅದು ಒಂದು ಉದ್ದಿಮೆಯಾಗಿ ಪರಿವರ್ತನೆಯಾಗಿ, ಎಲ್ಲಾ ಬೆಳೆಗಳು ಕೈಗಾರಿಕಾ ಇಚ್ಚಾ ಸಾಮಗ್ರಿಗಳಾಗುವುದಕ್ಕೆ ಅನುಕೂಲವಾದ ವ್ಯವಸ್ಥೆಯನ್ನು ರೂಪಿಸಬೇಕಾದಂಥದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಅನ್ನು ಮಂಡಿಸುವಾಗ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುತ್ತೇವೆಂದು ಹೇಳಿದ್ದರು. ಓಹೋ.... ನಿಜವಾಗಿಯೂ ರೈತರ ಪರವಾಗಿರುವಂಥ ಒಬ್ಬರು ನಾಯಕರು ಅಧಿಕಾರಕ್ಕೆ ಬಂದರು, ರೈತರ ಹಿತಚಿಂತಕರು ಬಂದರು ಎಂದು ನಾವೆಲ್ಲರೂ ಯೋಚನೆ ಮಾಡಿದೆವು. ವಿಶ್ವವಿದ್ಯಾನಿಲಯದ ಸಮಾರಂಭದಲ್ಲಿ 15 ದಿವಸ ಅಥವಾ ಒಂದು ವಾರದಲ್ಲಿ ಆದೇಶ ಮಾಡುತ್ತೇವೆಂದು 14ನೇ ತಾರೀಖಿನಂದು ಹೇಳಿದರು. ನಾವೆಲ್ಲರೂ ಏತಕ್ಕಾಗಿ

ಕಾಯುತ್ತಿದ್ದೇವೆಂದರೆ ಇವತ್ತಿನ ಪರಿಸ್ಥಿತಿಯೊಳಗೆ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುವುದು ಅಷ್ಟು ಸುಲಭವಲ್ಲ. ಏಕೆಂದರೆ, ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಬೇಕಾದರೆ, ಬೇರೆ ರಾಷ್ಟ್ರದಲ್ಲಿರುವಂತೆ ಪ್ರಾಂತೀಯವಾರು ಬೆಳೆ ನೀತಿಯನ್ನು ಜಾರಿಗೆ ತರಬೇಕಾಗುತ್ತದೆ. ಇವತ್ತು ಚೈನಾ ದೇಶದಲ್ಲಿ ಏನು ಮಾಡುತ್ತಿದ್ದಾರೆ ? ಯಾವ ಬೆಳೆಯನ್ನು ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕು ಎನ್ನುವಂಥ ನಿರ್ಣಯವನ್ನು ಮಾಡಬೇಕು. ಯಾವ ಭೂಮಿಯಲ್ಲಿ ಯಾವ ಬೆಳೆಯನ್ನು ಬೆಳೆಯಬೇಕೆನ್ನುವ ನಿರ್ಣಯ ಎಲ್ಲಿಯವರೆಗೂ ಆಗುವುದಿಲ್ಲವೋ ಅಲ್ಲಿಯವರೆಗೂ, ನೀವು ಬೆಳೆ ನೀತಿಯನ್ನು ಜಾರಿಗೆ ತರುವವರೆಗೆ, ಬೇಡಿಕೆಗನುಗುಣವಾಗಿ ಬೆಳೆಗಳನ್ನು ಬೆಳೆಸುವವರೆಗೆ, ಈ ರಾಜ್ಯದಲ್ಲಿ ಬೇಡಿಕೆ ಎಷ್ಟಿದೆ ? ಬೇಡಿಕೆಯ ಪ್ರಮಾಣ ಎಷ್ಟಿದೆ ? ಹೊರ ರಾಷ್ಟ್ರಗಳಿಗೆ ರಫ್ತು ಮಾಡಬಹುದಾದಂಥ ಬೆಳೆಯೇ ? ಹೊರ ರಾಜ್ಯಗಳಿಗೆ, ಹೊರ ರಾಷ್ಟ್ರಗಳಿಗೆ ಹೋಗುವಂಥ ಬೆಳೆಯೇ ? ಈ ಬೆಳೆಯನ್ನು ಎಷ್ಟು ಪ್ರಮಾಣದಲ್ಲಿ ಬೆಳೆಸಿದರೆ ನಾವು ಸೂಕ್ತವಾದ ಬೆಲೆಯನ್ನು ಕೊಡಬಹುದು ಎನ್ನುವಂಥ ನಿರ್ಣಯ ಮಾಡಿದರೆ ಮಾತ್ರ ನಾವು ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುವುದರ ಜೊತೆಗೆ ಅದಕ್ಕೊಂದು ಸಮರ್ಥವಾದ ಶಕ್ತಿ ಕೊಡುವುದಕ್ಕೆ ವ್ಯವಸ್ಥೆ ಆಗುತ್ತದೆ ಎನ್ನುವುದು ನನ್ನ ಅನಿಸಿಕೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಹೊಸದಾಗಿ ರಚನೆಯಾದಾಗ ದೇಶಕ್ಕೆ ಮಾದರಿಯಾದ ಕೃಷಿ ಬೆಲೆ ಆಯೋಗವನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಕ್ಕೆ ತರುತ್ತೇವೆ, ಒಂದು ದಾಖಲೆಯನ್ನು ನಿರ್ಮಾಣ ಮಾಡುತ್ತೇವೆಂಬ ಮಾತನ್ನು ರಮೇಶ್ ಕುಮಾರ್ ರವರು ಹೇಳಿದರು. ಅದರ ಚಿಂತಕ ನಾನಿದ್ದೇನೆಂದು ಹೇಳಿದರು. ಒಂದು ವರ್ಷ ಮುಗಿದಿದೆ. ಮುಖ್ಯಮಂತ್ರಿಗಳು ಮೊನ್ನೆ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯದ ಘಟಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಲ್ಲಿ ಹೇಳಿರುವುದನ್ನು ನಾನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಕೇಂದ್ರದ ಬೆಲೆ ಆಯೋಗ ಏನಿದೆ, ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿ ಬೆಲೆ ಆಯೋಗವನ್ನು ರಚನೆ ಮಾಡುತ್ತೇವೆಂದು 14ನೇ ತಾರೀಖು ಹೇಳಿದ್ದೀರಿ. ಮೊದಲು ಹೇಳಿದ್ದೀರಿ, ಕೇಂದ್ರಕ್ಕೆ ಮತ್ತು ದೇಶಕ್ಕೆ ಮಾದರಿಯಾಗುವ ಬೆಲೆ ಆಯೋಗವನ್ನು ಕರ್ನಾಟಕದಿಂದ ರಚನೆ ಮಾಡಿ ತೋರಿಸುತ್ತೇವೆಂದು ಹೇಳಿ, ಈಗ ಕೇಂದ್ರದ ಬೆಲೆ ಆಯೋಗ ಏನಿದೆ,

ಅದೇ ರೀತಿಯ ಬೆಲೆ ಆಯೋಗವನ್ನು ತರುವುದಕ್ಕೆ ನಿಯಮಾವಳಿಯನ್ನು ಇನ್ನು ಒಂದು ವಾರದಲ್ಲಿ ಪ್ರಕಟ ಮಾಡುವುದಾಗಿ ಭಾಷಣ ಮಾಡಿದ್ದೀರಿ. ಈಗಾಗಲೇ 10 ದಿನಗಳಾಗಿವೆ. ಇನ್ನೂ ಗೊತ್ತಾಗಿಲ್ಲ. ರಚನೆಯಾಗಿ ಏನಾದರೂ ಅನುಷ್ಠಾನಕ್ಕೆ ತರುತ್ತಿದ್ದೀರೋ, ಏನೋ ಗೊತ್ತಿಲ್ಲ. ಅದನ್ನು ಕೃಷಿ ಸಚಿವರು ಹೇಳುವುದು ಸೂಕ್ತ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕೃಷಿ ಆಯೋಗ ಮಾಡಬೇಕೆಂದು ಮಾಡಿದ್ದೀರಲ್ಲ, ಅದನ್ನು ಕಳೆದ ಬಜೆಟ್‌ನಲ್ಲಿ announce ಮಾಡಿದ್ದೀರಿ. ಆ ಬಜೆಟ್ ಆದ ಮೇಲೆ ಮತ್ತೊಂದು ಬಜೆಟ್ announce ಮಾಡಿದಿರಿ. ಕೃಷಿ ಬೆಲೆ ಆಯೋಗವನ್ನು ನೇಮಕ ಮಾಡುತ್ತೇವೆಂದು ಅಂದೂ ಹೇಳಿದ್ದೀರಿ. ಮೊನ್ನೆ ನಡೆದ ಬಜೆಟ್‌ನಲ್ಲಿ ಈಗಾಗಲೇ ಆದೇಶವನ್ನು ಹೊರಡಿಸಿದ್ದೇವೆಂದು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ : ಆದೇಶ ಹೊರಡಿಸಲಾಗುವುದು ಎಂದು ಹೇಳಿರುವುದು.

ಶ್ರೀ ಜಗದೀಶ್ ಶೆಟ್ಟರ್: ಇಲ್ಲಿಯೇ ಇದೆ ನೋಡಿ. ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಗಮನಕ್ಕೆ ತರುತ್ತಿದ್ದೇನೆ, ಇದು ನಿಮ್ಮ ಬಜೆಟ್. ಭೈರೇಗೌಡರೆ, ಓದಿ ಬಿಡುತ್ತೇನೆ. ಪೇಜ್ ನಂಬರ್ 11 ರಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳನ್ನು ನಿಗದಿಪಡಿಸಲು ರಾಜ್ಯಮಟ್ಟದಲ್ಲಿ ಕೃಷಿ ಬೆಲೆ ಆಯೋಗವನ್ನು ರಚಿಸಲು ಆದೇಶ ಹೊರಡಿಸಲಾಗಿದೆ. ಆಗಿದೆ. ಆದರೆ ಇದುವರೆಗೆ, ನಿಮ್ಮ ಆದೇಶ ಬರಲಿಲ್ಲ. ನಾನು ಹೇಳುತ್ತೇನೆ, ಇದು ಒಳ್ಳೆಯದು. ಅಂದು ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುತ್ತೇವೆಂದಾಗ ನಾವು ಸ್ವಾಗತ ಮಾಡಿದ್ದೇವೆ. ಅದಕ್ಕಾಗಿ ಆದಷ್ಟು ಬೇಗನೆ ರಚನೆ ಮಾಡಿ ನಮ್ಮ ಕೃಷ್ಣ ಭೈರೇಗೌಡರು ಫೆಬ್ರವರಿ ತಿಂಗಳಿನಲ್ಲಿ ಒಂದು statement ನೀಡಿ ಆದಷ್ಟು ಬೇಗನೆ ಒಂದು ವಾರದಲ್ಲಿ, 15 ದಿನಗಳಲ್ಲಿ ಆದೇಶ ಹೊರಡಿಸುತ್ತೇವೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಇತ್ತೀಚೆಗೂ ಒಂದು statement ಕೊಟ್ಟರು. ಒಂದು ವಾರದಲ್ಲಿ ಆದೇಶ ಹೊರಡಿಸುತ್ತೇವೆಂದು. ಇದುವರೆಗೆ ಏಕೆ ಆಗಲಿಲ್ಲ ಎಂದು ಒಂದೇ ಪ್ರಶ್ನೆ. ಈಗ SAP ಕಾನೂನು, ಕಬ್ಬು ಬೆಳೆಗಾರರ ನಿಯಂತ್ರಣ ಮಾಡುವಂತಹ ಒಂದು ಕಾನೂನನ್ನು ತಂದಿರುವುದರಿಂದ ಸರ್ಕಾರಕ್ಕೆ ಒಂದು ಕ್ರಮ ಕೈಗೊಳ್ಳುವುದಕ್ಕೆ ಒಂದು ಅಧಿಕಾರ ಬಂತು. ಅದೇ ರೀತಿ ಕೃಷಿ ಬೆಲೆ ಆಯೋಗವನ್ನು ನೀವು ಮಾಡಿದರೆ ನಿಶ್ಚಿತವಾಗಿಯೂ ನಿಮಗೆ ಒಂದು ಅಧಿಕಾರ ಬರುತ್ತದೆ. ಅಲ್ಲದೆ ನಮ್ಮ ರೈತರಿಗೂ ನೆಮ್ಮದಿಯಿಂದ

ಬದುಕಲು ಅನುಕೂಲವಾಗುತ್ತದೆ. ಅವರ ಉತ್ಪನ್ನಕ್ಕೆ ಸರಿಯಾದ ಬೆಲೆ ಕೊಡುವಂತದ್ದು ಆಗಬೇಕು. ರೈತರ ಸಬ್ಸಿಡಿ, ಸಾಲ ಮನ್ನಾ ಏನನ್ನೂ ಕೇಳುವುದಿಲ್ಲ. ಅವರು ಬೆಳೆದ ಫಸಲಿಗೆ ಸರಿಯಾದ ಬೆಲೆಯನ್ನು ನಿಗದಿಪಡಿಸಿ ಕೊಟ್ಟರೆ ಅದೇ ದೊಡ್ಡ ಕೆಲಸ ಅವರಿಗೆ. ಅದಕ್ಕಾಗಿ ಇಂದು ನೀವೇನು ಮಾಡಲು ಹೊರಟಿದ್ದೀರಿ, ಆದಷ್ಟು ಬೇಗನೆ ಈ ಸದನದ ಅವಧಿ ಮುಗಿಯುವುದರೊಳಗಾಗಿ ದಯಮಾಡಿ announcement ಮಾಡಿ ಯಾರು ತಜ್ಞರನ್ನು ಮಾಡುತ್ತೀರೋ, ಯಾರನ್ನು ಮಾಡುತ್ತೀರೋ ಬೇಗನೆ ಮಾಡಿ. ತಡ ಮಾಡಬೇಡಿ ಎಂದು ನಾನು ಹೇಳುವುದು. ಒಂದು ವರ್ಷದ ಹಿಂದೆ ನೀವು ಏನು ಘೋಷಣೆ ಮಾಡಿದ್ದೀರಲ್ಲ, ಈಗಾಗಲೇ ಒಂದು ವರ್ಷ ತಡವಾಗಿದೆ. ಇನ್ನು ತಡ ಮಾಡಲು ಹೋಗಬೇಡಿ. ಈ ಅಧಿವೇಶನ ಮುಗಿಯುವುದರೊಳಗೆ ಘೋಷಣೆ ಮಾಡಿ, ಅದಕ್ಕೆ ಅಧ್ಯಕ್ಷರು ಯಾರು, ತಜ್ಞರು ಯಾರು, ರೈತರ ಪರವಾಗಿ ಇರುವವರು ಯಾರು ? ಇವೆಲ್ಲವನ್ನೂ ನಿರ್ಧಾರ ಮಾಡಿಕೊಂಡು ಆದೇಶ ಹೊರಡಿಸಿ ಅವರನ್ನು ಕೆಲಸಕ್ಕೆ ಹಚ್ಚಿ. ಆಗ ಆಗುತ್ತದೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಶಿವಲಿಂಗೇಗೌಡರು ಬಹಳ ಪ್ರಮುಖವಾದ ವಿಚಾರವನ್ನು ಮಾತನಾಡಿದ್ದಾರೆ. ಅದಕ್ಕೆ ನಾನು ಒಂದು ಮಾತನ್ನು add ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೆ, ಕುಮಾರಸ್ವಾಮಿಯವರು ಕೇಂದ್ರ ಸರ್ಕಾರದ ಮಾದರಿಯಲ್ಲಿ ತಾವು ಕೃಷಿ ಬೆಲೆ ಆಯೋಗವನ್ನು ಮಾಡಲು ಹೊರಟಿದ್ದೀರಿ ಎಂದು ಹೇಳಿದರು. ಆದರೆ ಕೇಂದ್ರ ಸರ್ಕಾರದವರು Agricultural Cost & Price Commission ಮಾಡುತ್ತಿದ್ದಾರೆ. ದಯಮಾಡಿ ನಮ್ಮ ಬೇಡಿಕೆ ಕೂಡಾ ಇದೆ ಆಗಿದೆ. ಹಿಂದಿನ ಚರ್ಚೆಯಲ್ಲಿ ನಾವು ತಮಗೆ ಹೇಳಿದ್ದೇವೆ. ಇದನ್ನು ಕೇವಲ Price Commission ಮಾಡಬೇಡಿ, ಬದಲಿಗೆ Cost & Price Commission ಮಾಡಿ. ಆಗ ಸಮಿತಿಯು ಅರ್ಥಪೂರ್ಣವಾದ ನಿರ್ಣಯ ಕೊಡುವುದಕ್ಕೆ ಸಾಧ್ಯವಿದೆ. ದಯಮಾಡಿ ಘೋಷಣೆ ಮಾಡುವುದಕ್ಕಿಂತ ಮೊದಲು Agricultural Cost & Price Commission ಮಾಡಿದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮೊದಲನೇ ಬಾರಿಗೆ ರಾಜ್ಯದಲ್ಲಿ ಕೃಷಿ ಬೆಲೆ ಆಯೋಗವನ್ನು ರಚಿಸಬೇಕೆಂದು ತೀರ್ಮಾನ ಮಾಡಿ ಘೋಷಣೆ

ಮಾಡಿದ್ದೇವೆ. ಈಗಾಗಲೇ ಅದರ ಎಲ್ಲಾ ಸಿದ್ದತೆಗಳು ಆಗಿವೆ, ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಯಾರು ಎಂದು ನೇಮಕ ಮಾಡುವುದಷ್ಟೆ ಉಳಿದಿರುವುದು. ಆದೇಶ ಕೂಡ ಆಗಿದೆ, ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿದೆ. ಅದಕ್ಕಾಗಿ ಒಂದು sub committee ಮಾಡಿದ್ದು, ಅವರೂ ಕೂಡಾ ವರದಿ ಕೊಟ್ಟಿದ್ದಾರೆ. ಇನ್ನು 3–4 ದಿನದೊಳಗೆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡಿ announce ಮಾಡುತ್ತೇವೆ. ಬಿ.ಆರ್.ಪಾಟೀಲ್ ರವರು ಏನು ಹೇಳಿದ್ದಾರೆ, ಅದು ಈಗ ಮೊದಲನೆ ಬಾರಿಗೆ ಮಾಡಿದ್ದೇವೆ. ಇದರ ಅನುಭವದ ಮೇಲೆ ನಂತರದಲ್ಲಿ ಏನು improvement ಮಾಡಿಕೊಳ್ಳಬೇಕು ಎಂಬುದನ್ನು ಕೂಡ ಯೋಚನೆ ಮಾಡುತ್ತೇವೆ.

ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಾವು ಚುನಾವಣಾ ಪ್ರಣಾಳಿಕೆಯಲ್ಲಿಯೂ ತಂದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ಒಂದು ವಿಸ್ತೃತವಾದ ಸಭೆಯನ್ನು ಮಾಡಿ ಅಂದು ಎಲ್ಲರೂ ಸೇರಿದ್ದೆವು. ಅಧಿಕಾರಿಗಳಿಗೆ ರೈತನ ಬವಣೆ ಅರ್ಥವಾಗುವುದಿಲ್ಲ. ಅವರು ನಾವು ಕೊಡುವ ಸಲಹೆಗಳಿಗೆ ವಿಭಿನ್ನವಾದ ಅಲೋಚನೆಗಳನ್ನೇ ಸರ್ಕಾರದ ಮುಂದಿಟ್ಟು ಪಾಸ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮೂಲಭೂತವಾದ ಅಂಶಗಳನ್ನು ನಾವು ಹೇಳುತ್ತಿರುವುದು. ಯಾವ ಪದಾರ್ಥವನ್ನು ರೈತ ಉತ್ಪನ್ನ ಮಾಡುತ್ತಾನೆ, ಅದರ ಬೆಲೆಯನ್ನು ನಿಗದಿ ಮಾಡುವ ಅಧಿಕಾರ ರೈತನಿಗೆ ಬರಬೇಕು. ನಾನು ಹೋಟೆಲಿಗೆ ಹೋದರೆ ಕಾಫಿಗೆ ಇಷ್ಟು ಎಂದು ಹೋಟೆಲಿನವನು ಹೇಳುತ್ತಾನೆ. ಚಪ್ಪಲಿ ಅಂಗಡಿಗೆ ಹೋದರೆ ಚಪ್ಪಲಿಗೆ ಇಷ್ಟು ದರ ಎಂದು ಅವನು ಹೇಳುತ್ತಾನೆ. ನಾನು ಕ್ಷೌರಕ್ಕೆ ಹೋದರೆ ಅವನು ಶೇವಿಂಗಾ ಅಥವಾ ಕಟಿಂಗಾ ಎಂದು ಕೇಳುತ್ತಾನೆ. ಆದರೆ ನನ್ನ ಪದಾರ್ಥಕ್ಕೆ, ನನ್ನ ಬೆವರಿಗೆ ಮಾತ್ರ ಬೆಲೆ ಇಲ್ಲ. ನಾವು ಹೇಳುತ್ತಿರುವುದು ಮೂಲಭೂತವಾಗಿ ಈ ವಿಚಾರದಲ್ಲಿ ಬದಲಾವಣೆ ಬರಬೇಕು ಎಂದು ನಾನು ಮೇ ತಿಂಗಳಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಕೃಷಿ ಸಚಿವರಿಗೆ ಒಂದು ಪತ್ರವನ್ನು ಸಹ ಬರೆದಿದ್ದೇನೆ. The farmer should be in a position to fix the

price for his product. ಅಂದರೆ ಅವನ ಬೆವರಿನ ಬೆಲೆಯನ್ನು ಅವನೇ ಗುರುತಿಸಬೇಕು, ಅವನ manpowerಗೆ, ಅವನ energy investment ಏನು ಇರುತ್ತದೆ ಅದನ್ನು ನಿರ್ಧಾರ ಮಾಡುವ ಅವಕಾಶ ಮೊದಲ ಬಾರಿಗೆ ರೈತನಿಗೆ ನೀವು ಕೊಡಿ. ಯಾವ್ಯಾವುದನ್ನೋ ಲೆಕ್ಕ ಹಾಕಿಕೊಂಡು ಕೃಷಿ ಆಯೋಗ ಮಾಡುವಂತಹುದು it is of no use, it is of no consequence. ಆಮೇಲೆ ನೀವು ಇಡೀ ರಾಜ್ಯಕ್ಕೆ ಏಕರೂಪವಾಗಿ ಮಾಡುವುದು ಸಹ ಸಾಧುವಲ್ಲ. ಜಿಲ್ಲಾವಾರೇ ಮಾಡಬೇಕಾಗುತ್ತದೆ. ಇಂದು ಚಿಕ್ಕಮಗಳೂರಿನವರು ಏಲಕ್ಕಿ ಬೆಳೆಯುತ್ತಾರೆ, ಕೋಲಾರದವರು ಟೊಮ್ಯಾಟೋ ಬೆಳೆಯುತ್ತಾರೆ. ನೀವು ಜಿಲ್ಲಾವಾರು ಸಮಿತಿಗಳನ್ನು ಮಾಡದಿದ್ದರೆ, ರೈತ ಈ ಸಮಿತಿಯಲ್ಲಿ ಅಧ್ಯಕ್ಷನಾಗದೆ ಹೋದರೆ ರೈತರ ಬಳಿ ಜಿಲ್ಲಾಧಿಕಾರಿ ಕೆಲಸ ಮಾಡದಿದ್ದರೆ, ಅಲ್ಲಿ ಸ್ಥಳೀಯವಾಗಿರುವ ರೈತರ ಜೊತೆಗೆ ವ್ಯಾಪಕವಾಗಿ ಚರ್ಚೆ ಮಾಡಿ, ಏನು ಬೆಳೆ ತೆಗೆಯುತ್ತೀರಿ, ಇದಕ್ಕೆ ಏನು ಖರ್ಚು ಬೀಳುತ್ತದೆ ಎಂದು ಇವರು ಗೆಜೆಟ್ ನೋಟಿಫಿಕೇಷನ್ ಮಾಡಬೇಕು ಇವರು. This is Government price. D *price*ಗೆ ಯಾರೂ ತೆಗೆದಕೊಳ್ಳದಿದ್ದರೆ ಸರ್ಕಾರ ತೆಗೆದುಕೊಳ್ಳಲು ತಯಾರಿರಬೇಕು. Support price ಕೊಟ್ಟು ನಮ್ಮನ್ನು ಭಿಕ್ಷುಕರನ್ನಾಗಿ ಮಾಡಬೇಡಿ. ಇನ್ನು ಏನೂ ಇಲ್ಲ, ಮೈ ಮೇಲೆ ಇದ್ದದ್ದು ಎಲ್ಲಾ ಹೋಗಿದೆ. ಇಷ್ಟಂಗುಲ ಬಟ್ಟೆ ಮಾತ್ರ ಮಾನ ಮರ್ಯಾದೆಗಾಗಿ ಇಟ್ಟುಕೊಂಡಿದ್ದೇವೆ. ಅದನ್ನು ತೆಗೆದು ಹಾಕಬೇಕೆಂದರೆ ನಮ್ಮದೇನು ಅಭ್ಯಂತರವಿಲ್ಲ. ದಯಮಾಡಿ ಹಾಗೆ ಮಾಡಬೇಡಿ ಎಂದು ವಿನಂತಿ ಮಾಡುತ್ತೇವೆ. ನೀವು 3–4 ದಿನವಲ್ಲದಿದ್ದರೆ ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳಿ. Floor leaders ಅನ್ನು ಎಲ್ಲರನ್ನೂ ಕರೆಯಿರಿ, ಆಸಕ್ತಿ ಇರುವ ನಮ್ಮನ್ನೂ ಕರೆಯಿರಿ. Final touch ಕೊಡುವ ಮೊದಲಿಗೆ ಚರ್ಚೆ ಮಾಡಿ ದಯಮಾಡಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮುಖೇನ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಹಿಂದೆ ರಾಜ್ಯ ಸರ್ಕಾರದಲ್ಲಿ ಒಂದು ಕಾಲದಲ್ಲಿ ನಾನು ಸದಸ್ಯನಾಗಿದೆ. ಹಿಂದೆ ಏನು ವ್ಯವಸ್ಥೆ ಇತ್ತು. ಕೃಷಿ ಬೆಲೆ ಆಯೋಗ ಎಂಬುದು ಇತ್ತು. ಅದು ಸರ್ಕಾರದ ಆದೇಶದ ಮೇಲೆ ನಡೆದಿತ್ತು. ಅದಕ್ಕೆ ಪ್ರತ್ಯೇಕವಾದ ಅಸ್ತಿತ್ವ ಇರಲಿಲ್ಲ. ಅದು ಸರ್ಕಾರದ ಆಡಳಿತದ ಅಥವಾ ಅಧಿಕಾರದಲ್ಲಿದ್ದಂತಹ

ವ್ಯವಸ್ಥೆಯನ್ನು ಹೊಂದಿಕೊಂಡು ಬೆಲೆಯನ್ನು ನಿಗದಿ ಮಾಡುವಂಥಹ ಪದ್ಧತಿ ಅಲ್ಲಿತ್ತು. ನಾನು ರಾಜೀನಾಮೆ ಕೊಟ್ಟು ಹೊರಗೆ ಬಂದೆ. ಈಗ ಅದನ್ನು ಮಾಡುವಾಗ ಅದಕ್ಕೆ ಒಂದು ಪ್ರತ್ಯೇಕತೆ ಇರಬೇಕು, ಮತ್ತು ರೈತರ ಪರವಾದ ವ್ಯವಸ್ಥೆ ಇರಬೇಕು. ಅಲ್ಲಿ ನೇಮಕವಾಗುವ ಅಧ್ಯಕ್ಷರು, ಸದಸ್ಯರು ಆ ರೀತಿಯಿರಬೇಕು. ಮತ್ತೊಮ್ಮೆ ಅದೇ ರೀತಿ ಆಗಬಾರದು, ಅಂತಹವರನ್ನೇ ತಂದು ಕೂರಿಸಬಾರದು. ಹಿಂದೆ ಏನು ಇದ್ದರು ಆ mind-set ಇದ್ದವರನ್ನು ದಯಮಾಡಿ ಅಲ್ಲಿಗೆ ತರಬಾರದು. ಆ ರೀತಿ ತಾವು ಇದನ್ನು ಮಾಡಬೇಕು.

ಉಪಾಧ್ಯಕ್ಷರು : ಶಿವಲಿಂಗೇಗೌಡರೆ, ಮುಂದುವರೆಸಿ,

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುತ್ತಿದ್ದಾರೆ. ಬಹಳ ಸಂತೋಷ. ಆದರೆ ಅದನ್ನು ಮಾಡಬೇಕಾದರೆ ಬಹಳ ತೊಂದರೆಗಳಿವೆ. ಅಷ್ಟು ಸುಲಭವಲ್ಲ. ಕೃಷಿ ಬೆಲೆಯನ್ನು ಮಾನ್ಯ ಸದಸ್ಯರಾದ ರಮೇಶ್ ಕುಮಾರ್ ಅವರು ಹೇಳಿದಂತೆ ನಿಗದಿ ಮಾಡಬಹುದು, ಟೊಮ್ಯಾಟೊ ಕೆ.ಜಿ.ಗೆ 16 ರೂಪಾಯಿ ಎಂದು ನಿಗದು ಮಾಡಿಬಿಟ್ಟೆವು. ಎಷ್ಟು ಪ್ರಮಾಣದ ಟೊಮ್ಯಾಟೊ ಬರುತ್ತದೆ, ಈ ರಾಜ್ಯದಲ್ಲಿ ಎಷ್ಟು ಬೇಡಿಕೆ ಇದೆ, ಹೊರ ರಾಜ್ಯಕ್ಕೆ ಎಷ್ಟು ಹೋಗುತ್ತದೆ, ಉಳಿದಂಥ ಟೊಮ್ಯಾಟೊ ಅನ್ನು cold storage ನಲ್ಲಿ ಇಡಲು ಅಷ್ಟು cold storage ಕರ್ನಾಟಕ ರಾಜ್ಯದಲ್ಲಿದ್ದಾವೆಯೇ ಎನ್ನುವುದು ನನ್ನ ಮೂಲಭೂತವಾದ ಪ್ರಶ್ನೆಯಾಗಿದೆ. ಬೆಲೆ ಆಯೋಗ ಬೆಲೆಯನ್ನು ನಿಗದಿ ಮಾಡಬೇಕಾದರೆ, ಯಾವ ಪದಾರ್ಥ ಎಷ್ಟು ಬೇಡಿಕೆಗೆ ಅನುಗುಣವಾಗಿ ವ್ಯಾಪಾರವಾಗುತ್ತದೆಯೋ ಉಳಿದಂಥ ಪದಾರ್ಥಗಳನ್ನು ಕೊಂಡು ಸಮುದ್ರಕ್ಕೆ ಎಸೆಯುತ್ತಾರೋ ಇಲ್ಲವೋ cold storage ಇಡುತ್ತಾರೋ ಆ ಸಾಮರ್ಥ್ಯ ಸರ್ಕಾರಕ್ಕೆ ಬರಬೇಕಾಗುತ್ತದೆ. ಆಗ ಮಾತ್ರ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಬಹುದು. ಒಂದೊಂದು ಬೆಳೆಗೆ ಒಂದೊಂದು ರೀತಿಯ ಬೆಲೆ ವ್ಯತ್ಯಾಸಗಳಿವೆ. ಬಹಳ ದಿವಸ ಇಡಲಾರದಂಥ ಪದಾರ್ಥಗಳಿದ್ದಾವೆ, ಅವುಗಳ ವೈಪರಿತ್ಯವೇ ಬೇರೆ ಬೇರೆ ರೀತಿಯಲ್ಲಿರುತ್ತದೆ, ಅವುಗಳ ಲಕ್ಷಣಗಳೇ ಬೇರೆ ಬೇರೆ ರೀತಿಯಲ್ಲಿರುತ್ತವೆ, ಅವೆಲ್ಲವನ್ನೂ ಅಳವಡಿಸಿಕೊಂಡು ಮಾಡಿದಾದ ಮಾತ್ರ ಕೃಷಿ ಬೆಲೆ ಆಯೋಗ ಯಶಸ್ವಿಯಾಗಲು ಕಾರಣವಾಗುತ್ತದೆ, ಅದನ್ನು ಯಾವ ರೀತಿ ಮಾಡುತ್ತಾರೋ

ನೋಡೋಣ, ಒಟ್ಟಾರೆ, ಆಗಲೇ ರಮೇಶ್ ಕುಮಾರ್ ಅವರು ಹೇಳಿದರು, ನಾವು ರೈತರು ಕುಳಿತುಕೊಂಡು ನಮ್ಮ ಬೆಲೆಯನ್ನು ನಿರ್ಧಾರ ಮಾಡುವುದಕ್ಕೋಸ್ಕರ ನಾವು ಕೃಷಿ ಬೆಲೆ ಆಯೋಗ ತರುತ್ತಿದ್ದೇವೆಂದು ಅವರು ಒಂದು ಚರ್ಚೆಯ ಸಂದರ್ಭದಲ್ಲಿ ಹೇಳಿದರು. ಬಹಳ ಸಂತೋಷ, ಸ್ವಾಗತ ಮಾಡುತ್ತೇವೆ, ಅದು ನಿರ್ದಿಷ್ಟವಾದ ಸಮಸ್ಯೆಯಾಗಿದ್ದರೂ ಬೃಹತ್ ಆದ ಸಮಸ್ಯೆಗಳಿದ್ದಾವೆ, ಆ ಸಮಸ್ಯೆಗಳನ್ನು ಬಗೆಹರಿಸಿ ಅದು ರಚನೆಯಾಗುತ್ತದೆ ಎನ್ನುವುದಾದರೆ ನಾವು ಬಹಳ ಸ್ವಾಗತ ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಈಗ ಬೆಲೆ ಆಯೋಗವೆಂದರೆ, ಕೇವಲ ಉತ್ಪನ್ನಕ್ಕೆ ಬೆಲೆ ನಿಗದಿ ಮಾಡತಕ್ಕಂಥದ್ದಲ್ಲ. ಯಾವ ಬೆಳೆಯನ್ನು ಯಾವ ಭಾಗದಲ್ಲಿ, ಯಾವ ಕಾಲದಲ್ಲಿ ತೆಗೆಯಬಹುದು, cropping pattern decide ಮಾಡುವ ಅಧಿಕಾರ ಆ ಕಮಿಟಿಗೆ ಬರಬೇಕು, demand and supply position ನೋಡಿಕೊಂಡು ಪೊಟ್ಯಾಟೊ ಎಷ್ಟು ಬರಬೇಕು, ಟೊಮ್ಯಾಟೊ ಎಷ್ಟು ಬರಬೇಕು, ಕ್ಯಾಬೇಜ್ ಎಷ್ಟು ಬರಬೇಕು, ಅದನ್ನು ಯಾವ ಪ್ರದೇಶದಲ್ಲಿ ಬೆಳೆಯುತ್ತಾರೆ, ಅದಕ್ಕೆ ಎಷ್ಟು ಬೇಡಿಕೆ ಇದೆ, ಅದಕ್ಕೆ ಯಾವ ಯಾವ ಪರಿಕರಗಳನ್ನು ಉಪಯೋಗಿಸಬೇಕು, ಇವತ್ತು ರೈತ mechanized agriculture ಮಾಡುವುದಕ್ಕಾಗುತ್ತಿಲ್ಲ. Machineries ಅವನಿಗೆ subsidized rate ನಲ್ಲಿ machinery ಕೊಡುವುದು ಆ ಸಮಿತಿಯ ವ್ಯಾಪ್ತಿಗೆ ಬರಬೇಕು, ಶಿವಲಿಂಗೇಗೌಡರೆ, ಬರೀ ಬೆಲೆ ನಿಗದಿ ಮಾಡುವುದಲ್ಲ. ಎಲ್ಲಾ ರೀತಿಯಲ್ಲಿ including ಯಾವ ರೀತಿಯಾಗಿ ನಿಮ್ಮ Agro Industries ಕೊಡುವುದರಿಂದ ಹಿಡಿದು ಯಾವ Fertilizers ಎಷ್ಟು ಬೇಕು ಎನ್ನುವುದರಿಂದ ಅದರ ಸಬ್ಸಿಡಿ ಬರುತ್ತದೆ, ಅದು ರೈತನಿಗೆ ತಲುಪುತ್ತಿದೆಯಾ, ಅಥವಾ ತಯಾರು ಮಾಡುವವನಿಗೆ ಹೋಗುತ್ತಿದೆಯಾ ಈ ಎಲ್ಲಾ ವಿಚಾರಗಳೂ ಕೂಲಂಕಷವಾಗಿ ಆ ಸಮಿತಿಯ ವ್ಯಾಪ್ತಿಗೆ ಬರಬೇಕು. ಅದೊಂದು ರೀತಿಯಲ್ಲಿ ರೈತ ಕಲ್ಯಾಣ ಸಮಿತಿಯಾಗುತ್ತದೆ, ಬರೀ price Fixation Committee ಅಲ್ಲ. ಈಗ sugarcane ಇದೆ. ಮೈಶುಗರ್ ನವರು, ನಮಗೆ ಬಹಳ ಜಾಸ್ತಿ capacity ಇದೆ, ಅದರಿಂದ ಕಬ್ಬು ಅರೆಯುವುದಕ್ಕೆ ಅವಕಾಶ ಸಾಕಷ್ಟು ಇದೆ, ಅದಕ್ಕೆ ನಮಗೆ scope ಕೊಡಿ ಎಂದು ಕೇಳುತ್ತಾರೆ. Expansion ಗೆ scope ಪಡೆದುಕೊಂಡು

machineries purchase ಮಾಡಿ ಫಾರಿನ್ ಟೂರ್ ಮಾಡಿಕೊಂಡು ಬಂದ ಆಮೇಲೆ MD ಹೋಗಿ, ಇನ್ನೊಬ್ಬ MD ಬರುತ್ತಾನೆ, ಇಲ್ಲಿ crushing capacity ಇಲ್ಲ, ರೈತರಿಗೆ ಬಹಳ ಕಷ್ಟವಾಗುತ್ತಿದೆ, ಅದರಿಂದ ಜಾಗರಿ ಮಾಡುವುದಕ್ಕೆ ಜಾಗರಿ ಯುನಿಟ್ಸ್ ಕೊಡಿ, ಖಾಸಗಿ ಶುಗರ್ ಕಾರ್ಖಾನೆಯವರಿಗೆ ಕೊಡಿ ಎಂದು ಹೇಳುತ್ತಾರೆ. ಆಮೇಲೆ ಆಡಿಟ್ ಪ್ಯಾರಾದಲ್ಲಿ ನಿಲ್ ಬರುತ್ತದೆ, ಮೈಶುಗರ್ ನಲ್ಲಿ ಲಾಸ್ ಏಕೆಂದರೆ unutilized machinery ಎಂದು ಹೇಳುತ್ತಾರೆ. ಈ ತರಹವೆಲ್ಲಾ ಇವರು ಕೋಟ್ಯಂತರ ರೂಪಾಯಿಗಳ ಚೆಲ್ಲಾಟ ಮಾಡುತ್ತಿದ್ದಾರೆ. ನಾನು ಶಿವಲಿಂಗೇಗೌಡರಲ್ಲಿ ಏನು ಹೇಳಿದೆ ಎಂದರೆ, ಪುಟ್ಟಣ್ಣಯ್ಯನವರು ನಾವು ಚರ್ಚೆ ಮಾಡುತ್ತಿದ್ದೆವು, ಅಲ್ಲಿಗೆ ದತ್ತಾರವರು ಬಂದರು, ಅಷ್ಟರೊಳಗೆ ಬೆಲ್ ಹಾಕಿದರು, ಅಧ್ಯಕ್ಷರು ಬಂದರು, ನಾವೆಲ್ಲರೂ ಈ ವಿಷಯವಾಗಿ ಚರ್ಚೆ ಮಾಡುವವರಿದ್ದೇವೆ, ಕೇವಲ ಬೆಲೆ ನಿಗದಿ ಮಾಡುವುದಲ್ಲಾ, cropping pattern decide ಮಾಡತಕ್ಕಂಥದ್ದು, ಯಂತ್ರೋಪಕರಣಗಳನ್ನು ರೈತನಿಗೆ ಸಬ್ಸಿಡಿ ದರದಲ್ಲಿ ನೀಡುವುದು, ಯಾವುದಕ್ಕೂ ಅವರು cash ಕೊಡುವ ಸ್ಥಿತಿ ಇರಬಾರದು, ನಮ್ಮ ಉತ್ಪನ್ನದಲ್ಲಿ deduct ಮಾಡಿಕೊಳ್ಳಿ, ರೈತರಲ್ಲಿರುವ ವ್ಯತ್ಯಾಸವೇನಿದೆ ಅದನ್ನು ಕಡಿಮೆ ಮಾಡುವುದು. ಇವತ್ತಿನ ದಿವಸ ಪ್ರಜಾವಾಣಿ ಪತ್ರಿಕೆಯನ್ನು ನೋಡುತ್ತಿರಬಹುದು, ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ನೋಡುತ್ತೇವೆ, auctions ನೋಡಿ ಮುತ್ತೂಟ್ ಫೈನಾನ್ಸ್ ಅವರು ಎಷ್ಟು ಗೋಲ್ಡ್ ಸೀಜ್ ಮಾಡಿದ್ದಾರೆ ? ರೈತರು ತಮ್ಮ ಒಡವೆಗಳನ್ನು ತೆಗೆದುಕೊಂಡು ಹೋಗಿ ಹಣಕ್ಕಾಗಿ ಅವರ ಹತ್ತಿರ ಅಡವಿಟ್ಟಿದ್ದರಲ್ಲಾ, ಅದಕ್ಕೆ ಅವರ ಕೈಯಿಂದ ಬಡ್ಡಿ ಕಟ್ಟುವುದಕ್ಕಾಗಲಿಲ್ಲ, ಆ ದಿನಾಂಕವಾದ ತಕ್ಷಣ ಅದನ್ನು ಅವನು ಹರಾಜ್ ಹಾಕುತ್ತಾನೆ. ಆ ಚಿನ್ನವನ್ನು ನಮ್ಮ ಹಳ್ಳಿಯ ಹೆಣ್ಣು ಮಕ್ಕಳು ತಾತ ಮುತ್ತನ ಕಾಲದಿಂದಲೂ ಒಂದು ಗೌರವಕ್ಕೆ ಒಂದು ಬಳೆ, ಒಂದು ಒಲೆಯನ್ನು ಇಟ್ಟುಕೊಂಡಿದ್ದರು, ಅದೆಲ್ಲವೂ ಮುತ್ತೂಟ್ ಫೈನಾನ್ಸ್ ಮತ್ತು ಮಣಿಪುರಂ ಫೈನಾನ್ಸ್ ಅವರ ಪಾಲಾಗಿದೆ, ಕಾರಣವೇನೆಂದರೆ, wrong policy. ಕೃಷಿಯನ್ನು ಪ್ರತ್ಯೇಕಿಸಿ ನಾವು ಮಾತನಾಡುವುದಕ್ಕಾಗುವುದಿಲ್ಲ. we have to discuss agriculture along with finsheries, forest, minor irrigation, sericulture, horticulture ಇವರು ಇಲಾಖೆಗಳನ್ನು ವಿಂಗಡಿಸಿ,

departmental head ಗಳನ್ನು, Director ಗಳನ್ನು ಜಾಸ್ತಿ ಮಾಡಿಕೊಂಡರೆ ಹೊರತು ನಮಗೆ ಮಾಡಿದ್ದೇನೂ ಇಲ್ಲ. ದಯಮಾಡಿ ಆ ದೃಷ್ಟಿಯಿಂದ ತೆಗೆದುಕೊಳ್ಳಿ, ಸಹಾಯವಾಗಲೆಂದು ಹೇಳುತ್ತಿದ್ದೇನೆ, ಕ್ಷಮಿಸಬೇಕು ಶಿವಲಿಂಗೇಗೌಡರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಕ್ಷಮಿಸುವುದೇನಿಲ್ಲ, ನಾನು ಅದನ್ನೇ ಪ್ರಾಂತೀಯವಾರು ಬೆಳೆ ನೀತಿಯನ್ನು ತರಬೇಕೆಂದು ಹೇಳಿದ್ದೇನೆ. ಯಾವತ್ತು ನಾವು ಬೇಡಿಕೆಗೆ ಅನುಗುಣವಾಗಿ ಬೆಳೆಯನ್ನು ಬೆಳೆಯುವುದಿಲ್ಲವೋ ಅಲ್ಲಿಯವರೆಗೆ ಕಷ್ಟವಾಗುತ್ತದೆ. ಬೇಡಿಕೆಗೆ ಅನುಗುಣವಾಗಿ ಬೆಳೆ ಬೆಳೆಯುವ ಪದ್ಧತಿಯನ್ನು ಕಾನೂನಿನ ಮೂಲಕ ಜಾರಿಗೆ ತರಬೇಕಾಗುತ್ತದೆ, ಕಾನೂನನ್ನೇ ಅಳವಡಿಸಬೇಕಾಗುತ್ತದೆ. ಕಾನೂನನ್ನು ಅಳವಡಿಸಿ ನಾವು ಬೆಳೆಯನ್ನು ಬೇಡಿಕೆಗೆ ತಕ್ಕಂತೆ ಬೆಳೆಯನ್ನು ಬೆಳೆಸಬೇಕಾಗುತ್ತದೆ, ಇಲ್ಲವಾದರೆ ಕಷ್ಟವಾಗುತ್ತದೆ. ಈಗ ನೀವು ಬೆಲೆಯನ್ನು ನಿಗದಿ ಮಾಡಿದರೆ, ಕೆ.ಜಿ. ಟೊಮ್ಯಾಟೋಗೆ ರೂ. 16 ಕೊಡುತ್ತೇವೆಂದರೆ, ನಿಮ್ಮನ್ಯಾರನ್ನೂ ಜನ ಕೇಳುವುದಿಲ್ಲ ಎಷ್ಟು ಬೇಕೋ ಅಷ್ಟು ಬೆಳೆಯುತ್ತಾರೆ, ಆಗ ಏನು ಮಾಡುತ್ತೀರಿ ? ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಿ ? ಈ ರೀತಿಯ ಸಮಸ್ಯೆಗಳು ಬೇಕದಷ್ಟು ಬರುತ್ತವೆ. ನೀವು ಬೆಲೆ ನಿಗದಿ ಮಾಡಿದಾಕ್ಷಣ ಬೆಳೆಯುವುದಕ್ಕೆ ಹೋಗುತ್ತಾರೆ ಅದಕ್ಕೋಸ್ಕರ ಅನೇಕ ಸಮಸ್ಯೆಗಳು ಸೇರಿದಂತೆ ಒಂದು ಬೆಳೆ ಬೆಳೆಯುವುದಕ್ಕಾಗುವ ಖರ್ಚು ವೆಚ್ಚ ಇದೆಲ್ಲವನ್ನೂ ಸಮದೂಗಿಸಿ ಯಾವ ರೀತಿಯ ಬೆಲೆಯನ್ನು ಕೊಡುವುದನ್ನು ತೆಗೆದುಕೊಳ್ಳಬೇಕಾಗುತ್ತದೆ, ಅದೆಲ್ಲಕ್ಕಿಂತ ಹೆಚ್ಚಿಗೆ ಬಂಡವಾಳ ಬೇಕು. ಕೃಷಿಯಲ್ಲಿ ಯಾರೂ ಬಂಡವಾಳವನ್ನು ಹೂಡುತ್ತಿಲ್ಲ. ಕೃಷಿ ಸಮ್ಮೇಳನವನ್ನು ಮಾಡಿದರು, ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮಾಡಿದರು, ಕರ್ನಾಟಕ ರಾಜ್ಯಕ್ಕೆ ರೂ. 65,000 ಕೋಟಿ ಹರಿದು ಬಂತು ಎಂದರು. ನಮ್ಮ ಉಮೇಶ್ ಕತ್ತಿಯವರು ಇಲ್ಲೇ ಕುಳಿತಿದ್ದಾರೆ, ಅವರೇ ಕೃಷಿ ಸಮ್ಮೇಳನವನ್ನು ಮಾಡಿದವರು, ಯಾರು ಬಂದು ಬಂಡವಾಳವನ್ನು ಯಾವುದಕ್ಕು ಹೂಡಿದರು, ಯಾವ ಕಾರ್ಖಾನೆ ತೆಗೆದುಕೊಂಡರು, ಯಾವ ಕಾರ್ಖಾನೆ ಪ್ರಾರಂಭವಾಯಿತು, ಅದೇನಾಯಿತೋ ಅದೇನೋ ರಫ್ತು ಆಮದಿನವರು ಸಂಘದಲ್ಲಿ ಮಾಡಿದರು ಎಂದರು. ಮುಂದೆ ಏನಾಯಿತು, ಅದು take up ಆಯಿತಾ ಏನಾಯಿತು ಎಂದು ಚಿಂತನೆ ಮಾಡುವ ಪರಿಸ್ಥಿತಿ ಇವತ್ತು ಇಲ್ಲ, ಅದು ಆಗಬೇಕು. ಬಂಡವಾಳ, ಎಷ್ಟು ಬಂಡವಾಳ ? ಕೃಷಿ

ಇಲಾಖೆಗೆ ನೀವು ಹೂಡಿರುವ ಬಂಡವಾಳವೆಷ್ಟು? ರೂ. 1,900 ಕೋಟಿ ಕೇಂದ್ರ ಪರಿಷ್ಕೃತ ಕಾರ್ಯಕ್ರಮಗಳಿಗೆ ಬರುತ್ತದೆ, ಕೇಂದ್ರ ನಿಬಂಧನೆಗೆ ಒಳಪಟ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇನ್ನು ಉಳಿದ ರೂ. 600 ಕೋಟಿ ನಿಮ್ಮ ಸಂಬಳಕ್ಕೆ ಹೋಗುತ್ತದೆ, ಇನ್ನು ರೂ. 400 ಕೋಟಿ ರಾಜ್ಯ ವಲಯದ 54 ಹೆಡ್ ಇಟ್ಟುಕೊಂಡಿದ್ದೀರಿ. ಕೇಂದ್ರ ವಲಯದಲ್ಲಿ ಯಾವುದಕ್ಕೆ ಕೊಡಬೇಕೆಂದು ತೀರ್ಮಾನ ಮಾಡುತ್ತೀರೋ sprinkler set ಕೊಡಬೇಕೆನ್ನುತ್ತೀರೋ ಅದಕ್ಕೆ ರಾಜ್ಯದಲ್ಲಿ ಇನ್ನೊಂದು ಹೆಡ್ ಇಟ್ಟಿದ್ದೀರಿ, ಏತಕ್ಕೆ ಇಷ್ಟೊಂದು ಹೆಡ್ ಇಟ್ಟಿದ್ದೀರಿ ? ನಾವು ಕೃಷಿ ಸಹಾಯಕ ನಿರ್ದೇಶಕರನ್ನು ಯಾವ ಹೆಡ್‌ನಲ್ಲಿ ಈ sprinkler set ಕೊಡುತ್ತಿದ್ದೀರೆಂದು ಹೋಗಿ ಕೇಳಿದರೆ, ಇದು ರಾಜ್ಯ ವಲಯ ಸರ್ ಎನ್ನುತ್ತಾರೆ. ಇನ್ನೊಂದು ಯಾವುದು ಎಂದರೆ, ಅದು ಕೇಂದ್ರ ವಲಯ ಎನ್ನುತ್ತಾನೆ. ಕೇಂದ್ರ ವಲಯದ್ದು ರಾಜ್ಯ ವಲಯಕ್ಕೆ ಹಾಕುತ್ತಾರೋ ರಾಜ್ಯವಲಯದ್ದು ಕೇಂದ್ರ ವಲಯಕ್ಕೆ ಹಾಕುತ್ತಾರೋ ಕೃಷಿ ಸಚಿವರು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ, ಒಳ್ಳೊಳ್ಳೆಯ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೀದ್ದಿರಂತೆ ಮುಂದೆ ಹೇಳುತ್ತೇನೆ. ಹೆಡ್ ಇದ್ದಾವಲ್ಲ, ಇವನ್ನಿಟ್ಟುಕೊಂಡು ದುಡ್ಡು ಹೊಡೆಯುವುದಕ್ಕೆ ದಾರಿ ಮಾಡಿದ್ದೀರಿ, ನಿಜವಾಗಿಯೂ ದುಡ್ಡು ಹೊಡೆಯುವುದಕ್ಕೆ ಇದೊಂದು ಕ್ರಮ, ಎಲ್ಲವೂ ಮಾಡುವುದು ಅದೇ ಕೆಲಸ, ಎಲ್ಲವೂ sprinkler set, ಕೀಟನಾಶಕಗಳು, ಈ ಪರಿಕರಗಳು, ಯಾವುದೇ ಕಾರ್ಯಕ್ರಮಗಳಲ್ಲಿ ನಿಮ್ಮದೇನೂ ಹೊಸದಿಲ್ಲ, ಎಲ್ಲವೂ ಅದೇ ಯೋಜನೆಗಳು ಆದರೆ, ಕೇಂದ್ರ, ರಾಜ್ಯ, ಜಿಲ್ಲಾ ವಲಯಗಳಿಂದ 73 ಹೆಡ್‌ಗಳು ಏತಕ್ಕೆ ಬೇಕು ಸ್ವಾಮಿ ? Non-plan and plan, ಪ್ಲ್ಯಾನ್‌ನಲ್ಲಿ ಏನು ಮಾಡುಬೇಕೋ ಮಾಡಿ, ನಾನ್-ಪ್ಲ್ಯಾನ್ ನಲ್ಲಿ ಸಂಬಳವನ್ನು ಭರಿಸಿ, ಎರಡು ಹೆಡ್ ಇಟ್ಟುಕೊಂಡು ಮಾಡಿದರೆ, ಯಾರಾದರೂ ಅಧಿಕಾರಿ, ವಿಸ್ತೃತ ನೀರಾವರಿ, ರಾಷ್ಟ್ರೀಯ ವಿಕಾಸ ಯೋಜನೆ, ಕೃಷಿ ವಿಕಾಸ ಯೋಜನೆ, ಎಲ್ಲದರಲ್ಲೂ ಮಾಡುವುದು ಅದೇ ಕೆಲಸ. ಹೋಗಲಿ ಹನಿ ನೀರಾವರಿ ಎಂದು ಬರೆಯುತ್ತಾರೆಯೇ ನಮ್ಮ ಜನಕ್ಕೆ ಅರ್ಥವಾಗುವುದಿಲ್ಲ, ವಿಸ್ತೃತ ಎನ್ನುವ ಪದ ನೋಡಿ ಇದೇನೋ ಫಾರಿನ್ ನಿಂದ ಬಂದಿದೆ ಎಂದು ತಿಳಿದುಕೊಳ್ಳುತ್ತಾರೆ. ಅವರಿಗೆ ಗೊತ್ತಿಲ್ಲದಿರುವ ಪದವನ್ನು ಇವರು ಉಪಯೋಗಿಸುತ್ತಾರೆ. ನನ್ನ ಕ್ಷೇತ್ರದ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ, 47 ಸಾವಿರ ಅತಿ ಸಣ್ಣ ರೈತರಿದ್ದಾರೆ.

ಸ್ವಲ್ಪ small farmers 20,000 ಇದ್ದಾರೆ. big farmers 11,000 ಜನ ಇದ್ದಾರೆ. ನೀವು ಬೆಳೆ ಬೆಳೆದ ಮೇಲೆ ಅದನ್ನು ಸಂಸ್ಕರಣ ಮಾಡುವುದು. ಕುಯಿಲು ಎಂದೇನೋ ಬರೆದಿದ್ದಾರೆ. ಅದು ಅರ್ಥವಾಗುತ್ತಿಲ್ಲ. ಅದಕ್ಕೆ 2.68 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಎಷ್ಟು ಜನ ರೈತರಿದ್ದಾರೆ ? 80,000 ಜನ ರೈತರಿಗೆ ಇದರ ಲಾಭ ಏನಾದರೂ ತಲುಪಬೇಕಾದರೆ ಎಷ್ಟು ವರ್ಷಗಳು ಬೇಕು, ಎಷ್ಟು ಬಜೆಟ್ ಬೇಕು ? 78 ಲಕ್ಷ ಕುಟುಂಬಕ್ಕೆ ಈ ನಿಮ್ಮ ಯೋಜನೆಗಳೇನಾದರೂ ತಲುಪಬೇಕಾದರೆ ಅಲ್ಲಿ ಬ್ರೋಕರ್‌ಗಳ ಸಂತೆ ಇದೆ. ಯಾರು ಬೇಕಾದರೂ ಬಂದು ತೆಗೆದುಕೊಂಡು ಹೋಗುತ್ತಾರೆ, ಯಾರಿಗೆ ಬೇಕಾದರೂ ಕೊಡಿಸುತ್ತಾರೆ. ತಾಡಪಾಲು ತೆಗೆದುಕೊಂಡು ಹೋಗಿ ಒಂದು ಕಡೆ ಕೊಡುತ್ತಾರೆ. sprinkler set ಗಳನ್ನು ಕೊಡುತ್ತೀರಿ, sprinkler sets ಇದಕ್ಕೆ ನೀವು ಸಬ್ಸಿಡಿ ಹಣ ಕೊಡುತ್ತೀರಿ ನಾನು ನಿಮ್ಮ ತಪ್ಪು ಎಂದು ಹೇಳುವುದಿಲ್ಲ. ಅದು ಉಪಯೋಗ ಆಗುತ್ತಿದೆಯೇ ನಾವು ಗ್ರಾಸ್ ರೂಟ್ ಲೆವಲ್‌ನಲ್ಲಿ ಮಾತನಾಡುತ್ತಿದ್ದೇವೆ. ಆ sprinkler set ನಲ್ಲಿ ಏನಾದರೂ ಸಿಗುತ್ತಿದೆಯೇ ? ಒಂದು ಟ್ರ್ಯಾಕ್ಟರ್ ಟಿಲ್ಲರ್ 14,000 ರೂ. ಸಬ್ಸಿಡಿ ಸೇರಿ ನೀವು 32,000 ರೂ. ಕೊಡುತ್ತೀರಿ. ಆದರೆ 18 ರಿಂದ 20 ಸಾವಿರ ರೂಪಾಯಿಗೆ ಅಲ್ಲಿಯೇ high-class tiler ಮಾಡಿಕೊಡುತ್ತಾನೆ. ಇನ್ನು 12 ರಿಂದ 13,000 ತಿನ್ನುವವರು ಯಾರು ? ಅದರ ಗುಣಮಟ್ಟ ಚೆನ್ನಾಗಿದೆ. ಇಲ್ಲಿ ದೊಡ್ಡ ದೊಡ್ಡ ಕಂಪನಿಗಳಲ್ಲಿ ಮಾತ್ರ ಉತ್ತಮ ಗುಣಮಟ್ಟದ ಟಿಲ್ಲರ್‌ಗಳನ್ನು ಮಾರಾಟ ಮಾಡುತ್ತಾರೆ. ಅವುಗಳಿಗಿಂತ ಕಡಿಮೆ ಗುಣಮಟ್ಟದವು ಇವು. ನಾವು ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿದ್ದೇವೆ, ಅವುಗಳಿಗಿಂತ ಕಡಿಮೆ ಗುಣಮಟ್ಟದ ಟಿಲ್ಲರ್‌ಗಳನ್ನು ಕೊಟ್ಟಿದ್ದಾರೆ. ನಾವು ಅವುಗಳ ತೂಕವನ್ನು ಮಾಡಿದ್ದೇವೆ. ಅದೂ ಅಷ್ಟೇ ಕೆ.ಜಿ. ಬರುತ್ತದೆ, ಇದೂ ಅಷ್ಟೇ ಕೆ.ಜಿ. ಬರುತ್ತದೆ. ಲೋಕಲ್‌ನವರು ನಾಳೆ ಬೆಳಿಗ್ಗೆ ನನ್ನ business ಬಿದ್ದು ಹೋಗುತ್ತದೆ ಎಂದು ಉತ್ತಮ ಗುಣಮಟ್ಟದ sprinkler set ಗಳನ್ನು ಮಾಡಿ ಕೊಡುತ್ತಾನೆ. ಹಿಂದೆ ಎಲ್ಲಾ ಕಬ್ಬಿಣದ ನೇಗಿಲನ್ನು ನಮ್ಮ ಊರಿನ ಆಚಾರರು ಮಾಡಿ ಕೊಡುವರು. Agriculture Assistant Director ನಮಗೆ 500 ನೇಗಿಲು ಬೇಕು ಎಂದು ಹೇಳಿದರೆ ಊರಲ್ಲಿರುವ ಆಚಾರರೆಲ್ಲಾ ಸೇರಿ ಆ ನೇಗಿಲನ್ನು ಮಾಡಿ ಕೊಡುತ್ತಿದ್ದರು. ಅದಕ್ಕೆ ಅರಸೀಕೆರೆ ನೇಗಿಲು ಎಂದೇ ಕರೆಯುವರು

ಈಗ ಏನು ಮಾಡಿದ್ದೀರಿ ಆ ನೇಗಿಲುಗಳನ್ನೇಲ್ಲಾ industrial estate ಗೆ ತಂದು ಹಾಕಿದ್ದೀರಿ. ಯಾರೋ ಒಬ್ಬ ಒಂದು ಟೆಂಡರ್ ಹಾಕಿಕೊಂಡು ಕುಳಿತುಕೊಳ್ಳುತ್ತಾನೆ. ಅವರು ಯಾರ ಹತ್ತಿರ ಮಾಡಿಸುತ್ತಾನೆ, ಅದೇ ಅರಸೀಕೆರೆ ಆಚಾರರ ಹತ್ತಿರ ಮಾಡಿಸುತ್ತಾನೆ. ಅರಸೀಕೆರೆಯಲ್ಲಿ ಒಬ್ಬರೂ ಆಚಾರರು ಇಲ್ಲ. ಎಲ್ಲಾ ಪೀಣ್ಯದ industrial estate ಗೆ ಬಂದಿದ್ದಾರೆ. ಅವರೇ ತಯಾರು ಮಾಡುವುದು. ಇವನೇನು ಬೇರೆ ಮಾಡುವುದಿಲ್ಲ. ಅವರ ಹತ್ತಿರ ತೆಗೆದುಕೊಂಡು ಇವನು ವೃತ್ತಿ ಮಾಡಿಕೊಂಡು ಇಡೀ ರಾಜ್ಯಕ್ಕೆ ಸಪ್ಲೇ ಮಾಡುತ್ತಾನೆ. ಇದರಲ್ಲಿ ಏನು ಲಾಭ ಉಳಿಯುತ್ತದೆ ? ಈ ಪರಿಕರಗಳನ್ನು ಕೊಡುವಂತಹ ಎಷ್ಟು ಯೋಜನೆಗಳಿವೆಯೋ ಭೂ ಚೇತನ ಇರಬಹುದು, ರಾಷ್ಟ್ರೀಯ ವಿಕಾಸ ಯೋಜನೆ ಇರಬಹುದು, ಯಾವುದೇ ಯೋಜನೆಗಳನ್ನು ತೆಗೆದುಕೊಳ್ಳಿ ಎಲ್ಲಾ ಯೋಜನೆಗಳಲ್ಲಿ ಕೊಡತಕ್ಕಂತಹ ಸಬ್ಸಿಡಿ ಹಣ ನಾನು ನೇರವಾಗಿ ಹೇಳುತ್ತಿದ್ದೇನೆ. ನೀವು ಬೇಕಾದರೆ ತನಿಖೆ ಮಾಡಿಸಿ ನೀವು ಕೊಡತಕ್ಕಂತಹ ಸಬ್ಸಿಡಿ ಹಣ ರೈತರಿಗೆ ತಲುಪುತ್ತಿಲ್ಲ ಮಧ್ಯವರ್ತಿಗಳ ಹಾಗೂ ಅಧಿಕಾರಿಗಳ ಪಾಲಾಗುತ್ತಿದೆ. ಇದನ್ನು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ನಾನು ಆಪಾದನೆ ಮಾಡುತ್ತಿದ್ದೇನೆ. ನಾನೇನಾದರೂ ಇದನ್ನು ಪ್ರೂವ್ ಮಾಡಲಿಲ್ಲವೆಂದರೆ ನನಗೆ ಏನು ಶಿಕ್ಷೆ ಕೊಟ್ಟರೂ ನಾನು ಅನುಭವಿಸುವುದಕ್ಕೆ ತಯಾರಾಗಿದ್ದೇನೆ. ಎಷ್ಟು ಪರ್ಸೆಂಟ್ ಹೋಗುತ್ತಿದೆ ಎಂದು ಹೇಳುತ್ತೇನೆ. ಈ ಸಾರಿ ಕೃಷಿ ಇಲಾಖೆಗೆ 2,100 ಕೋಟಿ ರೂ. ಇಟ್ಟಿದ್ದಾರೆ. ಈ ದೇಶದ ಅನ್ನದಾತ ಅವನಿಗೆ ನಾವು ಬಹಳ ಸಹಾಯ ಮಾಡುವುದೇನೆಂದರೆ ಎರಡು ಔಷಧಿ ಬಾಟಲ್, ಒಂದು ಪರಿಕರ, ಒಂದು ನೇಗಿಲು ಇಲ್ಲ ಒಂದು ಟಿಲ್ಲರ್ ಇದನ್ನು ಕೊಡುವುದು ಬಿಟ್ಟರೆ ಆಧುನಿಕವಾಗಿ ಆ ರೈತನಿಗೆ ಬೆಂಬಲವಾಗಿ ನಿಲ್ಲತಕ್ಕಂತಹ ಯಾವುದಾರೂ ಒಂದು ಗುರಿಯುತವಾದ ಯೋಜನೆ ಜಾರಿಗೆ ತಂದು ನಾವು ಇಲ್ಲಿದ್ದೇವೆ ನೀವು ಬೆಳೆದಂತಹ ಬೆಳೆಗಳನ್ನು ಖರೀದಿಸತಕ್ಕಂತಹ ಶಕ್ತಿ ನಮ್ಮ ಸರ್ಕಾರಕ್ಕೆ ಇದೆ, ನೀವು ಹೆದರಬೇಡಿ ಧೈರ್ಯವಾಗಿ ಬೆಳೆದುಕೊಂಡು ತೆಗೆದುಕೊಂಡು ಬನ್ನಿ ಎಂದರೆ, ನಿಮ್ಮ ಔಷಧಿಯೂ ಬೇಡ, ನಿಮ್ಮ ಪರಿಕರವೂ ಬೇಡ, ನೀವು ದರ ನಿಗದಿ ಮಾಡಿ ಬಿಡಿ ನೀವು ಏನೂ ಸಬ್ಸಿಡಿ ಹಣ ಕೊಡಬೇಡಿ, ಯಾವುದಾದರೂ ಒಂದು ಗೊತ್ತು ಗುರಿ ಇರುವ ಯೋಜನೆ ಜಾರಿಗೆ ತನ್ನಿ. ಬೆಳಿಗ್ಗೆ ಎದ್ದು ಅವನು ಹಗಲೂ ರಾತ್ರಿ ನೀರು

ಬಿಟ್ಟುಕೊಂಡು ಕಣ್ಣು ಮುಚ್ಚದಂತೆ ದುಡಿದು ಅವನು ಬೆಳೆ ಬೆಳೆದುಕೊಂಡು ತೆಗೆದುಕೊಂಡು ಬರುತ್ತಾನೆ. ಬೆಳೆ ಬೆಳೆಯುತ್ತಾನೆ, ಬೆಳೆ ಬರುತ್ತದೆ, ಆದರೆ ಅವನಿಗೆ ಕೇಳುವವರು ಇಲ್ಲ. ಟೊಮ್ಯಾಟೋ ಹಣ್ಣು ಕೊಯ್ಯುತ್ತಾನೆ ತೆಗೆದುಕೊಂಡು ಬಂದು ದಾರಿಗೆ ಸುರಿಯುತ್ತಾನೆ. ಕೇಳುವವರು ಇರುವುದಿಲ್ಲ. ಸ್ಥಿರವಾದ ಮಾರುಕಟ್ಟೆ ವ್ಯವಸ್ಥೆ ಒಂದು ಬದ್ಧವಾದ ಗುರಿ ಸರ್ಕಾರ ಇವತ್ತು ರೈತರಿಗೆ ಕೊಡಬೇಕಾಗಿದೆ. ಜನ ಎಲ್ಲಾ ಮಾರ್ಗಪಲ್ಲಟ ಆಗಿ ಗುಳೆ ಹೋಗಿದ್ದಾರೆ. ಅವರು ನಾಮಕಾವಸ್ತೆ ರೈತರು ಅಷ್ಟೆ ಅಲ್ಲಿ. ಅವನ ತಂದೆ ತಾಯಿ ಇರುತ್ತಾರೆ ಇವನು ಬೆಂಗಳೂರಿನಿಂದ ಹೋಗಿ tractor ನಿಂದ ಹೊಲದಲ್ಲಿ ಒಂದಷ್ಟು ಎಳ್ಳು ಅಥವಾ ಎಂಥದೋ ಬೀಜ ಚೆಲ್ಲಿ ಮತ್ತೆ ಬೆಂಗಳೂರಿಗೆ ಬರುತ್ತಾನೆ. ಏಕೆಂದರೆ ಕೃಷಿ ಒಂದು ಹೈಟೆಕ್ ಉದ್ದಿಮೆಯಾಗಿದೆ. ಕೃಷಿ ಮಾಡುವುದಕ್ಕಾಗುತ್ತಿಲ್ಲ. 300 ರೂ ಕೂಲಿ ಕೊಟ್ಟು ಕೂಲಿಕಾರರನ್ನು ಕರೆದುಕೊಂಡು ಕೃಷಿ ಮಾಡುವುದಕ್ಕಾಗುತ್ತಾ ? 300 ರೂ. ಅವನಿಗೆ ಸಿಗುವುದಿಲ್ಲ, 100 ರೂ. ಅಥವಾ 150 ರೂ. ಕೊಡುತ್ತೇವೆಂದು ಹೇಳುತ್ತಾರೆ ಅವನು ಅಲ್ಲಿರುವುದಿಲ್ಲ ಸೀದಾ ಬೆಂಗಳೂರಿಗೆ ಬರುತ್ತಾನೆ. ಇವತ್ತು ಕೃಷಿ ಕಾರ್ಮಿಕರೆಲ್ಲಾ ಬೇರೆ ಬೇರೆ ವೃತ್ತಿಗೆ ಕಾರ್ಮಿಕರಾಗಿ ಹೋಗುತ್ತಿದ್ದಾರೆ. ರೈತ ಎಂದು ನಾವು ಏನು ಕರೆಯುತ್ತಿದ್ದೆವು ಆ ರೈತ ರೈತನಾಗಿ ಉಳಿದಿಲ್ಲ ಇವತ್ತು. ಆ ರೈತ ಇವತ್ತು ಬೇರೆ ಬೇರೆ ಕಾರ್ಖಾನೆಗಳಿಗೆ ಹಾಗೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಮಿಕನಾಗಿ ಸ್ಥಾನ ಪಲ್ಲಟ ಆಗುತ್ತಿದ್ದಾನೆ. ಒಂದು ಗಾರೆ ಕೆಲಸಕ್ಕೆ ಹೋದರೆ 350 ರಿಂದ 400 ರೂ. ಕೂಲಿ ಕೊಡುತ್ತಾರೆ. ಆದರೆ ರೈತ ಕೃಷಿ ಮಾಡಿದರೆ, ಹೋಗಿ ಎಳೆ ಮಟ್ಟೆ ಎಳಿ, ಕೃಷಿ ಕೆಲಸಕ್ಕೆ ಬಾ 150 ರೂ. ಕೊಡುತ್ತೇನೆಂದರೆ ಬರುವುದಿಲ್ಲವೆಂದು ಹೇಳುತ್ತಾನೆ. ಮನೆಯಲ್ಲಿ ಕೂತಿದ್ದರೂ ಕೆಲಸಕ್ಕೆ ಬರುವುದಿಲ್ಲ. ಇನ್ನೂ ಬಹಳ ಜನ ಬೆಂಗಳೂರಿಗೆ ಬಂದು ಬಿಡುವರು ಹೈನುಗಾರಿಕೆ ಸಪೋರ್ಟಿಂಗ್ ಆಗಿರುವುದರಿಂದ ಅಲ್ಲಿ ಏನು ಮಾಡುತ್ತಾರೆ ? ನೀವು ಕೊಡುವ ಕರೆಂಟ್ ಅಲ್ಲಿರುವ ನೀರು ಇದರಿಂದ ಒಂದು ಹಸು ಅಥವಾ ಎರಡು ಹಸುಗಳಿಗೆ ಹುಲ್ಲು ಬೆಳೆಯುವಷ್ಟು ಮಾತ್ರ ಸೀಮಿತ. 24 ಗಂಟೆ, ಮೂರು ಗಂಟೆ ಕರೆಂಟ್ ಎಂದು ಹೇಳುತ್ತೀರಿ, ಕಾಲು ಗಂಟೆ ಕರೆಂಟ್ ಕೊಡುವುದಿಲ್ಲ. ಆ ಕಾಲು ಗಂಟೆಯೊಳಗೆ ಅವನು ಒಂದಷ್ಟು ಹುಲ್ಲು ಏನೋ ಬೆಳೆದುಕೊಂಡು ಹಸುವಿಗೆ ಹಾಕಿಕೊಂಡು ಹೈನುಗಾರಿಕೆ ಮಾಡುತ್ತಾನೆ. ಹೈನುಗಾರಿಕೆಗೆ ನಿರ್ದಿಷ್ಟವಾದ ಬೆಲೆ ಇದೆ.

ಎಲ್ಲಾ ಜಮೀನನ್ನು ಪಾಳು ಬಿಟ್ಟು ಒಂದು ಎಕರೆ ಎರಡು ಎಕರೆ ಜಮೀನು ಸಾಗುವಳಿ ಮಾಡುವ ಪರಿಸ್ಥಿತಿಗೆ ಬಂದಿದ್ದಾನೆ. ಲಕ್ಷಾಂತರ ಎಕರೆ ಜಮೀನು ಅಲ್ಲಿಯೇ ಬಿದ್ದಿದೆ ಯಾರೂ ಹಳ್ಳಿ ಕಡೆ ಬಂದು ನೋಡಿ ಉಳುವುದಕ್ಕೆ ತಯಾರಿಲ್ಲ. ಉತ್ತರೆ ಸುಮ್ಮನೆ tractor ನಲ್ಲಿ ಒಂದಷ್ಟು ಬೀಜ ಚೆಲ್ಲುತ್ತಾನೆ, ಅದಕ್ಕೆ ತಗಲುವ ವೆಚ್ಚ 1300–1400 ರೂ. ಆ ದರಕ್ಕೂ ಆ ರಾಸಾಯನಿಕ ಗೊಬ್ಬರಕ್ಕೂ ತಗಲುವಂತಹ ವೆಚ್ಚ ಸರಿದೂಗಿಸಿ ನೋಡಿ ದೊಡ್ಡ ದೊಡ್ಡ 50 ಎಕರೆ 100 ಎಕರೆ ಭೂಮಿ ಇಟ್ಟುಕೊಂಡಿರುವ ರೈತರೂ ಸಹಿತ ವ್ಯವಸಾಯವನ್ನು ಮಾಡದೆ ಇರುವಂತಹ ಪರಿಸ್ಥಿತಿಗೆ ಬಂದಿದ್ದಾರೆ. ಕಾರಣ ಏನು ? ಈ ರೀತಿ ಅನೇಕ ಕಾರಣಗಳಿಂದ ಇವತ್ತು ರೈತರು ಹಾಳಾಗಿ ಹೋಗುತ್ತಿದ್ದಾರೆ. ಹಿಂದೆ ಒಕ್ಕಲುತನ ಎಂದು ಏನು ಕರೆಯುತ್ತಿದ್ದರು ಆ ಗ್ರಾಮೀಣ ಭಾಗದ ರೈತನ ಸೊಗಡು ಹಾಳಾಗಿ ಹೋಗಿದೆ. ಉತ್ತರ ಕರ್ನಾಟಕದಲ್ಲಿ ಎಲ್ಲಿ ನೀರಾವರಿ ಇರುತ್ತದೋ ಅಲ್ಲಿ ಕಬ್ಬೋ ಭತ್ತವೋ ಬೆಳೆದುಕೊಂಡು ಅಲ್ಲಿ ಸ್ವಲ್ಪ ರೈತರು ಉಳಿದುಕೊಂಡಿರಬಹುದು. ನಮ್ಮ ಬಯಲು ಸೀಮೆಯಲ್ಲಿ ರೈತರು ಉಳಿಯುವುದಕ್ಕೆ ಸಾಧ್ಯವಿಲ್ಲ. ಅವರ ವೃತ್ತಿ ಜೀವನವನ್ನೇ ಬೇರೆ ಕಡೆ ಡೈವರ್ಟ್ ಮಾಡಿಕೊಂಡಿದ್ದಾರೆ. ಬೇರೆ ಕಡೆ ವಲಸೆ ಹೋಗತಕ್ಕಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಆ ರೈತನನ್ನು ನೀವು ಉಳಿಸಲೇ ಬೇಕು. ಅಂದಿನ ಕಾಲದ ರೈತ ಬಂದು ವ್ಯವಸಾಯ ಮಾಡಿ ದುಡಿಯಬೇಕೆಂದರೆ, ಒಂದು ದೃಢವಾದ ಸ್ಪಷ್ಟವಾದ ನಿರ್ಧಾರವನ್ನು ಸರ್ಕಾರ ಪ್ರಕಟಿಸುವವರೆಗೆ, ನಿರ್ದಿಷ್ಟವಾದ ಗುರಿಯನ್ನು ಕೊಡುವವರೆಗೆ ರೈತ ಮತ್ತೆ ಬಂದು ವ್ಯವಸಾಯ ಮಾಡುತ್ತಾನೆಂದು ತಿಳಿದುಕೊಳ್ಳಬೇಡಿ. ಈಗಾಗಲೇ 73% ರೈತರು ವ್ಯವಸಾಯ ಮಾಡುತ್ತಾರೆಂದು ನಿಮ್ಮ ಪುಸ್ತಕದಲ್ಲಿದೆ. ನಿಜವಾಗಿಯೂ 40 ರಿಂದ 50% ರೈತರೂ ಗ್ರಾಮೀಣ ಪ್ರದೇಶದಲ್ಲಿ ಉಳಿದಿಲ್ಲ. ಎಲ್ಲಾ ರೈತರು ಬೆಂಗಳೂರು ಕಡೆ ವಲಸೆ ಹೋಗುತ್ತಿದ್ದಾರೆ. ಅವರಿಗೆ ಎಲ್ಲಿ ಕೂಲಿ ಸಿಗುತ್ತದೆ ಅಲ್ಲಿ ವಲಸೆ ಹೋಗುತ್ತಿದ್ದಾರೆ. ಈ ರೈತನ ಬದುಕನ್ನು ಉಳಿಸಬೇಕು. ಆ ಮಾನವ ಸಂಪತ್ತನ್ನು ರೈತನಿಗೋಸ್ಕರ ಹಾಗೂ ರೈತನ ಕಸುಬಿಗೋಸ್ಕರ ಉಳಿಸಬೇಕೆಂದು ಹಿಂದೆ ನಮ್ಮ ಹಿರಿಯರು ಹೇಳಿ ಹೋಗಿದ್ದಾರೆ. ರೈತ ಉಳಿಯಬೇಕಾದರೆ ನಿಜವಾಗಿಯೂ ನಮ್ಮ ಬದ್ಧತೆ, ಸ್ಪಷ್ಟತೆ ಸರ್ಕಾರದಲ್ಲಿ ಬರಬೇಕಾಗುತ್ತದೆ. ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಅದಕ್ಕೆ 2,000 ಕೋಟಿ ರೂ. ಬಂಡವಾಳ

ಇಟ್ಟು ಕೃಷಿ ಮಾಡಿ ಎಂದರೆ, ನಾನು ಹೇಳಿದ ಹಾಗೆ ಎರಡು ಬಾಟಲ್ ಔಷಧಿ ಕೊಟ್ಟುಕೊಂಡು ಹೋದರೆ ಆಗುತ್ತಾ ? ಹೊಸ ಹೊಸ ರೂಪಗಳನ್ನು ಕಂಡುಹಿಡಿಯಿರಿ. ನಮ್ಮ ಮಾನ್ಯ ಯಡಿಯೂರಪ್ಪನವರು ತಂದ ಸುವರ್ಣ ಭೂಮಿ ಯೋಜನೆಯಲ್ಲಿ ರೈತರಿಗೆ ಐನ್ನೈದು ಸಾವಿರ ರೂ. ಕೊಡುತ್ತೇನೆಂದು ಯೋಜನೆ ತಂದರು ರೈತರೆಲ್ಲಾ ಉದ್ಧಾರ ಆಗಿ ಹೋದರಾ ? ಐದ್ಯೆದು ಸಾವಿರ ರೂಪಾಯಿಗಳಲ್ಲಿ ರೈತರು ಉದ್ಧಾರ ಆಗುವುದಕ್ಕೆ ಆಗುತ್ತದಾ ? ಅವೆಲ್ಲಾ ಚಂಡಿ ಕೆಡುವ ಕೆಲಸ.
ಒಂದೆರಡು ಸಾವಿರ ಕೋಟಿ ರೂ.ಗಳನ್ನೂ ಹಾಕಿ ಒಂದು ದೊಡ್ಡ ಉದ್ದಿಮೆ ಸ್ಟಾರ್ಟ್ ಮಾಡಿ ರೈತರು ಬೆಳೆದಂಥ ಪದಾರ್ಥಗಳನ್ನು ತಯಾರು ಮಾಡತಕ್ಕಂಥ ಉದ್ದಿಮೆಯನ್ನು ಪ್ರಾರಂಭ ಮಾಡಿ. ಅದನ್ನು ಬಿಟ್ಟು ಐದ್ಯೆದು ಸಾವಿರ ಹಂಚಿಬಿಟ್ಟು ಚಿಲ್ಲಂಪಲ್ಲಂ ಮಾಡಿ ಅವನೆಲ್ಲಿ ಕುಡಿದು ಎಲ್ಲಿಗೋ ಹೋಗುತ್ತಾನೋ, ಅದನ್ನು ಸಾರಾಯಿಗೆ ಹಾಕುತ್ತಾನೋ ಏನೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಉಪಾಧ್ಯಕ್ಷರು : ಶಿವಲಿಂಗೇಗೌಡರೆ, ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ ?

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮ್ಮ ಪಕ್ಷದವರಿಗೆ ಒಟ್ಟು ಎಷ್ಟು ಹೊತ್ತು ಸಮಯ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಏಕೆಂದರೆ ನಮ್ಮ ಪಕ್ಷದಲ್ಲಿ ಒಂದೊಂದು ಇಲಾಖೆ ಮೇಲೂ ಒಬ್ಬೊಬ್ಬರು ಮಾತನಾಡುತ್ತೇವೆ. ದಯವಿಟ್ಟು ನಮಗೆ ಸಮಯಾವಕಾಶವನ್ನು ಮಾಡಿಕೊಡಿ. ಒಂದೊಂದು ಇಲಾಖೆ ಮೇಲೂ ಒಬ್ಬೊಬ್ಬರು ಮಾತನಾಡಿದರೆ ನಮ್ಮ ಪಕ್ಷದವರು ಎಲ್ಲ ಇಲಾಖೆಯ ಮೇಲೂ ಮಾತನಾಡಿದಂತಾಗುತ್ತದೆ. ನೀವು ಹದಿನೈದು ನಿಮಿಷ, ಇಪ್ಪತ್ತು ನಿಮಿಷ ಕೊಡುವುದಾದರೆ ನಾವೇನು ಮಾತನಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಅರ್ಧ ಗಂಟೆ, ಮುಕ್ಕಾಲು ಗಂಟೆ ನಮ್ಮ ರಮೇಶ್‌ಕುಮಾರ್‌ರವರು, ಜಗದೀಶ್ ಶೆಟ್ಟರ್‌ರವರು ಮತ್ತು ಅವರು ಇವರೆಲ್ಲರೂ ಎಲ್ಲವನ್ನೂ ಮಾತನಾಡಿ ಮುಗಿಸಿಬಿಟ್ಟಿದ್ದಾರೆ. ನಾವೇನು ಮಾಡೋಣ ಹೇಳಿ.

ಉಪಾಧ್ಯಕ್ಷರು : ನಿಮ್ಮದು ಮುಕ್ಕಾಲು ಗಂಟೆ,

ಶ್ರೀ ವೈ.ಎಸ್.ವಿ. ದತ್ತಾ : ಮಾನ್ಯ ಉಪಾಧ್ಯಕ್ಷರೆ, ಇಂದು ಬೆಳಿಗ್ಗೆಯೇ ಸಭಾಧ್ಯಕ್ಷರಿಗೆ ವಿನಂತಿ ಮಾಡಿಕೊಂಡು ಹೇಳಿದ್ದೇವೆ. ಬೇಡಿಕೆಗಳ ಮೇಲೆ ಚರ್ಚೆ

ಮಾಡಲು ನಮ್ಮ ಪಕ್ಷಕ್ಕೆ ಎಂದು ಇಷ್ಟು ಸಮಯ ನಿಗದಿ ಮಾಡಿಬಿಡಿ. ನಮ್ಮ ಪಕ್ಷದೊಳಗೆ ಆ ನಿಗದಿತ ಕಾಲಮಿತಿಯೊಳಗೆ ಒಬ್ಬರೋ, ಇಬ್ಬರೋ, ಮೂವರೋ ಮಾತನಾಡುತ್ತೇವೆಂದು ಮನವಿ ಮಾಡಿಕೊಂಡಿದ್ದೇವೆ. ಈಗ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಮೇಲೆ ನಮ್ಮ ಪಕ್ಷದ ಮೂವರು ಗೌರವಾನ್ವಿತ ಸದಸ್ಯರುಗಳನ್ನು ಗೊತ್ತುಮಾಡಿದ್ದೇವೆ. ಅವರಲ್ಲಿ ಶಿವಲಿಂಗೇಗೌಡ, ಜಿ.ಟಿ. ದೇವೇಗೌಡರು ಮತ್ತು ಚಿಕ್ಕಮಾದುರವರು ಮಾತನಾಡುತ್ತಾರೆ.

ಉಪಾಧ್ಯಕ್ಷರು : ಆಯಿತು. ಶಿವಲಿಂಗೇಗೌಡ, ನೀವು 2–00 ಗಂಟೆಗೆ ಮುಗಿಸಿಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಎರಡು ಗಂಟೆಯೊಳಗೆ ಮುಗಿಸುವುದಕ್ಕ ಆಗುವುದಿಲ್ಲ.

ಉಪಾಧ್ಯಕ್ಷರು : ಎರಡು ಗಂಟೆಗೆ ಊಟಕ್ಕೆ ಸದನವನ್ನು ಮುಂದೂಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಊಟಕ್ಕೆ ಹೋಗಿ ಬಂದ ಮೇಲೆ ಅರ್ಧ ಗಂಟೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಆಯಿತು, ಈಗ ಎರಡು ಗಂಟೆಗೆ ಮುಗಿಸಿ. ಇನ್ನೂ ಮಾತನಾಡುವವರು ಬಹಳಷ್ಟು ಸದಸ್ಯರಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಚರ್ಚೆಗೆ ಇಟ್ಟಮೇಲೆ ಅದು ಪೂರ್ಣ ಪ್ರಮಾಣದಲ್ಲಿ ಚರ್ಚೆಯಾಗಬೇಕಾಗುತ್ತದೆ. ನಾವೇನು ಇಲ್ಲಿಗೆ ಅಭ್ಯಾಸಕ್ಕೋಸ್ಕರ ಬಂದಿದ್ದೇವೆಯೇ ? ಅಭ್ಯಾಸ ಮಾಡಿಬಿಟ್ಟು ಭಾಷಣ ಮಾಡೋಕೆ ?

ಉಪಾಧ್ಯಕ್ಷರು : ಅವಕಾಶವನ್ನು ಕೊಡುತ್ತೇವೆ. ಇವತ್ತು ಈ ಬೇಡಿಕೆ ಪಾಸ್ ಆಗಬೇಕಾಗಿದೆ. ಅದಕ್ಕೂ ಮೊದಲು ರಿಪ್ಲೈ ಕೊಡಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಉಪಾಧ್ಯಕ್ಷರೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಮೇಲೆ ಮಾತನಾಡಲು ಹೆಚ್ಚು ಸಮಯವನ್ನು ನಿಗದಿ ಮಾಡಿ. ಏಕೆಂದರೆ ಇಡೀ ರಾಜ್ಯದಲ್ಲಿರತಕ್ಕಂಥ ಇಲಾಖೆಗಳಲ್ಲಿ ಇದು ಬಹಳ ಉಪಯುಕ್ತವಾಗಿರತಕ್ಕಂಥ ಇಲಾಖೆ. ಇಡೀ ರಾಜ್ಯಕ್ಕೆ ಅನ್ನ ಕೊಡತಕ್ಕಂಥ ಇಲಾಖೆಯಾಗಿದೆ. ಅದಕ್ಕಾಗಿ ಈ ಇಲಾಖೆಯ ಮೇಲೆ ಮಾತನಾಡಲು ಹೆಚ್ಚಿನ ಪ್ರಮಾಣದಲ್ಲಿ ಸಮಯವನ್ನು ನಿಗದಿ

ಮಾಡಿ. ಒಂಡೆರಡು ದಿವಸ ಇದರ ಮೇಲೆಯೇ ಚರ್ಚೆಯಾಗಲಿ. ಆಮೇಲೆ ಬೇಕಾದರೆ ಬೇರೆ ಇಲಾಖೆ ಮೇಲೆ ಸ್ವಲ್ಪ ಸ್ವಲ್ಪ ಮಾತನಾಡೋಣ.

ಉಪಾಧ್ಯಕ್ಷರು : ಶಿವಲಿಂಗೇಗೌಡ, ನೀವು ಮುಂದುವರೆಸಿ 2–00 ಗಂಟೆಯವರೆಗೂ ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡರೇ : ಮಾನ್ಯ ಉಪಾಧ್ಯಕ್ಷರೆ, ನಾನು ಸದಸ್ಯನಾಗಿ ಬಂದಾಗಲೇ ಉಮೇಶ್ ಕತ್ತಿಯವರಿಗೆ 50% ಸಬ್ಸಿಡಿ ಬಗ್ಗೆ ಒಂದು question ಹಾಕಿದ್ದೆ. ಅವರು ಇದಕ್ಕೊಂದು ಆಯೋಗ ಮಾಡಿ ಇದಕ್ಕೆ ಏನಾದರೂ ಮಾಡುತ್ತೇನೆ ಎಂದು ಹೇಳಿದವರು ಹೋಗೇಬಿಟ್ಟರು, ಬರಲೇ ಇಲ್ಲ. ನಮ್ಮ ಕೃಷ್ಣ ಬೈರೇಗೌಡರಿಗೂ ಎರಡು ಬಾರಿ convince ಮಾಡುವುದಕ್ಕೆ ನೋಡಿದೆ. ಅವರು ಎಲ್–1 ಎಂದು ಹೇಳಿ ಪಾಪ ಅವರದ್ದೇನೋ ಕಷ್ಟ ಹೇಳಿಕೊಂಡರು. ಆದರೆ ನಿಮ್ಮ ಸರ್ಕಾರದ ನಿಲುವು 50% ಸಬ್ಸಿಡಿಯನ್ನು ಬೀಜಗಳಿಗೆ ಬೀಜ ವಿತರಣೆ ವ್ಯವಸ್ಥೆಯಲ್ಲಿ ಕೊಡಬೇಕೆಂದು. ಈಗ ಉದಾಹರಣೆಗೆ ನಾನು ಸೂರ್ಯಕಾಂತಿ ಬೀಜದ ಬಗ್ಗೆ ಹೇಳುತ್ತೇನೆ. ಸೂರ್ಯಕಾಂತಿ ಬೀಜಕ್ಕೆ 50% ಸಬ್ಸಿಡಿಯನ್ನು ಕೊಡುತ್ತೇವೆ ಎನ್ನತಕ್ಕಂಥದ್ದು ನಿಮ್ಮ ಸರ್ಕಾರದ ಸ್ಪಷ್ಟವಾದಂಥ ನಿಲುವಾಗಿದೆ. ಆದರೆ ಈ ಬಾರಿ ಕೂಡ ಸೀಡ್ಸ್ ಕಾರ್ಪೋರೇಷನ್‌ನವರು ಸೂರ್ಯಕಾಂತಿ ಬೀಜಕ್ಕೆ ಎಲ್–1 ರೇಟ್ ಹಾಕಿದ್ದಾರೆ, ನಮ್ಮಲ್ಲಿ ಓಡತಕ್ಕಂತ ಬೀಜ ಗಂಗಾ ಕಾವೇರಿ. ಗಂಗಾ ಕಾವೇರಿಗೆ ನೀವೇ ರೇಟ್ ಫಿಕ್ಸ್ ಮಾಡಿರತಕ್ಕಂಥದ್ದು 455 ರೂ. ಈ ರೀತಿಯ 455 ರೂ.ಗಳಿಗೆ ರೈತನಿಗೆ 50% ಸಬ್ಸಿಡಿ ಕೊಡಬೇಕೆಂದರೆ 225 ರೂ.ಗಳ ಸಬ್ಸಿಡಿಯನ್ನು ನೀವು ಕೊಡಬೇಕಾಗುತ್ತದೆ. ಆದರೆ ನೀವೇನು ಮಾಡುತ್ತಿದ್ದೀರೆಂದರೆ ಎಲ್–1 ದರಕ್ಕೆ 80/–ರೂ.ಗಳ ಸಬ್ಸಿಡಿಯನ್ನು ಕೊಡುತ್ತಿದ್ದೀರಿ. ಅವರೇ ಹಾಕಿರುವುದು. ಸೀಡ್ಸ್ ಕಾರ್ಪೋರೇಷನ್ಸ್‌ನಲ್ಲಿ ನಿಜವಾಗಿಯೂ ಸೀಡ್ಸ್ ಇದೆಯೇ ? ಸೀಡ್ಸ್ ಕಾರ್ಪೋರೇಷನ್‌ನಲ್ಲಿ ನಿಜವಾಗಿಯೂ ಸೀಡ್ಸ್ ಇದೆಯೆ? ಅವರ ಹತ್ತಿರ ಸೀಡ್ಸ್ ಇಲ್ಲ. ಕರ್ನಾಟಕ ರಾಜ್ಯಕ್ಕೆ ಅವರ ಮಾರಾಟ ಎಷ್ಟು, ಅವರ ಹತ್ತಿರ ಎಷ್ಟು ಸೀಡ್ಸ್ ಉತ್ಪತ್ತಿಯಾಗುತ್ತದೆ, ಎಷ್ಟು ಸೀಡ್ಸ್ ಅವರ ಹತ್ತರ ಸ್ಟಾಕ್ ಇದೆಯೆಂದರೆ ಅದು ಇಲ್ಲ ರೈತ ಯಾವ ಬೀಜವನ್ನು ಇಷ್ಟಪಡುತ್ತಾನೋ ಆ ಬೀಜಕ್ಕೆ 50% ಸಬ್ಸಿಡಿಯನ್ನು ಕೊಡತಕ್ಕಂಥದ್ದು ರಾಜ್ಯ ಸರ್ಕಾರದ ಬದ್ಧತೆ. ಅದನ್ನು ಬಿಟ್ಟು

ಇವತ್ತು ಕೇವಲ 455 ರೂ.ಗಳಿಗೆ 80 ರೂ.ಗಳ ಸಬ್ಸಿಡಿಯನ್ನು ಕೊಟ್ಟರೆ ಅದು ಎಷ್ಟು ಪರ್ಸೆಂಟ್ ಆಯಿತು ? 22 ಪರ್ಸೆಂಟ್ ಆಗುತ್ತದೆ. ನೀವು 50% ಸಬ್ಸಿಡಿಯನ್ನು ಕೊಡುತ್ತೇವೆಂದು ಹೇಗೆ ಹೇಳುತ್ತೀರಿ ? ಈಗ ಸೂರ್ಯಕಾಂತಿ ಬೀಜಕ್ಕೆ ಹೇಗೆ ನೀವು 50% ಸಬ್ಸಿಡಿಯನ್ನು ಕೊಡುತ್ತಿದ್ದೀರಿ ? ಇದನ್ನು ನಾನು ನಿಮ್ಮ ಹತ್ತಿರ ಒಂದ್ಹತ್ತು ಬಾರಿ ಹೇಳಿದ್ದೇನೆ. ನಿಮ್ಮ ತಾಂತ್ರಿಕವಾದಂಥ ಹಿನ್ನಲೆ ಏನೇ ಇರಲಿ, ಎಲ್–1 ದರವನ್ನು ಅವನು ಹಾಕುತ್ತಾನೆ, ಅವರ ಹತ್ತಿರ ಮಾಲಿಲ್ಲ, ಇರುವುದೊಂದಿಷ್ಟು ಸುಮ್ಮನೆ ರೇಟ್ ಕಡಿಮೆ ಹಾಕಿಬಿಡುತ್ತಾನೆ. ನೀವು ಒಂದು ಕಾನೂನನ್ನು ತೆಗೆದುಕೊಂಡು ಬನ್ನಿ, ಕರ್ನಾಟಕ ರಾಜ್ಯದಲ್ಲಿ ಇನ್ನು ಮುಂದೆ ಯಾವುದೇ ಬೀಜವನ್ನು ಮಾರಾಟ ಮಾಡುವುದಿಲ್ಲ, ಸೀಡ್ಸ್ ಕಾರ್ಪೋರೇಷನ್ ಒಂದರಲ್ಲಿಯೇ ಬೀಜವನ್ನು ತೆಗೆದುಕೊಳ್ಳಬೇಕು ಎಂದು ಕಾನೂನು ಮಾಡಿಬಿಡಿ. ರೈತ ಯಾವ ಬೀಜವನ್ನು ಇಷ್ಟಪಟ್ಟು ಅದನ್ನು ತೆಗೆದುಕೊಳ್ಳುತ್ತಾನೋ ಆ ಬೀಜಕ್ಕೆ ನೀವು 50% ಕೊಡಬೇಕು. ಇಲ್ಲವೆಂದರೆ ನಾವು ಎಲ್–1 ರೇಟ್‌ಗೆ 50% ಕೊಡುವುದು ಎಂದು ಹೇಳಿ ತಾಕೀತು ಮಾಡಿ, ಆ ಎಲ್–1 ರೇಟ್‌ನವರ ಹತ್ತಿರ ಇಡೀ ಕರ್ನಾಟಕ ರಾಜ್ಯದಲ್ಲಿ ಬೀಜವನ್ನು ಮಾರಾಟ ಮಾಡಿಸಿ. ಎಲ್ಲ ಬೀಜಗಳಲ್ಲಿಯೂ ಹೀಗೆ ಆಗಿರುವುದು. ಈ ಸಬ್ಸಿಡಿ ವ್ಯವಸ್ಥೆ ಏನಾಗಿದೆ ಎಂದರೆ, ಈ ನಮ್ಮ ಬೈರೇಗೌಡರ ಮೇಲೆ ಹೇಳುವುದಿಲ್ಲ. ಅವರು ನಿಷ್ಠಾವಂತರು, ಅವರ ಬಗ್ಗೆ ನಮ್ಮ ಚಕಾರವಿಲ್ಲ. ಅವರು ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತಾರೆ. ಆದರೆ ಕೆಲವು ಅಧಿಕಾರಿಗಳು ಏನೋ ಒಂದು ತರಹ ಮಾಡುತ್ತಿದ್ದಾರೆ. ನಾನು ಕಳೆದ ಆರು ವರ್ಷದಿಂದ ನೋಡುತ್ತಿದ್ದೇನೆ. ಇದನ್ನು ಸರಿಪಡಿಸಿ, ಎಲ್ಲ ಬೀಜಗಳಿಗೆ 50% ಸಬ್ಸಿಡಿ ಸಿಗುತ್ತಿಲ್ಲ. ಕೇವಲ 20 ರಿಂದ 25% ಮಾತ್ರ ಸಬ್ಸಿಡಿ ಸಿಗುತ್ತಿದೆ. 50% ಸಬ್ಸಿಡಿ ಕೊಡುವುದಕ್ಕೆ ಆಗದಿದ್ದರೆ ನಿಮ್ಮ ಸರ್ಕಾರದ ನೀತಿಯೇನಿದೆ ಅದರಲ್ಲಿ ಬದಲಾವಣೆಯನ್ನು ಮಾಡಿಕೊಂಡು 20% ಗೆ ಇಳಿಸಿಕೊಳ್ಳಿ. ಈಗ 50% ಸಬ್ಸಿಡಿ ಎಂದ ಮೇಲೆ ಯಾವ ಬೀಜವನ್ನು ರೈತನು ಇಷ್ಟಪಡುತ್ತಾನೋ ಆ ಬೀಜಕ್ಕೆ ನೀವು 50% ಕೊಡಲೇಬೇಕು. ಇಲ್ಲದಿದ್ದರೆ ಎಲ್–1 ರೇಟ್‌ಗೆ ಮಾರಬೇಕೆಂದು ಆ ಕಂಪನಿಯವನಿಗೆ ಹೇಳಿ. ಇವತ್ತು ಗಂಗಾ ಕಾವೇರಿ ಬೀಜವನ್ನು ರಾಣೆಬೆನ್ನೂರಿನಲ್ಲಿಯೇ ಬೆಳೆಯುತ್ತಾರೆ. ನಾನು ರಾಣೆಬೆನ್ನೂರಿಗೆ ಹೋಗಿ ಟೆಸ್ಟ್ ಮಾಡಿ ಬಂದಿದ್ದೇನೆ. ಅಲ್ಲಿರುವ ರೈತರ ಹೊಲದಲ್ಲಿ ಬೆಳೆಸಿ, ಆ ರೈತ ಹೊಲ

ಕೊಡಬೇಕಾದರೆ ಲಂಚವನ್ನು ಕೊಡುತ್ತಾನೆ. ಆ ಕಂಪನಿಯವನು ಅವನ ಹೊಲದಲ್ಲಿ ಬೆಳೆಸುತ್ತಾನೆ. ಅಲ್ಲೇ ಹೋಗಿ ಮೆಶಿನ್ ತೆಗೆದುಕೊಂಡು ಜೊಳ್ಳೆಲ್ಲವನ್ನೂ ರೈತನಿಗೆ ಎಸೆದು, ಅಲ್ಲೇ ಪ್ಯಾಕೆಟ್ ಮಾಡಿಕೊಂಡು ಅಲ್ಲಿಂದಲೇ ಆ ಬೀಜವನ್ನು ತರುತ್ತಾನೆ. ಇಲ್ಲಿ ಅದನ್ನು ತಂದು ರೈತನಿಗೆ ಮಾರಾಟ ಮಾಡುತ್ತಾನೆ. ಬೆಳೆದಿರುವಂಥ ರೈತನಿಗೆ ಒಂದು ಕೆ.ಜಿ.ಗೆ 100 ರೂ.ಗಳಿಗಿಂತಲೂ ಹೆಚ್ಚು ಬೆಲೆಯನ್ನು ಕೊಡುವುದಿಲ್ಲ. ಇಲ್ಲಿ ಮಧ್ಯವರ್ತಿ ಆ ಬೀಜದಿಂದ 300 ರೂ.ಗಳ ಲಾಭವನ್ನು ಮಾಡಿಕೊಳ್ಳುತ್ತಾನೆ. ಅವನು ಇಂಟರ್ ನ್ಯಾಷನಲ್ ಕಂಪನಿಯವನಾಗಿರುತ್ತಾನೆ. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಕಂಪನಿಗಳಿವೆ. ಕೃಷಿ ವಿಶ್ವವಿದ್ಯಾಲಯಗಳಿವೆ, ಅವರಿಗೇನೂ ಕೆಲಸವಿದೆ, ಹಿಂದೆ ರೈತನಿಗೆ ಬೇಕಾದ ಬೀಜವನ್ನು ರೈತರೇ ತಯಾರು ಮಾಡಿಕೊಳ್ಳುತ್ತಿರಲಿಲ್ಲವೆ ? ಈಗಲೂ ಆ ರೈತನಿಗೆ ಬೇಕಾದ ಬೀಜವನ್ನು ಈ ರಾಜ್ಯವೇ ತಯಾರು ಮಾಡುವುದಕ್ಕೆ ಆಗುವುದಿಲ್ಲವೆ? ಕೃಷಿ ವಿಶ್ವವಿದ್ಯಾಲಯದಲ್ಲಿ ಬಹಳಷ್ಟು ಕೃಷಿ ತಂತ್ರಜ್ಞರು ಇದ್ದಾರೆ. ವಿಶ್ವವಿದ್ಯಾಲಯಕ್ಕೆ ನೂರು ಎಕರೆ, ಐದುನೂರು ಎಕರೆ, ಸಾವಿರ ಎಕರೆ ಜಾಗವನ್ನು ಕೊಟ್ಟಿದ್ದೀರಿ. ಆ ಜಾಗದಲ್ಲಿಯೇ ಈ ರಾಜ್ಯಕ್ಕೆ ಬೇಕಾದಷ್ಟು ಬೀಜವನ್ನು ಬೆಳೆಯುವುದಕ್ಕೆ ಆಗುವುದಿಲ್ಲವೇ? ಬೆಳೆಯುವುದಕ್ಕೆ ಆಗದಿದ್ದರೆ ಎಲ್-1 ರೇಟ್‌ನ್ನು ಫಿಕ್ಸ್ ಮಾಡುವಾಗ ಆ ಕಂಪನಿಗಳಿಗೆ ಕಡಿಮೆ ದರವನ್ನು ಕೊಡಿ. ಕಡೇ ಪಕ್ಷ ಅಷ್ಟನ್ನಾದರೂ ಮಾಡಿ. ಹೋಗಲಿ ಕಂಪನಿಯವರು ಕಷ್ಟಪಟ್ಟು ಬೆಳೆಯುತ್ತಾರೇನೋ ಎಂದು ನೋಡಿದರೆ ಏನಿಲ್ಲಾ, ಅಲ್ಲಿಗೆ ಹೋದರೆ ಬೀಜವನ್ನು ಬೆಳೆದಂಥ ರೈತನಿಗೆ ಒಂದು ಕೆ.ಜಿ.ಗೆ. ಕೇವಲ 100 ರೂ.ಗಳನ್ನು ಮಾತ್ರ ಕೊಡುತ್ತಾರೆ. ಕಂಪನಿಯವನು ಮಧ್ಯದಲ್ಲಿ 300 ರೂ.ಗಳನ್ನು ಹೊಡೆಯುತ್ತಾನೆ. ಅದೇನೋ ಹೈಬ್ರಿಡ್ ತಳಿ ಮಾಡುತ್ತೇವೆ, ಅದಕ್ಕೆ ಖರ್ಚಾಗುತ್ತದೆ, ಇದಕ್ಕೆ ಖರ್ಚಾಗುತ್ತದೆ ಎಂದು ಹೇಳುವುದೆಲ್ಲವೂ ಸುಳ್ಳು. ಅದು ಹೇಗೇ ಎಲ್-1 ರೇಟ್ ಎಂದು ಸೀಡ್ಸ್ ಕಾರ್ಪೋರೇಷನ್‌ನವರು 200/- ರೂ.ಗಳ ರೇಟ್‌ನ್ನು ಹಾಕಿದ ? ಫೌಂಡೇಷನ್ ಸೀಡ್ಸ್‌ಗೆ 160/-ರೂ.ಗಳ ದರವನ್ನು ಹೇಗೆ ಹಾಕಿದ ? ಇವನಿಗೆ ಇದನ್ನು ಹೇಗೆ ಬೆಳೆಯುವುದಕ್ಕೆ ಇಷ್ಟು ವೆಚ್ಚವಾಯಿತು ? ಆದರೆ ಇವನ್ಯಾಕೆ 450 ರೂ.ಗಳಿಗೆ ಹಾಕುತ್ತಾನೆ? ಇದು ನಿಜವಾದ ಸಮಸ್ಯೆ ಇರುವಂಥದ್ದು. ಇದನ್ನು ದಯವಿಟ್ಟು ಬಗೆಹರಿಸಿಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಈ ಹಿಂದೆಯೇ ಸನ್ಮಾನ್ಯ ಕೃಷಿ

ಸಚಿವರಿಗೆ ಬಹಳ ಬಾರಿ ಇದನ್ನು ಹೇಳಿದ್ದೇನೆ. ಈ ಬಾರಿ ಕೂಡ ಮತ್ತೆ ಮನವಿ ಮಾಡುತ್ತಿದ್ದೇನೆ, ನಾಳೆ ಈ ಬಗ್ಗೆ ಚುಕ್ಕೆ ಗುರುತಿನ ಒಂದು ಪ್ರಶ್ನೆಯೂ ಕೂಡ ಬರುತ್ತಿದೆ. ದಯವಿಟ್ಟು ಯಾವಾಗಲಾದರೂ ಒಂದು ಸಂದರ್ಭದಲ್ಲಿ ಇದಕ್ಕೆ ಉತ್ತರವನ್ನು ಕೊಟ್ಟು ಸಮಸ್ಯೆ ಬಗೆಹರಿಸಿ. ಈಗಾಗಲೇ ನೀವೇ ಹೇಳಿದಿರಿ, ನಿಮ್ಮನ್ನೇ ಸಮಿತಿಗೆ ಹಾಕುತ್ತೇನೆ. ಬಂದು ಅದು ಏನು ಮಾಡುತ್ತೀರೋ ಮಾಡಿ ಎಂದಿದ್ದೀರಿ. ಒಂದು ಬಾರಿ ಆ ಸಮಿತಿಗೆ ನಮ್ಮನ್ನು ಹಾಕಿ. ಆ ಅಧಿಕಾರಿಗಳ ಜೊತೆಯಲ್ಲಿ ನಾವೂ ಕೂಡ ಹೊಡೆದಾಡುತ್ತೇವೆ, ನೋಡೋಣ ಅದೇನಾಗುತ್ತದೆಂದು. ಹೊಡೆದಾಡೋಣ, ಅದಕ್ಕೇನಂತೆ ರೈತರಿಗೆ ಸಹಾಯವಾಗುತ್ತಿದೆಂದರೆ ಸ್ವಲ್ಪ ಗುದ್ದಾಡೋಣ. ಇನ್ನು ಬೆಳೆ ವಿಮೆ ಎಂದು ಏನಿದೆ ಇದು ರೈತನಿಗೆ ಕಾಪಾಡಬಹುದು. ಇವೆಲ್ಲಾ ಕೊಡುವುದಕ್ಕಿಂತ ಏನಾದರು ನೀನು ಹಾಕಿದ ಬೆಳೆ ಹೋದರೆ 100% ನೀನು ಬೆಳೆಯನ್ನು ಬೆಳೆಯಲು ಖರ್ಚು ಮಾಡಿದ ಹಣವನ್ನು ಕೊಡುತ್ತೇನೆಂದರೆ ನಿಜವಾಗಿಯೂ ರೈತನಾದರೂ ಬದುಕುತ್ತಾನೆ. ಇವತ್ತು ನಾವು ಏನಾಗಿದ್ದೇವೆಂದರೆ, ನಮ್ಮ ತಾಲ್ಲೂಕಿನಲ್ಲಿಯೇ ಎರಡು ಹದ ಮಳೆ ಬಂತು. ಎಲ್ಲರೂ ತೆಗೆದುಕೊಂಡು ಹೋಗಿ ಮುಂಗಾರು ಬೆಳೆ ಬಿತ್ತಿದರು. ಎರಡು ಹದ ಬಿತ್ತಿದರು. ಸೂರ್ಯಕಾಂತಿ, ಬೀನ್ಸ್ ಏನೇನಿದೆ ಎಲ್ಲಾ ಹಾಕಿದರು. ಈಗಾಗಲೇ 20 ದಿವಸ, ತಿಂಗಳ ಮೇಲಾಯಿತು, ಮಳೆ ಬರಲಿಲ್ಲ. ಇವತ್ತು ಆದು ಸಂಪೂರ್ಣ ಒಣಗಿ ನಾಶವಾಗಿ ಹೋಯಿತು. ಇವತ್ತು ರೈತನಿಗೆ ಪರಿಹಾರ ಕೊಡುವವರು ಯಾರು ? ಕೊನೇ ಪಕ್ಷ ಒಬ್ಬೊಬ್ಬ ರೈತ 30–40 ಸಾವಿರದಿಂದ ಒಂದು ಲಕ್ಷ ರೂಪಾಯಿಯವರೆಗೆ ಬಂಡವಾಳ ಹೂಡಿದ್ದಾನೆ. ರೈತನ ಹಣ ಕೋಟ್ಯಂತರ ರೂಪಾಯಿ ಲಾಸ್ ಆಗಿದೆ. ಅದನ್ನು ಇವತ್ತು ರೈತನಿಗೆ ಕೊಡುವವರು ಯಾರು ? ಬೆಳೆ ವಿಮೆಯನ್ನು ಕಡ್ಡಾಯವಾಗಿ ಮಾಡಿ. ಸರ್ಕಾರವೇ ಬೆಳೆ ವಿಮೇಯನ್ನು ಕಟ್ಟುವಂತಹ ಪದ್ಧತಿಯನ್ನು ಜಾರಿಗೆ ತರಬೇಕು. ನೀವು ಪರಿಕರಗಳನ್ನು ಕೊಡುವುದೇನಿದೆ ಅದನ್ನು ಮೀಡಿಯೇಟರ್‌ಗಳೆಲ್ಲಾ ತಿಂದು ಹಾಳು ಮಾಡುವ ಬದಲು ಅದನ್ನೆಲ್ಲಾ ನಿಲ್ಲಿಸಿ. ನೀವು ಈ ವಿಮೆ ಕಟ್ಟಿಕೊಡಿ. ನೀವು ಇದನ್ನು ಮಾಡುವ ಪರಿಸ್ಥಿತಿಯಲ್ಲಿ ಇಲ್ಲ, ರೈತರಿಗೆ ಕಟ್ಟಿ ಎಂದು ಹೇಳುತ್ತೀರಿ. ಅವನು ಬ್ಯಾಂಕ್‌ಗೆ ಹೋಗುವಷ್ಟೊತ್ತಿಗೆ ಡೇಟ್ ಮುಗಿದುಹೋಯಿತು ಹೋಗಿ ಎಂದು ಹೇಳುತ್ತಾರೆ. ಈ ರೀತಿಯಾಗಿ ಇವತ್ತು ರೈತ

ಹಾಕಿದಂತಹ ಬಂಡವಾಳ ವಾಪಸ್ಸು ಬರದಂತಹ ರೀತಿಯಲ್ಲಿ ಇದೆ. ಅದಕ್ಕೋಸ್ಕರ ನೀವು ಬೆಳೆ ವಿಮೆಗೆ ಆದ್ಯತೆ ಕೊಡಬೇಕೆನ್ನುವುದು ಮುಖ್ಯ ಅಂಶ.

ಈಗ ಹೊಸದಾಗಿ ಕೃಷಿ ಭಾಗ್ಯ ಯೋಜನೆಯನ್ನು introduce ಮಾಡಿದ್ದೀರಿ. ಅದರಲ್ಲಿ ಏನೇನು ಯೋಜನೆ ಮಾಡಿದ್ದೀರೋ ನನಗೆ ಗೊತ್ತಿಲ್ಲ, ಅದಕ್ಕೆ 500 ಕೋಟಿ ರೂಪಾಯಿ ಬಜೆಟ್ ಇಟ್ಟಿದ್ದೀರಿ. ಬಹಳ ಸಂತೋಷ. ಆದರೆ ಅದರಲ್ಲಿ ಏನೇನು ಇದೆ ಎಂದು ನಮಗೆ ಸವಿಸ್ತಾರವಾದ ಮಾಹಿತಿ ಇಲ್ಲ. ಅದನ್ನು ಎನ್‌ಜಿಓ ಗೆ ಕೊಡುತ್ತೇವೆಂದು ಹೊರಟಿದ್ದೀರಂತೆ, ದಯವಿಟ್ಟು ಅವರಿಗೆ ಕೊಡಬೇಡಿ. ಆ NGO ಗಳು second brokers. ನಾನು ಅವರನ್ನು ಹೀಗೆ ಕರೆಯುತ್ತೇನೆ. ಅವರು ಏನು ಮಾಡುತ್ತಾರೆ ? Retire ಆಗಿ ಉದ್ಧಾರ ಮಾಡುತ್ತೇವೆಂದು ಬರುತ್ತಾರೆ. ಆದರೆ ಇಲ್ಲಿ ಅಧಿಕಾರಿಗಳಿಗೆ ಏನು ಕೆಲಸ ಇರುತ್ತದೆ ? ಇವರಿಗೆ ನೀವು ಈ ಕಾರ್ಯಕ್ರಮವನ್ನು ಮಾಡಬೇಕೆಂದು ಬಿಗಿ ಮಾಡಿ. ಅದು ಬಿಟ್ಟು ಎನ್‌ಜಿಓ ಮುಖಾಂತರ ಮಾಡಿಸುತ್ತೇವೆನ್ನುವ ವದಂತಿ ಇದೆ, ದಯಮಾಡಿ ಮಾನ್ಯ ಕೃಷಿ ಸಚಿವರು ಆ ರೀತಿ ಮಾಡುವುದಕ್ಕೆ ಹೋಗಬಾರದು ಎಂದು ವಿನಂತಿ ಮಾಡುತ್ತೇನೆ. ಅದರ ಜೊತೆಗೆ ಎಲ್ಲದಕ್ಕೂ ಮೂಲ ನೀರಾವರಿ. ನದಿ ಮೂಲದಿಂದ ನೀರಾವರಿಯನ್ನು ತಂದು ಮೈಕ್ರೋ ವ್ಯವಸ್ಥೆಯೊಳಗಡೆ ಹನಿ ನೀರಾವರಿಯನ್ನು ಕೊಟ್ಟರೆ ಒಳ್ಳೆಯದು. ನೀವು ನಮಗೆ ನೂರು ಎಕರೆಗೆ ನೀರು ಕೊಡಬೇಡಿ ಸ್ವಾಮಿ, ಹತ್ತು ಎಕರೆಗೆ ನೀರು ಕೊಡುವ ವ್ಯವಸ್ಥೆಯನ್ನು ಜಾರಿಗೆ ತನ್ನಿ ನೀವು ಒಬ್ಬ ರೈತನಿಗೆ ಹತ್ತು ಎಕರೆಗೆ ನೀರು ಕೊಡಿಸುವ ವ್ಯವಸ್ಥೆಯನ್ನು ಯಾವ ರೂಪದಲ್ಲಿಯಾರದೂ ತನ್ನಿ. ನೀವು ಕುಂಟೆ, ಕೂರಿಗೆ ಕೂಳಿಗೆ ಯಾವುದನ್ನು ಕೊಡಬೇಡಿ, ನೀರು ತೆಗೆದುಕೊಂಡು ಬನ್ನಿ. ನೀವು ನದಿ ಮೂಲದಿಂದ ನೀರನ್ನು ತೆಗೆದುಕೊಂಡು ಬನ್ನಿ. ಮೈಕ್ರೋ ಇರಿಗೇಷನ್ ಮಾಡಿಕೊಡಿ. ರೈತನಿಗೆ ಬೆಳೆ ಬೆಳೆಯಿರಿ ಎಂದು ಹೇಳಿ, ಅವನು ಬೆಳೆದಂತಹ ಬೆಳೆಗೆ ಸೂಕ್ತವಾದಂತಹ ಬೆಲೆ ಕೊಡಿ, ಅಷ್ಟು ಸಾಕು. ಇವತ್ತು ಏನಾಗಿದೆ ಎಂದರೆ ಅಂತರ್ಜಲ ಬತ್ತಿ ನಿಂತುಹೋಗಿದೆ. ಇವತ್ತು ಪೈರನ್ನು ಬಿತ್ತಿ, ನೀರನ್ನು ಮೇಲೆತ್ತುವುದಕ್ಕೆ ಹೋದರೆ ಕರೆಂಟ್ ಇಲ್ಲ. ನಮ್ಮ ಡಿ.ಕೆ. ಶಿವಕುಮಾರ್ 24 ಗಂಟೆ ಸೇವೆ ಕೊಡುತ್ತೇವೆಂದು ಹೇಳಿದರು, ಅವರು ಈಗ ಇಲ್ಲಿ ಇಲ್ಲ. ಆದರೆ ರೈತನಿಗೆ ಈಗ ಕಾಲು ಗಂಟೆ, ಅರ್ಧ ಗಂಟೆ ಕರೆಂಟ್ ಸಿಗುತ್ತಿಲ್ಲ. ಅವನು ಹೊಲದ ಬದುವಿನಲ್ಲಿ

ಕುಳಿತುಕೊಂಡು ಕಣ್ಣೀರು ಹಾಕುತ್ತಿದ್ದಾನೆ. ಅವನು ಬಂಡವಾಳ ಹೂಡಿ ಬೆಳೆ ಹಾಕಿದ್ದಾನೆ, ಮಳೆ ಹೋಗಿದೆ, ಇವತ್ತು ಆ ರೈತನ ಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆ ಎಂದು ಇವರು ಅರ್ಥ ಮಾಡಿಕೊಳ್ಳುತ್ತಾರೆಯೇ ? ನೀವು ವಿದ್ಯುಚ್ಛಕ್ತಿ ಕೊಡಬೇಕು. ಕೊನೆ ಪಕ್ಷ ಹನಿ ನೀರಾವರಿಯನ್ನು ಕೊಡಬೇಕು. flood ನೀರು ನಮ್ಮ ಬಯಲು ಸೀಮೆಯವರಿಗೆ ಸಿಗುವ ಭಾಗ್ಯ ಇಲ್ಲ. ಇದನ್ನಾದರೂ ಕೊಡುವಂತಹ ಕಾರ್ಯಕ್ರಮವನ್ನು ಮಾಡಬೇಕು. ತಾವು ಕೃಷಿ ಪರಿಕರಗಳನ್ನು ಕೊಡುವುದಕ್ಕೆ 1,800 ಕೋಟಿ ರೂಪಾಯಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಇಟ್ಟುಕೊಳ್ಳುವುದಲ್ಲ. ನೀರಾವರಿಗೆ ಹತ್ತಾರು ಸಾವಿರ ಕೋಟಿ ರೂಪಾಯಿ ಇಡಬೇಕು. ರೈತರಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡುವಂತಹ ಪ್ರಾಮಾಣಿಕ ಪ್ರಯತ್ನವಾಗಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈಗಾಗಲೇ ಬಹಳ ಸದಸ್ಯರುಗಳು ಮಾತನಾಡಿದಾಗ ವಿಶ್ವವಿದ್ಯಾನಿಲಯಗಳು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ನೀವು ನಿನ್ನೆ 700 ಕೋಟಿ ರೂಪಾಯಿ ಕೊಟ್ಟಿದ್ದೇವೆ, ಅದಕ್ಕೆ ರೈತರಿಗೆ ಪ್ರತಿಫಲ ಎಷ್ಟು ಸಿಗುತ್ತದೆನ್ನುವುದು ಹೇಳಿದಿರಿ. ಆದರೆ ನನಗೆ ಅವುಗಳಿಂದ ಏನು ಉಪಯೋಗವಾಗುತ್ತಿದೆಯೆಂದು ಕಾಣುತ್ತಿಲ್ಲ. ವಿಶ್ವವಿದ್ಯಾಲಯಗಳಿಂದ ರೈತರಿಗೆ ಯಾವ ರೀತಿ ಸಹಾಯವಾಗುತ್ತಿದೆ ಎಂದು ನಾವು ನೋಡುತ್ತಿದ್ದೇವೆ. ಕೆಲವು farm ಗಳನ್ನು ನೋಡಿದರೆ, ಆ ಫಾರಂಗಳು ನಿಜವಾಗಿ ಹಾಳಾಗಿ ಹೋಗಿವೆ. ಆ ಫಾರಂಗಳಿಗೆ ಬದ್ಧತೆ ಇಲ್ಲ. ಅವರು ರೈತರಿಗೆ ಯಾವುದೇ ಬೀಜದ ವ್ಯವಸ್ಥೆಗಳನ್ನು ಮಾಡದೇ ಸುಮ್ಮನೆ demonstration ಮಾಡುತ್ತಾರೆ. ಸೂಟುಬೂಟು ಹಾಕಿಕೊಂಡು ಬರುತ್ತಾರೆ, ಕುಳಿತುಕೊಳ್ಳುತ್ತಾರೆ, ಎಂಥದೋ ಒಂದು ಸಮಾವೇಶ ಎಂದು ಮಾಡುತ್ತಾರೆ, ದುಡ್ಡು ಖರ್ಚು ಮಾಡಿ ಮನೆಗೆ ಹೋಗುತ್ತಾರೆ. ಅಷ್ಟುಬಿಟ್ಟರೆ ಯಾವುದೇ ರೀತಿಯಲ್ಲಿ ರೈತರಿಗೆ ಉಪಯುಕ್ತವಾದಂತಹ ವ್ಯವಸ್ಥೆಗಳು ವಿಶ್ವವಿದ್ಯಾನಿಲಯಗಳಿಂದ ಆಗುತ್ತಿಲ್ಲ. ಅವರ ಹತ್ತಿರ ಕೆಲಸ ತೆಗೆಯಬೇಕು, ಅವರ ಹತ್ತಿರ ಮೈಬಗ್ಗಿಸಿ ಕೆಲಸ ಮಾಡಿಸಬೇಕು. ಅವರಿಗೆ ನೂರಾರು ಎಕರೆ ಮೀಸಲು ಪ್ರದೇಶ ಕೊಟ್ಟಿದ್ದೀರಿ, ಆ ಪ್ರದೇಶಗಳಲ್ಲಿ ಬಿತ್ತನೆ ಬೀಜಗಳನ್ನು ಉತ್ಪತ್ತಿ ಮಾಡಿ, ವಿಶ್ವವಿದ್ಯಾನಿಲಯಗಳಿಂದ ತಯಾರಾಗಿ ಬರಬೇಕಾಗುತ್ತದೆ. ಆ ವ್ಯವಸ್ಥೆ ಬರುವವರೆಗೂ ಈ ವಿಶ್ವವಿದ್ಯಾಲಯಗಳನ್ನು ಸುಮ್ಮನೆ ಬಿಳಿ ಆನೆ ಸಾಕಿದ ಹಾಗೆ ಆಗುತ್ತದೆ. ಈ

ವಿಚಾರದಲ್ಲಿ ಮಾನ್ಯ ಭೈರೇಗೌಡರು ಬಹಳ ಶ್ರಮ ವಹಿಸುತ್ತಾರೆಂದು ನಾವೆಲ್ಲ ಮಾತನಾಡಿಕೊಳ್ಳುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಏನು ಮಾಡುತ್ತೀರೋ ನೋಡಿ. ದಯಮಾಡಿ ತಾವು ಅವರಿಂದ ಕೆಲಸ ತೆಗೆಯುವ ಕಾರ್ಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಅದರ ಜೊತೆಗೆ ಬೆಳೆ ಸಾಲ. ರೈತರಿಗೆ ಬೆಳೆ ಸಾಲವನ್ನು 3% ಬಡ್ಡಿ ದರದಲ್ಲಿ ಕೊಡುತ್ತೇವೆಂದು ಹೇಳುತ್ತೀರಿ. ಸಾಲ ಕೊಡುವವರು ಯಾರು ? ಎಷ್ಟು ರೈತರಿಗೆ ಕೊಡುತ್ತೀರಿ ? ಎಷ್ಟು ಲಕ್ಷ, ಕೋಟಿ ಜನ ಈ ರಾಜ್ಯದಲ್ಲಿದ್ದಾರೆ ? ಅಷ್ಟು ಜನರಲ್ಲಿ ಎಷ್ಟು ಜನ ರೈತರಿಗೆ ನೀವು ಸಾಲ ಕೊಡುವುದಕ್ಕೆ ಆಗುತ್ತದೆ ? ಅವರಿಗೆ ಎಷ್ಟು ಸಾಲ ಕೊಡುವುದಕ್ಕೆ ಆಗುತ್ತದೆ ? ಅವರಿಗೆ ಎಷ್ಟು ವರ್ಷ ಸಾಲ ಕೊಡುವುದಕ್ಕೆ ಆಗುತ್ತದೆ ? ಡಿಸಿಸಿ ಬ್ಯಾಂಕ್‌ನಲ್ಲಿ ಸೇವಾ ಸಹಕಾರ ಸಂಘದಿಂದ ರೂ. 20 ಸಾವಿರ ಅಥವಾ ರೂ. 30 ಸಾವಿರ ಕೊಡುತ್ತಾರೆ. high influence ಇರುವವರಿಗೆ 50 ಸಾವಿರ ರೂಪಾಯಿ ಸಾಲ ಕೊಡುತ್ತಾರೆ. ಅದರಿಂದ ಏನು ಮಾಡುವುದಕ್ಕೆ ಆಗುತ್ತದೆ ? ಯಾವ ಬಂಡವಾಳ ಹೂಡುವುದಕ್ಕೆ ಆಗುತ್ತದೆ ? ಏನು ಸಾಧನೆ ಮಾಡುವುದಕ್ಕೆ ಆಗುತ್ತದೆ ? ಇದರ ಬಗ್ಗೆ Co-operation Minister ಹತ್ತಿರ ಕುಳಿತುಕೊಂಡು ಯಾವ ರೈತನಿಗೆ ಸಿಕ್ಕಲ್ಲ ಎಂದು ನೋಡಬೇಕು. ಹೇಗೋ ಬಡ್ಡಿ ಇಲ್ಲವೆಂದು ಫಾರಂ ಹೌಸ್‌ಗಳಿಗೆ ಸಾಲ ತೆಗೆದುಕೊಳ್ಳುವುದು, ಸಾಲ ತೆಗೆದುಕೊಂಡು ಹತ್ತು ಜನ ಜೊತೆಯಾಗಿ ಫೈನಾನ್ಸ್ ಮಾಡಿಕೊಳ್ಳುವುದು. ಅದು ಒಂದು ರೀತಿ ದಂದೆ ಇದೆ. ಎಲ್ಲರೂ ಫಾರಂ ಹೌಸ್ ಮಾಡಿಕೊಂಡಿದ್ದಾರೆ. ರೈತ ಆ ಫೈನಾನ್ಸ್‌ಗೆ ಬಂದು ಹೆಬ್ಬೆಟ್ಟು ಒತ್ತಿ ದುಡ್ಡು ತೆಗೆದುಕೊಂಡು ಹೋಗುವುದು. ಈ ಸಾಲದ ವ್ಯವಸ್ಥೆಯೊಳಗೆ ಈ ಪರಿಸ್ಥಿತಿ ನಿರ್ಮಾಣವಾಗಿದೆ. ನಿಜವಾದ ರೈತನಿಗೆ ನಿಜವಾಗಿಯೂ ಸಾಲ ಸಿಗುತ್ತಿಲ್ಲ. ನಾವು ಇಲ್ಲಿ ಸುಮ್ಮನೆ 3% ಬಡ್ಡಿ ದರದಲ್ಲಿ ರೈತನಿಗೆ ಸಾಲ ಕೊಟ್ಟಿದ್ದೇವೆಂದು ವಿಧಾನಸಭೆಯಲ್ಲಿ ಕುಳಿತು ಕೂಗಿಬಿಟ್ಟರೆ ಆಗಲಿಲ್ಲ. ನಿಜವಾದ ರೈತನಿಗೆ ಆ ಬಡ್ಡಿ ಸಾಲ ತಲುಪಿದೆಯೇ ಇಲ್ಲವೇ, ಯಾರಿಗೆ ಸಿಕ್ಕಿದೆ, ಇದರಲ್ಲಿ ಏನು ಭ್ರಷ್ಟಾಚಾರ ಇದೆ, ಅವ್ಯವಹಾರ ಏನು ನಡೆಯುತ್ತಿದೆ ಎನ್ನುವ ವಿಚಾರವನ್ನು ನೋಡಬೇಕು. ನೀವು 25–30 ಸಾವಿರ ರೂಪಾಯಿ ಕೊಟ್ಟರೆ ಏನು ಉತ್ತಮವಾದ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ? ಈ ರೀತಿಯಾಗಿ

ಅನೇಕ ಸಮಸ್ಯೆಗಳು ತಾಂಡವವಾಡುತ್ತಿವೆ. ಅದಕ್ಕಾಗಿ ರೈತನಿಗೆ ಅನುಕೂಲಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಅದರ ಜೊತೆಗೆ ನೀವೇನೋ ಒಂದು ತೀರ್ಮಾನ ಮಾಡಿದ್ದೀರೆಂದು ವರದಿ ಬಂದಿದೆ. ಅದು ಕೃಷಿ ಇಲಾಖೆಯಲ್ಲಿ ಜಲಾನಯನ ಇಲಾಖೆಯನ್ನು ಮರ್ಜ್ ಮಾಡಬೇಕೆನ್ನುವುದು ಬಹಳ ಒಳ್ಳೆಯ ಕೆಲಸ, ಒಂದು ಬಿಳಿ ಆನೆಯನ್ನು ಕೆಡವಿದ ಹಾಗೆ ಆಯಿತು. ಜಲಾನಯನದಲ್ಲಿ ಏನೂ ಇಲ್ಲ. ಅದರಲ್ಲಿ ಸುಮ್ಮನೆ ದುಡ್ಡು ಹೊಡೆಯುವುದು ಅಷ್ಟೆ ಆ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಅದನ್ನು ಕೃಷಿ ಇಲಾಖೆಗೆ ಮರ್ಜ್ ಮಾಡಿ. ಅದಕ್ಕಾಗಿ ನಾವು ಸ್ವಾಗತ ಬಯಸುತ್ತೇವೆ. ಆದರೆ ತಾವು ಇನ್ನೊಂದು ತೀರ್ಮಾನವನ್ನು ಮಾಡಿದ್ದೀರೆಂದು ಇದೆ. 4,200 ಹುದ್ದೆಗಳನ್ನು ರದ್ದು ಮಾಡುವುದಕ್ಕೆ ಹೊರಟಿದ್ದೀರಂತೆ. ದಯವಿಟ್ಟು ಕೃಷಿ ಇಲಾಖೆಯಲ್ಲಿರುವ ಹುದ್ದೆಗಳನ್ನು ರದ್ದು ಮಾಡಬೇಡಿ. ನೀವು ಆ ಅಪಕೀರ್ತಿಗೆ ಹೋಗಬೇಡಿ. ದಯವಿಟ್ಟು ಅದನ್ನು ಉಳಿಸಿ. ಇನ್ನು ಮುಂದೆ ಏನೇನು ಮಾಡಬೇಕಾಗಿದೆಯೋ ? ಈ ಮಾನವ ಸಂಪತ್ತನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು ಏನಾದರೂ ಇದೆ ಎಂದರೆ ಅದು ಕೃಷಿ ಇಲಾಖೆಯಲ್ಲಿ ಮಾತ್ರ. ಭಾರತ ದೇಶಕ್ಕೆ ಮಾನವ ಸಂಪತ್ತು ದೈವದತ್ತವಾಗಿ ಬಂದಿದೆ. ನಾವು ಅದನ್ನು ಹಾಳು ಮಾಡುವುದು ಬೇಡ. ಅದಕ್ಕೋಸ್ಕರ ಯಾವುದೇ ಕಾರಣದಿಂದ ರದ್ದು ಮಾಡಬೇಡಿ. ಜಲಾನಯನ ಇಲಾಖೆಯನ್ನು ಕೃಷಿ ಇಲಾಖೆಗೆ ಮರ್ಜ್ ಮಾಡುವುದಕ್ಕೆ ನಮ್ಮ ವೈಯಕ್ತಿಕ ಸ್ವಾಗತ ಇದೆ. ಇದನ್ನು ಮಾಡುವಂತಹ ಕಾರ್ಯದಿಂದ ಯಾವುದೇ ಕಾರಣಕ್ಕೂ ಹಿಂದಕ್ಕೆ ಹೋಗಬೇಡಿ. ದಯವಿಟ್ಟು ಆ ಕೆಲಸವನ್ನು ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷಿ ಇಲಾಖೆಯಲ್ಲಿ 5,500 ಹುದ್ದೆಗಳು ಖಾಲಿ ಇವೆ. ಆ ಹುದ್ದೆಗಳನ್ನು ದಯವಿಟ್ಟು ಬೇಗ ತುಂಬಿ. ಏಕೆಂದರೆ ಹಿಂದೆ ನಮ್ಮ ಊರಿನಲ್ಲಿ agriculture Assistant ಎಂದು ಬರುತ್ತಿದ್ದರು. ಪೋಷಕಾಂಶದ ಗೊಬ್ಬರ ಹೇಗೆ ತಯಾರು ಮಾಡುವುದು, ಯಾವ್ಯಾವ ಬೀಜಗಳನ್ನು ಯಾವ್ಯಾವ ಸಮಯದಲ್ಲಿ ಬಿತ್ತಬೇಕೆಂದು ಹೇಳುತ್ತಿದ್ದರು. ಇವತ್ತು ಅವರೊಬ್ಬರೂ ಇಲ್ಲ. ಈ ನೀವು ಅನುವುದಾರರು ಎಂದು ಮಾಡಿದ್ದೀರಿ. ಅವರಿಗೆ 170 ರೂಪಾಯಿ ಕೊಡುತ್ತೀರಂತೆ. ಇವತ್ತು 170 ರೂಪಾಯಿಗೆ ಏನು ಬರುತ್ತದೆ ? ಅವರನ್ನು ತೆಗೆದು ಹಾಕಬೇಡಿ. ಅವರಿಗೆ ಈಗಾಗಲೇ

ಸ್ವಲ್ಪ ಅನುಭವ ಬಂದಿದೆ. ಈಗ ಅವರೇ ಕೈಯಿಗೆ ಸಿಗುವುದು. ಅವರನ್ನು ಹಳ್ಳಿ ಕಡೆಗೆ ಕರೆದರೆ ಬಂದು ಪೋಷಕಾಂಶದ ಗೊಬ್ಬರ ಹೇಗೆ ಹಾಕಬೇಕು ಎಂದು ಏನೋ ಒಂದು ಹೇಳುತ್ತಾರೆ, ನಾನು ನೋಡುತ್ತೇನೆ.

ಉಪಾಧ್ಯಕ್ಷರು : ಶಿವಲಿಂಗೇಗೌಡರೇ, ಈಗ ಊಟಕ್ಕೆ ವಿರಾಮ ಕೊಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನೂ ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟಂತೆ ಚರ್ಚೆಗೆ ಹೋಗಿಲ್ಲ. ಊಟ ಆದಮೇಲೆ ಹಾರ್ಟಿಕಲ್ಚರ್ ವಿಚಾರವಾಗಿ ಮಾತವಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಇನ್ನು ಬೇರೆಯವರು ಮಾತನಾಡುವವರಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಊಟ ಮಾಡಿ ಬಂದ ಮೇಲೆ ನನಗೆ ಹಾರ್ಟಿಕಲ್ಚರ್ ವಿಚಾರವಾಗಿ ಮಾತನಾಡುವುದಕ್ಕೆ ಕಾಲು ಗಂಟೆ ಸಮಯ ಕೊಡಿ.

ಉಪಾಧ್ಯಕ್ಷರು : ಆಯಿತು, ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು 2.00 ಗಂಟೆ 01 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ ಗಂಟೆ 3–17 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು :

2014–15ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ಅನುದಾನ ಬೇಡಿಕೆ ಮೇಲಿನ ಮುಂದುವರೆದ ಚರ್ಚೆ

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕರೆ) : ಮಾನ್ಯ ಉಪಾಧ್ಯಕ್ಷರೆ, ಇವತ್ತು ತೋಟಗಾರಿಕೆ ಇಲಾಖೆಯ ಬೇಡಿಕೆ ಕೂಡ ಇರುವುದರಿಂದ ತೋಟಗಾರಿಕೆ ವಿಷಯವಾಗಿ ಮಾತನಾಡಬಯಸುತ್ತೇನೆ. ತೋಟಗಾರಿಕೆ ಎನ್ನುವುದು ರೈತನ ಜೀವನಾಡಿ. ಸ್ವಲ್ಪಮಟ್ಟಿಗೆ ಸಮಾಧಾನಕರವಾದಂಥ ಆ ರೈತನ ಜೀವನಕ್ಕೆ ಪ್ರೇರಣೆಯನ್ನು ಮತ್ತು ಅವನ ಆರ್ಥಿಕ ಸ್ಥಿತಿಗತಿಗೆ ಸ್ಥಿರವಾಗಿ ನಿಲ್ಲತಕ್ಕಂಥ ಒಂದು ಇಲಾಖೆ. ಆದರೆ, ಈ ತೋಟಗಾರಿಕೆ ಇಲಾಖೆಯಲ್ಲಿ ಅನೇಕ ನ್ಯೂನತೆಗಳನ್ನು ನಾವು ನೋಡುತ್ತಿದ್ದೇವೆ. ರೈತ ಬೆಳೆದಂಥ

ಬೆಳೆಗಳಿಗೆ ಉತ್ತಮವಾದಂಥ ಮಾರುಕಟ್ಟೆಯನ್ನು ಕಲ್ಪಿಸಿಕೊಡತಕ್ಕಂಥದ್ದು ಇದರಲ್ಲಿ ಪ್ರಮುಖವಾದ ಒಂದು ಅಂಶ. ನಾವು ಕೃಷಿ ನೀತಿಯಲ್ಲಿ ಯಾವ ರೀತಿ ಬೆಳೆ ನೀತಿಯನ್ನು ಪ್ರಾಂತೀಯವಾರು ವಿಂಗಡಣೆ ಮಾಡಬೇಕು ಎನ್ನುವುದು ಹೇಳಿದ್ದೇವೋ, ಅದಕ್ಕಿಂತ ಹೆಚ್ಚಾಗಿ ತೋಟಗಾರಿಕೆ ಇಲಾಖೆಯಲ್ಲಿ ಇದನ್ನು ಮಾಡಬೇಕಾಗುತ್ತದೆ. ಕಾರಣ ತೋಟಗಾರಿಕೆ ಇಲಾಖೆಯಲ್ಲಿ ಮಾಡತಕ್ಕಂಥ ಎಲ್ಲಾ ಉತ್ಪನ್ನಗಳು ಬಹುತೇಕವಾಗಿ ಬಹಳಷ್ಟು ದಿವಸಗಳ ಕಾಲ ಇಡಲಾರದಂಥ, ದೀರ್ಘವಾದ ಮಾರುಕಟ್ಟೆಯನ್ನು ನೋಡಲಾರದಂಥ ವಸ್ತುಗಳಾಗಿರುತ್ತವೆ. ಈಗ ತರಕಾರಿ ಮಾರುಕಟ್ಟೆ, ತರಕಾರಿಗಳನ್ನು ಬೆಳೆಯತಕ್ಕಂಥದ್ದು, ಅದರ ಜೊತೆಯಲ್ಲಿ ಹಣ್ಣು, ಮತ್ತೆ ಇತರೆ ಎಲ್ಲಾ ತರಹದ ವಸ್ತುಗಳನ್ನು ನಾವೇನು ಬೆಳೆಯುತ್ತೇವೆ ಆ ಎಲ್ಲವೂ ಕೂಡ ನಿರ್ದಿಷ್ಟವಾದ ಸಮಯದೊಳಗೆ ಮಾರುಕಟ್ಟೆಯನ್ನು ನೋಡಲೇಬೇಕಾದಂಥ ಅನಿವಾರ್ಯ ಪರಿಸ್ಥಿತಿ ಇದೆ.

ನಾನು ಆಗಲೇ ಉದಾಹರಣೆಯನ್ನು ಕೊಟ್ಟೆ. ಬೆಲೆ ಆಯೋಗ ರಚನೆ ಮಾಡಿ ಏನಾದರೊಂದು ವಸ್ತುವಿಗೆ ನಿರ್ದಿಷ್ಟವಾದ ಬೆಲೆಯನ್ನು ಕೊಟ್ಟುಬಿಟ್ಟರೆ, ನಮ್ಮ ಜನ ಈಗಲೇ ಎಷ್ಟು ಬೇಕಾದರೂ ಬೆಳೆದು ಅದಕ್ಕೆ ಮಾರುಕಟ್ಟೆ ಇಲ್ಲದ ಹಾಗೆ ಮಾಡುತ್ತಾರೆ. ಬೇಡಿಕೆಗನುಗುಣವಾಗಿ ಬೆಳೆಯುವುದಿಲ್ಲ. ಆ ರೀತಿಯಲ್ಲಿ ಅನೇಕ ಪದಾರ್ಥಗಳಿವೆ. Tomato ಸಸಿಯನ್ನು ರೈತ ತೆಗೆದುಕೊಂಡು ಹೋಗಿ ಭೂಮಿಯಲ್ಲಿ ನೆಡಬೇಕಾದರೆ ಕೆ.ಜಿ. ಒಂದಕ್ಕೆ 20 ರೂ. ಇರುತ್ತದೆ. 20 ರೂ. ಆದತಕ್ಷಣ ಇರುವ ಎಲ್ಲ ಹೊಲ, ತೋಟ, ಪ್ರತಿಯೊಂದು ಪ್ರದೇಶಗಳಲ್ಲಿ tomato ಹಣ್ಣನ್ನು ಏಕಕಾಲದಲ್ಲಿ ನೆಡುತ್ತಾರೆ. Season ನೋಡಿ ನೆಡುವುದಿಲ್ಲ. ಈ ಕಾಲದಲ್ಲಿ ಎಷ್ಟು ಬೇಡಿಕೆ ಇದೆ ? ಈ ತಿಂಗಳಲ್ಲಿ ಎಷ್ಟು ಸಿಗುತ್ತದೆ ? ಈ ತಿಂಗಳಲ್ಲಿ ಎಷ್ಟು ಬೇಡಿಕೆ ಇದೆ ? ಇದಕ್ಕನುಗುಣವಾಗಿ ಬೆಳೆಯೋಣ ಎನ್ನುವ ಭಾವನೆ ರೈತರಿಗಿಲ್ಲ. ಅವರಿಗೆ ಆ ತಿಳಿವಳಿಕೆಯನ್ನೂ ನಮ್ಮ ಅಧಿಕಾರಿಗಳು ಕೊಡುವುದಿಲ್ಲ. ಇಲ್ಲಿ ಇದೇ ಆಗಬೇಕಾಗಿರುವುದು. ಆಗ ಮಾರುಕಟ್ಟೆಗೆ ಸಿಕ್ಕಾಪಟ್ಟೆ ಪದಾರ್ಥ ಬರುತ್ತದೆ. ಯಾವಾಗ ಮಾರುಕಟ್ಟೆಗೆ ಸಿಕ್ಕಾಪಟ್ಟೆ tomato ಹಣ್ಣಾಗಬಹುದು, ಯಾವುದೇ ಹಣ್ಣಾಗಬಹುದು, ಹಣ್ಣು-ಹಂಪಲು, ಬರುತ್ತವೆಯೋ ಆ ರೀತಿ ಬಂದ ಸಂದರ್ಭದಲ್ಲಿ ಅದು ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತದೆ. ದಲ್ಲಾಳಿಗಳ ಹಾವಳಿ ಜಾಸ್ತಿಯಾಗುತ್ತದೆ. ಆಗ ಯಾರು ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತಾನೆ,

ಆ ರೈತ ಮಾತ್ರ ಅದರ ಬೆಲೆಯನ್ನು ಕಾಣಲಿಕ್ಕೆ ಸಾಧ್ಯವಾಗುತ್ತದೆ. ಸರ್ಕಾರದ ವತಿಯಿಂದ cold storage ಕೊಡಬೇಕು. ಇವೆಲ್ಲವನ್ನೂ ಹಂಚುವುದರ ಬದಲು ರೈತನಿಗೆ ನಿರ್ದಿಷ್ಟವಾಗಿ ನೀನು ಬೆಳೆದ ಬೆಲೆಗೆ ಇಂಥ ಮೂಲಭೂತ ಸೌಕರ್ಯಗಳನ್ನು ನಾವು ಕೊಡುತ್ತೇವೆ, ಮುಕ್ತಟೆಯಾಗಿ ನಾವು cold storage ಅನ್ನು ಕೊಡುತ್ತೇವೆ, ನೀನು ಬೆಳೆದುಕೊಂಡು ಬಾ, ಒಂದು ತಿಂಗಳು ಇಲ್ಲದಿದ್ದರೆ 2 ತಿಂಗಳು ಇಟ್ಟು ಮಾರುಕಟ್ಟೆಯಲ್ಲಿ ಬೆಂಬಲಿತ ಬೆಲೆಯನ್ನು, ಉತ್ತಮವಾದ ಬೆಲೆಯನ್ನು ನೀನು ಕಾಣುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಎನ್ನುವ ಧೈರ್ಯವನ್ನು ರೈತನಿಗೆ ಇವತ್ತು ಕೊಡಬೇಕು. ಅದನ್ನು ಕೊಟ್ಟಾಗ ರೈತ ನಿಜವಾಗಿಯೂ ಆ ತರಹದ ವಸ್ತುಗಳನ್ನು ಬೆಳೆದು ನಿಜವಾಗಿಯೂ ಮಾರುಕಟ್ಟೆಯಲ್ಲಿ ಉತ್ತಮವಾದ ಬೆಲೆ ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ಮೂಲಭೂತ ಸೌಕರ್ಯಗಳನ್ನು cold storage ಗಳನ್ನು ಇತರೆ ಸೌಲಭ್ಯಗಳನ್ನು, ಮಾರುಕಟ್ಟೆ ಸೌಲಭ್ಯಗಳನ್ನು, ಮಾರುಕಟ್ಟೆ ಸೌಲಭ್ಯಗಳನ್ನು horticulture ನಲ್ಲಿ ಉತ್ತಮವಾಗಿ ಮಾಡಿಕೊಡಬೇಕಾಗಿರುವಂಥದ್ದು ಬಹುಪ್ರಮುಖವಾಗಿರತಕ್ಕಂಥ ಅಂಶ ಎನ್ನುವ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ದಾಳಿಂಬೆ ಒಂದು ಉತ್ತಮವಾದ commercial crop ಆಗಿ ಈ ರಾಜ್ಯದಲ್ಲಿ ಹೊರಹೊಮ್ಮಿದೆ. ಅದನ್ನು ಬಹಳ ಜನ ರೈತರು ಬೆಳೆಯುತ್ತಿದ್ದಾರೆ. ಲಕ್ಷಾಂತರ ಹಣವನ್ನೂ ಸಂಪಾದನೆ ಮಾಡುತ್ತಿದ್ದಾರೆ. ಆದರೆ, ದಾಳಿಂಬೆ ಬೆಳೆಗೆ ಒಂದು ತಿಂಗಳ ಹಿಂದೆ 160 ರೂ. ರೇಟ್ ಇದ್ದರೆ, ಇವತ್ತು 75 ರೂ. ಇರುತ್ತದೆ. ಮೊದಲನೇ ಫಸಲನ್ನು 75 ರೂ.ಗೆ ಬಿಡಿಸುತ್ತಾನೆ. ಅವನು ಎಲ್ಲ ಬೆಳೆಯನ್ನೂ ಕೆ.ಜಿ.ಗೆ 75 ರೂ.ಗೆ ತೆಗೆದುಕೊಳ್ಳುತ್ತೇನೆಂದು agreement ಅನ್ನು ಮಾಡಿಕೊಂಡಿರುತ್ತಾನೆ. ಆದರೆ, ಎರಡನೇ ಬೆಳೆ ಬಂದಾಗ ಏನೇನೂ ತಕರಾರು ತೆಗೆದು ಆ ಹಣ್ಣು ಚೆನ್ನಾಗಿಲ್ಲ, ಆ ಹಣ್ಣು ಚೆನ್ನಾಗಿ ಬಂದಿಲ್ಲ, ಹಾಗೆ ಹೀಗೆ ಎಂದು ಹೇಳಿ ಕೇವಲ 50 ರಿಂದ 55 ರೂ. ಗೆ ತೆಗೆದುಕೊಂಡು ಆ ರೈತನಿಗೆ ಮೋಸ ಮಾಡುವ ವ್ಯವಸ್ಥೆ ಇದೆ. ಅಲ್ಲಿ ನಮ್ಮ ಜನರೆಲ್ಲ, ಏನಿದು, ಇಷ್ಟೊಂದು ದಾಳಿಂಬೆ ಬೆಳೆಯುತ್ತಾರೆ, ಇದೆಲ್ಲಿಗೆ ಹೋಗುತ್ತದೆ, ಅದನ್ನು ತಿನ್ನುವುದಕ್ಕಿಂತ ಹೊರದೇಶಕ್ಕೆ ಔಷದಿಗೆಂದು ಹೋಗುತ್ತದಂತೆ ಎಂದು ಮಾತನಾಡಿಕೊಳ್ಳುತ್ತಾರೆ. ಹಾಗಾದರೆ, ಹೊರದೇಶಕ್ಕೆ ಆ ಹಣ್ಣು ಹೋಗುವುದಾದರೆ, ಯಾವ products ಅನ್ನು ತಯಾರು

ಮಾಡುವುದಕ್ಕೋಸ್ಕರ ಈ ದಾಳಿಂಬೆಯನ್ನು ಹೊರದೇಶಕ್ಕೆ ತರಿಸಿಕೊಳ್ಳುತ್ತಾರೋ, ಆ products ಅನ್ನು ನಮ್ಮ ಹತ್ತಿರ ತಯಾರು ಮಾಡುವುದಕ್ಕೆ ಮೂಲ ಬಂಡವಾಳ ಹೂಡಲಿಕ್ಕೆ ನಮ್ಮಿಂದ ಸಾಧ್ಯವಿಲ್ಲವೇ ? ದಾಳಿಂಬೆಯಂಥ ವಸ್ತುವಿನಿಂದ ಅವರು ಯಾವ products ಅನ್ನು ತಯಾರು ಮಾಡುತ್ತಾರೆಯೋ, ಕಚ್ಚಾ ವಸ್ತುವನ್ನು (raw material) ತೆಗೆದುಕೊಂಡು ಹೋಗಿ ತಯಾರು ಮಾಡುತ್ತಾರೆಯೋ, ಅವರು ಯಾವ products ಅನ್ನು ತಯಾರು ಮಾಡುತ್ತಾರೋ ಆ products ಅನ್ನು ತಯಾರು ಮಾಡುವುದಕ್ಕೆ ಮೂಲ ಬಂಡವಾಳವನ್ನು ಹೂಡುವಂತ ಶಕ್ತಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಇಲ್ಲವೇ ? ಇದು ಮೂಲಭೂತವಾಗಿರುವಂಥ ಪ್ರಶ್ನೆ. ಯಾವುದೇ ಕಾರಣದಿಂದ ನಾವು ಬೆಳೆದ ಬೆಳೆಯನ್ನು ಬಂದ ಫಸಲನ್ನು ನಿರ್ದಿಷ್ಟವಾಗಿ ಕೊನೆಯಪಕ್ಷ 50 ಭಾಗವನ್ನಾದರೂ ನಾವು ಖರ್ಚು ಮಾಡುತ್ತೇವೆ ಎನ್ನುವಂಥ ಸಾಮರ್ಥ್ಯ ಮತ್ತು ನಿರ್ದಿಷ್ಟವಾದಂಥ ಬೆಲೆಯನ್ನು ಕೊಡತಕ್ಕಂಥ ದೃಷ್ಟಿಯಲ್ಲಿ ಇವತ್ತು ನಾವು ಆ products ಅನ್ನು ತಯಾರು ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅದು ಇವತ್ತು ನಮ್ಮ ರಾಜ್ಯದಲ್ಲಿ ನಡೆಯುತ್ತಿಲ್ಲ. ನಮ್ಮ ದೇಶದಲ್ಲಿ ನಡೆಯುತ್ತಿಲ್ಲ. ಅದಕ್ಕೆ ಬಂಡವಾಳವನ್ನು ಹೆಚ್ಚಿನ ಪ್ರಮಾಣದಲ್ಲಿ ಹೂಡಬೇಕು. ದಾಳಿಂಬೆ ಇವತ್ತು ಪ್ರಮುಖ commercial ಬೆಳೆಯಾಗಿ ಮಾರ್ಪಾಡಾಗಿದೆ, ಆ ಬೆಳೆಗೆ ಹೆಚ್ಚಿನ ಉತ್ತೇಜನವನ್ನು ಕೊಡುತ್ತಿದ್ದಾರೆ. ಉತ್ತೇಜನ ಹೇಗೆ ಎಂದರೆ, ಔಷಧಿಗೆ ಕೊಡಬಹುದು, subsidy ಕೊಡಬಹುದು. ಅದಲ್ಲ. ಇವತ್ತು ಅದು ಪ್ರಮುಖ ಪ್ರಶ್ನೆಯಲ್ಲ. ಪ್ರಮುಖವಾದ ಪ್ರಶ್ನೆ ಎಂದರೆ, ರೈತ ಏನಾದರೂ ಮಾಡಿ ಕಷ್ಟಪಟ್ಟು ಬೆಳೆಯುತ್ತಾನೆ. ಆದರೆ, ಅದಕ್ಕೆ ಮಾರುಕಟ್ಟೆಯನ್ನು ಒದಗಿಸಿಕೊಡತಕ್ಕಂಥದ್ದು, ನಿರ್ದಿಷ್ಟವಾಗಿ ಮಾರುಕಟ್ಟೆಯನ್ನು ರೂಢಿಸಿಕೊಡತಕ್ಕಂಥದ್ದು ಸರ್ಕಾರದ ಕರ್ತವ್ಯವಿದೆ. ಅದಕ್ಕೋಸ್ಕರ ಕೃಷಿ ಬಂಡವಾಳಗಾರರ ಸಮಾವೇಶ ಮಾಡಿದ್ದರು, ವಿಶ್ವ ಕೃಷಿ ಬಂಡವಾಳಗಾರರ ಸಮಾವೇಶ ಮಾಡಿ. ವಿಶ್ವದಲ್ಲಿ ಎಲ್ಲಿ ಆ ದಾಳಿಂಬೆಯನ್ನು ಇಷ್ಟೊಂದು ಪ್ರಮಾಣದಲ್ಲಿ ತೆಗೆದುಕೊಂಡು ಹೋಗಿ ಕರಗಿಸತಕ್ಕಂಥ ಶಕ್ತಿ ಇದೆ, ಅದನ್ನು ನೀವೇ ಈ ರಾಜ್ಯದಲ್ಲಿ ಕರಗಿಸುವ ಶಕ್ತಿಗೆ ಅವಲಂಭಿತರಾದರೆ ನಿಜವಾಗಿಯೂ ಆ ರೈತರಿಗೆ ಆ ದಾಳಿಂಬೆ ವರದಾನವಾಗಿ ಈ ರಾಜ್ಯದಲ್ಲಿ ಉತ್ತಮವಾದ ವ್ಯವಸ್ಥೆಯಾಗಿ ಮಾರ್ಪಾಡಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮ

ಸರ್ಕಾರ, ನಮ್ಮ ಸಚಿವರುಗಳು ಚಿಂತನೆ ಮಡುತ್ತಾರೆ, ಇದರ ಬಗ್ಗೆ ಸಮಾವೇಶ ನಡೆಸಿ. ಶಾಸಕರಾಗಿ ನಮಗೆ ಇದರ ಬಗ್ಗೆ ಗೊತ್ತಿಲ್ಲ, ನಾವೂ ಹಳ್ಳಿಯ ಜನರ ಜೊತೆ, ಹೌದು ಹೊರ ದೇಶಕ್ಕೆ ಹೋಗುತ್ತದಂತೆ, ಇದರಲ್ಲಿ ಔಷಧಿ ತಯಾರು ಮಾಡುತ್ತಾರಂತೆ ಎಂದು ಹೇಳುತ್ತೇವೆ. ನಮಗೂ ಇದರ ಬಗ್ಗೆ ನಿಜವಾದದ್ದು ಗೊತ್ತಿಲ್ಲ. ಅದನ್ನು ಏತಕ್ಕೆ ತೆಗೆದುಕೊಂಡು ಹೋಗುತ್ತಾರೆ ? ಅದು ಯಾವ ದೇಶಕ್ಕೆ ರಫ್ತಾಗುತ್ತದೆ ? ಅದರಿಂದ ಏನನ್ನು ತಯಾರು ಮಾಡುತ್ತಾರೆ ? ಈ ಎಲ್ಲ ವಸ್ತುಗಳನ್ನು ಕೊಟ್ಟು ನಮ್ಮ ದೇಶದಲ್ಲಿಯೇ ಆ products ಅನ್ನು ತಯಾರು ಮಾಡತಕ್ಕಂಥ ಒಂದು ವ್ಯವಸ್ಥೆ ಆಗಬೇಕು. ಆ ನಿಟ್ಟಿನಲ್ಲಿ ದೊಡ್ಡ ಪ್ರಮಾಣದ ಬೆಳೆಯನ್ನಾಗಿ ಅದರಲ್ಲೂ commercial ಬೆಳೆಯಾಗಿ ಹೊರಹೊಮ್ಮತಕ್ಕಂಥದ್ದಾಗಬೇಕು. ಶುಂಠಿಯದ್ದೂ ಇದೇರೀತಿ. ಅದಕ್ಕೆ ಉತ್ತಮವಾದ ರೇಟ್ ಕೊಟ್ಟು, ಬಹಳ ಜನ ರೈತರು ಇವತ್ತು ಶ್ರೀಮಂತರಾಗುತ್ತಿದ್ದಾರೆ. ಒಳ್ಳೆಯದಾಗುತ್ತಿದೆ. ಈ ರೀತಿ horticulture ಬೆಳೆಯಲ್ಲಿ ಇಂಥ commercial ಆಗಿ ಒಳ್ಳೆಯ ಬೆಲೆಯನ್ನು ಕೊಡತಕ್ಕಂಥ, ರೈತರನ್ನು ಮೇಲೆತ್ತತಕ್ಕಂಥ, ಅವರ ಆರ್ಥಿಕ ಸಂಕಷ್ಟವನ್ನು ನಿವಾರಣೆ ಮಾಡುವ ದೃಷ್ಟಿಯಲ್ಲಿ ಇಂಥ ಬೆಳೆಗಳಿಗೆ ಕೆಲವು ಸಮಸ್ಯೆಗಳನ್ನು ಮಾರುಕಟ್ಟೆ ಸಮಸ್ಯೆಗಳನ್ನು ಬಗೆಹರಿಸಬೇಕು. ಒಂದು ಸಾರಿ ಶುಂಠಿ 500 ರೂ. ಆಗುತ್ತದೆ. ಇವತ್ತು ಎಷ್ಟು ಸಾವಿರ ಇದೆ ನೋಡಿ. 500 ರೂ. ಎಂದು ಹಾಕಿದಾಗ ಎಲ್ಲ ರೈತರು ಮನೆಗೆ ಹೋಗುತ್ತಾರೆ. 4 ಸಾವಿರ ರೂ. ಎಂದರೆ ಮತ್ತೆ ಎಲ್ಲ ರೈತರು ಬರುತ್ತಾರೆ. ಮತ್ತೆ ಆ ಬೆಳೆ ರೈತರಿಗೆ ಸಿಗುವ ಹೊತ್ತಿಗೆ 1,000 ರೂ.ಗೋ. 800 ರೂ.ಗೋ ಬೆಲೆ ಬರುತ್ತದೆ. ಇಂಥ ಪರಿಸ್ಥಿತಿ ರೈತರಲ್ಲಿ ಆಗುತ್ತದೆ. ಮಾರುಕಟ್ಟೆಯ ಏರುಪೇರಿನಲ್ಲಿ ರೈತ ನಲುಗಿ ಹೋಗಿದ್ದಾನೆ. ನಲುಗಿ ಹೋಗಿರುವ ರೈತನಿಗೆ ಸ್ಥೈರ್ಯ ತುಂಬುವ ಕೆಲಸವನ್ನು ಮಾಡಬೇಕು. ಸ್ಥಿರವಾದ ಮಾರುಕಟ್ಟೆಯನ್ನು ಕೊಡತಕ್ಕಂಥ, ಒಳ್ಳೆಯ ಬೆಲೆಯನ್ನು ಕೊಡುವುದಕ್ಕಿಂತ ಮಾರುಕಟ್ಟೆಯನ್ನು ಸೃಷ್ಟಿ ಮಾಡುವ ವ್ಯವಸ್ಥೆ ಈ ರಾಜ್ಯದಲ್ಲಾಗಬೇಕೆನ್ನುವಂಥದ್ದು ನನ್ನ ಪ್ರಮುಖ ಬೇಡಿಕೆ. ಇದೇ ರೀತಿ ಮಾವಿನ ಹಣ್ಣಿನ ಬಗ್ಗೆ ಹೇಳುತ್ತೇನೆ. ಮಾವಿನ ಹಣ್ಣು ಒಂದೇ ಸಾರಿ ಬರುತ್ತದೆ. ವರ್ತಕ ಏನು ರೇಟ್ ಹೇಳುತ್ತಾನೆ, ಆ ರೇಟ್‌ಗೆ ಕೊಡಬೇಕು. ಇಲ್ಲವೆಂದರೆ, 8 ದಿವಸ ಯಾವುದೇ ಹಣ್ಣನ್ನು ಇಟ್ಟುಕೊಂಡು ಮಾರಾಟ ಮಾಡಲಿಕ್ಕಾಗುವುದಿಲ್ಲ. ಬಾಳೆ ಹಣ್ಣಾದರೂ ಅಷ್ಟೇ, ಬಾಳೆ ಹಣ್ಣಿಗೆ ವರ್ತಕ ಏನು

ರೇಟ್ ಫಿಕ್ಸ್ ಮಾಡುತ್ತಾನೋ, ಆ ರೇಟ್‌ಗೆ ನಾವು ಕೊಟ್ಟು ಬರಬೇಕಾಗುತ್ತದೆ. ಇಲ್ಲ, ಒಂದು ತಿಂಗಳೋ, 15 ದಿವಸಗಳೋ, cold storage ನಲ್ಲಿಟ್ಟು, ಬೆಲೆಯನ್ನು ಗಮನಿಸುತ್ತೇನೆ ಎನ್ನುವ ಪ್ರವೃತ್ತಿ ನಮ್ಮಲ್ಲಿ ಬೆಳೆಯಬೇಕಾಗುತ್ತದೆ. ಅದನ್ನೂ ಸಹ ನಾವು ರೂಢಿಸತಕ್ಕ ನಿಟ್ಟಿನಲ್ಲಿ ಹೋಗಿಲ್ಲ. ನಾವಿನ್ನೂ ಏನಾದರೂ ಸೌಲಭ್ಯಗಳನ್ನು ಕೊಡುವುದರಲ್ಲಿ ಇದ್ದೇವೆಯೇ ಹೊರತು ನಿರ್ದಿಷ್ಟ ಗುರಿ ತಲುಪತಕ್ಕಂಥ, ವ್ಯವಸ್ಥಿತವಾಗಿರತಕ್ಕಂಥ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕಂಥ ನಿಟ್ಟಿನಲ್ಲಿ ಸರ್ಕಾರದಲ್ಲಿ ಇದುವರೆಗೆ ಚಿಂತನೆ ಆಗಿಲ್ಲ. ಮುಂದಾದರೂ ಚಿಂತನೆ ಮಾಡಲಿ ಎನ್ನುವ ಸಲಹೆಯನ್ನು, ಮನವಿಯನ್ನು ಸರ್ಕಾರಕ್ಕೆ ಮಾಡುತ್ತೇನೆ.

ಉಪಾಧ್ಯಕ್ಷರು : Conclude ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅದರ ಜೊತೆಯಲ್ಲಿ, ತೆಂಗು ನಮ್ಮ ಕ್ಷೇತ್ರದ, ನಮ್ಮ ಜಿಲ್ಲೆಯ ಪ್ರಮುಖವಾದ ಬೆಳೆ. ಇನ್ನು ಎರಡೇ ಎರಡು ಬೆಳೆ ಬಗ್ಗೆ ಮಾತನಾಡುತ್ತೇನೆ. ತೆಂಗು ಕಾಮಧೇನು, ಕಲ್ಪವೃಕ್ಷ ಎಂಬ ಹೆಸರು ತೆಗೆದುಕೊಂಡಂಥ ಬೆಳೆಯದು. ಎಲ್ಲವೂ ಅದರಲ್ಲಿ ಉಪಯುಕ್ತವಾದ ವಸ್ತುಗಳೇ ಬರುತ್ತವೆ. ಹಿಂದೆ ನುಸಿ ಪೀಡೆ ಬಂತು. ನಮ್ಮ ವಿಜ್ಞಾನಿಗಳೂ ಬಹಳ ಹೋರಾಟ ಮಾಡಿದರು. ಆದರೂ ಇವತ್ತಿನವರೆಗೂ ಆ ನುಸಿ ರೋಗವನ್ನು ನಿವಾರಣೆ ಮಾಡುವುದಕ್ಕಾಗಲಿಲ್ಲ. ಅದರ ಗುಣಮಟ್ಟ ಕಾಪಾಡಲಿಕ್ಕೆ, ಗುಣಮಟ್ಟ ಹೆಚ್ಚಿಸುವಂಥ, ನಿಯಂತ್ರಿಸತಕ್ಕಂಥ ಕೆಲಸ ಇವತ್ತಿನವರೆಗೆ ಆಗಿಲ್ಲ. ಆ ಕಾಯಿಲೆ ಇನ್ನೂ ಹಾಗೆಯೇ ಉಳಿದುಕೊಂಡಿದೆ. ನಮ್ಮ ವಿಜ್ಞಾನಿಗಳು ಇನ್ನೂ ತಪಸ್ಸು ಮಾಡುತ್ತಲೇ ಇದ್ದಾರೆ. ಆ ಕೆಲಸ ಆಗಲಿಲ್ಲ. ತೆಂಗಿಗೆ ಪ್ರಮುಖವಾಗಿ ನೀರಾವರಿ ಬೇಕು. ನೀರಾವರಿ ಸೌಲಭ್ಯವಿಲ್ಲದೆ ಅಂತರ್ಜಲ ಕುಸಿದು ಇವತ್ತು ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿದ್ದೇವೆ. ಒಂದು ಕಡೆ ಆ ತೆಂಗಿಗೆ ರೋಗವಿದೆ. ಒಂದು ಕಡೆ ರೋಗ ಮತ್ತೊಂದು ಕಡೆ ಅಂತರ್ಜಲದಿಂದ ನೀರಿನ ಮಟ್ಟ ಕಡಿಮೆಯಾಗಿ ನೀರಿನ ಬವಣೆ ಜಾಸ್ತಿಯಾಗಿ ಇವತ್ತು ತೆಂಗಿನ ಮರಗಳು ಸುಳಿ ಕಳೆದುಕೊಂಡು ಬಿದ್ದು ಹೋಗುವ ಪರಿಸ್ಥಿತಿಯಾಗಿವೆ. ಇದಕ್ಕೆ ಅನೇಕ ಸಾರಿ ನಾವು ಇಲ್ಲಿ ಒತ್ತಾಯ ಮಾಡಿದ್ದೇವು. ಈಗೇನು ದರ ಬಂದಿದೆ. ದರ ಏಕೆ ಬಂದಿದೆ ಎಂದರೆ ಅಲ್ಲಿ ಫಸಲೇ ಇಲ್ಲ. ಐವತ್ತು ಸಾವಿರ ತೆಂಗಿನ ಕಾಯಿಗಳನ್ನು ಕೆಡುವುತ್ತಿದ್ದವನು ಐದು ಸಾವಿರಕ್ಕೆ ಬಂದಿದ್ದಾನೆ. ಮೊದಲು

ಒಂದು ಸಾವಿರ ಕೊಬ್ಬರಿಗೆ ಒಂದೂವರೆ ಕ್ವಿಂಟಾಲ್ ಬರುತ್ತಿತ್ತು. ಈಗ ಒಂದು ಕ್ವಿಂಟಾಲ್ ಕೊಬ್ಬರಿ ತೆಗೆದುಕೊಂಡು ಹೋದರೆ ಎಂಬತ್ತು ಕೆ.ಜಿ.ಬರುತ್ತಿದೆ. ಕೊಬ್ಬರಿಯ ಗಾತ್ರ ಇಷ್ಟೆ ಇಷ್ಟೇ ಇದೆ. ಅದರಿಂದಾಗಿ ದರ ಮುಂದಕ್ಕೆ ಹೋಗಿದೆಯೇ ಹೊರತು ಇನ್ನ್ಯಾವ ದೃಷ್ಟಿಯಿಂದಲ್ಲ. ಮಾರುಕಟ್ಟೆಯಲ್ಲಿ ಮಾಲ್ ಇಲ್ಲ. ರೈತನ ಹತ್ತಿರ ಮಾಲ್ ಇಲ್ಲದೇ ಇರುವುದರಿಂದ ಇಂದು ತೆಂಗಿಗೆ ಬೆಲೆ ಬಂದಿದೆ. ಆದರೆ, ಆ ತೆಂಗಿಗೆ ಸುಳಿ ಬಂದು ಬಿದ್ದು ಹೋಗುತ್ತಿದೆ ಬನ್ನಿ ಎಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿತು. ನಾವೆಲ್ಲಾ ಹೋದೆವು, ಗೋರಬ್ ಸಿಂಗ್ ಎನ್ನುವವರು ಬಂದರು. ಅವರಿಗೆ ನಾವು ಎಲ್ಲಾ ಪ್ರದೇಶವನ್ನು ತೋರಿಸಿದೆವು. ನಿಜವಾಗಲೂ ಅವರು ಬಹಳ ಆಶ್ಚರ್ಯಪಟ್ಟು ಈ ಒಂದು ಪರಿಸ್ಥಿತಿ ಬಂದಿದೆ ಅಲ್ಲವೇ ಎಂದು ಕೇಳಿದರು. ಕೊನೆಗೆ ಎಲ್ಲಾ ಮಾಡಿ ಒಳ್ಳೆಯ ಪ್ಯಾಕೇಜ್ ಕೊಡುತ್ತೇನೆಂದು ಹೇಳಿ ಅವರು ಹೋದರು. ಪ್ಯಾಕೇಜ್ ಅವರು ಕೊಟ್ಟರೋ ರಾಜ್ಯದವರು ಕೊಟ್ಟರೋ, ಕೇಂದ್ರದವರು ಕೊಟ್ಟರೋ, ನನಗೆ ಗೊತ್ತಿಲ್ಲ. ಆ ಪ್ಯಾಕೇಜ್ ವಿಕಾಸ ಯೋಜನೆಯಲ್ಲಿ ಒಂದು ಕೋಟಿಯಿಂದ ಒಂದೂವರೆ ಕೋಟಿ ರೂಪಾಯಿಗಳನ್ನು ಒಂದೊಂದು ತಾಲ್ಲೂಕಿಗೆ ಕೊಟ್ಟರು. ಆ ತಾಲ್ಲೂಕಿಗೆ ಹಣವನ್ನು ಕೊಟ್ಟಾಗ ನಾವೆಲ್ಲಾ ಕೆಡಿಪಿ ಸಭೆಯಲ್ಲಿ ಯಾವುದೇ ಕಾರಣಕ್ಕೂ ಈ ಹಣವನ್ನು ಹಂಚುವುದಕ್ಕೆ ಹೋಗಬೇಡಿ ಎಂದು ಹೇಳಿದೆವು. ಮಾರ್ಚಿ ತಿಂಗಳಲ್ಲಿ ನಿಟ್ಟ ಬೇಸಿಗೆ. ಹಣ ಕೊಡುವುದಕ್ಕೆ ಇವರ ಒಂದನೇ ನಿಯಮ ಏನೆಂದರೆ, ಸುಳಿ ಹೋಗಿರುವಂಥ ಮರವನ್ನು ಬಗೆದು ತೆಗೆದು ಬೇರೆ ಸಸಿ ನೆಡಬೇಕು. ಕುಡಿಯುವುದಕ್ಕೆ ನೀರು ಇಲ್ಲ, ನೀರು ಇಲ್ಲದಿರುವುದರಿಂದ ತೆಂಗಿನ ಮರ ಸುಳಿ ಬಿದ್ದು ಹೋಗಿದೆ, ಅಲ್ಲಿಗೆ ಬದಲಿ ಸಸಿ ನೆಡಿ ಎಂದು ಒಂದು ನಿಯಮ ಪಾಲನೆ ಮಾಡಿ ಕಳುಹಿಸುತ್ತಿರಲ್ಲಾ ನೀವು ನಿಜವಾದ ವಿಜ್ಞಾನಿಗಳೇ ? ನಿಜವಾಗಿಯೂ ನೀವು horticulture ಆಫೀಸರ್ಸ್? ಯಾವ ಅಧಾರದ ಮೇಲೆ ನೀವು ಇದನ್ನು ಮಾಡಿದಿರಿ ? ಮಳೆ ಇಲ್ಲ ಬಗೆಯಲಿಕ್ಕೆ, ನೀರು ಇಲ್ಲದೆ ತೆಂಗಿನ ಮರ ಬಿದ್ದು ಹೋಗಿದೆ, ಹೀಗಿರುವಾಗ ಆ ಮರವನ್ನು ಬಗೆದು ಅಲ್ಲಿ ತೆಂಗಿನ ಸಸಿ ನೆಡಿ, ಇದಕ್ಕೆ 350/- ರೂಪಾಯಿ ಕೊಡುತ್ತೇವೆಂದು ಹೇಳುತ್ತೀರಲ್ಲ ? ಅದರ ಬದಲು ನಾವೇನು ಕೇಳಿದ್ದೇವೆಂದರೆ ಇಂದು ರೈತ 150, 200, 300 ತೆಂಗಿನ ಮರಗಳನ್ನು ತನ್ನ ಶಕ್ತ್ಯಾನುಸಾರ ಕಳೆದುಕೊಂಡು ಬಿಟ್ಟಿದ್ದಾನೆ.

ಖರ್ಚಿಗೆ ಕಾಸು ಇಲ್ಲದೆ ಒದ್ದಾಡುತ್ತಿದ್ದಾನೆ. ಇಂಥ ಸಂದರ್ಭದಲ್ಲಿ ಅವನ ಅರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ನೀವು ಮರಕ್ಕೊಂದು ರೂ. 200/-, ರೂ. 300/- ಪರಿಹಾರ ಕೊಡಿ ಎಂದರೆ, ನೀವು ಮರ ಕಿತ್ತು ಸಸಿ ನೆಡಿ ಎಂದು ಹೇಳುತ್ತೀರಿ. ಎರಡನೇ ನಿಯಮ ಏನು ಹೇಳುತ್ತದೆ ಎಂದರೆ, ಪುನಃಶ್ಚೇತನ. ಹೇಗೆ ಪುನಃಶ್ಚೇತನ ಮಾಡುವುದು? ಅಲ್ಲಿ ನೀರು ಇಲ್ಲದೆ ಒಣಗಿ ಹೋಗಿರುವ ಮರಗಳಿಗೆ ಬಾಳೆ ಹಾಕಿ ಎಂದರೆ ಹೇಗೆ? ಯಾರಿಗೆ ನೀರು ಇದೆಯೇ ಅವನು ಬಾಳೆ ಹಾಕಿಕೊಂಡಿದ್ದಾನೆ. ಯಾರು ನೀರು ಇಲ್ಲದೆ ಸಾಯುತ್ತಿದ್ದಾನೆ ಅವನಿಗೆ ನೀವು ಪರಿಹಾರ ಕೊಡಬೇಕು. ನೀರು ಇದ್ದವನಿಗೆ ಒಳ್ಳೆಯ ತೋಟ ಮಾಡಿದಂಥವರ ಹತ್ತಿರ ನೀವು ಹೋಗಿ ಅಲ್ಲಿ ಬಾಳೆ ಇದೆ, ಮೆಣಸು ಇದೆ, ಅದರಲ್ಲಿ ಇನ್ನೊಂದು ಸೀಗಡಿ ಹಾಕಿಕೊಂಡಿದ್ದಾನೆ, ಕರಿ ಮೀನು ಹಾಕಿಕೊಂಡಿದ್ದಾನೆಂದು ಹೇಳಿ ಅವನಿಗೆ ಎಲ್ಲಾ ತೆಗೆದುಕೊಂಡು ಹೋಗಿ ದುಡ್ಡು ಕೊಟ್ಟರಲ್ಲ ಇದು ಸರಿಯೇ? ನಂತರ ತೆಂಗಿನ ಗರಿಯನ್ನು ಆ ಮರದ ಬಡ್ಡಿಗೆ ಕತ್ತರಿಸಿ ಹಾಕಿ ಬಿಟ್ಟರೆ ಅಂತರ್ಜಲ ಇಂಗುವುದಿಲ್ಲವಂತೆ ಇದು ಇವರ ಟೆಕ್ನಾಲಜಿ. ಇಂಥವರಿಗೆಲ್ಲಾ ಪರಿಹಾರ, ಯಾರ್‍ಯಾರಿಗೆ ಬೇಕೋ ಅವರಿಗೆ ಪರಿಹಾರ ಇದೊಂದು ರೀತಿಯ ಸಂತೆ ಇದು. ಅಲ್ಲಿ ಬ್ರೋಕರ್‌ಗಳು ಯಾರ್‍ಯಾರನೋ ಹಿಡಿದುಕೊಂಡು ಹೋಗಿದ್ದಾರೆ ಅವರಿಗೆ ಪರಿಹಾರ ಕೊಟ್ಟಿದ್ದಾರೆ, ಈ ಬಗ್ಗೆ ತನಿಖೆಯಾಗಲೇಬೇಕು. ನಾನು ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ, ನನ್ನ ತಾಲ್ಲೂಕಿನಲ್ಲಿ ಒಂದು ಕೋಟಿ ಚಿಲ್ಲರೆ ಹಣ ಏನು ಹಂಚಿದಿರಿ ಅದು ನಿಜವಾದ ವ್ಯವಸ್ಥೆಗೆ ತಲುಪಿಲ್ಲ. ನಾವು ಸುಳಿ ಹೋಗಿರುವಂಥ ಮರಗಳಿಗೆ ಪರಿಹಾರ ಕೊಡಿ ಎಂದು ಹೇಳಿದ್ದು. ನೀವು ಪುನಃಶ್ಚೇತನ ಮಾಡಿ ಎಂದು ಹೇಳಿ ಆ ನಿಯಮವನ್ನು ಅದ್ಯಾವ ಪುಣ್ಯಾತ್ಮ ರೂಪಿಸಿದನೋ ನಮಗೆ ಗೊತ್ತಿಲ್ಲ. ಇಂಥ ನಿಯಮ ರೂಪಿಸಿ ಒಂದೂವರೆ ಕೋಟಿ ರೂಪಾಯಿಗಳನ್ನು ಲೂಟಿ ಹೊಡೆದಿದ್ದಾರೆ, ಯಾರ್‍ಯಾರಿಗೆ ಕೊಟ್ಟಿದ್ದಾರೆಂದು ಗೊತ್ತಿಲ್ಲ, ಅದು ಯಾರಿಗೆ ಗೊತ್ತಿಲ್ಲ. ನಿಜವಾದ ರೈತರಿಗೆ ತಲುಪಿಲ್ಲ, ಹೀಗಾಗಿ ಈ ಬಗ್ಗೆ ತನಿಖೆ ಮಾಡಬೇಕು. ತನಿಖೆ ಆಗದಿದ್ದರೆ ನಾನು ಇನ್ನು 2-3 ದಿವಸ ನೋಡಿ ಸದನದಲ್ಲಿ ಧರಣಿ ಕುಳಿತುಕೊಳ್ಳುವುದು ಗ್ಯಾರಂಟಿ. ಅದನ್ನು ಯಾವ ಸಂಸ್ಥೆಯ ಮೂಲಕ ತನಿಖೆ ಮಾಡಿಸುತ್ತೀರೋ ಮಾಡಿಸಿ ಒಟ್ಟಿನಲ್ಲಿ ನೀವು ಈ ಬಗ್ಗೆ ತನಿಖೆ ಮಾಡಲೇಬೇಕು.

ತನಿಖೆಯಾದ ಮೇಲೆ ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆಯಾಗಲೇಬೇಕು. ನಿಯಮಗಳನ್ನು ಯಾರು ಮಾಡಿದ್ದಾರೋ ಅವರಿಗೆ ಮೊದಲು ಶಿಕ್ಷೆ ಕೊಡಿ. ಪುನಃಶ್ಚೇತನ ಎಂದರೇನು ? ನೀರು ಇರುವವರಿಗೆ ನೀವು ಪುನಃಶ್ಚೇತನಕ್ಕೆ ಕೊಡುವುದೆ ? ನೀರು ಇಲ್ಲದೆ ಒಣಗಿ ಹೋಗಿ ಮರ ಕಳೆದುಕೊಂಡಿರುವವರಿಗೆ ದುಡ್ಡು ಕೊಡಿ ಎಂದರೆ ನೀವು ಪುಃನ ನೀರು ಇರುವವರಿಗೆ ದುಡ್ಡು ಕೊಡುವುದೆ? ಅದರೊಳಗೆ ಬಾಳೆ ಬೆಳೆಯಿರಿ ಎಂದು ಹೇಳುತ್ತೀರಿ, ಬಾಳೆಗೆ ಎಷ್ಟು ನೀರು ಬೇಕೆಂಬುದು ನಿಮಗೆ ಗೊತ್ತೆ? ಬಾಳೆಗೆ ನೀರು ಕೊಟ್ಟರೆ ತೆಂಗಿನ ಮರಕ್ಕೆ ನೀರು ಉಳಿಯುತ್ತದೆಯೇ ? ಇಂಥ ಅವೈಜ್ಞಾನಿಕವಾದ ನಿಯಮಗಳನ್ನು ನೀವು ಹಾಕಿರುವುದರಿಂದಲೇ ಇಂದು ತೆಂಗಿನ ಮರಗಳಿಗೆ ಈ ಸ್ಥಿತಿ ಬಂದಿರುವುದು. ತೆಂಗಿನ ತೋಟದೊಳಗೆ ಬಾಳೆ ಹಾಕಿಸಬಾರದು, ಬಾಳೆ ನೀರನ್ನು ಬಹಳ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತದೆ. ಎಷ್ಟು ನೀರು ಬಳಕೆ ಆಗುತ್ತದೆ ? ಈ ಎಲ್ಲಾ ವಿಚಾರಗಳನ್ನು ತಲೆಯೊಳಗೆ ಇಟ್ಟುಕೊಳ್ಳಬೇಕು. ತೆಂಗಿನ ತೋಟದೊಳಗೆ ಬಾಳೆ ಗಿಡಗಳನ್ನು ಹಾಕಿಸಬಾರದು. ಬಾಳೆಗೆ ನೀರು ಹತ್ತು ಭಾಗದಷ್ಟು ನೀರು ಬೇಕಾಗುತ್ತದೆ. ಹೀಗಿರುವಾಗ ತೆಂಗಿನ ತೋಟದೊಳಗೆ ಬಾಳೆ ಹಾಕಿಸಿ ಜೊತೆಗೆ ಅದಕ್ಕೆ ಸಬ್ಸಿಡಿ ಕೊಡುತ್ತೀರಿ. ಪರಿಹಾರ ಕೊಡುತ್ತೀರಿ, ಇದನ್ನು ನೀವು ಮೊದಲು ತಿಳಿದುಕೊಳ್ಳಬೇಕು. ನೀರು ಇಲ್ಲದೆ ಒಣಗಿ ಹೋಗಿದೆ, ಮಂಗಳೂರಿನಲ್ಲಿ ಇರುವ ಹಾಗೆ ಹೇರಳವಾಗಿ ನೀರು ಇದೆಯೆ ? ನದಿ ತೀರದಲ್ಲಿ ನಾವು ಇದ್ದೇವೆಯೆ? ಬಯಲು ಬರಡಿನಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೆ ಆಹಾಕಾರ ಪಡುತ್ತಿದ್ದೇವೆ. 150 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಹೇರುತ್ತಿದ್ದೇವೆ. ಇಂಥ ಪರಿಸ್ಥಿತಿಯೊಳಗಡೆ ಈ ತರಹ ಮಾಡಿದರೆ ಇಂಥ ಅವೈಜ್ಞಾನಿಕವದಂಥ ನಿಯಮಗಳನ್ನು ಹಾಕಿ ಕೊಟ್ಟರೆ ಹೇಗೆ ಪುನಃಶ್ಚೇತನವಾಗುತ್ತದೆ ? ದಯಮಾಡಿ ಅರ್ಥ ಮಾಡಿಕೊಂಡು ಇದಕ್ಕೆ ಪರಿಹಾರ ಕಂಡು ಹಿಡಿಯಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಕೊನೆಯದಾಗಿ ಇನ್ನೊಂದು ವಿಚಾರ ಹೇಳಬಯಸುತ್ತೇನೆ.

ಈ ಆಲೂಗಡ್ಡೆ ನಮಗೆ ಜೀವನಾಡಿ. ಹಿಂದೆ ನಾವು ಬಹಳ ಬೆಳೆಯುತ್ತಿದ್ದೆವು, ಇದೊಂದು ರೀತಿ ಮೂರು ತಿಂಗಳ ಜೂಜು ಇದ್ದಂಗೆ, ಮೂರೇ ಮೂರು ತಿಂಗಳೊಳಗೆ 5 ರಿಂದ 20 ಲಕ್ಷದವರೆಗೆ ನೋಡುತ್ತಿದ್ದೆವು. ಈ 5–6 ವರ್ಷಗಳಿಂದ ನಮ್ಮ ಕರ್ಮಕ್ಕೆ ಅಂಗಮಾರಿ ರೋಗದಿಂದ ತೊಂದರೆಯಾಗಿದೆ. ಆಲೂಗಡ್ಡೆ ಬಹಳ ಚೆನ್ನಾಗಿ ಹುಟ್ಟುತ್ತದೆ,

ಒಂದೂವರೆ ತಿಂಗಳಲ್ಲಿ ಬೆಳೆ ಬರುತ್ತದೆ, ಆ ಬೆಳೆ ಹೇಗೆ ಇರುತ್ತದೆ ಅದನ್ನು ನೋಡಬೇಕು. ಇನ್ನೇನು ಒಂದೂವರೆ ತಿಂಗಳಾದ ಮೇಲೆ ತೆನೆ ಹೊರಡಬೇಕು. ಹೂ ಹೊರಡಬೇಕು, ಆ ಟೈಂಗೆ ಅಂಗಮಾರಿ ರೋಗ ಬಂದು ಸಂಪೂರ್ಣವಾಗಿ ಸರ್ವನಾಶವಾಗಿ ಬಿಡುತ್ತದೆ. 5–6 ವರ್ಷಗಳಿಂದ ನಿಜವಾಗಿಯೂ ನಾವು ಯಾವ ರೀತಿಯಾಗಿ ಪಶ್ಚಾತ್ತಾಪ ಪಡುತ್ತಿದ್ದೇವೆ, ಎಷ್ಟು ಜನ ಎಂದರೆ ಇಡೀ ಹೆಂಗಸರು ಮಕ್ಕಳ ಒಡವೆಗಳನ್ನು ಬ್ಯಾಂಕ್‌ನಲ್ಲಿಟ್ಟು ಹಣ ತಂದು ಆ ಬೆಳೆ ಬೆಳೆಯಲಿಕ್ಕೆ ಹೋಗಿ ಇಂದು ಪಶ್ಚಾತ್ತಾಪಕ್ಕೆ ಗುರಿಯಾಗಿದ್ದಾರೆ. ಒಂದು ಆಲೂಗಡ್ಡೆ ಸಂಶೋಧನ ಕೇಂದ್ರವನ್ನು ಓಪನ್ ಮಾಡಿ ಅದಕ್ಕೆ ನಾವು ಜಾಗ ಕೊಡುತ್ತೇವೆ, ಅದನ್ನು ಎಲ್ಲಿಯಾದರೂ ಮಾಡಿ, ಹಾಸನದಲ್ಲಿ ಮಾಡಲಿಕ್ಕೆ ನಿಮಗೆ ಇಷ್ಟ ಇರದಿದ್ದರೆ ಚಿಕ್ಕಬಳ್ಳಾಪುರದಲ್ಲಿ ಮಾಡಿ ನಾವು ಅಲ್ಲಿಗೆ ಬರುತ್ತೇವೆ. ಆಲೂಗಡ್ಡೆ ಸಂಶೋಧನ ಕೇಂದ್ರವನ್ನು ಮಾಡಿ ಆಲೂಗಡ್ಡೆಯ ಬಗ್ಗೆ ಸಂಶೋಧನೆ ಮಾಡಿ ಏತಕ್ಕಾಗಿ ಈ ಬೆಳೆ ರೋಗಕ್ಕೀಡಾಗುತ್ತದೆ ಎಂದು ಕಂಡು ಹಿಡಿಯಿರಿ. ಕಂಡು ಹಿಡಿಯದಿದ್ದರೆ ಈ ವಿಜ್ಞಾನಿಗಳು ಏಕೆ ಇರಬೇಕು ? ತೋಟಗಾರಿಕೆ ವಿಶ್ವವಿದ್ಯಾಲಯ ಏಕೆ ಇರಬೇಕು? ಏನು ಮಾಡುವುದಕ್ಕೆ ಬೇಕು ? ಬೆಳೆಗೆ ಒಂದು ರೋಗ ಬಂದರೆ ಅದನ್ನು ಕಂಡು ಹಿಡಿಯತಕ್ಕಂಥ ಸಾಮರ್ಥ್ಯ 5–6 ವರ್ಷಗಳಿಂದ ಇಲ್ಲವೆಂದರೆ, ನಮಗೆ ಈ ವಿಜ್ಞಾನಿಗಳು ಬೇಕೆ ? ನಮಗೆ ಈ ವಿಶ್ವ ವಿದ್ಯಾಲಯಗಳು ಬೇಕೆ ? ಇಂಥ ತಜ್ಞರು ಬೇಕು. ಏತಕ್ಕಾಗಿ ಎಂದರೆ ನೂರಾರು, ಸಾವಿರರು ಕೋಟಿ ಹಣ ಕೊಟ್ಟು ಇಂದು ಆ ಬೆಳೆಗೆ ಆಗಿರತಕ್ಕಂಥ ರೋಗ ಸತತವಾಗಿ 5–6 ವರ್ಷಗಳಿಂದ ಏಕೆ ಬರುತ್ತಿದೆ, ಏತಕ್ಕಾಗಿ ಈ ರೋಗ ಬರುತ್ತಿದೆ, ಇದನ್ನು ಮಾಡಬೇಡಿ, ಈ ರೀತಿಯಾಗಿ ಮಾಡಿ ಎಂದು ಹೇಳುವಷ್ಟು ಸೌಜನ್ಯತೆ ಇಲ್ಲ. ಕಂಡು ಹಿಡಿಯತಕ್ಕಂಥ ವ್ಯವಸ್ಥೆ ಇಲ್ಲ, ನಿಜವಾಗಿಯೂ ಇಂದಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡರೆ ತೋಟಗಾರಿಕೆಯನ್ನು ಯಾವ ರೀತಿಯಾಗಿ ನಂಬಿ ಈ ರೈತ horticulture ನಲ್ಲಿ ಹಾಳಾಗಿದ್ದಾನೆಂದು ಅರ್ಥ ಮಾಡಿಕೊಳ್ಳಬೇಕು. ಈವೆಲ್ಲಾ commerical crops . ರೈತ ಇನ್ನೊಂದು ಮೂರು ತಿಂಗಳೊಳಗೆ ನಮ್ಮ ಒಡವೆ ಬಿಡಿಸಿಕೊಳ್ಳುತ್ತೇನೆಂದು ಯಾವ ಗ್ಯಾರಂಟಿ ಮೇಲೆ ಇಡುತ್ತಿದ್ದ ? ಯಾವ ಗ್ಯಾರಂಟಿ ಮೇಲೆ ಮಾರ್ವಾಡಿಗಳ ಹತ್ತಿರ ಚಿನ್ನ ಅಡ ಇಡುತ್ತಿದ್ದ ? ಅಷ್ಟೇ ಗ್ಯಾರಂಟಿಯಾಗ ದುಡ್ಡು ಬರುತ್ತಿತ್ತು, ಅಷ್ಟೇ ಗ್ಯಾರಂಟಿಯಾಗಿ

ತಾವು ಅಡ ಇಟ್ಟಂಥ ಚಿನ್ನವನ್ನು ಬಿಡಿಸಿಕೊಳ್ಳುತ್ತಿದ್ದರು ರೈತರ ಜೀವನ ನಡೆಯುತ್ತಿತ್ತು. ಇಂದು ಏನಾಗುತ್ತಿದೆ, ಮಾರ್ವಾಡಿಗಳು ಅವರ ಎಲ್ಲಾ ಒಡವೆಗಳನ್ನು ಅಡವಿಟ್ಟುಕೊಂಡು ಕರಗಿಸಿ ಎಲ್ಲರಿಗೂ ಮಾರುತ್ತಿದ್ದಾರೆ. ಈ ಪರಿಸ್ಥಿತಿ ಬಂದಿರುವುದರಿಂದ ರೈತ ಇಂದು ಸಂಕಷ್ಟಕ್ಕೆ ಸಿಲುಕಿದ್ದಾನೆ. ಈ ಸಂಕಷ್ಟದಿಂದ ರೈತರು ಪಾರು ಮಾಡಬೇಕಾದರೆ ಸರ್ಕಾರ ಒಂದು ದೃಢವಾದ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇವಕ್ಕೆಲ್ಲಾ ಬಹಳ ದೊಡ್ಡ ಬಂಡಬಾಳ ಬೇಕಾಗಿಲ್ಲ. ಇವುಗಳಿಗೆ ನೀವು ಬಂಡವಾಳ ಹಾಕಿ ಸಂಶೋಧನೆ ಮಾಡಿ ಕಂಡು ಹಿಡಿಯಿರಿ, ಆಲೂಗಡ್ಡೆ ಯಿಂದ by-products ಎಷ್ಟೊಂದು ಮಾಡಬಹುದು. ಹೊರ ದೇಶದಲ್ಲಿ ಚಿಪ್ಸ್ ಮಾಡುತ್ತಾರೆ. ಆಲೂಗಡ್ಡೆಯಿಂದ ಎಷ್ಟೊಂದು ತರಹದ ಪದಾರ್ಥಗಳನ್ನು by-products ರೂಪದಲ್ಲಿ ಮಾಡುತ್ತಾರೆ. ಅದಕ್ಕೆಲ್ಲಾ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ತೆರೆದು products ಗಳನ್ನು ಮಾಡಿದರೆ ಅದಕ್ಕೆ ಬೇಡಿಕೆ ಎಷ್ಟು ಆಗುತ್ತದೆ. ಪ್ರತಿಯೊಂದು horticulture ನಲ್ಲಿ ಬೆಳೆಯತಕ್ಕಂಥ ಬೆಳೆ ಒಂದು ಉದ್ಯಮಗಳಾಗಿ ಪರಿವರ್ತನೆಯಾಗಬಹುದು. ಅಂಥ ಮಹತ್ತರವಾದ ಬೆಳೆಗಳು ನಮ್ಮ ಹತ್ತಿರ ಇವೆ. ಆ ಎಲ್ಲಾ ಬೆಳೆಗಳನ್ನು ಉದ್ಯಮಗಳನ್ನಾಗಿ ಮಾಡದೇ ಹೋದರೆ ಈ ದೇಶದಲ್ಲಿ ರೈತನಿಗೆ ಸಂಕಷ್ಟ ತಪ್ಪಿದ್ದಲ್ಲ. ಅದಕ್ಕೆ ನೀವು ಬಂಡವಾಳ ಹೂಡಬೇಕು. ಅದಕ್ಕೆ ನಾವು ಸಾಲ ಮಾಡಬೇಕು, 24 ಸಾವಿರ ಕೋಟಿ ಸಾಲ ಮಾಡಿದ್ದೇವೆ ಅಲ್ಲವೇ? ಏಕೆ ಮಾಡಿದ್ದೇವೆ ? 800 ಕೋಟಿಯನ್ನು horticulture ಗೆ ಇಟ್ಟುಕೊಂಡು ಅದರಲ್ಲಿ central government ನಿಂದ ದುಡ್ಡು 50% ನಷ್ಟು ಬರುತ್ತದೆ.

ಉಳಿದ 50% ಹಣವನ್ನು ಇವರು ಹಾಕಿಕೊಳ್ಳುತ್ತಾರೆ, ಅವರೇ ಕೊಟ್ಟಿರುವ ಮಾಹಿತಿ ಪ್ರಕಾರ 800 ಕೋಟಿ ರೂಪಾಯಿ ಮಾತ್ರ ಇದೆ. 800 ಕೋಟಿ ರೂಪಾಯಿಯಲ್ಲಿ 2013-14ನೇ ಸಾಲಿನಲ್ಲಿ 700 ಕೋಟಿ ರೂಪಾಯಿ ಖರ್ಚಾಗಿದ್ದು, ಇನ್ನೂ 100 ಕೋಟಿ ರೂಪಾಯಿ ಖರ್ಚಾಗಿಲ್ಲ. ಇವತ್ತಿನದಿವಸ ಕೋಟ್ಯಾಂತರ ಜನ ರೈತರು ಬದುಕುವಂಥ ಈ ಒಂದು ವ್ಯವಸ್ಥೆಗೆ ಸುಮಾರು 2000 ಕೋಟಿ ರೂಪಾಯಿ ಕೊಡಬೇಕು. ಕ್ರಿಮಿಶಾನಕ ಔಷಧಿ ಮತ್ತು ಅದು-ಇದು ಕೊಡುತ್ತೇವೆಂದು ಹೇಳುತ್ತಾ ಹೋದರೆ ಈ ದೇಶ ಮತ್ತು ಈ ರಾಜ್ಯದ ರೈತರು ಉದ್ಧಾರ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಹೆಚ್ಚಿನ ಬಂಡವಾಳವನ್ನು ಹೂಡಿ ಆ ಉದ್ಯಮಗಳನ್ನು ಪ್ರಾರಂಭ ಮಾಡಿ,

ತೋಟಗಾರಿಕೆಯಿಂದ ಬರತಕ್ಕಂಥ ಎಲ್ಲಾ ಬೆಳೆಗಳು ಕಚ್ಚಾವಸ್ತುಗಳಾಗಿ ಮಾರ್ಪಾಡು ಆಗಲೆಂಬ ಮಾತನ್ನು ಹೇಳಿ ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಸನ್ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಬಿ.ಆರ್.ಪಾಟೀಲ್‌ರವರೆ, ತಾವು ಮಾತನಾಡಿ. ತಾವು ಬಹಳ ಹೊತ್ತು ಮಾತನಾಡುವುದಕ್ಕೆ ಹೋಗಬೇಡಿ. ನೀವೇ ಸ್ವಲ್ಪ ಸ್ವಯಂ ನಿಯಂತ್ರಣ ಹಾಕಿಕೊಂಡರೆ ಒಳ್ಳೆಯದು.

ಶ್ರೀ ಬಿ.ಆರ್. ಪಾಟೀಲ್ (ಆಳಂದ) : ಮಾನ್ಯ ಉಪಾಧ್ಯಕ್ಷರೆ, ಪ್ರತ್ಯೇಕವಾಗಿ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಸಿಕ್ಕಿದೆ. ಆದ್ದರಿಂದ, ತಾವು ದಯಮಾಡಿ ನಮಗೆ ಈಗಲೇ ಬಂಧನ ಹಾಕಬೇಡಿ.

ಉಪಾಧ್ಯಕ್ಷರು : ಆಯಿತು, ಮಾತನಾಡಿ.

ಶ್ರೀ ಬಿ.ಆರ್. ಪಾಟೀಲ್(ಆಳಂದ) : ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಒಂದು ಹೊಸ ಸಂಪ್ರದಾಯವನ್ನು ಹಾಕಿಕೊಂಡು ಪ್ರತ್ಯೇಕವಾದಂಥ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಮಾನ್ಯ ಉಪಾಧ್ಯಕ್ಷರಿಗೆ ಅಭಿನಂದಿಸುತ್ತೇನೆ. ಇವತ್ತು ಬಹಳ ಪ್ರಮುಖವಾಗಿ ಕೃಷಿ ಇಲಾಖೆ ಬಗ್ಗೆ ಬಹಳ ಸದಸ್ಯರು ತಮ್ಮ ಆಲೋಚನೆ ಮತ್ತು ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ಅವರೆಲ್ಲರೂ ಹೇಳಿರುವಂಥ ವಿಷಯನ್ನು ನಾನು ಮತ್ತೆ ಮತ್ತೆ ಪ್ರಸ್ತಾಪ ಮಾಡದೇ ಬೇರೆ ವಿಷಯಗಳನ್ನು ತಮ್ಮ ಎದುರುಗಡೆ ಮಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ತಮಗೂ ಮತ್ತು ನಮಗೆಲ್ಲರಿಗೂ ಗೊತ್ತಿರವ ಹಾಗೆ ಇಡೀ ಕೃಷಿ ವಲಯ ಒಂದು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದೆ ಹಾಗೆಯೇ, ಬಹಳ ಸಂಕಷ್ಟದಲ್ಲಿದೆ. ಇದನ್ನು ಉಳಿಸಿಕೊಳ್ಳದೇಹೋದಲ್ಲಿ ಈ ದೇಶಕ್ಕೆ ಭವಿಷ್ಯ ಇಲ್ಲದಂಥ ಪರಿಸ್ಥಿತಿ ಉದ್ಭವವಾಗಬಹುದು. ಆ ಒಂದು ಭಯ ಮತ್ತು ಹೆದರಿಕೆ ನಮ್ಮನ್ನೆಲ್ಲ ಇವತ್ತು ಕಾಡುತ್ತಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕೃಷಿ ಬಗ್ಗೆ ಅನೇಕ ಸರ್ಕಾರಗಳು ಕಾರ್ಯಕ್ರಮ ಹಾಕಿಕೊಂಡು ಆ ಬಗ್ಗೆ ಮುತ್ವರ್ಜಿ ವಹಿಸಿ ಬಹಳಷ್ಟು ಪ್ರಗತಿಯನ್ನು ನಾವು ಮಾಡಿದ್ದೇವೆ. ಆದರೆ, ಇನ್ನೂ ಮಾಡಬೇಕಾದಂಥ ಸಾಕಷ್ಟು ಕೆಲಸ ಇದೆ. ಬಹಳ ದಿವಸಗಳಿಂದ

ಒಂದು ಬೇಡಿಕೆ ಬಗ್ಗೆ ಈ ದೇಶದಲ್ಲಿ ಚರ್ಚೆ ನಡೆಯುತ್ತಿದೆ. ಈ ಕೃಷಿಗೆ ಉದ್ದಿಮೆಯ ಒಂದು ದರ್ಜೆ ಕೊಟ್ಟಾಗ ಮಾತ್ರ ಕೃಷಿ ತನ್ನ ಶಕ್ತಿಯನ್ನು ಕಾಪಾಡಿಕೊಂಡು ಹೋಗಿ ಬದುಕುವುದಕ್ಕೆ ಸಾಧ್ಯವಿದೆ ಎನ್ನುವಂಥ ಚರ್ಚೆ ಹಿಂದೆ Constituent Assembly ಯಲ್ಲಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಈ ವಿಷಯನ್ನು ಬಹಳ ಗಂಭೀರವಾಗಿ ಪ್ರಸ್ತಾಪ ಮಾಡಿದ್ದರು. ಕೃಷಿಯನ್ನು ಉದ್ದಿಮೆ ದರ್ಜೆಗೆ ಕೊಟ್ಟು ಇದಕ್ಕೆ ಎಲ್ಲಾ ಸವಲತ್ತು ಮತ್ತು ಸೌಕರ್ಯಗಳನ್ನು ಕೊಟ್ಟರೆ ಮಾತ್ರ ಕೃಷಿ ಈ ದೇಶದಲ್ಲಿ ಬದುಕುವುದಕ್ಕೆ ಸಾಧ್ಯ ಇದೆ ಎಂಬ ದೂರದೃಷ್ಟಿಯನ್ನು ಹೊಂದಿದಂಥ ಡಾ:ಬಾಬಾಸಾಹೇಬ್ ಅಂಬೇಡ್ಕರ್‌ರವರ ಮಾತು ಬಹುಶಃ ಇವತ್ತು ಒಪ್ಪಿಗೆ ಆಗಿಲ್ಲ ಹಾಗೆಯೇ ಆ ಮಾತು ಇವತ್ತೂ ಕೂಡ ಆಗಿಲ್ಲ. ಅವತ್ತು ಕೃಷಿಗೆ ಉದ್ದಿಮೆ ದರ್ಜೆ ಕೊಡದೆ ಇದ್ದ ಕಾರಣಕ್ಕಾಗಿ ಇವತ್ತು ದೇಶಕ್ಕೆ ಸ್ವಾತಂತ್ರ್ಯ ಬಂದು 67 ವರ್ಷ ಆದರೂ ಕೂಡ ಇವತ್ತು ಕೃಷಿಯನ್ನು ನಾವು ಜೀವಂತವಾಗಿ ಇಡಬೇಕಾದರೆ ಬಹಳ ಹರಸಾಹಸ ಮಾಡಬೇಕಾತ್ತದೆ. ಇವತ್ತು ಅನೇಕ ಸವಾಲುಗಳನ್ನು ಎದುರಿಸಿದ್ದೇವೆ. ಒಂದು ಸಂದರ್ಭದಲ್ಲಿ ಆಹಾರದ ಸಮಸ್ಯೆಯನ್ನು ಎದುರಿಸಿದ್ದೇವೆ. ಮತ್ತೊಂದು ಸಲ ಬೇರೆ ರಾಷ್ಟ್ರಗಳಿಂದ ಆಮದು ಮಾಡಿಕೊಂಡು ಜನರಿಗೆ ಆಹಾರವನ್ನು ಕೊಡುವಂಥ ಕೆಲಸವನ್ನು ಮಾಡಿದ್ದೇವೆ. ಆದರೆ, ಇವತ್ತು ಪರಿಸ್ಥಿತಿ ಸಾಕಷ್ಟು ಸುಧಾರಣೆಯಾಗಿದೆ. ನಮ್ಮ ದೇಶದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಇವತ್ತಿನ ದಿವಸ ಅಂಕಿ–ಸಂಖ್ಯೆಗಳನ್ನು ನೋಡಿದರೆ ನಮಗೆ ಆಹಾರದ ಕೊರತೆ ಆಗಲೇ ಬಾರದು, ಅಂದರೆ, ಯಾವ ಮಟ್ಟಕ್ಕೂ ಸಹ ಆಹಾರದ ಕೊರತೆ ಆಗಬಾರದು. ಎಣ್ಣೆಕಾಳು ಮತ್ತು ಬೇಳೆಕಾಳು ಪದಾರ್ಥಗಳನ್ನು ಬಿಟ್ಟರೆ ಉಳಿದ ಎಲ್ಲಾ ವಸ್ತುಗಳು ನಮಗೆ ಬೇಕಾದಷ್ಟು ಬಹಳ ದೊಡ್ಡ ಪ್ರಮಾಣದಲ್ಲಿ ನಮ್ಮಲ್ಲಿ ಉತ್ಪಾದನೆ ಆಗುತ್ತಿದೆ. ಆದರೆ, ವಿತರಣೆ ವ್ಯವಸ್ಥೆಯಲ್ಲಿ ಬಹಳ ದೊಡ್ಡ ಸಮಸ್ಯೆ ಇದೆ. ಅದಕ್ಕಾಗಿ ಇವತ್ತಿನದಿವಸ ಈ ದೇಶದಲ್ಲಿ ಬಹಳಷ್ಟು ಜನರಿಗೆ ಆಹಾರ ಸಿಗುತ್ತಿಲ್ಲ. ಇವತ್ತು ಸಾಕಷ್ಟು ಜನರು ಹರೆಹೊಟ್ಟೆಯಿಂದ ಬದುಕುತ್ತಿದ್ದಾರೆ. ಈ ವಿತರಣೆ ವ್ಯವಸ್ಥೆಯನ್ನು ಎಲ್ಲಿಯವರೆಗೆ ಭದ್ರ, ಗಟ್ಟಿ ಮಾಡಿಕೊಳ್ಳದೆ ಈ ಕೃಷಿಯನ್ನು ನಾವು ಮುಂದುವರಿಸುತ್ತಾ ಹೋದರೆ ಬಹುಶ: ಇದು ಕೆಲವರಿಗೆ ಮಾತ್ರ ಅಂದರೆ ದಲ್ಲಾಳಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಕೆಲವರಿಗೆ ಆಹಾರ ಸಿಗುತ್ತಿಲ್ಲವೆಂದು ಹೇಳಿದರು. ಆದರೆ, ಆಹಾರ ಸಿಗುತ್ತಿಲ್ಲವೆಂದು ಅಲ್ಲ Food and Agriculture Ministry, Government of India ರವರ ಪ್ರಕಾರ ನಮ್ಮ ದೇಶಕ್ಕೆ ಅಗತ್ಯ ಇರುವುದಕ್ಕಿಂತ ಹೆಚ್ಚು ಆಹಾರವನ್ನು ನಾವು ಉತ್ಪಾದನೆ ಮಾಡಿದ್ದೇವೆ. ಆದರೆ, ಮತ್ತೊಂದು ಡಿಪಾರ್ಟ್‌ಮೆಂಟ್‌ನವರು ಏನು ಹೇಳುತ್ತಾರೆಂದರೆ, below poverty line ಇಷ್ಟು ಜನ ಇದ್ದಾರೆ, ತಿನ್ನುವುದಕ್ಕೆ ಇವರಿಗೆ ಅನ್ನ ಇಲ್ಲವೆಂದು ಹೇಳುತ್ತಾರೆ. It is not that there is no food here. ಇವತ್ತಿನ ದಿವಸ ತಿನ್ನಬೇಕೆಂದವರಿಗೆ ಅನ್ನ ಇಲ್ಲ ಅಷ್ಟೆ ಹಾಗೆಯೇ ದುಡಿದು ತಿನ್ನುವವರಿಗೂ ಅನ್ನ ಇಲ್ಲ. ಅಜೀರ್ಣಮಾಡಿಕೊಂಡು ಬಿಸಾಕುವವರಿಗೆ ಎಷ್ಟು ಬೇಕಾದರೂ ಅನ್ನ ಇದೆ.

ಶ್ರೀ. ಬಿ.ಆರ್. ಪಾಟೀಲ್ : ನಮ್ಮ ದೇಶದಲ್ಲಿ ಇದು ಬಹಳ ದೊಡ್ಡ ಸಮಸ್ಯೆ ಇದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : Two ministries from the same *Union* Ministry, ಒಂದು ಮಿನಿಸ್ಟ್ರಿಯವರು ಏನು ಹೇಳುತ್ತಾರೆಂದರೆ, surplus production ಇದೆ ಎಂದು ಹೇಳುತ್ತಾರೆ. ಇನ್ನೊಂದು ಮಿನಿಸ್ಟ್ರಿಯವರು ಏನು ಹೇಳುತ್ತಾರೆಂದರೆ. poverty-stricken people ಇದ್ದಾರೆ. ಇಷ್ಟು ಜನ ಕೂಡ below poverty line ಇದ್ದಾರೆಂದು ಹೇಳುತ್ತಾರೆ, ಅವರಿಗೂ ಇವರಿಗೂ co-ordination ಇಲ್ಲ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಗೊಂದಲವಾಗಿದೆ. ಮಾನ್ಯ ರಮೇಶ್ ಕುಮಾರ್ ಹೇಳಿದ ಹಾಗೆ ಇವತ್ತಿನ ದಿವಸ ನಮ್ಮ ದೇಶದಲ್ಲಿ ಉತ್ಪಾದನೆ ಮಾಡುವ ಆಹಾರವನ್ನು ಬೇರೆ ದೇಶಗಳಿಗೆ ರಫ್ತು ಮಾಡುವಂಥ ಸಾಮರ್ಥ್ಯ ಕೂಡ ನಾವು ಹೊಂದಿದ್ದೇವೆ. ಅಂದರೆ, ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿದ್ದೇವೆ. ಆದರೆ, ಶೇಖರಣೆ ಮತ್ತು ವಿತರಣೆ ವ್ಯವಸ್ಥೆಯಲ್ಲಿ ನಮಗೆ ಹಿಡಿತ ಬಂದಿಲ್ಲ. ಇವತ್ತಿನ ದಿವಸ ಇದೇ ದೊಡ್ಡ ಸಮಸ್ಯೆ ಆಗಿದೆ. ಈಕಾರಣಕ್ಕಾಗಿ ದಲ್ಲಾಳಿಗಳು ಹುಟ್ಟುಕೊಂಡು ತಮಗೆ ಬೇಕಾದ ರೀತಿಯಲ್ಲಿ ಮಾರಾಟ ದರವನ್ನು ಏರಿಸುತ್ತಾರೆ ತಮಗೆ ಬೇಡವೆಂದಾಗ ದರವನ್ನು ಇಳಿಸುತ್ತಾರೆ.

ಇವರು ಬಡವರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ ಹಾಗೆಯೇ ಇಡೀ ವ್ಯವಸ್ಥೆಯನ್ನು ನಿಯಂತ್ರಣದಲ್ಲಿಟ್ಟುಕೊಂಡು ಅವರು ಆಟವಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಕಡಿವಾಣ ಹಾಕದೇ ಇದ್ದಲ್ಲಿ ಬಹುಶಃ ಕೃಷಿ ವಲಯ ಇವತ್ತು ಉಳಿಯುವುದಕ್ಕೆ ಸಾಧ್ಯವಿಲ್ಲದಂಥ ಒಂದು ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಅಂಕಿ-ಸಂಖ್ಯೆ ಆಧಾರದ ಪ್ರಕಾರ ನಮ್ಮ ದೇಶದಲ್ಲಿ ಒಂದು ವರ್ಷಕ್ಕೆ ಸುಮಾರು 5 ರಿಂದ 6 ಕೋಟಿ ಟನ್ ಆಹಾರ ಇವತ್ತು ಕೂಡ ಕೊಳೆಯುತ್ತಿದೆ. ಅದೇ ರೀತಿಯಲ್ಲಿ ಹಣ್ಣು ಮತ್ತು ತರಕಾರಿ ಕೂಡ ಒಂದು ವರ್ಷದಲ್ಲಿ ಸುಮಾರು 2.5 ರಿಂದ 5 ಕೋಟಿ ಟನ್ ಕೊಳೆಯುತ್ತಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧಕ್ಷರೆ, ಇವತ್ತಿನ ದಿವಸ ನಾವು ಒಂದು ವಿಷಯವನ್ನು ಯೋಚನೆ ಮಾಡಬೇಕು. ನಮ್ಮ ಊರಿನಲ್ಲಿ ಒಬ್ಬ ಕೂಲಿ ಮಾಡುವವನ ಮಗ ಬಾದಾಮಿ ಹಣ್ಣು ಯಾವ ರೀತಿಯಲ್ಲಿದೆ ಎಂದು ನೋಡಿಲ್ಲ. ಇದನ್ನು ತಿನ್ನುವುದು ಆನಂತರ ಇರಲಿ. ಬಾದಮಿ ಹಣ್ಣು ಯಾರು ತಿನ್ನುತ್ತಾರೆಯೋ ಅವರಿಗೆ ಹೋಗುತ್ತಿದೆ. ಯಾರು ತಿನ್ನುವುದಿಲ್ಲವೋ ಅವರು ನೋಡಿಯೇ ಇಲ್ಲ. ನಮ್ಮ ಊರಿನಲ್ಲಿರುವ 90%ನಷ್ಟು ಜನ ಈ ರೀತಿಯ ಹಣ್ಣನ್ನು ತಿಂದಿಲ್ಲ. ಬೆಳೆದಿರಬಹುದು ಅಷ್ಟೆ. ಇವತ್ತಿನದಿವಸ ಬಾದಾಮಿ ಹಣ್ಣನ್ನು ನೋಡದೆ ಇರುವ ಜನರು ಇದ್ದಾರೆಂದರೆ ಅರ್ಥ ಮಾಡಿಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಈಗ ತಾನೇ ಮಾನ್ಯ ಶಿವಲಿಂಗೇಗೌಡರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಇವತ್ತು ಬೆಳೆದಂಥ Perishable goods ಗೆ cold storage ಇಲ್ಲ. ಆದ್ದರಿಂದ, ಎಷ್ಟೇ ಬೆಲೆ ಬಂದರೂ ಕೂಡ ನೀವು ಅನಿವಾರ್ಯವಾಗಿ ಮಾರಾಟ ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ಬೀದಿಗೆ ಬಿಸಾಕಿ ಬರಬೇಕಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಟೊಮೋಟೋವನ್ನು ರಸ್ತೆಯ ಮೇಲೆ ಹಾಕಿ ಹೋಗುತ್ತಿರುವುದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇದು ಸಾಮಾನ್ಯವಾಗಿ ಕಾಯಿಪಲ್ಯ ಮತ್ತು ಹಣ್ಣು ಹಂಪಲು ಬೆಳೆಯುವಂತ ರೈತರ ಸಮಸ್ಯೆ ಯಾವತ್ತೂ ಕೂಡ ಇದೆ. ಮಾನ್ಯ ಶಿವಲಿಂಗೇಗೌಡರು ಹೇಳಿದ ಹಾಗೆ ಇವತ್ತು cold storage ಗಳು ಇಲ್ಲ. ಖಾಸಗಿಯವರು ಕೆಲವು ಕಡೆ ಮಾಡಿದ್ದಾರೆ.

ಆದರೆ, ಎಲ್ಲರೂ ಅದರ ಅನುಕೂಲ ಪಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಈ ಸಿಸ್ಟಮ್ ಅನ್ನು ಬಿಲ್ಡ್ ಅಪ್ ಮಾಡದೇ ಇದ್ದಲ್ಲಿ ಇವತ್ತು ವರ್ಷಕ್ಕೆ 2 ರಿಂದ 5 ಕೋಟಿ ಟನ್ ಹಣ್ಣು ಮತ್ತು ತರಕಾರಿ ಕೊಳೆತು ಹೋಗುತ್ತಿದೆ. ಆದ್ದರಿಂದ, ಇದನ್ನು ಬೇರೆ ಜನರಿಗೆ ವಿತರಣೆ ವ್ಯವಸ್ಥೆ ಮಾಡಿ ಕೊಡುವುದಕ್ಕೆ ಸಾಧ್ಯವಿದೆ. ಆದರೆ, ಈ ಸಂದರ್ಭದಲ್ಲಿ ಈರುಳ್ಳಿ ಬೆಲೆ ಮಾರುಕಟ್ಟೆಯಲ್ಲಿ ವಿಪರೀತ ಏರಿದೆ. ಆದರೆ, ಈ ವರ್ಷ 2 ಕೋಟಿ 2 ಟನ್ ಉತ್ಪಾದನೆ ಆಗಿದೆ. ನಮಗೆ ಬೇಕಾಗಿರುವುದು ಕೇವಲ 1.5 ಕೋಟಿ ಟನ್ ಮಾತ್ರ. ಆದರೆ, ಇಷ್ಟೊಂದು ದೊಡ್ಡ ಉತ್ಪಾದನೆಯಲ್ಲಿ ಈರುಳ್ಳಿ ಬೆಳೆದ ಮೇಲೂ ಕೂಡ ಮಾರುಕಟ್ಟೆಯಲ್ಲಿ ಏಕೆ ಇದರ ಕೊರತೆ ಆಗುತ್ತದೆ? ಮತ್ತೆ ಇಲ್ಲಿಯೂ ಕೂಡ ದಲ್ಲಾಳಿಗಳ ಸಮಸ್ಯೆಯಿಂದ ಈ ರೀತಿ ಆಗುತ್ತಿದೆ. ಈ ವಿತರಣಾ ಮತ್ತು ಶೇಖರಣೆ ವ್ಯವಸ್ಥೆಯನ್ನು ನಾವು ಎಲ್ಲಿಯವರೆಗೆ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ರೈತರಿಗೆ ಅಂಥ ಅನುಕೂಲವಾಗುವುದಿಲ್ಲ. ಆದ್ದರಿಂದ, ಆ ನಿಟ್ಟಿನಲ್ಲಿ ನಾವು ಏನಾದರೊಂದು ದಿಟ್ಟವಾದಂಥ ಹೆಜ್ಜೆಯನ್ನು ಇಡಬೇಕು. Production and function of distribution ಅನ್ನು ಒಂದು ರೀತಿಯಲ್ಲಿ ಸಮತೋಲನ ಕಾಯ್ದಿಕೊಂಡು ಹೋದರೆ ಬಹುಶಃ ನಮ್ಮ ರೈತರಿಗೆ, ಅನುಕೂಲವಾಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಬಹಳ ಸಲ ರೈತರು ಏಕೆ ಸಂಕಷ್ಟಕ್ಕೆ ಒಳಗಾಗುತ್ತಾರೆಂದರೆ, ಈ ನೈಸರ್ಗಿಕ ವಿಕೋಪದಿಂದ ಮತ್ತು ಮಳೆ ಕಡಿಮೆ ಆಗಿದೆ ಎನ್ನುವುದು ಸಾಮಾನ್ಯ ಮಾತು ಅದನ್ನು ನಾವು ಒಪ್ಪಿಕೊಳ್ಳೋಣ. ಆದರೆ ಸುಮಾರು 100 ವರ್ಷಗಳ ಹಿಂದಿನ records ಅನ್ನು ತೆಗೆದು ನೋಡಿದರೆ ಮಳೆ ಬರುವುದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕೊರತೆ ಆಗುತ್ತಿಲ್ಲ. ಆದರೆ ಮಳೆ ಬರುವ Season ಹೆಚ್ಚು ಕಡಿಮೆ ಆಗುತ್ತಿದೆ. ಮಳೆ ಬರುವ ಸಂದರ್ಭದಲ್ಲಿ ಬರುವುದಿಲ್ಲ. ಕಳೆದ ವರ್ಷ ಮೊನ್ನೆ ಬೇಸಿಗೆಯಲ್ಲಿ ಇಡೀ ಗುಲ್ಬರ್ಗಾ, ಬೀದರ್ ಜಿಲ್ಲೆಯಲ್ಲಿ ದಿನನಿತ್ಯ ಮಳೆ ಬಂತು, ಅದರಿಂದ ರೈತರಿಗೆ ಅನುಕೂಲವಾಗಲಿಲ್ಲ. ದೊಡ್ಡ ಹಾನಿ ಆಯಿತು, ಈ ತರಹ ಮಳೆ ಬರುತ್ತದೆ. ಆದರೆ ಮಳೆ ಯಾವ ಪ್ರಮಾಣದಲ್ಲಿ ಯಾವ season ನಲ್ಲಿ ಎಷ್ಟು ಬೀಳಬೇಕು ಅಷ್ಟು ಬೀಳುತ್ತಿಲ್ಲ. ಇವತ್ತು water management ಬಗ್ಗೆ ಮಾನ್ಯ ಕೃಷಿ ಸಚಿವರು, ಜಲಾನಯನದ ಬಗ್ಗೆ ತಮ್ಮ ಬೇಡಿಕೆಯಲ್ಲಿ ಅವರೂ ಕೂಡ ಹೇಳಿದ್ದಾರೆ,

ಇವತ್ತು ಏನು ನೈಸರ್ಗಿಕ ವಿಪತ್ತು ಮತ್ತು ಅಪತ್ತು ಬರುತ್ತದೆ ಇದಕ್ಕೆ ಒಂದು Insurance system ಅನ್ನು ಹಿಂದೆ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳು ಇದ್ದಾಗ ತಂದರು. ಇದು ಬಹಳ ಒಳ್ಳೆಯ ಒಂದು ಕಾರ್ಯಕ್ರಮ, ಆದರೆ ಇವತ್ತಿನವರೆಗೆ ಕೂಡ ಒಂದು ವೈಜ್ಞಾನಿಕ ಬದ್ಧತೆಯನ್ನು ಸರ್ಕಾರದಿಂದ ಅಳವಡಿಸಿಕೊಳ್ಳುವುದಕ್ಕಾಗುತ್ತಿಲ್ಲ. ತಾಲ್ಲೂಕಿಗೊಂದು cluster ಎಂದು ಮಾಡಿದರು, revenue circle ಗೆ ಒಂದು cluster ಮಾಡಿದರು. ಗ್ರಾಮ ಪಂಚಾಯಿತಿಗೊಂದು cluster ಮಾಡಿದರು. ಮಳೆ ಮಾಪನ ಕೇಂದ್ರಗಳು ಇಲ್ಲ. Crop cutting experiment ಆಗುವುದಿಲ್ಲ. ಯಾರೂ ಅಧಿಕಾರಿಗಳು ರೈತರು ಜಮೀನಿಗೆ ಹೋಗುವುದಿಲ್ಲ. ಕಂದಾಯ ಮತ್ತು ಕೃಷಿ ಅಧಿಕಾರಿಗಳು joint survey ಮಾಡಿಸಿ inspection ಮಾಡಿಸಬೇಕು. ಅಲ್ಲಿಗೆ ಯಾರೂ ಹೋಗುವುದಿಲ್ಲ. ಈ ಕಾರಣಕ್ಕಾಗಿ ಇವತ್ತು ಏನು crop insurance ಸಿಗಬೇಕಾಗಿತ್ತು ಅದು ರೈತರಿಗೆ ಸಿಗುತ್ತಿಲ್ಲ. ನಮ್ಮ ಎಲ್ಲಾ ಶಾಸಕರಿಗೆ ಅನುಭವ ಇದೆ. crop insurance policy ಬಂದ ಮೇಲೆ ರೈತರು ತಮ್ಮ ಕೈಯಿಂದ premium ಹಣ ಕಟ್ಟುವುದಕ್ಕೆ ಬ್ಯಾಂಕ್ ಮುಂದೆ ಕ್ಯೂ ನಿಂತಿದ್ದರು, ಮುಂದೆ premium ಹಣ ಕಟ್ಟಿದ ಮೇಲೆ ಇವರಿಗೆ ಸರ್ಕಾರದಿಂದ ಏನು insurance ಸಿಗಲಿಲ್ಲ. ಆ ಮೇಲೆ ರೈತರು ಆಸಕ್ತಿಯನ್ನು ಕಳೆದುಕೊಂಡು ಬಿಟ್ಟರು. ಈಗ ಬ್ಯಾಂಕಿನಿಂದ ಯಾರು ಸಾಲ ತೆಗೆದುಕೊಳ್ಳುತ್ತಾರೆ 5 ರಷ್ಟು ಮಾತ್ರ premium cut ಮಾಡಿಕೊಳ್ಳುತ್ತಾರೆ. ಮೊದಲು 3 ರಷ್ಟು ಇತ್ತು, ಈಗ 5 ರಷ್ಟು ಜಾಸ್ತಿ ಮಾಡಿದ್ದಾರೆ. ಈ Insurance system ಅನ್ನು ಗಟ್ಟಿ ಮಾಡಬೇಕು ಇಲ್ಲದಿದ್ದರೆ ನೀವು ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಮತ್ತು ಮೊನ್ನೆ ಆಲ್ಲಿಕಲ್ಲು ಮಳೆ ಬಿದ್ದು ದೊಡ್ಡ ಪ್ರಮಾಣದಲ್ಲಿ ಬೆಳೆ ಹಾಳಾಯಿತು. ಮಹಾರಾಷ್ಟ್ರದವರು ತಕ್ಷಣ ಸರ್ವೆ ಮಾಡಿಸಿ ಈಗಾಗಲೇ ಪರಿಹಾರವನ್ನು ಕೊಟ್ಟು ಬಿಟ್ಟರು. ಆದರೆ ನಮ್ಮ ಸರ್ಕಾರದವರು ಇವತ್ತಿನವರೆಗೂ ಪರಿಹಾರವನ್ನು ಕೊಡಲಿಲ್ಲ. ಈಗ ಕೊಡುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ. ಇದು ಬಹಳ ತಡವಾಯಿತು. ಅವನು ಮುಂಗಾರು ಬಿತ್ತನೆಯ ಬೀಜಕ್ಕೆ ಖರ್ಚು ಮಾಡಿಕೊಳ್ಳುವುದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದನು. ಎಷ್ಟೇ ದುಡ್ಡು ಬರಲಿ, ಬೀಜ ಮತ್ತು ಗೊಬ್ಬರಕ್ಕೆ ಇನ್ನೊಂದಕ್ಕೆ ಅವನು ಖರ್ಚು ಮಾಡಿಕೊಂಡು ಮುಂಗಾರು ಬಿತ್ತನೆಗೆ ಸಿದ್ಧತೆಯನ್ನು

ಮಾಡಿಕೊಳ್ಳುತ್ತಿದ್ದನು. ಆದರೆ ಇಲ್ಲಿಯವರೆಗೆ crop ಗೆ compensation ನೀವು ಕೊಡಲಿಲ್ಲ. ಇದು ವಿಳಂಬವಾದ ಕಾರಣಕ್ಕಾಗಿ ಒಂದು ವರ್ಷ suffer ಆಗಬೇಕು. ಈ ತರಹ ನೀವು ಸಮಸ್ಯೆಗಳನ್ನು ಎಲ್ಲಿಯವರೆಗೆ ಬಗೆಹರಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆಗಳು ಜೀವಂತವಾಗಿ ಹಾಗೆ ಉಳಿಯುತ್ತವೆ. ಯಾವ ರೈತರಿಗೆ ಕೂಡ ಅನುಕೂಲವಾಗುವುದಿಲ್ಲ. ಇವತ್ತು allocation ಗೆ ಮಾನ್ಯ ಸಚಿವರು ಮುಂಗಡ ಪತ್ರಕ್ಕೆ ಬೇಡಿಕೆ ಇಟ್ಟು ಒಪ್ಪಿಗೆಯನ್ನು ಕೇಳಿರುತ್ತಾರೆ. ಕರ್ನಾಟಕ ಸರ್ಕಾರದ ಇಡೀ ಬಜೆಟ್‌ನಲ್ಲಿ ನಾವು ಇವರಿಗೆ ಎಷ್ಟು ಕೊಡುತ್ತಿದ್ದೇವೆ. ಬರೀ ಶೇಕಡಾ 5 ರಷ್ಟು, ಬಹುಶಃ ಜಲಾನಯನ ಸೇರಿ 7 ರಷ್ಟಾಗಬಹುದು, ಅದೊಂದು 2% ಸೇರಿ. ಆದರೆ ಆಶ್ಚರ್ಯವೆಂದರೆ, ಎಷ್ಟು ದುಡ್ಡಿಗೆ 2012-13ನೇ ಸಾಲಿನಲ್ಲಿ ಒಪ್ಪಿಗೆಯನ್ನು ಪಡೆದಿದ್ದಾರೆ ಇವರಿಗೆ ಅಷ್ಟೊಂದು ದುಡ್ಡನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ. ಇವತ್ತು 2013-14ನೇ ಸಾಲಿಗೆ ಏನು ಬೇಡಿಕೆ ಇಟ್ಟಿದ್ದಾರೆ ಇದು ಕಡಿಮೆ ಆಗುತ್ತಾ ಬಂದಿದೆ. ಕೃಷಿ ವಲಯಕ್ಕೆ ದಿನನಿತ್ಯ ಬೇಡಿಕೆ ಮತ್ತು ಪ್ರಗತಿ ಜಾಸ್ತಿ ಬರಬೇಕು ಮತ್ತು ಖರ್ಚು ಕೂಡ ಜಾಸ್ತಿ ಆಗಬೇಕು. ಆದರೆ ಇವತ್ತು ಈ ಅಂಕಿ ಸಂಖ್ಯೆಯನ್ನು ನೋಡಿದರೆ ಈ ದುಡ್ಡನ್ನು ಖರ್ಚು ಮಾಡುವುದು ಮತ್ತು ಅನುದಾನ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಾ ಬಂದಿದೆ. ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯದ ಒಟ್ಟು 52,790 ಇದು 2012-13ನೇ ಸಾಲಿಗೆ. ಖರ್ಚಾಗಿರುವುದು ಕೇವಲ 31,312. ಅದೇ ತರಹ 2013-14ಕ್ಕೆ 63,352 ಆದರೆ ಖರ್ಚಾಗಿರುವುದು 47,634. 2014-15ನೇ ಸಾಲಿನ ಅನುದಾನದಲ್ಲಿ 40,200 ಮಾತ್ರ. ಅಂದರೆ ಎಷ್ಟು ಅಲೋಕೇಶನ್ ನಮಗೆ ಬಂದಿದೆ ಅಷ್ಟನ್ನು ನಮಗೆ ಖರ್ಚು ಮಾಡುವುದಕ್ಕಾಗುತ್ತಿಲ್ಲ. ಇದು ಏನು ವಿಪರ್ಯಾಸ. ಒಂದು ಕಡೆ ನಮಗೆ ದುಡ್ಡಿಲ್ಲವೆಂದು ಕೊರಗುತ್ತೇವೆ. ಇನ್ನೊಂದು ಕಡೆ ಕೊಟ್ಟಿರುವ ದುಡ್ಡನ್ನು ಖರ್ಚು ಮಾಡಿಕೊಳ್ಳುವುದಕ್ಕೆ ಆಗದೆ ಇದ್ದರೆ ಕೃಷಿ ಇಲಾಖೆಯನ್ನು ಹೇಗೆ ನಿಭಾಯಿಸುತ್ತಾರೆ. ಹೇಗೆ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಇವರು ಮುಂದೆ ಬರುತ್ತಾರೆ. ಹೇಗೆ ಕೃಷಿಯನ್ನು ಜೀವಂತವಾಗಿ ಇಡುವುದಕ್ಕೆ ಮತ್ತು ಅನುಕೂಲ ಮಾಡುವುದಕ್ಕೆ ಸಾಧ್ಯತೆ ಇದೆ. ಇದೆಲ್ಲವನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಇಷ್ಟೆಲ್ಲಾ ಆರ್ಥಿಕ ಸಂಕಷ್ಟದಲ್ಲಿ ಎಲ್ಲಾ ಸರ್ಕಾರಗಳೂ ಇದ್ದಾಗಲೂ ಕೂಡ ಕೇವಲ

ಶೇಕಡಾ 5 ರಷ್ಟು ಅನುದಾನವನ್ನು ಕೃಷಿಗೆ ಕೊಟ್ಟು, ಕೊಟ್ಟಂಥ ದುಡ್ಡಿನಲ್ಲಿ ಖರ್ಚು ಮಾಡುವುದಕ್ಕೆ ಆಗದೆ ಹೋದರೆ ಹೇಗೆ ? ಈ ಕೃಷಿ ಇಲಾಖೆ ಬಹಳ ದೊಡ್ಡ ಇಲಾಖೆ. ಎಲ್ಲಾ ಇಲಾಖೆಗಳಿಗೂ ಕೂಡ ಸಂಬಂಧಪಟ್ಟಂಥ ಇಲಾಖೆ. ಯಾವುದೇ ಇಲಾಖೆಗೆ ಇದು ಸಂಬಂಧವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಬೆಳಗ್ಗೆ ಕೆಲವು ಜನ ಸದಸ್ಯರುಗಳು ಹೇಳಿದರು. ಎಲ್ಲಾ ಇಲಾಖೆಗಳಿಗೂ ಒಂದಲ್ಲ ಒಂದು ಸಂಬಂಧವನ್ನು ಇಟ್ಟುಕೊಂಡಂಥ ಇಲಾಖೆ. ಇವತ್ತು ಕೇವಲ ಶೇಕಡಾ 5 ರಷ್ಟು ಅನುದಾನ ಕೊಟ್ಟಂಥ ಅನುದಾನವನ್ನು ಇವತ್ತು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಬರುಬರುತ್ತಾ ಆ ಅನುದಾನದ ಮೊತ್ತ ಕಡಿಮೆ ಆಗುತ್ತದೆ. ಇದು ಬಹಳ ದುಃಖದ ಸಂಗತಿ. ಕಡಿಮೆ ಆಗಬಾರದು, ಇದು ಬರಬರುತ್ತಾ ಅನುದಾನ ಜಾಸ್ತಿ ಆಗಬೇಕು ಮತ್ತು ಪ್ರಗತಿ ಕೂಡ ಜಾಸ್ತಿ ಅಗಬೇಕು. ಆದರೆ ವಾಸ್ತವಿಕತೆ ನೋಡಿದರೆ ಇದು ಆಗುತ್ತಿಲ್ಲ. ಇವತ್ತು ನಾವು ವೈಜ್ಞಾನಿಕವಾದಂಥ ಕೃಷಿಯನ್ನು ಅಳವಡಿಸಿಕೊಂಡು ಹೋಗಬೇಕಾಗಿದೆ. ಜಗತ್ತು ಬಹಳ ಮುಂದುವರೆದಿದೆ. ಸರ್ಕಾರದವರು ಕೂಡ ಇಲ್ಲಿಯ ರೈತರನ್ನು ಚೈನಾ ದೇಶಕ್ಕೆ ಮತ್ತು ಇಸ್ರೇಲ್ ದೇಶಕ್ಕೆ ಕಳುಹಿಸುವಂಥ ಕೆಲಸವನ್ನು ಮಾಡಿದರು ಅದು ಒಳ್ಳೆಯ ಕೆಲಸ. ಇವತ್ತು ಕೂಡ ಆ ರೀತಿ ಕಳುಹಿಸುವಂಥದ್ದು ಆಗಬೇಕು. ಆದರೆ ನಿಜವಾದಂಥ ರೈತರನ್ನು ಕಳುಹಿಸಬೇಕು. ಬರೀ ರಾಜಕೀಯ ಪುಡಾರಿಗಳನ್ನು ಕೃಷಿಯನ್ನು ಮಾಡದಿರುವವರನ್ನು ಕಳುಹಿಸಿದರೆ ಇದು ಉಪಯೋಗವಾಗುವುದಿಲ್ಲ. ನಿಜವಾದಂಥ ರೈತರನ್ನು ಆ ದೇಶಕ್ಕೆ ಕಳುಹಿಸಿದರೆ ಒಳ್ಳೆಯದಾಗುತ್ತದೆ. ಒಂದು ಸಲ ನಾನು ವಿಧಾನಸಭೆಯಲ್ಲಿ ಪ್ರಶ್ನೆಯನ್ನು ಕೇಳಿದ್ದೆ, ಈ ಮಣ್ಣು ಪರೀಕ್ಷೆ ಕೇಂದ್ರಗಳು ಎಷ್ಟು ಇವೆ ? ಇಲ್ಲಿಯವರೆಗೆ ಎಷ್ಟು ರೈತರ ಹೊಲದ ಮಣ್ಣನ್ನು ಪರೀಕ್ಷೆ ಮಾಡಿದ್ದೀರೆಂದು ಕೇಳಿದರೆ ಬಹಳ ಅಜಗಜಾಂತರ ವ್ಯತ್ಯಾಸವಿದೆ. ಅಂದರೆ ಇಲ್ಲಿಯವರೆಗೆ ನಮ್ಮ ಮಣ್ಣು ಪರೀಕ್ಷೆ ಪರಿಪೂರ್ಣವಾಗಿ ಆಗಿಯೇ ಇಲ್ಲ. ಅಲ್ಲಿ ಯಾವ್ಯಾವ ಮಣ್ಣಿನ ಅಂಶಗಳು ಏನೇನು ಇವೆ, ಯಾವ ಗೊಬ್ಬರವನ್ನು ಅವುಗಳಿಗೆ ಬೆರೆಸಬೇಕು ಎನ್ನುವಂಥ ಸ್ಪಷ್ಟತೆ ಇವತ್ತಿಗೂ ಕೂಡ ನಮಗೆ ಅದರಲ್ಲಿ ಸಿಕ್ಕಿಲ್ಲ. ಹಾಗಾಗಿ ಇವತ್ತು ಬಹಳಷ್ಟು ಸಮಸ್ಯೆಗಳು ವಿಜ್ಞಾನ ಕ್ಷೇತ್ರದಲ್ಲಿ ಉಳಿದಿದ್ದರೂ ಸಹಿತ ನಮಗೆ ಬಗೆಹರಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಮಾನ್ಯ ಶಿವಲಿಂಗೇಗೌಡರು ಹೇಳಿದ್ದನ್ನು ನಾನು ಒಪುತ್ತೇನೆ. ಹಿಂದೆ ಇವರ ಸಿಬ್ಬಂದಿ

ಬಹಳ ಕಡಿಮೆ ಇತ್ತು. ಇವತ್ತು ಸಿಬ್ಬಂದಿ ತಕ್ಕಮಟ್ಟಿಗೆ ಜಾಸ್ತಿ ಆಗಿದೆ ಇಲ್ಲವೆಂದು ಹೇಳುವುದಿಲ್ಲ. ಆದರೆ ಯಾವ ಒಬ್ಬ ಕೃಷಿ ಇಲಾಖೆ ಸಿಬ್ಬಂದಿ ಕೂಡ ಯಾವ ಹಳ್ಳಿಗೆ ಬಂದು ರೈತರಿಗೆ ಸಂಪರ್ಕ ಮಾಡಿ ಮಾರ್ಗದರ್ಶನ ಮಾಡಿ ಅವರಿಗೆ ಸರಿಯಾದ4 ಮಾಹಿತಿಯನ್ನು ಕೊಡುವಂಥ ಕೆಲಸ ಇವತ್ತು ಆಗುತ್ತಿಲ್ಲ. ಇವತ್ತು ಒಂದು ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ಕೃಷಿ ಇಲಾಖೆಗಿಂತ ರೈತರೆ ಜಾಸ್ತಿ ಬೇರೆ ಬೇರೆ ಮೂಲಗಳಿಂದ ಕಲಿತುಕೊಂಡಿದ್ದಾರೆ. ಇವತ್ತು ಓದುವುದರಿಂದ ಬೇರೆ ಬೇರೆ ಮಾಧ್ಯಮಗಳಿಂದ ಕೃಷಿಯಲ್ಲಿ ರೈತರು ಬಹಳ ಬುದ್ಧಿವಂತರಾಗಿ ವಿಷಯವನ್ನು ತಿಳಿದುಕೊಂಡು ಅವರು ಮುಂದುವರೆಯುತ್ತಿದ್ದಾರೆ. ಕೃಷಿ ಇಲಾಖೆ ಮಾತ್ರ ಹಿಂದೆ ಬೀಳುತ್ತಿದೆ. ಅವರಿಗೆ ಸಹಾಯ ಮಾಡುವುದಕ್ಕೆ ಮಾರ್ಗದರ್ಶನ ಮಾಡುವುದಕ್ಕೆ ಮತ್ತು ಅವರಿಗೆ ಮಾಹಿತಿ ಕೊಡುವುದಕ್ಕೆ ಇರಬೇಕಾಗಿತ್ತು. ಆದರೆ ಇದು ಈ ರೀತಿ ಆಗಬಾರದಾಗಿತ್ತು. ಆದರೆ ಇವತ್ತು ಈ ಕೃಷಿ ಇಲಾಖೆ ನಿಜವಾಗಿ ರೈತರಿಗೆ ಅನುಕೂಲ ಮಾಡಿಕೊಡಬೇಕಾಗಿತ್ತು. ಅದರಿಂದ ಇವತ್ತು ಮಾಡಿಕೊಡುವುದಕ್ಕೆ ಆಗುತ್ತಿಲ್ಲ. ಈ ಜಲಾನಯನ ಇಲಾಖೆಯ ಬಗ್ಗೆ ಕರ್ನಾಟಕ ಇಡೀ ದೇಶದಲ್ಲಿ ರಾಜಸ್ಥಾನದ ನಂತರ ಅತ್ಯಂತ ಹೆಚ್ಚು ಭೂಮಿ ಇರುವಂಥ ಪ್ರದೇಶ. ಮಾನ್ಯ ರಾಮಕೃಷ್ಣ ಹೆಗಡೆಯವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಈ ಜಲಾನಯನಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಪ್ರತ್ಯೇಕವಾದ ಇಲಾಖೆಯನ್ನು ಮಾಡಿ ಅವತ್ತು ಈ ಅಂತರ್ಜಲವನ್ನು ಹೆಚ್ಚಿಸುವಂಥ ಕೆಲಸವನ್ನು ಮಾಡಬೇಕೆಂದು ಹೊರಟರು. ಆದರೆ ಅದು ಯಾವ ಗತಿಯಲ್ಲಿ ಮುಂದೆ ಹೋಗಬೇಕಾಗಿತ್ತು. ಆ ಗತಿಯನ್ನು ಸಾಧಿಸುವುದಕ್ಕೆ ಆಗುತ್ತಿಲ್ಲ. ಆ ಕಾರಣಕ್ಕಾಗಿ ಇವತ್ತು ಕರ್ನಾಟಕದಲ್ಲಿ ನಾವು ಎಷ್ಟು ಭಯಾನಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆಂದರೆ, ಮಲೆನಾಡಿನಲ್ಲಿ ಕೂಡ ಅಂತರ್ಜಲ ಕುಸಿದು ನೀರಿಗಾಗಿ ನಾವು ಒದ್ದಾಡುತ್ತಿದ್ದೇವೆ ಮತ್ತು ಪರದಾಡುತ್ತಿದ್ದೇವೆ. ಇವತ್ತಿಗೂ ಕೂಡ ನಮ್ಮ ಹಳ್ಳಿಗಾಡಿನಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಜಲಾನಯನ ಪ್ರದೇಶದಿಂದ ಏನು ಪರಿಣಾಮಕಾರಿಯಾಗಿ ಕೆಲಸ ಆಗಬೇಕಾಗಿತ್ತು ಅದು ಆಗುತ್ತಿಲ್ಲ. ಕೆಲವು ಸದಸ್ಯರು ಈ ಜಲಾನಯನ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ವಿಲೀನ ಮಾಡಬೇಕೆಂದು ಹೇಳುತ್ತಾರೆ ಆದರೆ ಇದಕ್ಕೆ ನನ್ನ ಮತಭೇದ ಇದೆ. ಜಲಾನಯನ ಪ್ರದೇಶವನ್ನು ಪ್ರತ್ಯೇಕವಾಗಿ ಇಡಬೇಕು ಇದನ್ನು

ಇನ್ನು ಗಟ್ಟಿ ಮಾಡಬೇಕು ಇದು ಇನ್ನು ವ್ಯಾಪಕವಾದ ಪ್ರಮಾಣದಲ್ಲಿ ಮಾಡಿ micro water shed ಗಳನ್ನು ಮಾಡಿ ಈ ಅಂತರ್ಜಲವನ್ನು ಎಲ್ಲಿಯವರೆಗೆ ಹೆಚ್ಚು ಮಾಡುವುದಕ್ಕೆ ಹೋಗುವುದಿಲ್ಲವೋ ಅಲ್ಲಿಯವರೆಗೆ ಈ ನಾಡಿನಲ್ಲಿ ಗಂಭೀರವಾದ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏನಾದರೂ ಮಾಡಬೇಕಾಗಿದ್ದರೆ ಜಲಾನಯನ ಇಲಾಖೆಯಿಂದ ಬಹಳ ದೊಡ್ಡ ಕೆಲಸವಾಗಬೇಕಾಗಿದೆ. ಇವತ್ತು ಅಣ್ಣಾ ಹಜಾರೆಯವರು, ಒಬ್ಬರು ಸಾಮಾನ್ಯ ವ್ಯಕ್ತಿ, ಪ್ರಯೋಗ ಮಾಡಿ ಯಶಸ್ವಿ ಮಾಡಿದ್ದಾರೆ, ಅದೇ ರೀತಿ ರಾಜೇಂದ್ರ ಸಿಂಗ್‌ರವರು ರಾಜಸ್ಥಾನದಲ್ಲಿ ಬಹಳ ಅದ್ಭುತವಾದಂತಹ ಪ್ರಯೋಗ ಮಾಡಿ ಅಲ್ಲಿ ಯಶಸ್ವಿ ಮಾಡಿದ್ದಾರೆ. ಆ ಕಾರಣಕ್ಕಾಗಿ ಅಣ್ಣಾ ಹಜಾರೆಯವರನ್ನು ಹಿಂದೆ ಆಂಧ್ರ ಪ್ರದೇಶದ ಸರ್ಕಾರದವರು ಜಲಾನಯನ ಇಲಾಖೆಯಲ್ಲಿ ಒಬ್ಬ advisor ಆಗಿ ತೆಗೆದುಕೊಂಡಿದ್ದರು, ಆಂಧ್ರದಲ್ಲಿ ಬಹಳ ದೊಡ್ಡಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ಕೆಲಸ ಆಯಿತು. ಮಹಾರಾಷ್ಟ್ರದಲ್ಲಿ ಬಹಳ ಉತ್ತಮವಾದಂತಹ ಕೆಲಸ ಆಗಿದೆ. ನಮ್ಮಲ್ಲಿಯೂ ಕೂಡ ಜಲಾನಯನದಲ್ಲಿ ಬಹಳ ದೊಡ್ಡ ಕೆಲಸ ಮಾಡಬೇಕಾಗಿದೆ. ಇದೊಂದು challenge ಇದೆ. ಇದನ್ನು ಮಾಡಿ ನಾವು ಮುಗಿಸದೇ ಹೋದರೆ ನೀರಿನ ಸಮಸ್ಯೆ ಬಹಳ ಗಂಭೀರವಾಗುತ್ತದೆ. ಮಾನ್ಯ ಅಧ್ಯಕ್ಷರೆ ಇಲ್ಲಿಯೂ ಕೂಡ ಒಂದು ಸಮಸ್ಯೆ ಇದೆ. ಎಷ್ಟು ಜಲಾನಯನಕ್ಕೆ ನಾವು ದುಡ್ಡನ್ನು ಒದಗಿಸಿದ್ದೇವೆ. ಅದೂ ಕೂಡ ಖರ್ಚಾಗಿಲ್ಲ. 2012–13 ರಲ್ಲಿ 30,783 ಕೋಟಿ ರೂ.ಗಳು. ಗುರಿಯನ್ನು ಇಟ್ಟುಕೊಂಡಿದ್ದೇವೆ. ಆದರೆ ನಾವು ಸಾಧನೆ ಮಾಡಿದ್ದು 18,480 ಕೋಟಿ ರೂ.ಗಳು ಬಹಳ ಕಡಿಮೆ ಸಾಧನೆ ಇದೆ. 30,000 ಕೋಟಿ ರೂ.ಗಳು ಎಲ್ಲಿ, 18,000 ಕೋಟಿ ರೂ.ಗಳು ಎಲ್ಲಿ? ಅದೇ ರೀತಿ ಪರಿಷ್ಕೃತ ಆಯವ್ಯಯದಲ್ಲಿ 2,500 ಕೋಟಿ ರೂ.ಗಳ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆದರೆ ಸಾಧನೆ ಮಾಡಿದ್ದು 1,510 ಕೋಟಿ ರೂ.ಗಳು. ಈ ರೀತಿ 2013–14 ರಲ್ಲಿಯೂ ಕೂಡ 87,613 ಕೋಟಿ ರೂ.ಗಳ ಗುರಿ ಇಟ್ಟುಕೊಂಡಿದ್ದರೆ, ಸಾಧನೆ ಮಾತ್ರ 53,900 ಕೋಟಿ ರೂ.ಗಳು ಮತ್ತು ಪರಿಷ್ಕೃತದಲ್ಲಿ ರೂ.6,05,053 ಗುರಿಯನ್ನು ಇಟ್ಟುಕೊಂಡಿದ್ದರೆ, ಸಾಧನೆ ಮಾತ್ರ 4,02,012 ರೂ.ಗಳು ಈ ರೀತಿ 2014–15 ರಲ್ಲಿ 3,660ಕೋಟಿ ರೂ.ಗಳು ಅಂದರೆ ದಿನದಿಂದ ದಿನಕ್ಕೆ water shed ನಲ್ಲಿ decline ಆಗುತ್ತಿದೆ. ಇದು ಜಾಸ್ತಿಯಾಗಬೇಕಾಗಿತ್ತು. ಏಕೆ ದುಡ್ಡಿನ

ಕೊರತೆ ಇದೆಯೇ ಅಥವಾ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೋ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೆ ತಮಗೂ ಗೊತ್ತಿದೆ. ಕೇಂದ್ರ ಸಹಾಯ ಪರಿಷ್ಕೃತ ಯೋಜನೆಗಳು ನಾವು ಯಾವ್ಯಾವ ರೀತಿ ಜಾಸ್ತಿ ದುಡ್ಡು ಖರ್ಚು ಮಾಡಿ ಪರಿಣಾಮಕಾರಿಯಾದಂತಹ completion report ಕಳುಹಿಸುತ್ತೇವೆ, ಅದರ ಆಧಾರದ ಮೇಲೆ ದುಡ್ಡನ್ನು ಒದಗಿಸುತ್ತಾರೆ. ನಾವು ಕೊಟ್ಟಿರುವ ದುಡ್ಡನ್ನು ಖರ್ಚು ಮಾಡದೇ ಹೋದರೆ, ಸರ್ಕಾರದವರು ನಮಗೆ ಏಕೆ ದುಡ್ಡು ಕೊಡಬೇಕು ? planning commission ರವರು, ನೀವು ಕಳೆದ ಬಾರಿ ಕೊಟ್ಟಿರುವ ದುಡ್ಡನ್ನೇ ಖರ್ಚು ಮಾಡಿಲ್ಲ, ಈಗ ಏಕೆ ನಿಮಗೆ ದುಡ್ಡು ಕೊಡಬೇಕೆನ್ನುವ ಸಾಮಾನ್ಯವಾದ ಮಾತನ್ನಾಡುತ್ತಾರೆ, ಆದರೆ ದುರ್ದೈವ ಇವತ್ತು ಕೃಷ್ಣ ಬೈರೇಗೌಡರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಮ್ಮ ಅನುದಾನ 5% ಸಾಕಾಗುವುದಿಲ್ಲ. ಜಲಾನಯನಕ್ಕೆ 2% ಕೂಡ ಸಾಕಾಗುವುದಿಲ್ಲ. ಇನ್ನು ವ್ಯಾಪಕವಾಗಿ ಈ ಎರಡೂ ಕ್ಷೇತ್ರಗಳಲ್ಲಿ ಒಂದು ಬದಲಾವಣೆ ಬರಬೇಕಾದರೆ, ನೀವು ಕೊಟ್ಟಿರುವಂತಹ ದುಡ್ಡನ್ನು ಸಂಪೂರ್ಣವಾಗಿ ಖರ್ಚು ಮಾಡಬೇಕು. ಇನ್ನೂ ಹೆಚ್ಚಿನ ಬೇಡಿಕೆಯನ್ನು ಈ ಸದನದ ಮುಂದೆ ಇಟ್ಟರೆ ಖಂಡಿತವಾಗಿಯೂ ನಾವು ಬೆಂಬಲವನ್ನು ಕೊಡುತ್ತೇವೆ ಮತ್ತು ನಿಮಗೆ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಪಾಟೀಲ್‌ರವರೇ conclude ಮಾಡಿ.

ಶ್ರೀ ಎಂ.ಬಿ. ಪಾಟೀಲ್ : ಬಹಳ ಮುಖ್ಯವಾದ ವಿಷಯ ನಮ್ಮ ಭಾಗದಲ್ಲಿದೆ. ಇದರಲ್ಲಿ ತೊಗರಿ ಅಭಿವೃದ್ಧಿ ಮಂಡಳಿಯ ವಿಷಯ ಕೂಡ ಇದೆ. ಅದನ್ನು ಹೇಳಬೇಕಾಗುತ್ತದೆ. ಹೇಳದೇ ಹೋದರೆ ಬಹಳ ದೊಡ್ಡ ಲೋಪವಾಗುತ್ತದೆ. ಇವತ್ತು ತೊಗರಿ ಬೋರ್ಡ್ ಮಾಡಬೇಕೆಂದು ಅನೇಕ ಒತ್ತಾಯಗಳು ಬಂದರೂ ಕೂಡ ಹಿಂದೆ ನಾನು ವಿಧಾನಪರಿಷತ್ತಿನಲ್ಲಿದ್ದಾಗ ಅವತ್ತು ಶ್ರೀ ರಾಜಶೇಖರ ಮೂರ್ತಿಯವರು ಈ ಪ್ರಸ್ತಾವನೆಯನ್ನು ಖಂಡಿತವಾಗಿಯೂ ಆಗುವುದಿಲ್ಲವೆಂದು reject ಮಾಡಿದರು. ನಾವು ಕಾಫಿ ಬೋರ್ಡ್ ಮಾದರಿಯಲ್ಲಿ ಮತ್ತೊಂದು ಮಾಡಿ ಎಂದು ಹೇಳಿದರೂ ಒಪ್ಪಲಿಲ್ಲ. ಕೊನೆಗೂ ಸರ್ಕಾರ ಒತ್ತಾಯಕ್ಕೆ ಮಣಿದು ತೊಗರಿ ಬೋರ್ಡ್ ಅನ್ನು ಮಾಡಿತು. ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಮಾಡಲಾಗಿತ್ತು. ಇದಕ್ಕೆ revolving fund ಕೊಡಿ ಎಂದು ಕಳೆದ ಬಾರಿ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದೆವು.

ಇವರಿಗೆ ಬೇಕಾದಷ್ಟು ದುಡ್ಡು ಕೊಡುತ್ತಿಲ್ಲ. ಮಾನ್ಯ ಬೈರೇಗೌಡರೆ ಈ ವಿಷಯವನ್ನು ತಾವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಈ ವರ್ಷ ತಾವು ಕೇಂದ್ರ ಮತ್ತು ರಾಜ್ಯ ಸರ್ಕಾರದ್ದು ಎರಡೂ ಸೇರಿ 5,000 ರೂ.ಗಳ ಬೆಲೆಯನ್ನು fix ಮಾಡಿದಿರಿ. ತಾವು ಮಾರುಕಟ್ಟೆಯಲ್ಲಿ ಒಟ್ಟು ಎರಡು ಲಕ್ಷ ತೊಗರಿ ಬ್ಯಾಗ್‌ಗಳನ್ನು ಖರೀದಿ ಮಾಡಿದ್ದೀರಿ. ಅದರೆ ಬಂದಿದ್ದು 30 ಲಕ್ಷ ತೊಗರಿ ಬ್ಯಾಗ್‌ಗಳು. ಈಗ ತಾವು ತೊಗರಿ ಖರೀದಿ ಮಾಡುವುದನ್ನು ನಿಲ್ಲಿಸಿದ್ದೀರಿ. ಯಾವ ರೈತರು ತೊಗರಿ ಮಾರಾಟ ಮಾಡಲು ಮಾರಾಟ ಕೇಂದ್ರಕ್ಕೆ ಬಂದು ಹೆಸರು ನೋಂದಾಯಿಸಿಕೊಂಡು ಹೋಗಿದ್ದಾರೆ ಅವರು ನಾಳೆ ನಾನು ತೂಕ ಕೊಡಬೇಕು, ಬಿಲ್ ತೆಗೆದುಕೊಳ್ಳಬೇಕು ಎಂದು ಇವತ್ತು ಇನ್ನೂ ಕಾಯುತ್ತಿದ್ದಾರೆ, ಆದರೆ ತೊಗರಿ ಬೋರ್ಡ್, ಸಂಪೂರ್ಣವಾಗಿ ನಿಂತು ಹೋಗಿದೆ. ಅದಕ್ಕೆ ಇಲ್ಲಿಯವರೆಗೂ permanent M.D. ಯವರನ್ನು ನೇಮಿಸಲಿಲ್ಲ. ಅದಕ್ಕೆ ಬೇಕಾದಷ್ಟು ದುಡ್ಡು ಕೊಡಲಿಲ್ಲ. ಇವತ್ತು 30 ಲಕ್ಷ ತೊಗರಿ ಬ್ಯಾಗ್ ಅನ್ನು ಖರೀದಿ ಮಾಡಬೇಕಾದರೆ ಮಾನ್ಯ ಮಂತ್ರಿಗಳೆ 375 ಕೋಟಿ ರೂ.ಗಳು ಬೇಕಾಗುತ್ತದೆ. ನೀವು ಆಗುವುದಲ್ಲವೆಂದು 75 ಕೋಟಿ ರೂ.ಗಳಿಗೆ ಕೈ ತೊಳೆದುಕೊಂಡಿರಿ. ಇವತ್ತು ರೈತರ ಗತಿ ಏನು ? ಅವರು ಕಂಗಾಲಾಗಿದ್ದಾರೆ, ಮಾರ್ಕೆಟ್‌ನಲ್ಲಿ ರೇಟ್ ಬಿದ್ದು ಹೋಗಿದೆ. ಬಹುತೇಕ ಮಾಲು ನಮ್ಮ ಗುಲ್ಬರ್ಗಾ ತೊಗರಿ ಮಾರುಕಟ್ಟೆಗೆ ಹೋಗುತ್ತದೆ. ಇಲ್ಲದೇ ಹೋದರೆ ಲಾಥೂರ್‌ಗೆ ಹೋಗುತ್ತದೆ. ಇವತ್ತು ತೊಗರಿ ಬೇಳೆ ಉತ್ಪಾದನೆ ಮೇಲೆ ಸುಮಾರು 300 ದಾಲ್ ಮಿಲ್‌ಗಳು ಇವೆ. ಅವು ಮುಚ್ಚುವಂತಹ ಪರಿಸ್ಥಿತಿಗೆ ಬಂದಿವೆ. ಇದರಲ್ಲಿ ಬಹಳ ದೊಡ್ಡ ಒಂದು ಆಘಾತವೆಂದರೆ ಕೇಂದ್ರ ಸರ್ಕಾರದವರು ತೊಗರಿಯನ್ನು ಆಮದು ಮಾಡಿಕೊಳ್ಳುವ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ. ನಮ್ಮಲ್ಲಿ ಇಷ್ಟೊಂದು ದೊಡ್ಡಪ್ರಮಾಣದಲ್ಲಿ ತೊಗರಿಯನ್ನು ಬೆಳೆದರೂ ಕೂಡ ಆಮದು ಮಾಡಿಕೊಳ್ಳುವ ಅವಶ್ಯಕತೆ ಏಕಿತ್ತು ? ಖಂಡಿತ ನಮ್ಮ ದೇಶದಲ್ಲಿ ಬೇಳೆ ಕಾಳುಗಳ ಕೊರತೆ ಇದೆ. ಆದರೆ ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ತೊಗರಿ ಉತ್ಪಾದನೆ ಮಾಡಿದ ಮೇಲೂ ಮಾರ್ಕೇಟ್‌ನಲ್ಲಿ ಬೇಡಿಕೆ ಇದ್ದರೂ ಕೂಡ ರೈತರು ಬೆಳೆದಂತಹ ತೊಗರಿಯನ್ನು ಯಾವ ತೊಗರಿ ಬೋರ್ಡ್ ಖರೀದಿ ಮಾಡಬೇಕಾಗಿತ್ತು ಇವತ್ತು ಖರೀದಿ ಮಾಡದೇ ಕೈ ತೊಳೆದುಕೊಂಡು ನಿಂತ ಮೇಲೆ ರೈತರು ಕಂಗಾಲಾಗಿದ್ದಾರೆ. ಅವರಿಗೆ ಸರ್ಕಾರ

ಯಾವ ರೀತಿ ಉತ್ತರ ಕೊಡುತ್ತದೆ ಎಂದು ನನಗಂತೂ ಗೊತ್ತಾಗುತಿಲ್ಲ. ಹೀಗಾಗಿ ಇವತ್ತು ದಯಮಾಡಿ ಎಲ್ಲಾ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ. ಮಾನ್ಯ ಮುಖ್ಯಮಂತ್ರಿಗಳು ಚುನಾವಣಾ ಪ್ರಚಾರಕ್ಕೆ ಬಂದಾಗ 25 ರಷ್ಟು ಆಮದು ಶುಲ್ಕವನ್ನು ವಿಧಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಹೇಳಿದ್ದರು. ಇವತ್ತೂ ಕೂಡ ಸಮಯ ಬಹಳ ಸೂಕ್ತವಾಗಿದೆ. ಬೇಗನೆ ಕೇಂದ್ರ ಸರ್ಕಾರಕ್ಕೆ ನಿಯೋಗವನ್ನು ಕರೆದುಕೊಂಡು ಹೋಗಿ.

ಶ್ರೀ ಗುರು ಪಾಟೀಲ್ ಶಿರವಾಳ (ಶಹಾಪುರ) : ಮಾನ್ಯ ಉಪಾಧ್ಯಕ್ಷರೆ, ತೊಗರಿ ಮಂಡಳಿಯಿಂದ ತೊಗರಿಯನ್ನು ಏನು ಖರೀದಿ ಮಾಡುತ್ತಿದ್ದಾರೆ, ಕಳೆದ ವರ್ಷದಲ್ಲಿ ಎಲ್ಲಾ ರೈತರಿಂದ ಪಹಣಿ ತೆಗೆದುಕೊಂಡ registration ಮಾಡಿಕೊಂಡು ಅವರಿಗೆಲ್ಲಾ permit ಕೊಟ್ಟರು. ಎಷ್ಟು ಜನಕ್ಕೆ permit ತಗೆದುಕೊಂಡು registration ಮಾಡಿದರು ಅಷ್ಟೂ ಜನರದ್ದು ಖರೀದಿ ಮಾಡಲಿಲ್ಲ. ಸುಮಾರು 75% ರೈತರದ್ದು ಹಾಗೆಯೇ ಉಳಿದಿದೆ. ದಯಮಾಡಿ ಎಷ್ಟು ರೈತರು ಇದ್ದಾರೆ ಅವರದ್ದೆಲ್ಲಾ ಖರೀದಿ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, conclude ಮಾಡಿ

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭವನ್ನು ಉಪಯೋಗ ಮಾಡಿಕೊಳ್ಳದಿದ್ದರೆ ಮತ್ತೆ ಯಾವಾಗ ಮಾನ್ಯ ಮಂತ್ರಿಗಳಿಗೆ ಸರ್ಕಾರಕ್ಕೆ ಹೇಳುವುದು ? ಇಡೀ ದೇಶದಲ್ಲಿಯೇ ತೊಗರಿ ಬೇಡಿಕೆ ಇರುವುದು 30 ಲಕ್ಷ ಟನ್. ಈ ವರ್ಷ ಬಂಪರ್ ಕ್ರಾಪ್. ಕೆಲವು ಕಡೆ ಬಹಳ ಉತ್ತಮವಾದ ರೀತಿಯಲ್ಲಿ ಬೆಳೆದಿದೆ. ಮಹಾರಾಷ್ಟ್ರ, ಗುಜರಾತ್, ಆಂಧ್ರ ಪ್ರದೇಶ ಇಲ್ಲೆಲ್ಲಾ ತೊಗರಿ ಬೆಳೆ ಬೆಳೆಯಲಾಗಿದೆ. ಕೇವಲ ನಮ್ಮಲ್ಲಿ ಒಂದು ಲಕ್ಷ ಮೆಟ್ರಿಕ್ ಟನ್ ಕೊರತೆ ಇದೆ. ಆದರೆ ಇವರು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದಕ್ಕೆ ಹೊರಟ ಮೇಲೆ ಇಲ್ಲಿ ತೊಗರಿ ಬೆಳೆಗಾರರ ಪರಿಸ್ಥಿತಿ ಏನು? ತಕ್ಷಣ ಕೇಂದ್ರಕ್ಕೆ ಒಂದು ನಿಯೋಗವನ್ನು ಕರೆದುಕೊಂಡು ಹೋಗಿ ತಡೆಹಿಡಿಯಬೇಕು. ಈಗ ಏನು ತಾವು ತೊಗರಿ ಖರೀದಿಯನ್ನು ನಿಲ್ಲಿಸಿದ್ದೀರಿ, ತಕ್ಷಣ

ಕೇಂದ್ರದಲ್ಲಿ ದುಡ್ಡು ಕೊಟ್ಟು ಅವರಿಗೆ ಮತ್ತೆ ಖರೀದಿ ಮಾಡುವಂತಹ ಕೆಲಸದ ಪ್ರಕ್ರಿಯೆಯನ್ನು ಪ್ರಾರಂಭ ಮಾಡಬೇಕು, ಇಲ್ಲದೇ ಹೋದರೆ ಜನರು ನಿಮಗೆ ಶಾಪ ಹಾಕುತ್ತಾರೆ. ಇವತ್ತು ತಾವು ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದೇ ಹೋದರೆ ಜನರ ಸಿಟ್ಟಿಗೆ ಗುರಿಯಾಗುತ್ತೀರಿ ಎನ್ನುವ ಕಿವಿ ಮತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನೂ ಬಹಳಷ್ಟು ವಿಷಯ ಪ್ರಸ್ತಾಪ ಮಾಡುವುದು ಇದೆ. ಆದರೆ ಇವತ್ತು ಸಮಯದ ಅಭಾವ ಇದ್ದ ಕಾರಣಕ್ಕಾಗಿ ನಾನು ಹೆಚ್ಚಿಗೆ ವಿಷಯವನ್ನು ಪ್ರಸ್ತಾಪ ಮಾಡದೆ ಕೊನೆಗೆ ಕೃಷಿ ವಲಯದಲ್ಲಿಯೇ ಅತ್ಯಂತ ಹೆಚ್ಚಿನ ಉದ್ಯೋಗ ಕೊಡುವಂಥ ಅವಕಾಶ ಇರುವುದು ಮತ್ತು ಸಾಧ್ಯತೆ ಇರುವುದು ಇದೊಂದೇ ವಲಯ. ಆದರೆ ಇವತ್ತು ಅನೇಕ ಸದಸ್ಯರು ಆತಂಕವನ್ನು ವ್ಯಕ್ತಪಡಿಸಿದ್ದಾರೆ, ಇವತ್ತು ಕೃಷಿಯನ್ನು ಬಿಟ್ಟು ಪಟ್ಟಣಪ್ರದೇಶಗಳಿಗೆ ಜನರು ಏನು ವಲಸೆ ಬರುತ್ತಿದ್ದಾರೆ, ಇದು ಬಹಳ ದೊಡ್ಡ ಸಮಸ್ಯೆ ಕಾಡುತ್ತಿದೆ. ಇವತ್ತಿನವರೆಗೂ on record ಹೇಳಬೇಕಾದರೆ, ಇವತ್ತು ಒಂದು ಕೋಟಿ ಜನ ಕೃಷಿಯನ್ನು ಬಿಟ್ಟು ಪಟ್ಟಣ ಪ್ರದೇಶಗಳಿಗೆ ಬಂದಿದ್ದಾರೆ, ಎಷ್ಟು ಜನರಿಗೆ ಇದನ್ನು record ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಷ್ಟೋ ಜನರು ಅಲ್ಲಿ voters list ನಲ್ಲಿರುತ್ತಾರೆ. ಆದರೆ ಬೇರೆ ಕಡೆ ಇರುತ್ತಾರೆ. ಆದರೆ ಇವತ್ತು on record ನಾನು ಮಾಹಿತಿಯನ್ನು ಪಡೆದಿದ್ದೇನೆ. ಒಂದು ಕೋಟಿ ಜನ ಇವತ್ತು ಕೃಷಿಯನ್ನು ಬಿಟ್ಟು ಪಟ್ಟಣ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. ಈ ಪರಿಸ್ಥಿತಿ ಮುಂದುವರೆದರೆ ಇನ್ನು ಯಾರೂ ಕೂಡ ಕೃಷಿ ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತು ಏಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ? ಬಹಳ ಕೆಟ್ಟದಾಂತಹ ವರದಿ ಬಂದಿತು. ಅತ್ಮಹತ್ಮೆ ಬಗ್ಗೆ ಸರ್ಕಾರ ಒಂದು ಸಮಿತಿ ರಚನೆ ಮಾಡಿತು. ಆ ಸಮಿತಿಯು ಏನು ಕೆಟ್ಟ ವರದಿ ಕೊಟ್ಟಿತು ಎಂದರೆ, ಇವರು ಕುಡಿತದ ಚಟಕ್ಕೆ ಒಳಗಾಗಿ ಸತ್ತು ಹೋಗಿದ್ದಾರೆ ಎಂದು ನೆಪ ಹೇಳಿದರು. ಇದು ರೈತರಿಗೆ ಮಾಡಿದಂತಹ ದೊಡ್ಡ ಅಪಮಾನ. ಇವತ್ತು ರೈತರು ಬಹಳ ದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ.

ಉಪಾಧ್ಯಕ್ಷರು : Conclude ಮಾಡಿ.

ಶ್ರೀ ಬಿ.ಆರ್. ಪಾಟೀಲ್ : ನಾನು ಕೊನೆಯದಾಗಿ ಒಂದೇ ಒಂದು ಸಲಹೆಯನ್ನು ಕೊಡುತ್ತೇನೆ. ಇಲ್ಲಿ ಕೃಷಿಯನ್ನು ನೀವು ಗಟ್ಟಿಗೊಳಿಸಬೇಕಾದರೆ ಇವತ್ತು ನೀರು, ಕೂಲಿ

ಮತ್ತು ಬೆಲೆ ಈ ಮೂರಕ್ಕೆ ನೀವು ಏನಾದರೂ ಒಂದು ಸ್ಪಷ್ಟವಾದಂತಹ ರೂಪವನ್ನು ಕೊಟ್ಟು ಇದಕ್ಕೆ ಒಂದು ನೀತಿಯನ್ನು ಅಳವಡಿಸಿಕೊಳ್ಳದೇ ಹೋದರೆ ಸಮಗ್ರವಾದಂತಹ ಯೋಜನೆಯನ್ನು ಜಾರಿಗೆ ತರಲು ಸಾಧ್ಯವಿಲ್ಲ ಮತ್ತು ಕೃಷಿಯಲ್ಲಿ ಆಮೂಲಾಗ್ರವಾದಂತಹ ಬದಲಾವಣೆಯಲ್ಲಿ ತರಲು ಸಾಧ್ಯವಿಲ್ಲ.ಇಂತಹ ಒಂದು ಪರಿಸ್ಥಿತಿಯಲ್ಲಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಹೇಳುತ್ತಾ ಇನ್ನು ಮುಂದಿನ ವರ್ಷದಲ್ಲಿ ಹೆಚ್ಚಿನ ಫಲಪ್ರದವಾದಂತಹ ಚರ್ಚೆಯಾಗಬೇಕೆಂದು ಮತ್ತು ತನ್ಮೂಲಕ ಸರ್ಕಾರವು ತನ್ನ ನೀತಿಯಲ್ಲಿ ಯೋಜನೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕು. ಇದು ಕಾಟಾಚಾರಕ್ಕೆ ಚರ್ಚೆಯಾಗದೆ ಹೋಗಬಾರದು ಎನ್ನುವಂತಹ ಮಾತನ್ನು ಹೇಳಿ ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್(ಶ್ರೀನಿವಾಸಪುರ) : ಮಾನ್ಯ ಉಪಾಧ್ಯಕ್ಷರೆ, ವಿಧಾನಸಭೆಯಲ್ಲಿ ಬಜೆಟ್ ಮಂಡನೆಯಾದ ಮೇಲೆ ಆಯಾ ಇಲಾಖಾವಾರು ಸಂಬಂಧಿಸಿದಂತಹ ಮಂತ್ರಿಗಳು ಈ ಆರ್ಥಿಕ ವರ್ಷಕ್ಕೆ ತಮ್ಮ ಇಲಾಖೆಗೆ ಎಷ್ಟು ಹಣ ಬೇಕಾಗುತ್ತದೆ ಅದನ್ನು ತಮ್ಮ ಮುಖಾಂತರ ಸದನದಲ್ಲಿಟ್ಟು ಸದನದ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಾರೆ. ಆದರೆ ಟ್ರೆಷರಿಯಲ್ಲಿರುವ ಹಣವನ್ನು ಇವರು ನೇರವಾಗಿ ತೆಗೆದುಕೊಂಡು ಬಂದಿ ಖುಷಿಗೆ ಬಂದಂತೆ ಖರ್ಚು ಮಾಡುವುದಕ್ಕಾಗುವುದಿಲ್ಲ. ಈ ಸದನವು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ತೆರಿಗೆದಾರರ ಹಣಕ್ಕೆ ನಾವು ವಾರಸುದಾರರಾಗಿ ಈ ಸದನಕ್ಕೆ ಬಂದಿದ್ದೇವೆ. ಅವರು ನಮಗೆ ಜವಾಬ್ದಾರಿಯನ್ನು ಒಪ್ಪಿಸಿಬಿಟ್ಟಿದ್ದಾರೆ, ಕೃಷಿ ಇಲಾಖೆಗೆ ಇಷ್ಟು ಹಣ ಬೇಕೆಂದು ಮಾನ್ಯ ಮಂತ್ರಿಗಳು ಕೇಳಿದ್ದಾರೆ. ಅದು ಸಾಧವೇ ? ಅಥವಾ ಅಲ್ಲವೇ? ಅದನ್ನು ನಾವು ಒಪ್ಪಿಕೊಳ್ಳಬೇಕೇ? ಈ ಬಗ್ಗೆ ನಾವು ಸಲಹೆಯನ್ನು ಕೊಡಬೇಕಾಗುತ್ತದೆ. ಸಂಸದೀಯ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಾಮನ್ಯವಾಗಿ ವಿರೋಧ ಪಕ್ಷದ ಕಡೆಯಲ್ಲಿ ಇರುವವರು ಈ ಅಂದಾಜುಗಳನ್ನು ವಿರೋಧ ಮಾಡುತ್ತಾರೆ. ಆಡಳಿತ ಪಕ್ಷದ ಕಡೆಯಲ್ಲಿರುವವರು ಅವರನ್ನು ಸ್ಮರಣೆ ಮಾಡುವುದು ಪ್ರಶಂಸೆ ಮಾಡುವುದು ಮಾಡುತ್ತಾರೆ ಇದು ಪದ್ಧತಿಯಾಗಿದೆ. ಆದರೆ ರಾಜ್ಯದ ಜನತೆಯ ಹಿತವನ್ನು ಗಣನೆಗೆ ತೆಗೆದುಕೊಂಡಾಗ

ಪದ್ಧತಿ ದೂರವಾಗವೇಕು, ವಾಸ್ತವಾಂಶ ಚರ್ಚೆಗೆ ಗ್ರಾಸವಾಗಬೇಕು ಎನ್ನುವುದು ನನ್ನ ಭಾವನೆಯಾಗಿದೆ. ಮಾನ್ಯ ಮಂತ್ರಿಗಳು ಸದುದ್ದೇಶದಿಂದ ಹೊರಟಿದ್ದಾರೆ. ನಾನು ಆಡಳಿತ ಪಕ್ಷಕ್ಕೆ ಸೇರಿದವನಾಗಿ ವಿರೋಧ ಮಾಡುತ್ತೇನೆಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ ಸಹಕಾರವನ್ನು ಈ ಸದನದ ಒಬ್ಬ ಸದಸ್ಯನಾಗಿ, ಒಬ್ಬ ಜನಪ್ರತಿನಿಧಿಯಾಗಿ ಕೆಲವು ಸೂಕ್ಷ್ಮವಾದಂತಹ ಸಲಹೆ ಮತ್ತು ಷರತ್ತುಗಳೊಡನೆ ನನ್ನ ಸಹಕಾರ ಇರುತ್ತದೆ ಎಂದು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. Assembly is not a grievances cell ನಮಗೆ ಗೊಬ್ಬರ ಕೊಡಿ ಅದು ಕೊಡಿ ಇದು ಕೊಡಿ ಎಂದು ಕೇಳಿದರೆ ಅದಕ್ಕೆ ಪರಿಹಾರ ಕೊಡುವುದಕ್ಕೆ ಈ ಹಣ ಏನು ಮಂಜೂರಾತಿಗೆ ನಮ್ಮ ಮುಂದೆ ಬಂದಿದ್ದಾರೆ ಅದಕ್ಕೆ ಇವರು ಅರ್ಹರಿದ್ದಾರೋ ಅಥವಾ ಇಲ್ಲವೋ ಏನು ಮೂಲಭೂತ ಸಮಸ್ಯೆಗಳು ಇವೆ, ಅವರ ಉದ್ದೇಶವು ಸರಿಯಾಗಿದೆ ಎಂದು ನಮಗೆ ಮನವರಿಕೆಯಾದಾಗ ಯಾವ ಲೋಪದೋಷಗಳು ನಮಗೆ ಕಾಣುತ್ತದೆ ಅವರಿಗೆ ಈ ಬಗ್ಗೆ ತಿಳಿವಳಿಕೆಯನ್ನು ಕೊಟ್ಟು ಸ್ವಲ್ಪ ಹೀಗೂ ಆಲೋಚನೆಯನ್ನು ಮಾಡಿನೋಡಿ ಎಂದು ಹೇಳುವಂತಹದ್ದು ನಮ್ಮ ಕರ್ತವ್ಯ. ಇವರು ವಾರ್ಷಿಕ ವರದಿ 2013–14 ಕೃಷಿ ಇಲಾಖೆಯ ಅಧ್ಯಾಯ ಪೀಠಿಕೆ ರೈತರ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ವಿವಿಧ ಮೂಲಗಳಿಂದ ಹೊರಹೊಮ್ಮುವ ಸಂಶೋಧನಾ ಫಲಿತಾಂಶಗಳನ್ನು ಆಧುನಿಕ ತಂತ್ರಜ್ಞಾನವನ್ನು ಮಳೆ ಹಾಗೂ ನೀರಾವರಿ ಅಶ್ರಯದ ಸುಮಾರು ಒಟ್ಟು 127 ಲಕ್ಷಹೆಕ್ಟೇರ್‌ಗಳಲ್ಲಿ ಸಾಗುವಳಿ ಮಾಡುತ್ತಿರುವ 75.81 ಲಕ್ಷ ರೈತಕುಟುಂಬಗಳಿಗೆ ಪರಿಣಾಮಕಾರಿಯಾಗಿ ವರ್ಗಾಯಿಸುವ ಮೂಲಕ ಇವರು ತಮ್ಮ ಹಿಡುವಳಿಗಳಲ್ಲಿ ಅಧುನಿಕ ತಂತ್ರಜ್ಞಾನವನ್ನು ಬಳಸಿ ಹೆಚ್ಚು ಇಳುವರಿಯನ್ನು ಪಡೆಯಲು ನೆರವು ನೀಡುತ್ತಿದೆ. ಇಲ್ಲಿ ನನ್ನದು ಇಷ್ಟೆ ಸಲಹೆ ಇದೆ. ಮಾನ್ಯ ಕೃಷ್ಣಭೈರೇಗೌಡರು ಅವರ ಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ನಾನು ಪ್ರಶ್ನಿಸುವುದಿಲ್ಲ. ಇದನ್ನು ಯಾರು ಪ್ರಿಂಟ್ ಮಾಡಿದ್ದಾರೆ ಇವರಿಗೆ ಬಹುಶಃ ಅವರ ಇಡೀ ಬದುಕಿನಲ್ಲಿ ನಿಜ ಹೇಳುವುದು ಅಭ್ಯಾಸವೇ ಇಲ್ಲವೆಂದು ಕಾಣುತ್ತದೆ. ಅಪ್ಪಟ ಸುಳ್ಳು ಹೇಳುವವರು ಬರೆದಿರುವಂತಹ ಪೀಠಿಕೆಯಾಗಿದೆ. ಈ ಇಲಾಖೆ ಇರುವಂತಹ ಸ್ಥಿತಿಗೆ ಇದುವರೆಗೂ ನಮ್ಮ ಎಲ್ಲ ಮಾನ್ಯ ಸದಸ್ಯರುಗಳು ಹೇಳಿದಂತಹ ಅನುಭವಗಳು ಮತ್ತೆ ಈ ಪೀಠಿಕೆಗೆ ಏನಾದರೂ ಸಂಬಂಧ ಇದೆಯಾ? ಎಲ್ಲಿ ಆಧುನಿಕತೆ, ಎಲ್ಲಿ

ಸಂಶೋಧನೆ ಇದೆ, ರೈತ ಉದ್ಧಾರ ಆಗುವುದು ಎಲ್ಲಿ ಅವೆಲ್ಲವನ್ನು ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ ಇವರು ನಮ್ಮನ್ನು ಏನು ತಿಳಿದುಕೊಂಡುಬಿಟ್ಟಿದ್ದಾರೆ. ಇಂಗ್ಲಿಷ್ ಭಾಷೆ ಗೊತ್ತಿಲ್ಲದೆ ಇರುವವರಿಗೆ ದೊಡ್ಡ ವಿಚಾರಗಳು ಗೊತ್ತಾಗದೆ ಇರಬಹುದು, ಪ್ರೈಮರಿ ಶಾಲೆಯಲ್ಲಿ ಕನಿಷ್ಠ ಇಷ್ಟು ಓದಿ ತಿಳಿದುಕೊಳ್ಳುವಷ್ಟು ನಮ್ಮ ಮೇಷ್ಟ್ರು ಹೇಳಿಕೊಟ್ಟಿಲ್ಲವಾ? ಇವರು ಈ ಸದನವನ್ನು ಏನು ಅಭಿಪ್ರಾಯದಲ್ಲಿ ಭಾವಿಸಿಕೊಂಡಿದ್ದಾರೆ? ನಿಜ ನಾವು ಅವರಷ್ಟು ಬುದ್ಧಿವಂತರಲ್ಲ, ಇಲ್ಲದೆ ಇದ್ದಿದ್ದರೆ ನಾವು service ಗೆ ಸೇರಿಕೊಂಡು ದೊಡ್ಡ Officer ಗಳು ಆಗಿರುತ್ತದ್ದೆವು. ದಡ್ಡರು ಎಂದರೆ ನಮ್ಮನ್ನು ಇಷ್ಟೊಂದು ಹೀನವಾಗಿ estimate ಮಾಡುವುದಾ? Then, I don't want to go into the details and elaborate. ನೀವು ಆ ಪೀಠಿಕೆಯನ್ನು ಓದಿ ನೋಡಿ. ಇವತ್ತಿನ ಪರಿಸ್ಥಿತಿಗೆ ಅದು ಹೊಂದಿಕೆ ಆಗುತ್ತದೆಯೇ ಅಥವಾ ಇಲ್ಲವಾ ? ಅದನ್ನು ನಾನು ನಿಮ್ಮ self-introspection ಗೆ ಬಿಡುತ್ತೇನೆ. ಇಲಾಖೆಯ ದೂರದೃಷ್ಟಿ ಕೃಷಿ ತಾಂತ್ರಿಕತೆಗಳನ್ನು ಮಾಹಿತಿಗಳನ್ನು ರೈತರಿಗೆ ಪ್ರಚಾರಪಡಿಸುವುದು. ಕೃಷಿ ಉತ್ಪಾದನೆ ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ಗುಣಮಟ್ಟದ ಕೃಷಿಪರಿಕಗಳನ್ನು ಸರಬರಾಜನ್ನು ಖಚಿತಪಡಿಸುವುದು. ಸುಮ್ಮನೆ ನಾನು ಒಂದೊಂದನ್ನೆ 2–2 ನಿಮಿಷಗಳ ಕಾಲ ಹೇಳುತ್ತಾ ಹೋಗುತ್ತೇನೆ ನಾನು ಬಹಳ ಹೊತ್ತು ಮಾತನಾಡುವುದಕ್ಕೆ ಸಮಯ ತೆಗೆದುಕೊಳ್ಳುವುದಿಲ್ಲ. ಕೃಷಿ ಪರಿಕರಗಳು, ನಿಮಗೆ ಸಲೀಸಾಗಿ ಯಾವ ಕೃಷಿಪರಿಕರಗಳು ಸಿಗುತ್ತದೆ. ಸಾಮಾನ್ಯ ರೈತ ಈ ಪರಿಕರಗಳನ್ನು ಕೊಳ್ಳುವುದಕ್ಕೆ ಸಾಧ್ಯವೇ ? ಅದು ಸಾಧ್ಯವೇ ಇಲ್ಲ. ಇವುಗಳೆಲ್ಲವೂ ಕೂಡ Rathnagiri impex ಇನ್ನಾವುದೇ organizationನಲ್ಲಿರುತ್ತದೆ. ಅಲ್ಲಿಗೆ ನಾನು ಹೋಗಿದ್ದೆ, ನಮಗೆ ಯಾವುದಾದರೂ ಒಂದು ತೆಗೆದುಕೊಳ್ಳಬೇಕೆಂಬ ಆಸೆ ಆದರೆ ನಮ್ಮ ಜಮೀನನ್ನಾದರೂ ಮಾರಿ ಅದನ್ನು ತರಬೇಕು. ಕೆಲವು items ಗೆ ಸರ್ಕಾರವು ಸಹಾಯಧನವನ್ನು ಕೊಡುತ್ತಾರೆ. ಆ ಸಹಾಯಧನವು ಕೂಡ ನಮ್ಮ ಗೆಳೆಯರಾದ ಶ್ರೀ ಕೆ.ಎಂ.ಶಿವಲಿಂಗೇಗೌಡರು ಹೇಳಿದಂತೆ ಇದು it is a kind of rocket ನೀವು ರೈತನನ್ನು ಬಡವ ಮತ್ತು ಶ್ರೀಮಂತ ಎಂದು ಹೇಳುತ್ತೀರಿ. Land Reforms ತರುತ್ತೀರಿ ಸಂತೋಷ. ಉಳುವವನೇ ರೈತ ಆಗಿರಬೇಕು, ಒಡೆಯ ಆಗಿರಬೇಕು. ಇದರಲ್ಲಿ ದೊಡ್ಡ ಮತ್ತು ಸಣ್ಣ ರೈತ ಅಂದರೆ ಏನು ? ಯಾರು

ಉತ್ತಿದರೂ ಕೊಡುವುದು ದೇಶಕ್ಕೆ ತಾನೇ. Army ಯಲ್ಲಿ soldiers ಇದ್ದಾರೆ ನನ್ನ ಪ್ರಕಾರವಾಗಿ General of the country is also a soldier, ಆತನು ವಿದ್ಯಾರ್ಹತೆಗೆ ಅನುಗುಣವಾಗಿ ಆತ ಜನರಲ್ ಕೆಲಸ ಮಾಡುತ್ತಾನೆ, ಇನ್ನೊಬ್ಬ ಬಂದು ಹೆಗಲು ಮೇಲಿಟ್ಟುಕೊಂಡು ಬಾರ್ಡರ್‌ನಲ್ಲಿ ನಿಂತುಕೊಂಡು soldier ಕೆಲಸ ಮಾಡುತ್ತಾನೆ. But general terminology is they are all soldiers. Farmers ಅನ್ನು ಯಾರಾದರೂ farmer ಅವನು ಉತ್ಪನ್ನ ಮಾಡಿರುವುದನ್ನು ಅದನ್ನು ತೆಗೆದುಕೊಂಡು ಮನೆಯಲ್ಲಿ ಬಚ್ಚಿಟ್ಟುಕೊಳ್ಳುತ್ತಾನೆಯೇ ? ಇವರಿಗೆ ಯಾವ ತರಹದ mindset ಇದೆ ನೋಡಿ. ಅದನ್ನು ಮಾಡಿಬಿಟ್ಟು ಇವರಿಗೆ ಒಂದು rate of interest ಅಂತೆ ಅವರಿಗೆ ಒಂದು rate of interest ಅಂತೆ. ಸಣ್ಣ ರೈತ if he wants to buy that implement ಅದು ಅವನಿಗೆ ಪ್ರಯೋಜನಕ್ಕೆ ಬರುವುದಿಲ್ಲ. ಅದರ ಉಪಯುಕ್ತತೆ ಏನು ಇರುತ್ತದೆ ಇವನಿಗಿರುವ ಜಮೀನಿಗೆ ಅದು ಹೊಂದಾಣಿಕೆಯಾಗುವುದಿಲ್ಲ ಇದು ಹೆಚ್ಚು ಪ್ರಯೋಜನಕಾರಿಯಾಗುವುದಿಲ್ಲ. ಸ್ವಲ್ಪ ಅಂದರೆ 4 ಎಕರೆ ಜಮೀನು ಇರುವ ರೈತ ದೊಡ್ಡ ರೈತ ಎಂದು ಟೈಟಲ್ ತೆಗೆದುಕೊಂಡರೆ ಅವನಿಗೆ ಯಾವ ಸಹಕಾರ ಸಂಘವೂ ಸಾಲ ಕೊಡುವಂತಹ ಸ್ಥಿತಿಯಲ್ಲಿಲ್ಲ. ಇವರ ಸಬ್ಸಿಡಿ ಅವನಿಗೆ ಸಿಗುವುದಿಲ್ಲ. ಅವನು ಮಾಮೂಲು ಬ್ಯಾಂಕಿಗೆ scheduled bank ಗೆ, commercial bankಗೆ 13% interest ಗೆ ಹೋಗಬೇಕು. If I am wrong, the minister can intervene and correct me. How do you achieve this? Increased production ಮಾಡುವುದಕ್ಕೆ ಹೊರಟಿದ್ದೇವೆಂದು ಹೇಳುವಿರಲ್ಲಾ ? with this contradiction ಈ ಮೂಲಭೂತ ವಿಚಾರಗಳಿಗೆ ಗಮನವನ್ನು ಹರಿಸದೆ subsidies ಅನ್ನು provide ಮಾಡಿಕೊಂಡರೆ, ಸರ್ಕಾರ should not become a commission agent. ಇದು ಜನರ ವಿಶ್ವಾಸದಿಂದ ರಚನೆಯಾಗಿರುವಂಥ ಒಂದು ಸಂಸ್ಥೆ ಆಗಬೇಕಲ್ಲವೇ ? ಜನರ ಕನಸನ್ನು ಕಾಣಬೇಕಲ್ಲವೇ ? ಜನರ ಮನಸ್ಸು, ನೋವು ಎಲ್ಲಾ ಇಲ್ಲಿ ಪ್ರತಿಬಿಂಬವಾಗಬೇಕು. ಆದರೆ the story is different. ಹಾಗೆ ಹೋಗುತ್ತಾ ಮುಂದಕ್ಕೆ ಕಾರ್ಯಗಳ ಕುರಿತು ಸ್ಥೂಲ ವಿವರಣೆ, ಬೃಹತ್ ಪ್ರಮಾಣದಲ್ಲಿ ಸಾವಯವ ಕೃಷಿ ಪರಿಕರಗಳ ಗುಣಮಟ್ಟವನ್ನು ಕಾಪಾಡುವ ಸಲುವಾಗಿ

ವಿವಿಧ ಕಾಯ್ದೆಗಳನ್ನು ಜಾರಿಗೊಳಿಸುವುದು, ರಾಷ್ಟ್ರೀಯ ಕೃಷಿ ವಿಮಾದಿಂದ ಹಿಡಿದು ಎಲ್ಲಾ ಹೇಳಿಕೊಂಡು ಬಂದಿದ್ದಾರೆ. ಉತ್ತಮ ಗುಣಮಟ್ಟದ ಬೀಜೋತ್ಪಾದನೆ ಮತ್ತು ವಿತರಣೆಗಾಗಿ ಕಾರ್ಯಚಟುವಟಿಕೆಯನ್ನು ರೂಪಿಸುವುದು. ಇಲ್ಲಿಂದ ಗಾಂಧಿನಗರಕ್ಕೆ ಒಂದೂವರೆ ಕಿ.ಮೀ. ದೂರವಿದೆ ಅಷ್ಟೆ. ಗಾಂಧಿನಗರದಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಎದುರಿಗೆ ಹೋದರೆ, ಉತ್ತಮವಾದ ಬೀಜ ಎಲ್ಲಿ ಸಿಗುತ್ತದೆಂಬ ಬಗ್ಗೆ ಅಲ್ಲಿ ಐಡಿಯಾ ಸಿಗುತ್ತದೆ. ಅದು ಕ್ಯಾಬೇಜ್ ಆಗಬಹುದು, ಹೂಕೋಸು ಆಗಬಹುದು, ಕ್ಯಾಪ್ಸಿಕಂ ಆಗಬಹುದು, ಈಗ ನಮ್ಮ seeds ಯಾವುದೂ ಇಲ್ಲವೇ ಇಲ್ಲ. ನಮ್ಮಲ್ಲಿ ಮೊದಲು ಏನು original ಆಗಿ ಬೀಜ ಸಿಗುತ್ತಿತ್ತು ಅವೆಲ್ಲಾ ಇಲ್ಲವೇ ಇಲ್ಲ, ಮಾಯ ಆಗಿಬಿಟ್ಟಿದೆ. ಎಲ್ಲಾ ಮಾತನಾಡಿದರೆ Netherlands ಎನ್ನುತ್ತಾರೆ. ಅದು ಯಾವ್ಯಾವುದೋ ದೇಶ, ನಾವು ಗ್ಲೋಬ್‌ನಲ್ಲಿ ಹುಡುಕಬೇಕಾದ ದೇಶಗಳವು ಎಂದು ಹೇಳುತ್ತಾರೆ ಅವು ಎಷ್ಟು ಬುದ್ಧಿವಂತಿಕೆಯಿಂದ ಬರುತ್ತಿವೆ ಎಂದರೆ ನಮಗೆ ಬೀಜ ಕೊಡುವ ಮೊದಲೇ ಅದಕ್ಕೆ ಇಂಥ ಕಾಯಿಲೆಗಳು ಬರುತ್ತವೆ ಎಂಬುದು ಗೊತ್ತು. ಅದಕ್ಕೆ ಔಷಧಿಯನ್ನು ಕೂಡ ಅವನೇ ಹೇಳಿಬಿಡುತ್ತಾನೆ. ಹಾಗಾಗಿ ಆ ಬೀಜ, ಆಬೀಜಕ್ಕೆ ಬರಬೇಕಾದ ಕಾಯಿಲೆ ಎಲ್ಲವನ್ನು ಒಟ್ಟೊಟ್ಟಿಗೆ ತಂದುಕೊಡುತ್ತಾನೆ. ಕೆಲವರೆಲ್ಲಾ ಮಾತನಾಡಿದರು, ಕೆಲವರು ನುಸಿರೋಗದ ಬಗ್ಗೆ ಮಾತನಾಡಿದರು, ಕೆಲವು ಕಾಲದ ಹಿಂದೆ ಹೂಜಿ ಬಂದಿತು. ಈಗ ಪಪ್ಪಾಯಿಗೆ ವೈರಸ್ ಬಂದಿದೆ, ಇವು ಎಲ್ಲಿಂದ ಬಂದವು ? ನಮ್ಮ ಮಾವು ಮಾಯವಾಯಿತು, ನಮ್ಮ ಬೇವು ಮಾಯಾವಾಯಿತು, ನಮ್ಮ ಗರಿಕೆ ಮಾಯವಾಯಿತು, ಎಲ್ಲಾ ಕಡೆ ನೋಡಿದರೆ ಪಾರ್ಥೇನಿಯಂ ಸಿಗುತ್ತದೆ. ಕೆರೆ ತುಂಬಾ ಜಾಲಿ ಇದೆ. ಊರು ತುಂಬಾ ಜಾಲಿ ಇದೆ. ಕೆರೆಯೊಳಗಿರುವುದು ಕರಿ ಜಾಲಿ, ಊರೊಳಗಿರುವುದು ಬಳ್ಳಾರಿ ಜಾಲಿ, ಈ ಎಲ್ಲಾ ದೂರದೃಷ್ಟಿ ಇವರ ಸಂಶೋಧನೆ, ಇವರ ಬದ್ಧತೆ ಇವರೆಲ್ಲರ ಪ್ರಾಮಾಣಿಕ ಪ್ರಯತ್ನದಿಂದ ಮಾವು, ಬೇವು ಮಾಯವಾಗಿ ಪಾರ್ಥೇನಿಯಂ ಮತ್ತು ಕರಿಜಾಲಿ, ಬಳ್ಳಾರಿ ಜಾಲಿ ಬಂದಿದೆ. ಬೀಜಗಳಿಗೆ ಈಗ ಹಳ್ಳಿಗಳಲ್ಲಿ ತಾವು ನೋಡಿರಬಹುದು, including ಗೌರಿಬಿದನೂರು, ಆ ಊರಿನಲ್ಲಿ fertilizers ಅಂಗಡಿ, chemical stores ಇಡುತ್ತಾರೆ ಏಕೆ ? ಮೊದಲಿದ್ದವೇ ? ಕಾಯಿಲೆಗಳು ಈಗ ಜಾಸ್ತಿಯಾಗಿವೆ. ಕಾಯಿಲೆಗಳು ಜಾಸ್ತಿ ಬರುವಂಥ ಬೀಜಗಳನ್ನು ಉತ್ಪಾದನೆ

ಮಾಡಿ ನಮಗೆ ಕೊಡುವುದು ನಾವೆಲ್ಲಾ table variety ಪಪ್ಪಾಯಿ ಶುರು ಮಾಡಿದೆವು. ನಾಲ್ಕು ಕಾಸು ಮಾಡಿದೆವೋ ಇಲ್ಲವೋ ಎರಡು ಮೂರು ವರ್ಷಗಳಾಗುವಷ್ಟರಲ್ಲಿ ಎಲ್ಲಾ ಕಡೆಗಳಲ್ಲಿ ಈಗ ಪಪ್ಪಾಯಿಗೆ ವೈರಸ್ ಬಂದಿದೆ. ಆ ಗಿಡ ಬೆಳೆದ ಹಾಗೆ ಇರುತ್ತದೆ, ರೋಗ ಬಂದುಬಿಡುತ್ತದೆ. ಆಮೇಲೆ ಏನು ಮೂರು ಕಾಸು ಕೆಲಸಕ್ಕೆ ಬರುವುದಿಲ್ಲ. ಅದನ್ನು stop ಮಾಡಿ ಇನ್ನೊಂದಕ್ಕೆ ನಾವು ತಿರುಗಿಕೊಳ್ಳುವ ಹೊತ್ತಿಗೆ ಅದಕ್ಕೆ ರೋಗ ಬರುತ್ತದೆ. ನುಗ್ಗೇಕಾಯಿ ಬೆಳೆ ಇವ್ಯಾವುದನ್ನು ನಾವು ಉದ್ದೇಶಪೂರ್ವಕವಾಗಿ ಬೆಳೆಯುತ್ತಿದ್ದ crops ಅಲ್ಲ. ನಮ್ಮ ತೋಟಗಳಲ್ಲಿ, ಹೊಲಗಳಲ್ಲಿ ರಸ್ತೆ ಬದಿಗಳಲ್ಲಿ ಇರುತ್ತಿದ್ದವು. ಅಂದರೆ ಇದಕ್ಕೆ ಹಣ ಸಿಗುತ್ತದೆಂದು ಆಸೆ ಹುಟ್ಟಿಸಿ ಸಂಶೋಧನೆ ಮಾಡುತ್ತೇವೆಂದು ಹೇಳಿ ಇದ್ದ ತಳಿಯೂ ಹೋಗಿಬಿಟ್ಟಿತು, ಅವು ಯಾವುದೂ ಉದ್ಧಾರವಾಗುವುದಿಲ್ಲ. ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದಾರೋ, ಇವರ ಇಲಾಖೆ, ಇವರ ಅಸ್ತಿತ್ವ ಒಂದೂ ಗೊತ್ತಾಗುವುದೇ ಇಲ್ಲ. ಇವರ ವಾರ್ಷಿಕ ವರದಿಯ ಪುಟ-5 ರಲ್ಲಿ 'ರಾಜ್ಯ ವಲಯ ಯೋಜನೆಗಳು' ಎಂದಿದೆ, ಇವೆಲ್ಲಾ ಹುಡುಕಿ ಕೃಷ್ಣಾ ಬೈರೇಗೌಡರೆ, ಇದರ ತುಂಬಾ ಉದ್ಯೋಗದ ಬಗ್ಗೆ ಇದೆ, Directors ಎಷ್ಟಿರಬೇಕು, Assistant Director ಎಷ್ಟಿರಬೇಕು, C-group ಎಷ್ಟಿರಬೇಕು, Assistant ಎಷ್ಟಿರಬೇಕು, ಉಳಿದವರೆಲ್ಲಾ ಎಷ್ಟೆಷ್ಟು ಇರಬೇಕು ಎಂದು ಇದೆ. ಇಲ್ಲಿ ನಾವು ಹೇಳಿದ್ದೂ ಯಾವುದು ಬರುವುದಿಲ್ಲ. I don't want to go into the details. ಈ ಇಲಾಖೆಗೆ ಒಂದು ವರ್ಷಕ್ಕೆ ಹಣವನ್ನು ಖರ್ಚು ಮಾಡಬೇಂದೆಂದು ನೀವು ಏನು ಉದ್ದೇಶ ಮಾಡುತ್ತೀರಿ, ಇವರ ಎಷ್ಟು ಭಾಗದ ಹಣವನ್ನು ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿರುವಿರಿ. plan and Non-plan ಎಂದು ನೀವೇನು ಹೇಳುತ್ತೀರಿ, ಅನುತ್ಪಾದಕ ವೆಚ್ಚ, ಯೋಜನೇತರ ವೆಚ್ಚ, ಸಂಬಳ ಸಾರಿಗೆ ಇರಬಹುದು ಬೇಡವೆಂದು ಹೇಳುವಂತಿಲ್ಲ. ಸದನ ಪ್ರಾರಂಭವಾಗುವುದಕ್ಕೆ ಮೊದಲು ಐದು ನಿಮಿಷ ಮಂತ್ರಿಗಳ ಹತ್ತಿರ ನಾನು ಮಾತನಾಡುತ್ತಿದ್ದೆನು. ಬೆಂಗಳೂರಿನಲ್ಲಿ ಈ ಪ್ರೈವೇಟ್ ಕಂಪೆನಿಯವರೆಲ್ಲಾ ಕೋಟ್ಯಂತರ ರೂಪಾಯಿಗಳಷ್ಟು ಬಂಡವಾಳ ಹಾಕಿ ನಾಲ್ಕು-ಐದು ಜನ ಕುಳಿತುಕೊಳ್ಳುತ್ತಾರೆ. Multi-national company ಗಳಲ್ಲಿ ಹೊರಗಡೆಯಿಂದ ವ್ಯಾಪಾರ ಮಾಡಲಿಕ್ಕೆ ಬರುವವರು ಹತ್ತು ಜನಗಳ ಮೇಲೆ ಉದ್ಯೋಗಕ್ಕೆ

ಇಟ್ಟುಕೊಳ್ಳುವುದಿಲ್ಲ. ಆದರೆ ಇವರಿಗೆ ಮಾತ್ರ ನಮ್ಮ ಮೇಲೆ ಖರ್ಚು ಮಾಡುವುದಕ್ಕಿಂತ ಇವರನ್ನು ಸಾಕಲಿಕ್ಕೆ ಖರ್ಚು ಮಾಡುವ ಹಣವೇ ಜಾಸ್ತಿಯಾಗಿದೆ. ಏಕೆ ? ಇವರನ್ನೆಲ್ಲಾ ಸಾಕಲೇಬೇಕು ಎಂದು ನಿಮ್ಮ ಮೇಲೆ ಏನಾದರೂ Constitutional Binding ಇದೆಯೇ ? ಅವರನ್ನು ತೆಗೆದರೆ strike ಮಾಡುತ್ತಾರಂತೆ, ಹೌದು, ಗ್ಯಾರಂಟಿ ಮಾಡುತ್ತಾರೆ, ಏಕೆಂದರೆ strike ಮಾಡುವುದಕ್ಕೆ ಅವರಿಗೆ ಶಕ್ತಿ ಇದೆ, ಸಂಘ ಕಟ್ಟಿಕೊಳ್ಳುವುದಕ್ಕೆ, ನಾವು ಇಂಥ ಕೆಲಸ ಮಾಡುವವರು ಎಂದು title ಕೊಟ್ಟಿದ್ದೀರಿ. strike ಮಾಡುವುದಕ್ಕೆ ಈಗಾಗಲೇ ಹಳೆಯ ಸೆಂಟ್ರಲ್ ಜೈಲ್ ಹತ್ತಿರ ಜಾಗ ಮಾಡಿಟ್ಟಿದ್ದೀರಿ. ನಾವು ರೈತರು ಎಲ್ಲಿ strike ಮಾಡುವುದು ? ನಾವೇನೂ strike ಮಾಡುವ ಹಾಗಿಲ್ಲ. ನಮ್ಮದೊಂದೇ strike, ಉಪವಾಸ ಸತ್ಯಾಗ್ರಹ. ನಮ್ಮದು undeclated hunger strike. ಇದ್ದರೆ ತಿನ್ನುವುದು ಇಲ್ಲದಿದ್ದರೆ ಉಪವಾಸ ಇರುವುದು. ಎಷ್ಟು ಜನ ಯೂನಿವರ್ಸಿಟಿಗಳ ಬಗ್ಗೆ ಹೇಳುತ್ತಿದ್ದರು, ನಾನು ಮಾತನಾಡುವಾಗ ನೀವು ಸದನದಲ್ಲಿರಬೇಕೆಂದು ಶಿವಲಿಂಗೇಗೌಡರಿಗೆ ನಾನು ಕಂಡಿಷನ್ ಹಾಕಿದ್ದೆ. ನೋಡಿ ಅವರು ಎಲ್ಲೋ ಹೋಗಿದ್ದಾರೆ. ಇದು best, ಕೃಷ್ಣಾ ಬೈರೇಗೌಡರೆ ನಿಮ್ಮ ಕಾಲದಲ್ಲಿ ಒಂದು ಕೆಲಸ ಮಾಡಿ, Horticulture University ಆಯಿತು. Next ಟೊಮ್ಯಾಟೊಗೆ ಒಂದು, Potatoಗೆ ಒಂದು ಯೂನಿವರ್ಸಿಟಿ ಮಾಡಿಬಿಡಿ. MLAs ಅನ್ನು Vice-chancellors ಮಾಡಿ. ಇನ್ನು ಅಧಿಕಾರದ ಸಲುವಾಗಿ ಗಲಾಟೆಗಳಿವೆ. ಈಗಿರುವ Boards, Corporations ಸಾಕಾಗುವುದಿಲ್ಲ. Next ಅವರು ಬಿಜೆಪಿಯವರೇನಾದರೂ ಅಧಿಕಾರಕ್ಕೆ ಬಂದರೆ ಅವರಿಗೂ share ಮಾಡಿಕೊಳ್ಳುವುದಕ್ಕೆ ನೀವೆಲ್ಲಾ ಸೇರಿ ಒಪ್ಪಿಗೆ ಕೊಟ್ಟರೆ ಸುಲಭವಾಗುತ್ತದೆ. ಕೆಲವರು ಟೈ ಅನ್ನು ಹಿಂದಕ್ಕೆ ಆದರೂ ಹಾಕಿಕೊಳ್ಳಬಹುದು, ಮುಂದಕ್ಕಾದರೂ ಹಾಕಿಕೊಳ್ಳಬಹುದು, ಕೆಲವರು ಟೈ ಗಟ್ಟಿಯಾಗಿ ಹಾಕಿಕೊಳ್ಳಿ, ಕೆಲವರು ಎಳೆದುಕೊಳ್ಳಲಿ problem ಇರುವುದಿಲ್ಲ. ದ್ರಾಕ್ಷಿಗೊಂದು, ದಾಳಿಂಬೆಗೊಂದು ಯೂನಿವರ್ಸಿಟಿ ಬೇಕೆಂದು ಬಿಜಾಪುರದವರು ಕೇಳುತ್ತಾರೆ, ಆಯಿತು, ಅದೂ ಮಂಜೂರಾಯಿತು, ಇನ್ನು ಬೋಪಯ್ಯನವರು ಇಲ್ಲಿ ಒಂದು ಕೇಳಿದರೆ ಕಾಫಿಗೊಂದು, ಏಲಕ್ಕಿಗೊಂದು ಯೂನಿವರ್ಸಿಟಿ ಕೊಡುತ್ತೇವೆ. ಇವರಿಗೇನಾದರೂ ಒಂದು ಬದ್ಧತೆಯಿದೆಯೇ ? ಒಂದು ಯೂನಿವರ್ಸಿಟಿ ಎಂದರೆ

ಇವರು ಅಲ್ಲಿ ಕೊಡತಕ್ಕಂಥ ಶಿಕ್ಷಣ, ತರಬೇತಿ; ಸಂಶೋಧನೆ Extension work ನಿಂದ ಜೈವಿಕ ಜೀವನದಲ್ಲಿ ನಮಗೇನಾದರೂ ಮೂರು ಕಾಸಿನ ಪ್ರಯೋಜನ ಇದೆಯೇ? ನಮ್ಮಲ್ಲಿ ಎಲ್ಲಾ ಕಡೆ ಹಳ್ಳಿಗಳಲ್ಲಿ ನಾವು ಹೊಲಕ್ಕೆ ಬೇಲಿಗೆ ಏನು ಹಾಕುತ್ತಿದ್ದೆವು, ಅಧ್ಯಕ್ಷರೆ ? ಕತ್ತಾಳೆಯನ್ನು ಹಾಕುತ್ತಿದ್ದೆವು. ಕತ್ತಾಳೆಯನ್ನು ಯಾವ ಶತಮಾನದ ಹಿಂದೆ ಯಾವ ಪುಣ್ಯಾತ್ಮ ಕಂಡುಹಿಡಿದನೋ ಅದನ್ನು ಒಂದು ಸಾರಿ ಹಾಕಿಬಿಟ್ಟರೆ ಮಳೆಗಾಲದಲ್ಲಿ ಬರುವ ವರ್ಷಕ್ಕೆ ಅದು ಗಟ್ಟಿಯಾಗಿ ಬಿಡುತ್ತದೆ. ಇನ್ನೂ ಸ್ವಲ್ಪ ಗಟಿಯಾಗಿರಬೇಕೆಂದರೆ ಮುಳ್ಳು ಜಾಸ್ತಿ ಇರುತ್ತದೆಂದು ನಾಗದಾಳಿ ಹಾಕುತ್ತಿದ್ದೆವು. ಇವತ್ತಿನವರೆಗೆ ಕತ್ತಾಳೆಗೆ, ನಾಗದಾಳಿಗೆ ಒಂದು substitute fencing ಕಂಡುಹಿಡಿಯುವುದಕ್ಕೆ ಇವರ ಕೈಯಲ್ಲಿ ಆಗಲಿಲ್ಲ. ಎಷ್ಟು ಯೂನಿವರ್ಸಿಟಿಗಳು, ನಾನು ಪ್ರೊಫೆಸರ್, ನಾನು ಅಸೋಸಿಯೇಟ್ ಪ್ರೊಫೆಸರ್, ನಾನು ಸೀನಿಯರ್ ಪ್ರೊಫೆಸರ್, ಎಂದು ಯಾರು ನೋಡಿದರೂ visiting cards ಕೊಡುತ್ತಾರೆ. Vice chancellors ಬಗ್ಗೆ ಬಂದರೆ ನಮ್ಮ ಜೀವ ತಿಂದುಬಿಡುತ್ತಾರೆ, ನಮಗೆ ರೂಮ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲ. ಸರ್, ನಮ್ಮದು ನೋಡಿ, ನಮ್ಮ sub-caste ಗೆ ಯಾರಿಗೂ ಕೊಟ್ಟಿಲ್ಲ. ನಮ್ಮವರನ್ನು ಯಾರನ್ನೂ ಮಾಡಿಲ್ಲ, ಸರ್ ಆ sub-caste ನವರು ಇದ್ದಾರೆ. Vice chancellor ನ್ನೆಲ್ಲಾ sub-caste basis ಮೇಲೆ ಮಾಡುವುದು. ಇವರ ದರ್ಬಾರು ನೋಡಬೇಕು. Just, I was asking the Head of the Agriculture Department. Entomology ಎಂದರೆ ಏನಪ್ಪಾ ಎಂದು ಕೇಳಿದೆ. ನಾನು ಆ ಆಗ್ರಿಕಲ್ಚರ್ ಯೂನಿವರ್ಸಿಟಿಗೆ ಹೋಗಿದ್ದೆ. ನಾನು ಕೇವಲ ಆ ಜೇನು ಸಾಕಣೆ ಮಾಡುವುದಷ್ಟೇ ಎಂದು ಮಾಡಿದ್ದೆ. ಅದರಲ್ಲಿ ಎಲ್ಲಾ insects ಬರುತ್ತದೆಂದು ಹೇಳಿದ್ದಾರೆ. Entomology Department ಅಲ್ಲಿ ಎಷ್ಟು ಜನ ಇದ್ದಾರೆಂದು ಗೊತ್ತಿಲ್ಲ. ಅವರ ಕೆಲಸ ಏನು ? You are an alumni of the Agriculture University. We are proud of you. You must have undergone all these things. At the end of the year, Entomology ಯಿಂದ ಈ ರಾಜ್ಯದ ಜನರಿಗೆ total benefit ಏನು ? God knows.

Fisheries ಬಗ್ಗೆ ಹೇಳುವುದಾದರೆ, ಆ inland fisheriesಗೆ ಹೋದರೆ ರಾಹು, ಕ್ಯಾಟ್‌ಲಾಗ್ ಬಿಟ್ಟರೆ ಮೂರನೇ varietyಯನ್ನು ಇವತ್ತಿನವರೆಗೂ

ಕಂಡುಹಿಡಿಯಲೇ ಇಲ್ಲ. ಕೆರೆ ನೀರಿಗೆ ಬರುವಂತಹ, ಅಲ್ಲಿ ಸಿಗತಕ್ಕಂತಹ ನಮ್ಮ ಹಳೆಯ ತಳಿಗಳು ಏನಿವೆ, ಕೆರೆಗಳೆಲ್ಲಾ ಒಣಗಿ ಹೋಗಿ ಅವು ಕೂಡ extinct ಆಗುತ್ತಿವೆ. ಅದನ್ನು ತಿನ್ನತಕ್ಕಂತಹವರು, ಉಪಯೋಗ ಮಾಡುವ ಅಭ್ಯಾಸ ಇರುವವರಿಗೆ ಉತ್ತಮವಾದಂತಹ ಒಂದು ತಳಿಯನ್ನು ಕಳೆದ ಇಷ್ಟು ವರ್ಷಗಳಲ್ಲಿ ಕಂಡುಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಏನಪ್ಪ ಮಾನ್ಯ ಕೃಷ್ಣ ಬೈರೇಗೌಡರೇ ? Is there any third variety ? ಮಲ್ಲಿಕಾ ಬಿಟ್ಟರೆ mango ನಲ್ಲಿ ಬೇರೆ ತಳಿಯಿಲ್ಲ. ರಾಗಿಯಲ್ಲಿ 3–4 ತಳಿ ಮಾಡಿದ್ದಾರೆ. ಇತ್ತೀಚೆಗೆ ಮಾನ್ಯ ಲಕ್ಷ್ಮಣಯ್ಯನವರು ಹೋದಮೇಲೆ ಅದೂ ಕೂಡ ಇಲ್ಲ. ಇವರಿಗೆ 10 ವರ್ಷಗಳಾದ ತಕ್ಷಣ compulsory ಯಾಗಿ promotion ಕೊಡಲೇಬೇಕು. ನಾವು ಮಾತ್ರ 5–5 term ಆದರೂ ಹಾಗೆಯೇ ಇರಬೇಕು. ನೋಡ್ರಿ ಅಶೋಕ್, ನೀವೇ ಪುಣ್ಯವಂತರು. ಎಷ್ಟು ಬೇಗ Deputy Chief Minister ಆಗಿಬಿಟ್ಟರಿ. ಅವರು ನೋಡಿ Chief Minister ಆಗಿಬಿಟ್ಟರು. ನಾವು ಹೋದವರಿಗೆಲ್ಲಾ ಜ್ಯೂನಿಯರ್ಸ್ ಹಾಗೂ ಬರುವವರಿಗೆಲ್ಲಾ ಸೀನಿಯರ್ಸ್. ಹೇಗಿದೆ ನೋಡಿ ? 10 ವರ್ಷಗಳ ಕಾಲ ಪ್ರೊಫೆಸರ್ ಆಗಿ ಕೆಲಸ ಮಾಡಿದರೆ ಅವರಿಗೆ ಒಂದು ಲಕ್ಷ ರೂಪಾಯಿಗಳ ಸಂಬಳ ಕೊಡಲೇಬೇಕು. ಜಾಸ್ತಿನಾ? Director ಅನ್ನು ನಿಮಗೆ ಎಷ್ಟು ಸಂಬಳ ಎಂದು ಕೇಳಿದೆ. ಅವರು ಇಡೀ ಸರ್ವಿಸ್ ಎಲ್ಲಾ ಮಾಡಿ lastಗೆ retired ಆಗುವ timeಗೆ Minister ಹತ್ತಿರ ಕಾಡಿಬೇಡಿ ಏನೋ ಮಾಡಿಕೊಂಡು Director ಆದರು. ಅದು ಏನೋ ಪಾಪ, ಮಕ್ಕಳ ಮದುವೆ ಮಾಡುವುದಕ್ಕೆ ಕಾರ್ಡ್‌ನಲ್ಲಿ ಅವರ designation ಅನ್ನು Director(Retired) ಎಂದು ಹಾಕಿಸಿಕೊಳ್ಳುವುದಕ್ಕೆ ಮಾಡಿಕೊಂಡಿದ್ದಾರೆ. ಅವರಿಗೆ 85 ಸಾವಿರ ರೂಪಾಯಿ ಸಂಬಳ. ಈ ಲಕ್ಷಾಂತರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವಂತಹ ಪ್ರೊಫೆಸರ್‌ಗಳು ಕತ್ತಾಳೆಗೆ ಒಂದು alternative ಕಂಡುಹಿಡಿಯುವುದಿಲ್ಲ. ಪಾರ್ಥೇನಿಯಂ ಅನ್ನು eradicate ಮಾಡುವುದು ಹೇಳುವುದಿಲ್ಲ. ಊರು ತುಂಬಾ ಇರುವ ಜಾಲಿ ತೆಗೆಯುವುದು ಹೇಳುವುದಿಲ್ಲ. ಯಾವ ಸೌಭಾಗ್ಯಕ್ಕೆ ಬೇಕು ? Why don't you go in for serious, drastic changes in the very department itself ? ನಿಮಗೆ ಏನಾದರೂ Government of India ಅಡ್ಡ ಬರುತ್ತದೆಯೇ ? ನಿಮ್ಮನ್ನು ಜೈಲಿಗೆ

ಹಾಕುತ್ತಾರಾ ? Get rid of this whole thing. ಬೇಕಾಗಿರುವಂತಹ Technical know-how ಅನ್ನು outsource ಮಾಡಿಕೊಳ್ಳಿ. Reduce your hierarchy to 1/10th of what it is today. Multi-National Companies ರವರು ಮಾಡುವುದಕ್ಕೆ ಆಗುತ್ತದೆ, ನೀವು ಮಾಡುವುದಕ್ಕೆ ಆಗುವುದಿಲ್ಲವೇ ? ದೊಡ್ಡ ದೊಡ್ಡ ಕೋಟ್ಯಾಧೀಶರು ವ್ಯಾಪಾರ ಮಾಡುವಾಗ ಬಂಡವಾಳ ಹಾಕುವಾಗ ಮಾಡುವುದಕ್ಕೆ ಆಗುತ್ತದೆ. ನೀವು ಮಾಡುವುದಕ್ಕೆ ಆಗುವುದಿಲ್ಲವೇ ? ಅವರು strike ಮಾಡಲಿ ಇನ್ನೊಂದು ಮಾಡಲಿ. ನಿಮಗೆ ಏನಾದರೂ ಚರಿತ್ರೆಯಲ್ಲಿ ಇರಬೇಕೆಂದು ಆಸೆ ಇದ್ದರೆ, you are an young man. Take a decision. You start with your department. ಬೆಳಿಗ್ಗೆ ನಾವು education ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಅಂಗನವಾಡಿ ಮಕ್ಕಳಿಗೆ ಕಟ್ಟಡ ಇಲ್ಲವಂತೆ. ಹೈಸ್ಕೂಲ್‌ಗೆ ಹೋಗುವ ಹೆಣ್ಣುಮಕ್ಕಳಿಗೆ ಶೌಚಾಲಯ ಇಲ್ಲವಂತೆ. ಶಾಲೆ ಮುಚ್ಚುವುದಿಲ್ಲವಂತೆ. ಆಯ್ಯೋ ರಾಮ, ಆ department ನಲ್ಲಿ ಡೈರೆಕ್ಟರ್‌ಗಳೇ 14 ಜನರಿದ್ದಾರೆ. ಅವರ ಮೇಲೆ Secretary, Commissioner, Special Secretary, Additional Secretary. ಏನು ನಮ್ಮ ತಾತ, ನಿಮ್ಮ ತಾತ ಸತ್ತು ಸುಣ್ಣ ಆಗಿ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದಿದ್ದು ಇವರನ್ನು ಸಾಕುವುದಕ್ಕೇನು? ಲಾರ್ಡ್ ಮೆಕಾಲೆ ಹೇಳಿ ಹೋಗಲಿಲ್ಲವೇ ? ಅವರು ಎಂದರೆ, he was loyal to the East India Company. ಆ ಕಂಪನಿ ನಡೆಸುವುದಕ್ಕೆ ಅವನು ಕೊಡಬೇಕಾಗಿತ್ತು, it's O.K. ನಮಗೂ ಅದೇ ನಿರ್ಬಂಧವಿದೆಯೇನು ? why don't you think differently ? ಆ ಯೂನಿವರ್ಸಿಟಿಗೆ ರೈತನ ಬದುಕಿಗೆ ಕೃಷಿ ಮೇಳ. ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಬರೆದಿಟ್ಟುಕೊಂಡಿದ್ದೇನೆ. It may take a long time. ನೀವು ನನಗೆ ಪರಿಚಯಸ್ಥರು, ಪಾಪ ನಿಮಗೂ ಸುಮ್ಮನೆ ಬೆಲ್ ಹೊಡೆಯುವುದಕ್ಕೆ ಆಗುವುದಿಲ್ಲ. ನಿಮ್ಮ ಕಷ್ಟ ನನಗೆ ಅರ್ಥವಾಗುತ್ತದೆ. ನಾನು ಇವೆಲ್ಲಾ ಹೇಳದೇ ಇರುವುದಕ್ಕೂ ಆಗುವುದಿಲ್ಲ. ನಮ್ಮ ಜಿಲ್ಲೆಗೆಲ್ಲಾ ನೀವು ಇಂತಹವೇ ಕೊಟ್ಟಿರುವುದು. ಮೆಷಿನರಿದು ಈಗಾಗಲೇ ನಾನು ಹೇಳಿಬಿಟ್ಟೆ.

ಶ್ರೀ ಬಿ.ಆರ್. ಪಾಟೀಲ್ : Time buy ಮಾಡಲಿಕ್ಕೆ ಇದು ಒಂದು ನಿಮ್ಮ diplomacy.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇಲ್ಲಪ್ಪ, ನಾನು time buy ಮಾಡುತ್ತಿಲ್ಲ. you see certain things can't be ..... ಕೃಷಿ ಲಾಭದಾಯಕ. ಇದನ್ನು ಹೇಗೆ ಮಾಡುತ್ತೀರಿ ಲಾಭದಾಯಕ ? ನಿಮ್ಮನ್ನು ನಾನು ಕೇಳುತ್ತಿದ್ದೇನೆ ?

ಶ್ರೀ ಬಿ.ಆರ್. ಪಾಟೀಲ್ : 2020ನೇ ಇಸವಿಗೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅಲ್ಲ, ಲಾಭದಾಯಕ ಎಂದರೆ ನಿಮ್ಮ concept ಏನು ? ನಾನು ಏನು ಬಂಡವಾಳ ಹೂಡುತ್ತೇನೆ ಅದಕ್ಕಿಂತ ನಾಲ್ಕು ಕಾಸು ಹೆಚ್ಚಿಗೆ ಬಂದವು. ನನಗೆ ದಿನನಿತ್ಯ ಜೀವನಕ್ಕೆ ಬೇಕಾಗಿರುವ ಬೇರೆ ನಾನು ಕೊಡಬೇಕಾಗಿರುವ ಪದಾರ್ಥಗಳನ್ನು ಕೂಡ ಆ ಹಣದಲ್ಲಿ ನಾನು adjust ಮಾಡಿಕೊಂಡು, ನಾನು ಸಾಲ ಮಾಡದೇ, ದುಃಖಕ್ಕೆ ಈಡಾಗದೇ ಗೌರವವಾಗಿ ಜೀವನ ಮಾಡಿದರೆ ಅದು ನನ್ನ ಪ್ರಕಾರ ರೈತರಿಗೆ ಲಾಭ. ನಾವು ಆ ಸ್ಥಿತಿಯಲ್ಲಿದ್ದೀವಾ? ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ ಹಾಲು ಉತ್ಪಾದನೆ ಮಾಡುತ್ತಾರೆ, ಆದರೆ, ಡೈರಿಗೆ ಹಾಲು ಹಾಕಿದರೆ ಕಾಸು ಬರುತ್ತದೆ ಎನ್ನುವ ಆಸೆಗೆ ಮನೆಯಲ್ಲಿ ಎಳೆ ಮಗುವಿದ್ದರೂ ಸಹ ಒಂದು ಲೋಟ ಹಾಲು ಇಟ್ಟುಕೊಳ್ಳುವುದಿಲ್ಲ. ಬಾದಾಮಿ ಬೆಳೆಯುತ್ತಾರೆ, ಕಾಸು ಬರುತ್ತದೆ ಎಂದು ಮಾರ್ಕೆಟ್‌ಗೆ ಹಾಕುತ್ತಾರೆ. ಅದಕ್ಕೆ ಬೇರೆ ಈಗ ಯಾವುದೋ ಒಂದು ಶುರುವಾಗಿದೆ. ನಾವು import ಮಾಡಿಕೊಳ್ಳುವುದಿಲ್ಲ. ಅದನ್ನು ban ಮಾಡಿದ್ದೇವೆ ಎನ್ನುತ್ತಾರೆ. ಇವೆಲ್ಲಾ ಯಾರು ಸೃಷ್ಟಿ ಮಾಡುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ನಮಗೆ ರೈತರಿಗೆ ಇದಕ್ಕೆ ಯಾವ ಯೂನಿವರ್ಸಿಟಿಯವರಾದರೂ ಈಚೆ ಬಂದು ಮಾತನಾಡಿದರಾ ? ಯಾವ ರಿಸರ್ಚ್‌ನವರಾದರೂ ಬಂದು ಮಿನಿಸ್ಟರ್‌ರವರನ್ನು ಮೀಟ್ ಮಾಡಿ, ಸರ್ಕಾರದವರನ್ನು ಮೀಟ್ ಮಾಡಿ ಇಷ್ಟು mango ಉತ್ಪತ್ತಿ ಮಾಡುತ್ತಿದ್ದೇವೆ, ಇವತ್ತು sudden ಆಗಿ import ಅನ್ನು cancel ಮಾಡಿದರೆ, export ಹೋಗದೇ ಹೋದರೆ ನಮ್ಮ ರೈತರಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರಾ ? ಅವರಿಗೆ ಕೆಲಸವಿಲ್ಲವೇ, ಅದು ಅವರ ಜವಾಬ್ದಾರಿಯಲ್ಲವೇ ? War declare ಆದರೆ, ಪಾಕಿಸ್ತಾನದವನು ಬಾರ್ಡರ್‌ಗೆ ಬಂದರೆ, ನಮ್ಮ ಸೈನಿಕ ಹೇಳುವವರೆಗೆ ಕಾಯುತ್ತಿರುತ್ತಾನಾ ಅಥವಾ ಮೊದಲೇ ಹೋಗುತ್ತಿರುತ್ತಾನಾ ? ಮಳೆ ಬಿದ್ದ ತಕ್ಷಣ ಹೆಗಲಿಗೆ ನೇಗಿಲು ಹೇರಿಸಿಕೊಂಡು

ಇವನು ಹೋಗುತ್ತಾನಾ ಅಥವಾ Chief Minister phone ಮಾಡಿ ಹೇಳಬೇಕು, Agriculture Minister phone ಮಾಡಬೇಕು ಎಂದು ಉಳುವುದಕ್ಕೆ ಕಾಯುತ್ತಾನಾ? ಇಂತಹ ಜನರಿಗೆ ಸಮಸ್ಯೆ ಬಂದರೆ, ಆಪತ್ತು ಬಂದರೆ ನೀವು ಸ್ಪಂದಿಸುವುದಿಲ್ಲ. ಸ್ಪಂದಿಸುವ ವ್ಯವಸ್ಥೆಯೇ ನಿಮ್ಮಲ್ಲಿ ಇಲ್ಲ. ಬಿ.ಆರ್. ಪಾಟೀಲ್‌ರವರು ಆ ಪದಾರ್ಥ ಹೀಗೆ ಎಂದು ಹೇಳುತ್ತಿದ್ದರು. ಬಿ.ಆರ್.ಪಾಟೀಲ್‌ರವರೇ, ನಮ್ಮ ಸಿಸ್ಟಮ್ ಹೇಗೆ ಗೊತ್ತೇ ? ಪಂಜಾಬ್‌ನಿಂದ ಬೆಳೆದ ಗೋಧಿಯನ್ನು ಅಲ್ಲಿಗೆ ಕಳುಹಿಸುವುದು, ಅಲ್ಲಿಂದ ಚಪಾತಿ ತರಿಸಿಕೊಳ್ಳುವುದು pizza ಎಂದು ಮಾರುವುದು. ಗೋಧಿಯನ್ನು export ಮಾಡಿ, ಚಪಾತಿಯನ್ನು import ಮಾಡಿಕೊಳ್ಳುವುದು ನಮ್ಮದು ಈ ಸ್ಕೀಂ. ಸ್ಟೀಲ್ import ಮಾಡಿಬಿಡುವುದು, ಕೊಳೆತು ಹೋಗುವುದು ಏನಾದರೂ ಇದ್ದರೆ ಅದನ್ನು ಅಲ್ಲಿಂದ ತರಿಸಿಕೊಳ್ಳುವುದು. This is the way we function. ಶಾಕ್ ಆಗುತ್ತದೆ. Open General Licence (OGL) ಎಂದು Ministry of Trade and Commerce, Government of India ದಲ್ಲಿದೆ. Commerce Minister ಆಗಿರುವವರಿಗೆ discretion ಯಾವುದನ್ನು ಬೇಕಾದರೂ ಆ OGL ನಲ್ಲಿ ಸೇರಿಸಬಹುದು, ಯಾವುದನ್ನು ಬೇಕಾದರೂ delete ಮಾಡಬಹುದು. I am not casting aspersions on any Commerce Minister. But the practice is, ಆಯಾಯ ಮಂತ್ರಿಗಳನ್ನು ಸಂಬಂಧಿಸಿದವರು ಹೋಗಿ ನೋಡಿದ ಹಾಗೆಲ್ಲಾ ಕೆಲವು ಪದಾರ್ಥಗಳನ್ನು OGL ನಲ್ಲಿ ಸೇರಿಸುವುದು, ಕೆಲವನ್ನು ತೆಗೆಸುವುದು. ಸವದಿಯವರೇ, ನೀವು ಕಬ್ಬು ಉತ್ಪಾದಕರಿದ್ದೀರಿ, ಸಕ್ಕರೆ ಜಾಸ್ತಿ ಬೆಳೆದಿದ್ದೀರಿ. ಹಾಗಾಗಿ ಸಕ್ಕರೆಯನ್ನು ಇಲ್ಲಿಗೆ ತರಿಸಿಕೊಳ್ಳುವುದು. OGLಗೆ ಅದನ್ನು ಹಾಕಿಬಿಡುವುದು. ಆ ಸಕ್ಕರೆಯೂ ಇಲ್ಲಿಗೆ ಬಂದು ಬಿದ್ದರೆ ಅವನಿಗೆ cost of production ಕಡಿಮೆಯಾಗುತ್ತದೆ. ನಿಮ್ಮದು ಹೆಚ್ಚು, ನಿಮ್ಮ ಸಕ್ಕರೆಯನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ನೀವು ಇಲ್ಲಿ ಹಾಯ್ದುಕೊಳ್ಳುವುದು. ಅವನು OGLಗೆ ಸೇರಿಸಬೇಕಾಗಿದ್ದರೆ ಯಾರನ್ನು consult ಮಾಡಬೇಕು ಎನ್ನುವ ನಿರ್ಬಂಧ ಈ ದೇಶದಲ್ಲಿ ಇಲ್ಲ. ಅವನು ನನ್ನ term ಇಷ್ಟು ದಿವಸಗಳ ಕಾಲ ಇರುತ್ತದೆ, ಈ portfolio ಯಾವಾಗ change ಆಗುತ್ತದೋ ನಾನು ಇರುವವರೆಗೆ ನನ್ನ business ನಾನು ಮಾಡಿಕೊಂಡು ಹೋಗುತ್ತೇನೆ

ಎಂದು ಇರುತ್ತಾರೆ. ಈ ದೇಶವನ್ನೇ ಹೀಗೆ ನಡೆಸಕೊಂಡು ಹೋಗಿದ್ದಾರೆ. Demand and Supply theory. Cropping pattern ಬಗ್ಗೆ ಇವತ್ತು ಸರ್ಕಾರಕ್ಕೆ ಏನು ಕಂಟ್ರೋಲ್ ಇದೆ ? ನೀವು ಏನು ನಾರ್ಮ್ಸ್ ಮಾಡಿದ್ದೀರಿ ? ಟೊಮ್ಯಾಟೋಗೆ ಹೊರಗಡೆ ಎಷ್ಟು ಬೇಡಿಕೆಯಿದ, ಬಿಹಾರದಲ್ಲಿ ಎಷ್ಟಿದೆ ? ಉತ್ತರ ಪ್ರದೇಶದಲ್ಲಿ ಎಷ್ಟಿದೆ? ಗುಜರಾತನಲ್ಲಿ ಎಷ್ಟಿದೆ, ಮದ್ರಾಸ್‌ನಲ್ಲಿ ಎಷ್ಟಿದೆ, ಆಂಧ್ರಪ್ರದೇಶದಲ್ಲಿ ಎಷ್ಟಿದೆ ? ಕೊತ್ತಂಬರಿಗೆ ಎಷ್ಟು ಬೇಡಿಕೆಯಿದೆ ? ಟೊಮ್ಯಾಟೋ ಹಾಗೂ ಕೊತ್ತಂಬರಿಯನ್ನು ಬೆಳೆಯುವ ಪ್ರದೇಶಗಳು ಕರ್ನಾಟಕದಲ್ಲಿ ಯಾವುವು ಇವೆ ? ಎಷ್ಟು ಬೆಳೆಯಬಹುದು, ಎಷ್ಟು ಬೆಳೆದರೆ ನಾವು ಮಾರ್ಕೆಟ್ ಮಾಡಬಹುದು, ಇಲ್ಲದಿದ್ದರೆ ಆಗುವುದಿಲ್ಲ. ರೈತರಿಗೆ ಏನಾದರೂ ಸಹಾಯ ಮಾಡುವುದಕ್ಕೆ ನಿಮ್ಮ ಯೂನಿವರ್ಸಿಟಿ, ನಿಮ್ಮ Directorate, ನಿಮ್ಮ Commissionerate ಸಹಾಯ ಮಾಡಿದೆಯೇ ? ಅಥವಾ ಅಂತಹ ಆಲೋಚನೆ ನಿಮ್ಮ ಮುಂದೆ ಇದೆಯೇ ? ಆ ಪ್ರೋಗ್ರಾಮ್ ಇದೆಯೇ ? Total ಹಣ ತಂದಿರಿ, ಸಂಬಳ-ಸಾರಿಗೆ ಕೊಟ್ಟಿರಿ, ಉಳಿದವರಿಗೆಲ್ಲಾ ಯೋಜನೆ ಎಂದು ಹೇಳಿದಿರಿ, ನಮ್ಮನ್ನೂ ಕರೆದುಕೊಂಡು ಹೋದಿರಿ. ಅಲ್ಲಿ ಯಾವನಿಗೋ ಒಂದು ಕಿಟ್ ಕೊಟಿಸಿದಿರಿ, ಒಂದು ಫೋಟೋ ತೆಗೆಸಿದಿರಿ, ಅದರ ಮೇಲೆ ಟಿ.ವಿ.ಯವರು ನಮ್ಮ ಸ್ನೇಹಿತರು ಮನಸ್ಸು ಚೆನ್ನಾಗಿದ್ದರೆ ನಮ್ಮದು ಹಾಕುತ್ತಾರೆ, ಇಲ್ಲದಿದ್ದರೆ ನಮ್ಮದು ಬೇರೆ ಇನ್ನು ಏನನ್ನೋ ಹಾಕಿಬಿಡುತ್ತಾರೆ. ನೋಡಿ ಸೌಭಾಗ್ಯ ಹೇಗಿದೆ ?

ಕೃಷಿ ಆಯುಕ್ತರು, ಕೃಷಿ ನಿರ್ದೇಶಕರು, ಅಪರ ನಿರ್ದೇಶಕರು (ಆಡಳಿತ), ಅಪರ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು, ಮುಖ್ಯ ಲೆಕ್ಕಾಧಿಕಾರಿಗಳು, ಕಾನೂನು ಅಧಿಕಾರಿಗಳು, ಕಾರ್ಯನಿರ್ವಾಹಕ ಅಭಿಯಂತರರು, ಅರಣ್ಯ ತಜ್ಞರು, ಸಹಾಯಕ ಕೃಷಿ ನಿರ್ದೇಶಕರು, ಬಹಳ ದೊಡ್ಡ ಪಟ್ಟಿಯಿದೆ. ಓದುವುದಕ್ಕೆ ಟೈಮ್ ಜಾಸ್ತಿ ಬೇಕು. Who created all these things ? ಕೃಷ್ಣ ಭೈರೇಗೌಡರೆ ನಾನು ತಮ್ಮನ್ನು ಕೇಳುತ್ತೇನೆ ಇದನ್ನು Assembly create ಮಾಡಿದೆಯೇ ? ನಾವು blind faith ನಲ್ಲಿ ನಿಮಗೆ ನಿಮ್ಮ estimate ಅನ್ನು ಮಂಜೂರು ಮಾಡಿ ಕೊಟ್ಟಿದ್ದೇವೆ. ನಿಮ್ಮ ಡಿಮ್ಯಾಂಡ್ ಇದೆ. ನೀವು ನಮಗೆ ಬಹಳ ಬೇಕಾದವರು, ನಮ್ಮ ಸ್ನೇಹಿತರ ಮಗ, ನಮ್ಮ ಜಿಲ್ಲೆಯವರು, ರೈತರ ಕುಟುಂಬದಿಂದ

ಬಂದಿದ್ದೀರಿ, ರೈತರ ಹಣಕ್ಕೆ ನೀವು ವಾರಸುದಾರರು, ನಿಮ್ಮ ಹತ್ತಿರ ಹಣ ಕೊಟ್ಟರೆ ಗ್ಯಾರಂಟಿ ಪರವಾಗಿಲ್ಲ ದುರುಪಯೋಗ ಮಾಡುವುದಿಲ್ಲವೆಂದು ಕೊಟ್ಟರೆ ನೀವು ನಮ್ಮ ಟೊಮ್ಯಾಟೋ, ಬದನೇಕಾರಯಿ ಏನಾಯಿತೆಂದು ಕೇಳಲಿಲ್ಲ. ನನಗೆ ಕೃಷಿ ಉಪಕರಣ ಸಿಕ್ಕಿತೆ, ಕಡಿಮೆ rateಗೆ interest ಸಿಗುತ್ತದೆಯೇ ಎಂದು ಕೇಳಲಿಲ್ಲ. ನನಗೆ ಉತ್ತಮ ಬೀಜದ ತಳಿ ಸಿಗುತ್ತಿಲ್ಲ. ಈ ರೀತಿ ಮಾಡಿ ನಮ್ಮ ಮೇಲೆ ಹೇರಿಬಿಟ್ಟಿದ್ದೀರಲ್ಲ ಇದರಿಂದ ನಮಗೆ ಶಾಪ ವಿಮೋಚನೆ, ಇಷ್ಟಲ್ಲದೆ sessions ಮುಗಿಸಿಕೊಂಡು ರೂಂಗೆ ಹೋದಾಗ ಸಾಲ ಕೊಟ್ಟವರು ಬಾಕಿ ವಸೂಲು ಮಾಡುವುದಕ್ಕೆ ಬಂದು ಕುಳಿತುಕೊಳ್ಳುವ ಹಾಗೆ transfersಗೆ ಬಂದು ಕುಳಿತುಕೊಂಡು ನಮ್ಮನ್ನು ಜಲಾನಯನಕ್ಕೆ ಚೆಕ್‌ಪೋಸ್ಟ್‌ಗೆ ಹಾಕಿಸಿ, ನಮಗೆ ಟ್ರ್ಯಾಫಿಕ್ ಕೊಟ್ಟಿಲ್ಲ, ರೇವಣ್ಣರವರು ಹೇಳಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಅವರ ಕಡೆಯವರಿಗೆ ಹಾಕಿಸಿದ್ದಾರೆ, ನಮಗೆ ಹಾಕಿಸಿ ಎಂದು ಕೇಳುತ್ತಾರೆ. ಇರುವ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಮತ್ತೊಬ್ಬರು ಬಂದು ನೋಡಿ ಸಾರ್, ಶಿವಕುಮಾರ್‌ರವರು ಬಹಳ powerful ಆಗಿದ್ದು, ಅವರಿಗೆ ಬೇಕಾದವರಿಗೆ ಅವರು ಹಾಕಿಸಿಕೊಂಡಿದ್ದಾರೆ ನೀವೇನು ನಮ್ಮವರೆಂದು ಒಬ್ಬರನ್ನು ಹಾಕಿಸುವುದಿಲ್ಲ ಎಂದು ಕೇಳುತ್ತಾರೆ. ನಾವಿರುವುದೇ ದತ್ತ ನಾನು ಉಳಿದ ನಾಲ್ಕೈದು ಜನ ನಮಗೆ ಒದೆ ಬೀಳದಿದ್ದರೆ ಸಾಕಾಗಿದೆ ನಾವೆಲ್ಲಿ ಹೇಳೋಣವೆಂದು ಹೇಳುತ್ತೇನೆ. ಸುರೇಶ್‌ಕುಮಾರ್ ರವರು serious ಆಗಿ ಕೇಳಿಸಿಕೊಳ್ಳುತ್ತಿದ್ದಾರೆ, you are a very very lucky man, ನಮ್ಮ ಸಮಸ್ಯೆಗಳ್ಯಾವುವೂ ನಿಮಗಿಲ್ಲ. ನೀವು ಸುಮ್ಮನೆ ಹಲೋ ಹಲೋ ಎಂದು ಹೇಳಿ ನಮಸ್ಕಾರ ಹಾಕಿಕೊಂಡು ನೀರು ಬಂತಾ ಬರುವ ಹಾಗೆ ಮಾಡುತ್ತೇನೆ, ಲೈಟ್ ಬಂತೆ ವಿಚಾರಿಸುವುದು, ಮಕ್ಕಳ admissionಗೆ ಯಾವುದೋ ಎರಡು ಸ್ಕೂಲ್‌ಗೆ ಶಿಫಾರಸ್ಸು ಮಾಡಿಕೊಂಡು ಗೌರವಸ್ಥರಾಗಿದ್ದುಕೊಂಡೇ ಗೆದ್ದು ಬಿಡುತ್ತೀರಿ. ನಮಗೆ ಗೆದ್ದುಬರುವುದೆಂದರೆ ಪುನರ್‌ಜನ್ಮವಿದ್ದ ಹಾಗೆ. ಅದಕ್ಕೆ ನಾನು alternate term ಬರುವುದು regular term ಬರುವುದಿಲ್ಲ. ನನ್ನನ್ನು ಸೋಲಿಸುವಾಗ ಅವರಿಗೇನು ಸಿಟ್ಟೆಂದರೆ next ಬರುವವನು ಇದನ್ನೆಲ್ಲಾ ಸರಿಪಡಿಸುತ್ತಾನೆ ಇವನಿಗೆ ಬುದ್ಧಿ ಕಲಿಸಬೇಕೆಂದು ಗೆಲ್ಲಿಸುತ್ತಾರೆ. Next five years ಆತ ಸಾಕಾಗಿರುತ್ತಾನೆ. ಮತ್ತೆ ನನ್ನನ್ನು ಗೆಲ್ಲಿಸಿ ಕರೆದುಕೊಂಡು ಬರುತ್ತಾರೆ. ಈ alternate term business

ಎಷ್ಟು ದಿವಸ ನಡೆಯುತ್ತದೆಂದು ಗೊತ್ತಿಲ್ಲ. ಜಗದೀಶ ಶೆಟ್ಟರ್, ಸುರೇಶ್‌ಕುಮಾರ್ ನೀವೆಲ್ಲಾ ಪುಣ್ಯಾತ್ಮರು continous ಆಗಿ ಗೆಲ್ಲುತ್ತೀರಿ. ಗೋವಿಂದ ಎಂ. ಕಾರಜೋಳ ರವರಿಗಂತೂ ಸೋಲೇ ಇಲ್ಲ. He has become an expert. ಗೆಲ್ಲುವ ಕಲೆಯನ್ನು ರಕ್ತಗತ ಮಾಡಿಕೊಂಡಿದ್ದಾರೆ. ನಿಮ್ಮ ಎಲ್ಲಾ ಅನುಭವಗಳಲ್ಲಿ ರೈತರಿಗೆ ಈ ರೀತಿ ಬದುಕುವಂತಹದ್ದು ಏನಾದರೂ ಇದ್ದರೆ ಹೇಳಿ. ಸ್ವಲ್ಪ ಸಲಹೆ ಕೊಟ್ಟರೆ ರೈತನ ಬದುಕು ಸುಧಾರಿಸುತ್ತದೆ. Dry Land Farming ಇದರಲ್ಲಿ ಏನು ಮಾಡಿದ್ದೀರೆಂದು ಸ್ವಲ್ಪ ದಯಮಾಡಿ ಹೇಳಿ. ನಾವೆಲ್ಲ dry landಗೆ ಬರುವಂತಹವರು ಉಪಾಧ್ಯಕ್ಷರೆ, ತಮಗೆ ಗೊತ್ತಿದೆ ನಮ್ಮ ಕೆರೆಗಳೆಲ್ಲಾ complete ಆಗಿ obsolete ಆದವು ಎಂದರೆ ಸಂಪೂರ್ಣವಾಗಿ ನಿರುಪಯುಕ್ತವಾಗಿವೆ. Rainfall complete ಆಗಿ deplete ಆಯಿತು. ಫಾರೆಸ್ಟ್‌ನವರು ಬಹಳ ಕಷ್ಟಪಟ್ಟು ಹಗಲಿರುಳು ಶ್ರಮವಹಿಸಿ ಇದ್ದ ಗಿಡಗಳನ್ನೆಲ್ಲಾ ಕಡಿದು ಹಾಕಿದ್ದಾರೆ. ಹೊಸದಾಗಿ ಯಾವುದೂ ಬೆಳೆಯದ ರೀತಿ ಜಾಗ್ರತೆ ವಹಿಸಿ ಹರ್‌ಕ್ಯೂಲಿಸ್, ನೀಲಗಿರಿಗಳನ್ನು ಮತ್ತು ಅಕೇಶಿಯಾ, softwood ಹಾಕಿದ್ದಾರೆ. ಈ ಗಿಡಗಳಲ್ಲಿ ಗುಬ್ಬಚ್ಚಿ, ಕಾಗೆ ಕುಳಿತುಕೊಳ್ಳಬಾರದು, ಬಿಸಿಲೆಂದು ಯಾರೂ ನೆರಳಿಗೆಂದು ಕುಳಿತುಕೊಳ್ಳುವ ಹಾಗಿಲ್ಲ, ತಿನ್ನುವುದಕ್ಕೆ ಹಣ್ಣು ಸಿಗುವ ಆಗಿಲ್ಲ. ಉರುವಲು ಆಗುವುದಿಲ್ಲ ನಿಮಗೆ ಸಾಮಾನು ಕೂಡ ಆಗುವುದಿಲ್ಲ. Dry Land Farming ಬಗ್ಗೆ ನಾನು ಇವರ ಇಲಾಖೆಯವರನ್ನು ಕೇಳುತ್ತೇನೆ. ನೀವು ಪ್ರತ್ಯೇಕವಾಗಿ ಒಬ್ಬರೆ ಋಷಿಗಳ ಹಾಗೆ ಕುಳಿತು ತಪಸ್ಸು ಮಾಡಿ dry land farming ಮಾಡುತ್ತೀರಾ ? Minor Irrigation ಜೊತೆ ನಿಮಗೆ ಸಂಪರ್ಕ ಬೇಡವೇ ? Minor Irrigation ಜೊತೆ ಸಂಪರ್ಕವಿಟ್ಟುಕೊಂಡರೆ Fisheris ರವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲವೇ ? Fish pond ಎಲ್ಲಿ ಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡುವುದಿಲ್ಲವೇ ? Minor Irrigation and Fisheries ರವರನ್ನು ತೆಗೆದುಕೊಂಡರೆ Horticulture ರವರನ್ನು ನೋಡುವುದಿಲ್ಲವೇ ? Horticulture ಕಡೆ ಗಮನ ಕೊಟ್ಟ ನಂತರ Sericulture ಕಡೆ ಗಮನ ಕೊಡುವುದಿಲ್ಲವೇ ? Classification of Land, ಯಾವುದು ತರಿ, ಯಾವುದು ಖುಷ್ಕಿ ಆಗಿದೆ ನೀರಿನ ಸರದಿ ಎಲ್ಲ ಕೊಡಬೇಕು, ತೋಟ ಬೆಳೆಸುವುದಕ್ಕೆ ಎಲ್ಲಿ ಅವಕಾಶ ಮಾಡಿಕೊಡಬೇಕೆಂದು ಆಲೋಚನೆ ಮಾಡಿದ್ದೀರಾ ?

ಕೆರೆ ಸರಿಯಾಗಿಲ್ಲವೆಂದರೆ ನಿಮ್ಮ agriculture ಏನಾಗುತ್ತದೆಂದು ಯೋಚನೆ ಮಾಡಿದ್ದೀರಾ ? ಕೋಲಾರ ಮತ್ತು ಚಿಕ್ಕಬಳ್ಳಾಪುರ ಎರಡು ಜಿಲ್ಲೆಗಳನ್ನು ಉದಾಹರಣೆಗೆ ತೆಗೆದುಕೊಳ್ಳಿ, ನೀವು ಹುಟ್ಟುವುದಕ್ಕೆ ಮೊದಲು ಅಥವಾ ನಿಮ್ಮ ಬಾಲ್ಯದಲ್ಲಿ ಎಷ್ಟು ಅಕ್ಕಿಯನ್ನು ನಾವು ಕೋಲಾರ ಜಿಲ್ಲೆಯಲ್ಲಿ ಬೆಳೆಯುತ್ತಿದ್ದೆವು ? Minor Irrigation tanks ಮುಖಾಂತರ ಎಷ್ಟು ಭತ್ತವನ್ನು ಬೆಳೆಯುತ್ತಿದ್ದೆವು ? ಇವತ್ತು ಇಡೀ ಜಿಲ್ಲೆಯ ರೈತರ ಪೈಕಿ ಎರಡು ಜಿಲ್ಲೆಗಳಲ್ಲಿ ನಾನು ಉತ್ಪಾದನೆ ಮಾಡಿದ ಅಕ್ಕಿಯನ್ನು ಊಟ ಮಾಡುತ್ತಿದ್ದೇನೆಂದು ಹೇಳುವವರು 2% ಜನರಿಲ್ಲ. ನಿಮ್ಮ University and Department ಏನು ಮಾಡಿದೆ ? ನೀವೆಲ್ಲಾ ಎಲ್ಲಿ ಹೋಗಿದ್ದೀರಿ ? ಈ ಪುರುಷಾರ್ಥಕ್ಕೆ ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆಂದು ಕೈ ಎತ್ತಿ ಮನೆಗೆ ಹೋಗಬೇಕೆ ? ಇದಕ್ಕೆ ನಾವು ಇಲ್ಲಿ ಬಂದಿದ್ದೇವೆಯೇ ? ಯೋಚನೆ ಮಾಡಿ ? ಭತ್ತ ಬೆಳೆಯುತ್ತಿದ್ದ ನಾವು ಕೊಂಡು ತಿನ್ನುವ ಸ್ಥಿತಿಗೆ ಬಂದಿದ್ದೇವೆ. Command area ದಲ್ಲಿ ಹಣ ಖರ್ಚು ಮಾಡುತ್ತೀರಿ. ಇವರ priorities ಯಾವುದು ? Guest house ಕಟ್ಟುವುದು, staff, ಅವರಿಗೆ vehicles, vehicles ಆದ ನಂತರ ಡ್ರೈವರ್ಸ್, ಅನಂತರ ಡ್ರೈವರ್ಸ್‌ಗೆ ಬೇಕಾಗಿರುವ comforts ಇವರೆಲ್ಲಾ ಆದ ನಂತರ ನಾನು ಬರುವುದು. ಈ ರೀತಿ ಆದರೆ ಎಲ್ಲಿ dry land farming ಆಗುತ್ತದೆ. ವರ್ಷಾ ವರ್ಷ ಬರುವಂತಹ ಮಳೆ unpredictable ಆದಾಗ ಅರಣ್ಯ ನಾಶವಾದಾಗ, ಕೆರೆ ಸರ್ವನಾಶವಾದಾಗ ಅಂತರ್‌ಜಲ ಸಂಪೂರ್ಣ ಮಾಯವಾದಾಗ, ಈ ವರ್ಷ ಇದುವರೆಗೆ ಮಳೆ ಬಿದ್ದಿಲ್ಲ. ಬೆಳಿಗ್ಗೆ ನದಿ ಮೂಲದಿಂದ ನೀರು ಕೊಡುವ ವಿಚಾರವನ್ನು ಮಾತನಾಡುತ್ತಿದ್ದರು. ಆಗ ಅಧ್ಯಕ್ಷರು ನನ್ನ ಕಡೆ ಗಮನ ಕೊಡಲಿಲ್ಲ. ನದಿ ಇದ್ದವರಿಗೆ ನದಿಮೂಲದಿಂದ ನೀರನ್ನು ಕೊಡುತ್ತೀರಿ ನಾವು 1,500 ಅಡಿ ಆಳದವರೆಗೆ ಹೋಗಿದ್ದೇವೆ. ಅನಿವಾರ್ಯವಾಗಿ ನಮಗೆ ಬರುವುದೆಲ್ಲಾ ವಿಷಪೂರಿತ ನೀರು ಅದಕ್ಕೆ ROP plants ಹಾಕುತ್ತೇವೆಂದು ಹೇಳಿದ್ದಾರೆ ಇದುವರೆಗೆ ಹಾಕಿಲ್ಲ. ಅಂದರೆ ನಾವು ವಿಷ ಕುಡಿದು ಬದುಕಿರಬೇಕೆ ? ನಮೆ ಕುಡಿಯುವ ನೀರಿಗೆ ಏನು ವ್ಯವಸ್ಥೆ ಮಾಡಬೇಕೆಂದು ಆಲೋಚನೆ ಮಾಡಿದ್ದೀರಾ ? ಇದಕ್ಕೆ ಯಾರು ಕಾರಣರೆಂದು ಹೇಳುತ್ತೀರಾ ? ನಾವು request ಮಾಡಿಕೊಂಡ ನಂತರ special component ನಲ್ಲಿ borewells drill

ಮಾಡುವುದನ್ನು ತಡೆಯಿರಿ ಎಂದು ಹೇಳಿದ್ದೆವು ಏಕೆಂದರೆ ಕುಡಿಯುವ ನೀರಿಗೆ ತೊಂದರೆಯಿಲ್ಲವೆಂದು, ನಮ್ಮ ಸಹೋದರರು ಷೆಡ್ಯೂಲ್ಡ್ ಕ್ಯಾಸ್ಟ್ ರವರು ಮತ್ತು ಟ್ರೈಬ್ಸ್‌ನವರು ಬಂದು ನಮ್ಮದೇನು, ನಿಲ್ಲಿಸಿದ್ದೀರಿ, ನೀವು ಹೇಳುವುದು ಸರಿಯಿದೆ, ಆದರೆ ಶ್ರೀಮಂತರು Rig ತೆಗೆದುಕೊಂಡು ಹೋಗಿ ಅವರ ಜಮೀನಿನಲ್ಲಿ ಹೊಡೆದುಕೊಳ್ಳುತ್ತಿದ್ದಾರೆ ಅವರಿಗೆ ಆಗಬಹುದೇ ಎಂದು ಕೇಳುತ್ತಾರೆ. ನಿಮಗೆ ತೋಚುವುದಿಲ್ಲವೇ ? Doesn't it occur to this Government ? ಸರ್ಕಾರವೆಂದರೆ ನಿಮಗೆ ಹೃದಯ ಇರಬೇಕು. ನಿಮಗೆ ಹೃದಯವಿದ್ದು ಆ ಜನರ ಪರವಾಗಿ ಮಾತನಾಡಬೇಕು. ನಮ್ಮ ಬದುಕನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದಿದ್ದೀರಿ ? ಏನು ಮಾಡಬೇಕೆಂದಿದ್ದೀರಿ ? Suicide ಅನ್ನ ಏಕೆ ಮಾಡಿಕೊಳ್ಳುತ್ತಾನೆಂದು ಯೋಚನೆ ಮಾಡುವುದು ಬಿಟ್ಟು Suicide ಮಾಡಿಕೊಂಡವರಿಗೆ ಲಕ್ಷ ಕೊಡುತ್ತೇವೆಂದು ಹೇಳುವುದು. Is that the answer ? Is that the relief ? Is that what the people expect from a Government ? ಸತ್ತ ನಂತರ ಇವರಿಗೆ ಎಷ್ಟು ಕೊಡುತ್ತೀರೆಂದು ಕೇಳುವುದಕ್ಕೆ ನಾನು ಬದುಕಿರಬೇಕೇ? ನಾನು ಸಾಯದೆ ಬದುಕಿರುವುದಕ್ಕೆ ನನಗೆ ಬೇಕಾಗಿರುವುದನ್ನೇನಾದರೂ ಕೊಡಿ ಎಂದು ಕೇಳುವುದಕ್ಕೇನಾದರೂ ನಾನು ಬದುಕಿರಬೇಕೇ? Dry land farming ನಲ್ಲಿ it is total failure. ಎಷ್ಟು inter-departmental meetings ನೀವು ಮಾಡಿದ್ದೀರೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ between you and irrigation, between you and forest, between you and Fisheries, Erstwhile agriculture ಎಂದರೆ, including that department was called is agriculture and co-operation. ನಂತರ agriculture ಬೇರೆ ಮಾಡಿದರು. Agriculture ನಲ್ಲಿ horticulture, sericulture, fisheries, animal husbandry. Co-operation ನಲ್ಲಿ marketing ಬೇರೆ, Co-operation ಬೇರೆ. ಶಿವಲಿಂಗೇಗೌಡರು ಮಾತನಾಡುತ್ತಿದ್ದರು,

ತೆಗೆದುಕೊಂಡರೆ 12% ಜನ ಮಾತ್ರ ಸಹಕಾರಿ ಸಂಘಗಳಲ್ಲಿ ಸದಸ್ಯರಾಗಿರುವುದು. ಉಳಿದವರು they are not members of the co-operative society. ಇವರು ಆ ಇಲಾಖೆಯನ್ನು ಬೆಳೆಸಬೇಕು ಎಲ್ಲರನ್ನೂ member ಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡಲಿಲ್ಲ. Commercial ಬ್ಯಾಂಕ್ ಈ ಸಾಲಕ್ಕೆ ಹೋಗಬೇಕು, surety ಕೊಡದಿದ್ದರೆ ಸಾಲವನ್ನು ಕೊಡುವುದಿಲ್ಲ. ನಾವು Debt Relief Act ಶ್ರೀಮತಿ ಇಂದಿರಾ ಗಾಂಧಿಯವರು ಬಡವರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಯಾವ ಬಡವನಿಗೆ ಒಂದು ವರ್ಷಕ್ಕೆ 360 ರೂಪಾಯಿಗಳಿಗಿಂತ ಕಡಿಮೆ ಆದಾಯವಿರುತ್ತದೆ, ಅವನು ಅನ್ನ ತಿನ್ನುವ ತಟ್ಟೆ, ನೀರು ಕುಡಿಯುವ ಲೋಟ, ಅವರು ತುಳಿಯುವ ಸೈಕಲ್, ಮಫ್ಲರ್, ಟೈಮ್ ಪೀಸ್ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿ ಮಾರ್ವಾಡಿ ಅಂಗಡಿಯಲ್ಲಿ ಇಟ್ಟಿದ್ದರೆ ಅದನ್ನು ವಾಪಸ್ಸು ಕೊಡಬೇಕೆಂದು order ಮಾಡಿದರು through that Debt Relief Act, ಅದಕ್ಕೆ ನಾನಾ ವಿಧಗಳಲ್ಲಿ ಮಾತನಾಡಿದರು. ಗಂಟು ಮುಳುಗಿಸುವುದಕ್ಕೆ ಇಂದಿರಾ ಗಾಂಧಿಯವರು ಹೇಳುತ್ತಿದ್ದಾರೆಂದು ಹೇಳಿದರು. Whatever it is ? Debt Relief Act ಬಂದಿದ್ದು ಏನಾಯಿತು ಊರಿನಲ್ಲಿ ಲೇವಾದೇವಿಯನ್ನು ಮಾಡಿಕೊಂಡಿದ್ದ ಕುಟುಂಬಗಳ ಜನರು ಯಾರು ಇದ್ದರು ಅವರು ಅದನ್ನು ನಿಲ್ಲಿಸಿದರು. ನೀವು ಗೌರಿಬಿದನೂರಿಗೆ ಹೋಗಬೇಕಾದರೆ ದಾರಿಯುದ್ದಕ್ಕೂ Manappuram, Muthoot Finance ಇದೆ. ಇವರು ಯಾರು ? ಇವರು ನಿಮ್ಮ ಊರಿನಲ್ಲಿ ಒಳ್ಳೆಯ ಕಾರ್ಯವನ್ನು ಮಾಡಿಸಲು ಬಂದ ಪುರೋಹಿತರೇ ? ಅಥವಾ ನಿಮ್ಮ ಊರಿನಲ್ಲಿ ಯಾರಾದರೂ ಸತ್ತರೆ ವರ್ತಮಾನ ತೆಗೆದುಕೊಂಡು ಬರುವ ಊರ ತಳವಾರರೇ ? ಅಥವಾ ನಿಮ್ಮ ಊರಿನ್ನು ಸ್ವಚ್ಛಗೊಳಿಸಲು ಬಂದ Health Inspector ಅಥವಾ ನಮ್ಮ ಊರಿನ ಕೆರೆ-ಕಟ್ಟೆ ಶಿಥಿಲವಾಗಿದೆ ಎಂದು ಕಟ್ಟಲು ಬಂದ Engineers ಆ ಪ್ರತಿಯೊಂದು ಊರಿನಲ್ಲೂ Muthoot, Manappuram Finance ಬಂತು. ಇವರು ಯಾರು ? ಏತಕ್ಕೆ ಬಂದರು ? ಇವರ ಉದ್ಯೋಗವೇನು ? ಎಂಬುದರ ಬಗ್ಗೆ ಸರ್ಕಾರ ಯೋಚನೆ ಮಾಡಿದ್ದೀಯಾ? ಅಲ್ಲದೆ ಅವರು ದಿನಪತ್ರಿಕೆಗಳಲ್ಲಿ, daily's ನಲ್ಲಿ bold ಆಗಿ ರಾಜಾರೋಷವಾಗಿ ನಮ್ಮಲ್ಲಿ ಒತ್ತೆಯಿಟ್ಟು ವಾಪಸ್ಸು ತೆಗೆದುಕೊಳ್ಳಲು ಆಗದೆ ಇರುವ ಚಿನ್ನವನ್ನು ಹರಾಜು

ಹಾಕುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ. ಅವರು ಹರಾಜು ಹಾಕುತ್ತಿರುವುದು ಚಿನ್ನವನ್ನಲ್ಲ. ನನ್ನ ಹೆತ್ತ ತಾಯಿ, ನನ್ನ ರಕ್ತ ಹಂಚಿಕೊಂಡು ಹುಟ್ಟಿದಂತಹ ನನ್ನ ತಂಗಿ, ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳು ಅಂದರೆ, ಅವರ ಮೈಮೇಲೆ ಮಾನ-ಮರ್ಯಾದೆಗಳನ್ನು ಕಾಪಾಡಿಕೊಳ್ಳಲು sentimental ಆಗಿ 3-4 ತಲೆಮಾರುಗಳಿಂದ ಬಂದಂಥ ಬಂಗಾರವನ್ನು ಅಡವಿಟ್ಟು ಹರಾಜು ಹಾಕುತ್ತಿದ್ದಾರೆ. ನಮ್ಮ ಮಾನ ಹರಾಜು ಆಗುತ್ತಿದೆ. ಇವರು ಜೀವಂತ ಇದ್ದಾರಾ ? ಇವರು ಅದರ ಬಗ್ಗೆ ಯೋಚನೆ ಮಾಡಿದ್ದಾರಾ ? ಅದು ಕೃಷಿಗೆ ಸಂಬಂಧಿಸಿದ್ದಲ್ಲವಾ ? What is their answer ? I would like to know. ನಾವು ಎಲ್ಲಿಗೆ ಹೋಗುತ್ತಿದ್ದೇವೆ ? ಸಾಲ ಸಿಗುವುದಿಲ್ಲ. ಮರ್ಯಾದೆಯಾಗಿ ಬದುಕುವ ಹಾಗಿಲ್ಲ. ನಾವು ಬೆಳೆದಿದ್ದನ್ನು ತಿನ್ನುವ ಹಾಗಿಲ್ಲ. ನಮಗೆ ಬೇಕಾದಂಥ ತಳಿ ಸಿಗುವುದಿಲ್ಲ. ನಾನು ಆಸ್ಪತ್ರೆಗೆ ಹೋಗಬೇಕೆಂದರೆ ನನಗೆ ಯಶಸ್ವಿನಿ ಕಾರ್ಡ್ ಅನ್ನು ಕೊಟ್ಟಿದ್ದೀರಿ. ನಾನು ಯಶಸ್ವಿನಿ ವ್ಯಾಪ್ತಿಯೊಳಗೆ ಬರದಿದ್ದರೆ ನಾನು ನೆಗೆದು ಬಿದ್ದು ಸತ್ತೆ. ಕೆಲವು ಜನರು ನನಗೆ ಹಾರ್ಟ್ ಆಪರೇಷನ್ ಮಾಡಬೇಕಾಗಿದೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬರೆಸಿಕೊಡಿ, ಕ್ಯಾನ್ಸರ್ ಆಗದೆ, ಮುಖ್ಯಮಂತ್ರಿಗಳ ಹತ್ತಿರ ಬರೆಸಿಕೊಡಿ ಎಂದು ನನ್ನ ಬಳಿ ಬರುತ್ತಾರೆ. ನಿಮ್ಮನ್ನು ಸಾಕುವವನು, ನಿಮಗೆ ಅನ್ನ ಕೊಡುವವನು, ನಿಮಗೆ ಹೊಟ್ಟೆ ತುಂಬಾ ತಿನ್ನುವುದಕ್ಕೆ ಅವಕಾಶ ಮಾಡಿಕೊಟ್ಟಿರುವವನಿಗೆ ಈ ಗತಿ ಕೊಟ್ಟಿದ್ದೀರಲ್ಲಾ ? ಅವನ ಶಾಪ ನಿಮಗೆ ತಟ್ಟದೆ ಇರುತ್ತದೆಯೇ ? ಬಜೆಟ್ ಪ್ರಪೋಸಲ್ಸ್ ಅನ್ನು ಏನು ಮುಂದೆ ಇಟ್ಟಿದ್ದಾರೆ ಅದನ್ನು ಹರಿದು ಬಿಸಾಕಿ. Take a revolutionary step today itself. Revamp the whole department, demolish your bloody universities. ಯಾವುದು ಜನರಿಗೆ ಪ್ರಯೋಜನವಾಗುವುದಿಲ್ಲ ಅಂಥ ಡಿಗ್ರಿಗಳನ್ನು ಇಟ್ಟುಕೊಂಡು, ಅಲಂಕಾರಕ್ಕೆ ಬರೆದುಕೊಂಡು, visiting cards ಗಳನ್ನು ಕೊಟ್ಟುಕೊಂಡು ತಿರುಗಾಡುತ್ತಾರೆ ಅಥವಾ ಯಾರು ಹೆಣ್ಣು ಮಕ್ಕಳನ್ನು ಹೆತ್ತ ಅಮಾಯಕರು ತಾವು ಹಣವನ್ನು ಕೊಟ್ಟು, ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡುತ್ತಾರೆ ಅಂಥ ದೊಡ್ಡ ಶ್ರೀಮಂತರ ಮನೆಗೆ ಅಳಿಯಿಂದಿರಾಗಿ ಹೋಗಲು ಹೋರಿಗಳಾಗಿ ಕಾದಿದ್ದಾರೆ, ಅಂಥವರನ್ನು ಇಟ್ಟುಕೊಂಡು ತಾವು ಯೂನಿವರ್ಸಿಟಿಗಳನ್ನು ನಡೆಸುತ್ತೀರಾ ? ಇದಕ್ಕೆ, ನಮ್ಮ ಬದುಕಿಗೆ ಏನಾದರೂ

ಸಂಬಂಧ ಇದೆಯೇ ? Please think over. ಇದು ಸಾಲದಕ್ಕೆ ಇವರ ಇಲಾಖೆಗೆ 8–9 Boards, Corporation, Tobacco ಗೆ ಒಂದು ಬೋರ್ಡ್, ಕಾರ್ನ್‌ಗೆ ಒಂದು ಕಾರ್ಪೋರೇಷನ್, ಮುಂದೆ ನಾವು ಇವುಗಳಿಗೆ chairman ಗಳು ಆಗುವ ಅವಕಾಶವಿದೆ. ಕಾರ್ನ್‌ನಲ್ಲಿ ಸಿಪ್ಪೆ ಒಬ್ಬರಿಗೆ, ಬೀಜ ಒಬ್ಬರಿಗೆಂದು ಎರಡು ಮಾಡಿ. ಬೀಜ ಯಾರಾದರೂ ತೆಗೆದುಕೊಂಡು ಹೋಗಲಿ, ಸಿಪ್ಪೆ ಮಾತ್ರ ನನಗೆ ಕೊಡಿ. ಮಾನ್ಯ ಕೃಷ್ಣ ಬೈರೇಗೌಡರವರೇ, ನಾನು ತಮ್ಮನ್ನು ಟೀಕೆ ಮಾಡುತ್ತಿದ್ದೇನೆಂದು ಭಾವಿಸಬೇಡಿ. ಇಲ್ಲಿಯವರೆಗೆ ಬಂದಂಥವರು with due respects to them ಅವರು ಕುಂಭಕರ್ಣ ನಿದ್ದೆಯನ್ನು ಮಾಡಿದ್ದಾರೆ. ನೀವು ಆ ಕೆಲಸವನ್ನು ಮಾಡಬೇಡಿ. ಇದನ್ನು secretariat ನಲ್ಲಿ ಕುಳಿತುಕೊಂಡು ಅಧಿಕಾರಿಗಳು ಜಾಲ ಹೂಡಿ. ಸಂಚು ಮಾಡಿ ಸೃಷ್ಟಿ ಮಾಡಿರುವುದಾಗಿದೆ. ತಾವು ಇವುಗಳನ್ನು ತೆಗೆದು ಹಾಕಿದರೆ ಜನಜೀವನಕ್ಕೆ ಸ್ವಲ್ಪನೂ disturb ಆಗುವುದಿಲ್ಲ. Take a revolutionary step. ನಾವು ಎಷ್ಟು fertilizers ಅನ್ನು ಬಳಸುತ್ತೇವೆ ? ಯಾವ ಯಾವ fertilizers ಬಳಸುತ್ತೇವೆ ? ಆ fertilizersಗೆ ಬೇಕಾಗಿರುವಂಥ chemical ingredients ಏನು ? ಈ ದೇಶದಲ್ಲಿ ಆ ingredients ಸಿಗುವುದಿಲ್ಲವೇ? ಇವತ್ತಿನವರೆಗೆ ಯಾವುದೇ ಸರ್ಕಾರವಾದರೂ ಕೂಡ DAPಗೆ ಏಕೆ ಇಷ್ಟು ಬೆಲೆಯೆಂದು ಕೇಳಿದೆಯೇ ? DAP manufacfure ಮಾಡಬೇಕಾದರೆ ಅದಕ್ಕೆ ಏನೇನು ingredients ಬೇಕೆಂದು ಯೋಚನೆ ಮಾಡಿದ್ದಾರಾ? ಅದರ ಬೆಲೆಯನ್ನು ನಿಗದಿ ಮಾಡುವವರು ಯಾರು ?

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಆರ್. ರಮೇಶ್ ಕುಮಾರ್ : ನನ್ನ ಟೈಮ್ ಚೆನ್ನಾಗಿಲ್ಲ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ತಾವು ಬಂದ ತಕ್ಷಣ ಮಾನ್ಯ ರಮೇಶ್ ಕುಮಾರ್ ರವರು ನನ್ನ ಟೈಮ್ ಚೆನ್ನಾಗಿಲ್ಲವೆಂದು ಹೇಳಿಕೊಳ್ಳುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಬಾಯಿ ಚಪಲ ತೀರಿಸಿಕೊಳ್ಳೋಣವೆಂದು ಮಾತನಾಡುತ್ತಿದ್ದೆ. ಮಾನ್ಯ ಉಪಾಧ್ಯಕ್ಷರು ಇದ್ದಿದ್ದರೆ ಅವರ ಹತ್ತಿರ adjustment ಮಾಡಿಕೊಳ್ಳುತ್ತಿದ್ದೆ. ಈಗ ಮಾನ್ಯ ಅಧ್ಯಕ್ಷರೆ, ತಾವು ಬಂದಿದ್ದೀರಿ. ಆ ಅಪಕೀರ್ತಿ ತಮಗೆ ಬರದೇ ಇರಬೇಕಾದರೆ ತಾವು ಸ್ವಲ್ಪ ಹೊತ್ತು ನನ್ನ ಸುದ್ದಿಗೆ ಬರಬೇಡಿ. ಇಲ್ಲವಾದರೆ,

ಅವರು ಇಲ್ಲಿಯವರೆಗೆ ಚೆನ್ನಾಗಿ ಮಾತನಾಡುತ್ತಿದ್ದರು, ಅಧ್ಯಕ್ಷರು ಬಂದ ಮೇಲೆ ಈ ರೀತಿ ಮಾತನಾಡುತ್ತಿದ್ದಾರೆಂದು ಜನ ನಿಮ್ಮ ಬಗ್ಗೆ ಖಂಡಿತ ತಪ್ಪು ತಿಳಿದುಕೊಳ್ಳುತ್ತಾರೆ. ರೈತರ ಬಗ್ಗೆ ಕಾಳಜಿ ಇಟ್ಟುಕೊಂಡು ಮಾತನಾಡುತ್ತಿರುವಾಗ ಅಧ್ಯಕ್ಷರು ಅಡ್ಡ ಬಂದರು ಎಂದು ನಿಮಗೆ ಅಪಕೀರ್ತಿ ಬರುತ್ತದೆ. ಈ ವಯಸ್ಸಿನಲ್ಲಿ ನಿಮಗೆ ಏಕೆ ಅಪಕೀರ್ತಿ ಅಧ್ಯಕ್ಷರೆ ? ದಯಮಾಡಿ ಸಹಕರಿಸಿ.

ಅಧ್ಯಕ್ಷರು : ಮಾನ್ಯ ರಮೇಶ್ ಕುಮಾರ್ ರವರೆ, ನಾನು ನಿಮ್ಮ ಮಾತನ್ನು ಕೇಳಿಸಿಕೊಂಡಿದ್ದೇನೆ. ತಾವು ವ್ಯವಸ್ಥೆ ಅವ್ಯವಸ್ಥೆ ಬಗ್ಗೆ ಎಲ್ಲಾ ವಿವರಿಸಿ ಹೇಳಿದ್ದೀರಿ. ಇದನ್ನು ಸುವ್ಯವಸ್ಥೆಗೆ ತರುವುದು ಹೇಗೆ ? ಎಂದು ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ ಮನಸ್ಸು, ಹೃದಯ ಎಂಥದ್ದು ಎಂದು ನಮಗೆ ಗೊತ್ತು. ಅಧ್ಯಕ್ಷರು, ನನಗೆ ನೀವು ಮಾತನಾಡಿದ್ದು ಕೇಳಿ ನನಗೆ ಬಹಳ ಖುಷಿಯಾಯಿತು, ಅಲ್ಲಿ ಕುಳಿತು ತಾಳ್ಮೆ ಕೆಟ್ಟು ಹೋಯಿತು, ಇಲ್ಲಿ ಕೇಳೋಣವೆಂದು ನೇರವಾಗಿ ಬಂದೆ, ಚೆನ್ನಾಗಿ ಮಾತನಾಡುತ್ತಿದ್ದೀರಿ, ತಮ್ಮ ಮಾತನ್ನು ಮುಂದುವರೆಸಿ ಸಲಹೆಗಳನ್ನು ಕೊಡಿ ಎಂದು ಹೇಳುತ್ತಿದ್ದೀರಿ. ನನಗೆ ಅರ್ಥವಾಯಿತು. ಅಧ್ಯಕ್ಷರೆ, ನಾನು ನಿಮಗೆ ಬೇಸರ ಮಾಡುವುದಿಲ್ಲ. ನಾವು fertilizers ಅನ್ನು ಏನು ಉಪಯೋಗ ಮಾಡುತ್ತೇವೆ ಇದನ್ನು ಒಂದು ಬ್ರಹ್ಮಾಂಡ ಮಾಡಿದ್ದಾರೆ. ಯಾವ ಯಾವ fertilezers ಅನ್ನು ಯಾವ ಯಾವ ಭಾಗದಲ್ಲಿ ರೈತರು ಎಷ್ಟು ಉಪಯೋಗ ಮಾಡುತ್ತಾರೆ? ಈ fertilizersಗೆ cost price ಎಷ್ಟಾಗಬಹುದು ? ತೀರ್ಮಾನ ಮಾಡುವವರು ಯಾರು ? ನಿಮ್ಮವರು ಏನಾದರೂ ಸರ್ವೆ ಮಾಡಿದ್ದಾರಾ ? ಇದು ನಿಮ್ಮ ಇಲಾಖೆಯಲ್ಲಿದೆಯೇ ? ಪ್ರತಿ ಸಲ shortage ಎನ್ನುವ ಮಾತು ಏಕೆ ಬರುತ್ತದೆ ? Manufacture ಮಾಡತಕ್ಕಂಥವರು fertilizersನ ಕೆಲವೇ ಜನರು ಮಾತ್ರ, ಅವರು ಸಂಘಟಿತರಾಗಬಹುದು, Dealers ಅವರು ಕೆಲವೇ ಜನ ಸಂಘಟಿತರಾಗಬಹುದು. ಲಕ್ಷಾಂತರ ಜನ, ಕೋಟ್ಯಾಂತರ ಜನ ಏನಿದ್ದೇವೆ ನಾವು ಸಂಘಟಿತರಾಗುವುದಕ್ಕೆ ಆಗುತ್ತದೆಯೇ? ಪುಟ್ಟಣ್ಣಯ್ಯನವರೇ ? ಮಾನ್ಯ ಪುಟ್ಟಣ್ಣಯ್ಯನವರಾದರೆ ಅವರ ವಿರುದ್ಧ ನಾನು ಇರುತ್ತೇನೆ. ನಾನಾದರೆ ನಮ್ಮ ವಿರುದ್ಧ ಅವರು ನಿಂತುಕೊಳ್ಳುತ್ತಾರೆ. ಈ ಸಬ್ಸಿಡೀಸ್ ಏನು ಬರುತ್ತಿದೆ for the fertilizers

and chemicals, ಇದಕ್ಕೆ ತಾವು statistical details ಕೊಡುವಂಥ ವ್ಯವಸ್ಥೆ ಮಾಡಬೇಕು. Phosphateಗೆ ಏನೇನು chemical ingredients ಬೇಕು ? ಅದರ cost ಏನು ? cost of production ಏನು ? ಏನು price ಗೆ sale ಮಾಡುತ್ತಿದ್ದಾರೆ ? ಅದು ಸರಿಯಿದೆಯೇ ? ಇಲ್ಲವೇ ? ರೈತರಿಗೆ ಏನು ಸಬ್ಸಿಡಿ ಕೊಡುತ್ತೀರಿ, ಅದು ನೇರವಾಗಿ it should reach the farmer. ಈಗ ಅದು manufacturer ಗೆ ಹೋಗುತ್ತಿದೆ. Please bear this in mind. ಇದನ್ನು ಅವರು ಯಾರೂ ಮಾಡುವುದಿಲ್ಲ. ನಿಮ್ಮ ಅಧಿಕಾರಿಗಳು ಗೊಬ್ಬರದ ವ್ಯಾಪಾರಿಗಳ ತರಹ ಆಗಿದ್ದಾರೆ. ನಾನು Classification of Land ಬಗ್ಗೆ ಹೇಳಿದೆ. ಅದು ಎಷ್ಟು ಮುಖ್ಯ ಎನ್ನುವುದು ತಮಗೆ ಗೊತ್ತಿದೆ. ಮಾನ್ಯ ಕೃಷ್ಣ ಬೈರೇಗೌಡರವರೆ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ತರಿ ಎಲ್ಲಿ ಉಳಿದಿದೆ ? ತರಿ ಎನ್ನತಕ್ಕಂಥ ಜಮೀನು ವರ್ಷದಲ್ಲಿ ಎರಡು ಬಾರಿಯಾದರೂ wet crops ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿರಬೇಕು. ಯಾವ ಜಮೀನು ಸಂಪೂರ್ಣವಾಗಿ ಮಳೆ ಆಧಾರವಾಗಿರುತ್ತದೆ ಅದು ಖುಷ್ಕಿ ಜಮೀನು ಆಗುತ್ತಿದೆ. ಇವರೆಡರ ಮಧ್ಯದಲ್ಲಿರುವಂಥದ್ದು ಭಾಗಾಯ್ತು ಆಗುತ್ತದೆ. ಈಗ ತರಿನೂ ಇಲ್ಲ, ಖುಷ್ಕಿನೂ ಇಲ್ಲ, ಭಾಗಾಯ್ತು ಇಲ್ಲ, reclassification ನೂ ಇಲ್ಲ. ವೆಸ್ಟ್ ಬೆಂಗಾಲ್‌ನಲ್ಲಿ famine ಬಂದಾಗ ಮೊದಲು famine code ಬಂದಿದ್ದು ಈ ದೇಶಕ್ಕೆ. ಅದೇ Revenue Code, famine code ಇವತ್ತಿಗೂ prevalent ಆಗಿದೆ. ಈಗ ನಮಗೆ ವರ್ಷ ಪೂರ್ತಿ famine. ಇಲಾಖೆಯವರು ಏನು ಯೋಚನೆ ಮಾಡಿದ್ದಾರೆ ? ಯಾವ ಆಲೋಚನೆಯನ್ನು ಮಾಡಿದ್ದಾರೆ. C & D Class Forest Land ಇದೆ. ಒಟ್ಟು ಎಷ್ಟು ಎಕರೆ C & D Forest Land ಇದೆ ? ಯಾವ ಭೂಮಿ ಸಮತಟ್ಟಾಗಿರಲಿಲ್ಲ, cultivationಗೆ ಅಷ್ಟು ಯೋಗ್ಯವಾಗಿರಲಿಲ್ಲ. ಅಂಥ ಭೂಮಿಯಲ್ಲಿ ರೈತ ತಾನು ಸಾಗುವಳಿ ಮಾಡಬೇಕಾಗಿದ್ದರೆ ಕಷ್ಟಸಾಧ್ಯವಾಗುತ್ತಿತ್ತು. ಅಂಥ ಜಾಗಗಳನ್ನು C & D class forest land ಎಂದ ಮಾಡಿ ಕೆಲವು ಗಿಡಗಳನ್ನು ಬೆಳೆಸಿರಪ್ಪಾ ಎಂದು ಹೇಳಿದರು. ರೈತರಿಗೆ ಅನುಕೂಲವಾಗುವಂಥ ಕೆಲವು minor produce ಸಿಗಲಿ, ಉರುವಲು ಅದರಿಂದ ಸಿಗಲಿ, ಗೋಮಾಳ ಇಲ್ಲದೇ ಇರುವ ಕಡೆಗೆ ದನಕರುಗಳನ್ನು, ಮೇಕೆಗಳನ್ನು ಮೇಯಿಸಿಕೊಳ್ಳುವುದಕ್ಕೆ ಜಾಗವಾಗಲಿ ಎಂದು

ಇಷ್ಟೆಲ್ಲ ಮಾಡಿದರೆ forestನವರು army ಯವರ ತಹ ಆಗಿಬಿಟ್ಟಿದ್ದಾರೆ. ಅವರಿಗೆ ಇರುವಂಥ ಜಾಗ, ಇಲ್ಲದೇ ಇರುವಂಥ ಜಾಗ ಎಲ್ಲವನ್ನೂ ಆಕ್ರಮಿಸಿಕೊಂಡಿದ್ದಾರೆ. ಕಳೆದ 60 ವರ್ಷಗಳಲ್ಲಿ correct ಆಗಿ ಒಂದು ಮೊಣಕೈ ಉದ್ದದ ಗಿಡವನ್ನು ಎಲ್ಲಾದರು ಬೆಳೆಸಿದ್ದಾರೆಯೇ ? ಅಲ್ಲಿ ಇರುವಂಥ ಅಧಿಕಾರಿಗಳು ರಾಮ.... ರಾಮ..... ಹೇಳತೀರದು. Principal Chief Conservator, Additional Principal Chief Conservator, Chief Principal Conservator, Deputy Chief Principal Conservator ಅದೇನು ನಾಲಿಗೆ ತಿರುಗುವುದೇ ಇಲ್ಲ, ಸರ್ಕಸ್ ಮಾಡಬೇಕು. ಇವರೆಲ್ಲರೂ ಇಷ್ಟೊಂದು ಜನ ಅಧಿಕಾರಿಗಳಿದ್ದು, ಮೊಣಕೈ ಉದ್ದದ ಗಿಡವನ್ನು ಬೆಳೆಸಿರುವುದನ್ನೇ ನಾನು ನೋಡಿಲ್ಲ.

ಅಧ್ಯಕ್ಷರು : ಅಕೇಷಿಯಾ ಮತ್ತು ನೀಲಗಿರಿ ಎರಡು ಮರಗಳನ್ನು ಬೆಳೆಸಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಹೇಳಿದೆ ಅಧ್ಯಕ್ಷರೆ, ನನಗೆ ನಿಮಗೆ ಟೆಲಿಪತಿ ಕಮ್ಯೂನಿಕೇಷನ್ ಇದೆಯಲ್ಲವೇ, ನಮ್ಮ ಮಾತನ್ನು ನಾನು ಹೇಳಿಬಿಟ್ಟೆ. Tragedy ನೋಡಿ, supposing imagine ಮಾಡಿಕೊಳ್ಳಿ ಕೃಷ್ಣಬೈರೇಗೌಡರೇ, Animal Husbandry Departmentನೊಂದಿಗೆ ನೀವು tie up ಮಾಡಿಕೊಳ್ಳಿ, ಆ ಜಾಗದ ownership ನಿಮ್ಮ ಹತ್ತಿರವೇ ಇಟ್ಟುಕೊಳ್ಳಿ, ನಮ್ಮ ರೈತರಿಗೆ ಕೊಡಬೇಡಿ. ಅಲ್ಲಿ ಯಾವುದೋ ಒಂದು ರೀತಿಯಲ್ಲಿ ನೀರನ್ನು ಕೊಟ್ಟು, ಹುಲ್ಲನ್ನು ಬೆಳೆಯುವುದಕ್ಕೆ Napier grass ಬೆಳೆಸಿದರೆ ನಮ್ಮ ಹೆಣ್ಣುಮಕ್ಕಳು ದನ ಸಾಕಿಕೊಂಡಿರುವವರಿಗೆ green fodder ಸಿಗುತ್ತದೆ. ಹೆಚ್ಚು ಹಾಲು ಉತ್ಪಾದನೆ ಕೊಡುತ್ತದೆ, ನಮ್ಮ ರೈತರು ಬದುಕಿಕೊಳ್ಳುತ್ತಾರೆ. ಇದು ಪಶುಸಂಗೋಪನೆ ಇಲಾಖೆಯವರಿಗೆ ತೋಚುತ್ತದೆಯೇ? ಅವರಿಗೆ ಯಾವುದಾದರೂ ಬೋರ್ಡ್ ಅನ್ನು ಸೃಷ್ಟಿ ಮಾಡಿ. ಯಾವುದಾದರೂ Associate Professor postನ್ನು ಸೃಷ್ಟಿ ಮಾಡಿ, ಅದನ್ನು abolish ಮಾಡುತ್ತೇವೆಂದರೆ ಅದಕ್ಕಾಗಿ strike ಮಾಡುವುದು ಇಂಥದ್ದನ್ನೆಲ್ಲಾ ಮಾಡುವುದಕ್ಕೆ ಬರುತ್ತಾರೆ. ನೀವು, you should get up from that deep slumber into which this department has gone for all these years.

ಹಂದಿ ಸಾಕುವುದರ ಬಗ್ಗೆ ಪಶುಸಂಗೋಪನೆ ಸಚಿವರಿಗೆ ಗೊತ್ತಿಲ್ಲ. ಕಳೆದ 45–50 ವರ್ಷದಿಂದ ಪುಟ್ಟಣ್ಣಯ್ಯನವರೇ, ಇರುವಂಥ Yorkshire ತಳಿಯನ್ನು

ಬಿಟ್ಟು ಎರಡನೇ variety ಹಂದಿಯನ್ನು ಇಲ್ಲಿಗೆ ತರಲೇ ಇಲ್ಲ. ಇಡೀ ಮಾರುಕಟ್ಟೆಯಲ್ಲಿ, ವಿಶ್ವದ ಮಾರುಕಟ್ಟೆಯಲ್ಲಿ sausage ಗೆ highest demand ಇದೆ. ನಮ್ಮ ಹಳ್ಳಿ ಜನರಿಗೆ ಏನು ಬರುವುದಿಲ್ಲ ಹೇಳಿ, ಹಂದಿ ಸಾಕುವುದಕ್ಕೆ ಬರುವುದಿಲ್ಲವೇ ? ಅದಕ್ಕೊಂದು department ಅನ್ನು ಇಟ್ಟಿದ್ದಾರೆ, ಆಫೀಸರ್ ಅನ್ನು ಇಟ್ಟಿದ್ದಾರೆ. ಯಾವನಿಗೆ influence ಇಲ್ಲವೋ, ಜಾತಿ ಬಲ ಇರುವುದಿಲ್ಲವೋ, ದಿಕ್ಕು ಇರುವುದಿಲ್ಲವೋ ಅಂಥವರನ್ನು ತಂದು ಈ ಇಲಾಖೆಗೆ ಹಾಕಿಬಿಡುತ್ತಾರೆ. ಇದರ ಮಧ್ಯೆ ನಮಗೆ ಕೆಲವು ಸ್ವಾಮೀಜಿಗಳ ಕಾಟ. Mechanized slaughter houses ಮಾಡುತ್ತೇವೆಂದರೆ, ಇಲ್ಲ ಮಾಡುವಂತಿಲ್ಲ, ನಾವು ನಿರಶನ ಮಾಡುತ್ತೇವೆಂದು ಹೇಳುತ್ತಾರೆ. ಅವರು ಮಾಂಸಾಹಾರವನ್ನು ತಿನ್ನುವಂಇದ್ದರೆ ತಾನೇ ಅವರಿಗೆ ಗೊತ್ತಾಗುವುದು. ಅವರು ತಿನ್ನುವಂತೆಯೂ ಇಲ್ಲ, ಸಾಕುವಂತೆಯೂ ಇಲ್ಲ. ಗೋವು ಅನ್ನು ಫೋಟೋದಲ್ಲಿ ಪೂಜೆ ಮಾಡುತ್ತಾರೆಯೇ ಹೊರತು ಗೋವನ್ನು ಕಟ್ಟಿ, ಗೋವಿಗೆ ಏನಾದರೂ ಹುಲ್ಲು ಹಾಕಿದ್ದಾರೆಯೇ ? ಸಗಣಿ ಎತ್ತಿದ್ದಾರೆಯೇ ? ಗಂಜಲವನ್ನು ತೆಗೆದಿದ್ದಾರೆಯೇ ? ಅಥವಾ ಹಾಲನ್ನು ಕರೆಯುವುದಕ್ಕೆ ಬಂದಾಗ ಯಾವಾಗಲಾದರೂ ಒದ್ದರೆ ಒದಿಸಿಕೊಂಡಿದ್ದಾರೆಯೇ ? ಏನೂ ಇಲ್ಲ. ಗೋವು ಮಾತೆ ಎಂದು ಪುಗಸಟ್ಟೆ ಹೇಳುವುದಕ್ಕೆ ಏನು ಕಷ್ಟ ? ಇವರ್‍ಯಾರೂ ತಾಯಿಗೆ ಅನ್ನ ಹಾಕಿದವರಲ್ಲ. ಗೋವನ್ನು ಮಾತೆ ಮಾಡಿಕೊಂಡು ಬಿಟ್ಟರು. ಹೆತ್ತ ತಾಯಿಯನ್ನು ಬಿಟ್ಟು ಬಿಟ್ಟರು. Unless you go in for mechanized slaughter house which is a part of agriculture Mr. Krishna Bairegowda, how will you protect my interest ? ನಾನು ಕುರಿ ಸಾಕುವಂಥವನು. ನನಗೆ spares ಎಲ್ಲವನ್ನು seperate ಮಾಡಿಕೊಟ್ಟರೆ ಸಿಗುವ ರೇಟ್ ಎಷ್ಟು ? ನಾನು livestock ಹಾಗೆ ಮಾರಿದರೆ ನನಗೆ ಬರುವಂಥ ಹಣ ಎಷ್ಟು ?

ಅಧ್ಯಕ್ಷರು : ನಿಮ್ಮ ಮನೆಯಲ್ಲಿ ಮುಂಚೆ ಕುರಿಗಳು ಇರಲಿಲ್ಲವೇ ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರ ಅಪ್ಪ ನಾವು ಎಲ್ಲರೂ ಒಟ್ಟಿಗೆ ಕುರಿ ಸಾಕುತ್ತಿದ್ದೆವು. ಅವರು ಹೋಗಿಬಿಟ್ಟರು ನಾನು ಕುರಿ ಕಾಯುತ್ತಾ ಹಾಗೆ ಇದ್ದೇನೆ.

ಶ್ರೀ ಆರ್. ಅಶೋಕ್ : ಎಮ್ಮೆ, ಕುರಿ ಇನ್ನೂ ಎಷ್ಟು ವರ್ಷ ಕಾಯಬೇಕು ಸಾರ್ ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಒಳ್ಳೆ ಕಥೆಯಾಯಿತಲ್ಲ. ನಿಮ್ಮಂಥವರು ಇರುವವರೆಗೂ ನಮಗೆ ಇದೇ ಡ್ಯೂಟಿ. ನೋಡಿ ನೀವು ಅಲ್ಲಿ, ಶಿವಕುಮಾರ್ ಇಲ್ಲಿ. ನೀವಿಬ್ಬರೂ ನಮ್ಮನ್ನು ಬಿಡುತ್ತೀರಾ ? ನೀವು ಕೇಳಿದ್ದನ್ನು ಬರೆದುಕೊಡುವುದಷ್ಟೇ ಕೆಲಸ ನಮ್ಮದು.

ಶ್ರೀ ಆರ್. ಅಶೋಕ್ : ನಾವು ಮುಂದೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಬೇಡ ರೀ, ಇದೇ ಗೌರವ ರೀ. ನಾನು ಆನೆಯಾಗುವುದಕ್ಕೆ ಇಷ್ಟಪಡುವುದಿಲ್ಲ. ಅಂಕುಶ ಆಗುವುದಕ್ಕೆ ಇಷ್ಟಪಡುತ್ತೇನೆ. ನೀವು ಆನೆಯಾಗೇ ಇರಿ. ನಾನು ಅಂಕುಶವಾಗಿರುತ್ತೇನೆ.

ಶ್ರೀ ಎಸ್.ಆರ್. ವಿಶ್ವನಾಥ್ : ಆನೆಯಾದರೆ ನಮ್ಮ Forest Minister ಕಾಟ ಸರ್.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಒಳ್ಳೆ ಕಥೆ, ಏನಪ್ಪಾ ನಿಮ್ಮ ಕಡೆ ಹಿಂಡು ಹಿಂಡು ಜನ ಇದ್ದಾರೆ. ನಮ್ಮ ಹತ್ತಿರ ಒಂದೇ ಒಂದು sampleಗೆ ಇಟ್ಟುಕೊಂಡಿದ್ದೇವೆ. ಆದರೆ, ಇವರಲ್ಲಾ ಸೇರಿದಾಗ ಎಲ್ಲರೂ ಒಂದೇ, ಅಧ್ಯಕ್ಷರೆ, ನಾವೇ ಬೇರೆ ಬೇರೆ. ನಿಮಗೆ ನಾನು sympathise ಹೇಳಬೇಕು, ನನಗೆ ನೀವು ಕರುಣೆ ತೋರಬೇಕು.

Agriculture Price Commission ವಿಚಾರದ ಬಗ್ಗೆ ಎರಡು ನಿಮಿಷ ಹೇಳಿಬಿಡುತ್ತೇನೆ. ಕೃಷ್ಣ ಬೈರೇಗೌಡರೆ ಬೆಳಿಗ್ಗೆಯೂ ಈ ವಿಚಾರವಾಗಿ ಹೇಳಿದ್ದೇನೆ. ಪುನಃ ಹೇಳುತ್ತಿದ್ದೇನೆ, ಹೆಚ್ಚು ಸಮಯ ವ್ಯರ್ಥ ಮಾಡದೇ ಹೇಳುತ್ತೇನೆ. Cropping pattern ಅನ್ನು decide ಮಾಡುವಂಥ ಅಧಿಕಾರ ಈ ಸಮಿತಿಗೆ ಇರಬೇಕು. ಬೆಲೆಯನ್ನು ನಿಗದಿ ಮಾಡಬೇಕಾಗಿದ್ದರೆ ಪೂರ್ವಭಾವಿ ಸಭೆಗಳನ್ನು ಪಂಚಾಯಿತಿ ಮಟ್ಟದಲ್ಲಿಯೇ ಅಥವಾ ತಾಲ್ಲೂಕು ಮಟ್ಟದಲ್ಲಿಯೋ ಅಥವಾ ರೈತರ ಜೊತೆಗೆ ಸಂವಾದ ಮಾಡಿ ಯಾವ ಬೆಳೆಗೆ ಎಷ್ಟು ಆಗುತ್ತದೆ ಎಂದು ಚರ್ಚೆ ಮಾಡಿ ಬೆಲೆ ನಿಗದಿ ಮಾಡಬೇಕು. ರೈತ ಉಪಯೋಗಿಸಬೇಕಾಗಿರುವಂಥ ಪರಿಕರಗಳಿಗೆ ಏನು ಹಣವನ್ನು ಕಟ್ಟಬೇಕಾಗುತ್ತದೆ, ಅದರ ವ್ಯಾಪ್ತಿ ಸಹ ಈ ಕಮಿಟಿಗೆ ಬರಬೇಕು. Subsidized rates ನಲ್ಲಿ ಅದು ಬುಲ್ಡೋಜರ್ ಆಗಿರಬಹುದು, ಲ್ಯಾಂಡ್ ಲೆವೆಲ್ ಮಾಡುವಂಥದ್ದಾಗಿರಬಹುದು, ರಿಗ್ ಯೂಸ್ ಮಾಡುವಂಥದ್ದಾಗಿರಬಹುದು, ಕ್ರೇನ್ ಯೂಸ್ ಮಾಡುವಂಥದ್ದಾಗಿರಬಹುದು, ಟ್ರ್ಯಾಕ್ಟರ್ ಅನ್ನು ಬಾಡಿಗೆಗೆ ತೆಗೆದುಕೊಳ್ಳುವಂಥದ್ದಾಗಿರಬಹುದು, ಯಾವುದೇ

machineryಯನ್ನು ರೈತ ತೆಗೆದುಕೊಳ್ಳಬೇಕಾಗಿದ್ದರೆ, it should be made available to him immediately. ಆಮೇಲೆ ಅವನ ಉತ್ಪನ್ನ ಬಂದ ಮೇಲೆ ನೀವು ಹಣವನ್ನು ತೆಗೆದುಕೊಳ್ಳಿ. ನೀವು ಈ ರೀತಿ ಮಾಡದೇ ಹೋದರೆ, ಇದರ ಜೊತೆಗೆ ಮತ್ತೊಂದು ಬಹಳ ಮುಖ್ಯವಾದುದೇನೆಂದರೆ, ರೈತರ ಬ್ಯಾಂಕ್ ಎಂದು ಮಾಡಿ. ಈಗ ನಿರುಪಯುಕ್ತವಾಗಿರುವಂಥ ನಿಮ್ಮ ಲ್ಯಾಂಡ್ ಬ್ಯಾಂಕ್ಸ್, ನಿಮ್ಮ ಸರ್ವೀಸ್ ಕೋ-ಆಪರೇಟಿವ್ ಸೊಸೈಟೀಸ್, ಇವುಗಳನ್ನು ಸಂಪೂರ್ಣವಾಗಿ ಕ್ಲೋಸ್ ಮಾಡಿ. ರೈತನಿಗೆ suretyಯನ್ನು ಕೇಳದೇ ಸಾಲ ಕೊಡುವಂಥ ವ್ಯವಸ್ಥೆ ಜಾರಿಯಾಗಬೇಕು. ರೈತ ಎಂದು ಹೇಳಿದರೆ ಕೇವಲ ಜಮೀನನ್ನು ಹೊಂದಿರುವವರು ಅಲ್ಲ, ಬೆಳಗ್ಗೆ ಮಾತನಾಡುತ್ತಾ ಹೇಳಿದರು, ಗಾರೆ ಕೆಲಸದವನಿಗೆ 300 ರೂಪಾಯಿ ಸಿಗುತ್ತದೆ. ಅಕ್ಷರ ಜ್ಞಾನ ಇಲ್ಲದೇ ಇದ್ದವನಿಗೆ, ಯಾರಿಗೆ ಕುಶಲತೆ ಇರಲಿಲ್ಲ ಅವನನ್ನು skilled labourer ಎಂದು ಕರೆದರು. Unskilled labourers ಗಳೆಲ್ಲಾ ಮೊದಲಿಗೆ ಕೃಷಿಯನ್ನು ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಕಾಲ ಬದಲಾದಂತೆಲ್ಲಾ ಕೆಲವರು skilled labour ಕಡೆಗೆ ಹೊರಟಿದ್ದಾರೆ. ಅದು ಟೈಲರಿಂಗ್ ಕೆಲಸ ಇರಬಹುದು, ಡ್ರೈವರ್ ಕೆಲಸ ಇರಬಹುದು, ಗಾರೆ ಕೆಲಸವಿರಬಹುದು, ಇಟ್ಟಿಗೆ ಕುಯ್ಯುವಂಥ ಕೆಲಸ ಇರಬಹುದು, ಇವರಿಗೆ ಜಾಸ್ತಿ wages ಸಿಗುತ್ತದೆ. As a result of which agriculturists ಹತ್ತಿರ ಬಂದು ಲೇಬರ್‌ನ್ನು ಕೊಟ್ಟು, ತನ್ನ ದೈಹಿಕ ಶಕ್ತಿಯನ್ನು ಕೊಟ್ಟು ಜೀವನ ಮಾಡುತ್ತದ್ದಂಥವರ ಸಂಖ್ಯೆ ಕಡಿಮೆಯಾಗಿದೆ. ಇವರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಸಾಲ ಸಿಗಬೇಕಾದರೆ 3% ಗಿಂತ ಹೆಚ್ಚಾಗದೇ ಇರುವಂಥ ಬಡ್ಡಿ ದರದಲ್ಲಿ ಎಲ್ಲಾ ವರ್ಗದ ಜನರಿಗೆ ಸಾಲ ಕೊಡುವಂಥ ಸಹಕಾರಿ ಸಂಸ್ಥೆಯನ್ನು ನೀವು ತಂದು, ಈಗಿರುವಂಥ 12% ಜನರನ್ನು 80%ಗೆ ನೀವು ತರದೇ ಹೋದರೆ ಬರುವ ನಾಲ್ಕು ವರ್ಷಗಳಲ್ಲಿ you will not be able to do anything. ನೀವು ಮತ್ತೆ ಕೋ-ಆಪರೇಷನ್ ಇಲಾಖೆ ಜೊತೆಗೆ ನೀವು interact ಆಗಬೇಕು. ನಿಮ್ಮ statistics ಪ್ರಕಾರ ರೈತ ಕುಟುಂಬಗಳೆಷ್ಟಿವೆ? ಅವರಿಗೆ ಹೇಗೆ ಪುನರ್ವಸತಿ ಕಲ್ಪಿಸಬೇಕು you have got to think about it. Interest rate ನಲ್ಲಿ big & small farmersಗೆ ರಿಸರ್ವ್ ಬ್ಯಾಂಕ್‌ನವರು ಅಡ್ಡ ಬರುತ್ತಿದ್ದಾರಂತೆ, ಅವರಿಗೇನು ಕಷ್ಟ

ಎಂದು ನನಗ ಗೊತ್ತಿಲ್ಲ. ರಿಸರ್ವ್ ಬ್ಯಾಂಕ್ ಮನೆಯವರ್ಯಾರೂ ಫಾರ್ಮಿಂಗ್ ಮಾಡುವುದಿಲ್ಲ. you must put your foot down. You should be able to make it clear. Government of India ದಲ್ಲಿ ನೀವು Agriculture Minister's Conference ಕರೆಯುತ್ತಾರೆಂದು ಕಾಣುತ್ತದೆ, you should be able to give your ideas there.

ಜಲಾನಯನದ ಬಗ್ಗೆ ಹೇಳಿದರು, ಜಲಾನಯನದ ಬಗ್ಗೆ ನಿಮ್ಮ concept ಏನು ಎಂದು ನಮಗೆ ಗೊತ್ತಿಲ್ಲ. ಬಿ.ಆರ್.ಪಾಟೀಲ್‌ರವರೆ, ನಮ್ಮ ಕಡೆ ಜಲಾನಯನ ಎಂದರೆ ಊರುಗಳಿಗೆ ಬರುವುದು, ಗೋಡೆ ಎಲ್ಲಿದೆಯೋ ಅಲ್ಲಿ ಗೋಡೆ ಮೇಲೆ ಬರೆದುಬಿಟ್ಟು ಹೋಗುವುದು. ಒಂದು ಮ್ಯಾಪ್ ಅನ್ನು ಹಾಕಿ ಫಲಾನುಭವಿಗಳ ಹೆಸರನ್ನು ಹಾಕುವುದು. ಜಲವನ್ನು ನೋಡಲಿಲ್ಲ, ನೆಲವನ್ನು ನೋಡಲಿಲ್ಲ, ಒಂದು ಬಾರಿ ಮಲ್ಲೇಶ್ವರಂನಲ್ಲಿ ಒಂದು ಆಫೀಸ್ ಇತ್ತು, ನಾನು ಭಯಬಿದ್ದುಬಿಟ್ಟೆ, ಆ ಆಫೀಸ್‌ನೊಳಗೆ ಹೋಗುವುದಕ್ಕೆ, ಇಂಗ್ಲೀಷ್‌ನವರ ಆಫೀಸ್ ಇದ್ದಂತೆ ಇದೆ. ಅದರ ಒಳಗಡೆ ಹೋಗುವುದಕ್ಕೆ ಆಗುವುದಿಲ್ಲ. ಬಹಳ ದೊಡ್ಡ ಆಫೀಸ್, ಬಹಳ ಜನ ತಿಳಿದವರು, ಬುದ್ಧಿವಂತರು, ನಮ್ಮಂಥ ಅಕ್ಷರ ಜ್ಞಾನ ಕಡಿಮೆಯಿರುವವರಿಗೆ ಹೆಚ್ಚು ಪ್ರವೇಶವಿಲ್ಲ. ಅವರು ಏನು ಮಾಡುತ್ತಿದ್ದಾರೆಂದು ಇದುವರೆಗೂ ಗೊತ್ತಾಗಲಿಲ್ಲ. ಯಾವಾಗ ಕೇಳಿದರೂ ನಿಮ್ಮ ಊರಿನ ಹತ್ತಿರ ಈ ಪ್ರಾಜೆಕ್ಟ್ಸ್ ಮಾಡಿದ್ದೇವೆ, ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಹೇಳುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ : ಜಲಾನಯನ ಅಭಿವೃದ್ಧಿಗೆ ಎಷ್ಟು ಕೋಟಿ ಖರ್ಚು ಮಾಡಿದ್ದಾರೆಂದು ತಮ್ಮ ಮೂಲಕ ಕೇಳಿ ದಯವಿಟ್ಟು. ಏಕೆಂದರೆ ನಾವೆಲ್ಲಾ ಕೇಳಿದರೆ ಉತ್ತರ ಕೊಡುವುದಿಲ್ಲವೆಂದು ಕಾಣುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ವಿಷಯಗಳನ್ನೆಲ್ಲಾ ಕೇಳಲಿ ಎಂದೇ ಪಾರ್ಲಿಮೆಂಟ್‌ನಲ್ಲಿದ್ದವರನ್ನು ಇಲ್ಲಿಗೆ ನಾನು ಕರೆಸಿರುವುದು. ಇವರು ಆ ಕೆಲಸವನ್ನು ನನಗೆ ಒಪ್ಪಿಸಿಬಿಟ್ಟು, ತಾನು ಕೊಲೊಂಬೋಗೆ ಹೋಗುತ್ತೇನೆಂದು ಹೇಳುತ್ತಾರೆ. ಹೇಗೆ ಮಾಡುವುದು ಹೇಳಿ. ಇದು ಸಾಧ್ಯವಿಲ್ಲ. ಚೆಲುವರಾಯಸ್ವಾಮಿಯವರೇ ನೀವೇ ಕೇಳಬೇಕು.

ಶ್ರೀ ಎನ್. ಚಲುವರಾಯಸ್ವಾಮಿ : ದಯಮಾಡಿ, ಬಹುಶಃ ಕಾಂಗ್ರೆಸ್‌ನವರು ಈ ಸದನವಾದ ಮೇಲೆ reshuffle ಮಾಡುವಾಗ ಈ speech ಅನ್ನು ಅವರ ಕೈಯಲ್ಲಿ ಕೇಳುವುದಕ್ಕೆ ಆಗುವುದಿಲ್ಲ. ಅದನ್ನು ಸರಿಪಡಿಸುವುದಕ್ಕೂ ಆಗುವುದಿಲ್ಲ. ನಿಮ್ಮನ್ನು ಅವರು ಮಂತ್ರಿ ಮಾಡಲೇಬೇಕು. ಇಲ್ಲದೇ ಇದ್ದರೆ ಅವರಿಗೆ ಕಷ್ಟವಾಗುತ್ತದೆ. ಮುಂದಕ್ಕೆ ಉತ್ತರ ಕೊಡುವುದಕ್ಕೆ, ನಮಗ್ಯಾರಿಗೂ ಉತ್ತರ ಕೊಡಬೇಕಾಗಿಲ್ಲ. ನಿಮಗೆ ಉತ್ತರ ಕೊಟ್ಟರೆ ಸಾಕಾಗಿದೆ. ನಿಮ್ಮ voice ಗಟ್ಟಿಯಾಗಿದೆ, ನೀವು ಹಿರಿಯರು ಎಂದು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಎಲ್ಲಾ ಸರ್ಕಾರಗಳಲ್ಲೂ ನಮ್ಮಂತಹವರು ಒಬ್ಬರು ಇದ್ದೇ ಇರುತ್ತಾರೆ. ಸರ್ಕಾರ ನಡೆಸುವವರಿಗೆ ಒಂದು ಕಲೆ ಇರುತ್ತದೆ. ಕಾಫಿಗೆ decoction ಅನ್ನು ಹೇಗೆ clean ಮಾಡುತ್ತಾರೋ ಹಾಗೆ ನಮ್ಮನ್ನು ಎಲ್ಲಿ ಇಡಬೇಕೋ ಅಲ್ಲಿ ಇಡುತ್ತಾರೆ. ಎಲ್ಲಿ ಗೌರವ ಕೊಡಬೇಕೋ ಅಲ್ಲಿ ನಮಗೂ ಕೊಡುತ್ತಾರೆ ಕೂಡ ಸದ್ಯಕ್ಕೆ ಮನೆಯಲ್ಲಿ ನಾನು ಮಂತ್ರಿ ಆಗಲೇಬೇಕೆಂದು ಅಪೇಕ್ಷೆ ಪಡುವವರೂ ಇಲ್ಲ. ಆಗಲೇ ಬೇಕೆಂಬ ಹುಚ್ಚು ನಮಗೂ ಇಲ್ಲ. ಅಕಸ್ಮಾತ್ ಆದರೆ ಇಲ್ಲ ನಮಗಾದರೂ ಗ್ರಹಚಾರ, ಇಲ್ಲ ಮಾಡಿದವರಿಗಾದರೂ ಗ್ರಹಚಾರ. ಆದುದರಿಂದ ಏನೋ ಅಧ್ಯಕ್ಷರ ಮುಖದಲ್ಲಿ ಒಂದು ರೀತಿಯ ಕಳೆ ಕಾಣುತ್ತಿದೆ. ಸ್ಥಾನಪಲ್ಲಟ ಆಗಿ ಹೊಸ ಅವಕಾಶ ಬಂದರೂ ಬರಬಹುದು. ನಿಮಗೆ ಅವಕಾಶ ಸಿಕ್ಕರೆ ಮಾತ್ರ ಈ Revenue ಇಲ್ಲವೇ Forest ಖಾತೆ ಬಿಡಬೇಡಿ, ಅಧ್ಯಕ್ಷರೆ. ಅದನ್ನೇ ಕೇಳಿ ತೆಗೆದುಕೊಳ್ಳಬೇಕು. ನೀವು ಏನೇನೆಲ್ಲಾ ಮಾತನಾಡಿದ್ದೀರಿ, ಅವನ್ನೇಲ್ಲಾ ಮಾಡಿ ತೋರಿಸಬೇಕು. ನಿಮಗೆ ಮೊದಲೇ ಅ ಕೀರ್ತಿ ಇದೆ. ಚಿಕ್ಕ ವಯಸ್ಸಿನಿಂದ ಝುಂಡಾ ಹಿಡಿದುಕೊಂಡು ಹೋರಾಟ ಮಾಡಿದವರು. ನೀವು ಮಾಡುತ್ತೀರಿ ಎನ್ನುವ ವಿಶ್ವಾಸ ಇದೆ. ಶ್ರೀನಿವಾಸ್ ಪ್ರಸಾದ್‌ರವರು ಸಿಟ್ಟಾಗಿಬಿಟ್ಟಾರು. ಅವರ ಬಳಿ ಎರಡು transfer cases urgent ಇದೆ. ಇವೆಲ್ಲಾ ಮಾತನಾಡುವಾಗ ರಾಮಾಯಣ, ಇದನ್ನೆಲ್ಲಾ ಯೋಚನೆ ಮಾಡಬೇಕು. ನಾನು ಇವರು ರೆವಿನ್ಯೂ ಮಂತ್ರಿಗಳಾಗಲಿ ಎಂದು ಹೇಳಿ ಅವರು ಆ transfer reject ಮಾಡಿ ಬಿಟ್ಟರೆ. ನಮಗೆ ಮಾತನಾಡಬೇಕಾದರೆ ಎಷ್ಟು ನಿರ್ಬಂಧ ಎನ್ನುತ್ತೀರಿ ಅಧ್ಯಕ್ಷರೆ. ಬೇಡ ನಮ್ಮ ಪರಿಸ್ಥಿತಿ. ಚೆಲುವರಾಯಸ್ವಾಮಿಯವರು ನಾನು ರೆವಿನ್ಯೂ ಇನ್ಸ್‌ಪೆಕ್ಟರ್

transferಗೆ ನಾನು ಕಾದಿದ್ದರೆ ನನ್ನನ್ನು ಮಂತ್ರಿ ಮಾಡುವುದಕ್ಕೆ ಹೊರಟಿದ್ದಾರೆ. Productivity, ಒಬ್ಬ ಮನುಷ್ಯ ಎಷ್ಟು ಉತ್ಪಾದನೆಯನ್ನು, ಎಷ್ಟು ಉತ್ಪಾದಕತೆಯನ್ನು ಇದ್ದ ಜಾಗದಲ್ಲಿ ಮಾಡಬಹುದು ಎನ್ನುವುದಕ್ಕೆ ಈ ಕಾಲ ರುಜುವಾತಾಗಿದೆ. ಎಷ್ಟು ಬದಲಾವಣೆ ಆಗಿದೆ, ಎಷ್ಟು modernize ಆಗಿದೆ. ಈ ತರಹದ ದಿನಗಳಲ್ಲಿ ಇಂತಹ ಸರ್ಕಾರಿ ವ್ಯವಸ್ಥೆ ಬೇಕೆ? ಪುನಃ ಅದು repetition ಆದರೂ ಕೂಡ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ private sector ನವರ ಜೊತೆ ಸ್ವಲ್ಪ ಯೋಚನೆ ಮಾಡಿಕೊಳ್ಳಿ. ಈ ಕೃಷಿ ಬೆಲೆ ಆಯೋಗ ಇದೆಯಲ್ಲ, ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳಿ. Urgent ಮಾಡಿ ಮುಗಿಸುವುದಕ್ಕೆ ಹೋಗಬೇಡಿ. ಅಧಿಕಾರಿಗಳನ್ನು ದೊಡ್ಡವರನ್ನಾಗಿ ಮಾಡಬೇಡಿ. 1917ರ ಅಕ್ಟೋಬರ್‌ನಲ್ಲಿ ಲೆನಿನ್‌ರವರ ನಾಯಕತ್ವದಲ್ಲಿ USSR ನಲ್ಲಿ revolution ಆಯಿತು. ಮೊದಲನೆ ಬಾರಿಗೆ ಜಗತ್ತಿನಲ್ಲಿ ಯಾರನ್ನು proletariat ಎಂದು ಕರೆಯುತ್ತಿದ್ದರು, ಅಂದರೆ ದುಡಿಯುವ ವರ್ಗ, ಅವರು ತಮ್ಮ ಬೆವರಿಗೆ ಬೆಲೆ ನಿಗದಿ ಮಾಡುವಂತಹ ಅವಕಾಶವನ್ನು ಮಾಡಿಕೊಟ್ಟಿತು. You take a leaf out of it. ನಿಮಗೆ role models ಯಾವಾಗಲೂ ಕೂಡಾ ಕೆಟ್ಟವರಾಗಬಾರದು. ಗುಂಡೂರಾಯರ ಸರ್ಕಾರದಲ್ಲಿ ಸದ್ಯೋಜಾತಪ್ಪ ರವರು Transport Minister ಆಗಿದ್ದರು. ನಾವು ಆ ಕಡೆ ಕುಳಿತಿದ್ದೆವು. ಸದ್ಯೋಜಾತಪ್ಪ ರವರು ಬೇಡಿಕೆಗಳಿಗೆ ಉತ್ತರ ಕೊಡುವಾಗ transport ಇಲಾಖೆಗೆ, ಅಶೋಕ್ ತಾವು ಕೇಳಬೇಕು. Transport Minister ಆಗಿದ್ದವರು. ಎರಡು ನಿಮಿಷದಲ್ಲಿ reply ಕೊಟ್ಟರು. ಈ ಇಲಾಖೆ ನನ್ನ ಕೈಗೆ ಬಂದ ಮೇಲೆ ಸುಧಾರಿಸಿದೆಯೇ ಹೊರತು ಕೆಟ್ಟಿಲ್ಲ. ಇಷ್ಟು ವರ್ಷಗಳಿಗಿಂತ ಉತ್ತಮ ಸ್ಥಿತಿಗೆ ತಂದಿಟ್ಟಿದ್ದೇನೆ, ನನ್ನ ಬೇಡಿಕೆಯನ್ನು ಮಂಜೂರು ಮಾಡಿ ಎಂದು ಕುಳಿತು ಬಿಟ್ಟರು. He was a very clever man. ಒಳ್ಳೆಯ ಮನುಷ್ಯರು ಸದ್ಯೋಜಾತಪ್ಪ ರವರು. ನಾನು ನಿಮಗೆ ಏನು ಹೇಳುತ್ತೇನೆಂದರೆ, ಯಾರು ನಿಮಗೆ role model ಆಗಿರಬೇಕೆಂದು ನೀವು ಯೋಚನೆ ಮಾಡುವಾಗ think of Kamraj Commitment, ಅಧ್ಯಕ್ಷರೆ, ತಾನೊಂದು ಗುಡಿಸಲು ವಾಸಿ, ಮುಖ್ಯಮಂತ್ರಿಯಾಗುತ್ತಾರೆ. ತಾಯಿ ಇರುತ್ತಾರೆ, ಅವಿವಾಹಿತ. Public tap ಗೆ ತಾಯಿ ಹೋಗಬೇಕು. ಜನರ ಜೊತೆ ಜಗಳವಾಡಿ ಪಾಪ ಆ ನಲ್ಲಿಯಲ್ಲಿ ನೀರು ಹಿಡಿದು ತರಬೇಕು. ಇವರು

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿ ಬರುವಷ್ಟರಲ್ಲಿ ಆ public tap ನಿಂದ ಅವರ ಮನೆಗೆ ಒಂದು extension ಎಳೆದು ನಲ್ಲಿ ಹಾಕಿರುತ್ತಾರೆ. ಕಾಮರಾಜ್ ರವರ ತಾಯಿಗೆ ಪರಮಾನಂದ. ಏನು ಮಗ ಮುಖ್ಯಮಂತ್ರಿಯಾಗಿದ್ದಾನೆ ಎಂದಲ್ಲ. ಮನೆಗೆ ನಲ್ಲಿ ಕೊಟ್ಟರು, ಇನ್ನು ಮುಂದೆ ತಾನು public tap ಬಳಿ ಹೋಗಿ ಜನರ ಜೊತೆ ಜಗಳವಾಡುವುದು ತಪ್ಪುತ್ತದೆ ಎಂದು. ಆದರೆ, ಕಾಮರಾಜ್ ಏನು ಹೇಳುತ್ತಾರೆ ಗೊತ್ತಾ ಭೈರೇಗೌಡರೆ ? ಏನು ಮಾಡುವುದಮ್ಮ ? ನಿನಗೇನೋ ಕಷ್ಟ ತಪ್ಪುತ್ತದೆ. ನನಗೆ ಅಪಕೀರ್ತಿ ಬರುತ್ತದೆ. ನಾವು ಹೀಗೆ ಇರಬೇಕು, ನೀನು ದಿನವೂ ಹೋಗಿ public tap ನಲ್ಲಿಯೇ ನೀರು ತರಬೇಕು. ಎಲ್ಲಾ ಗುಡಿಸಲುಗಳಿಗೆ ಪ್ರತ್ಯೇಕವಾಗಿ ನಲ್ಲಿ ಕೊಡುವವರೆಗೆ ನಾವು ನಲ್ಲಿ ಹಾಕಿಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಕಾಮರಾಜ್ ಇವತ್ತಿನ ಮನುಷ್ಯನಲ್ಲ. Oxford ನಲ್ಲಿ ಓದಲಿಲ್ಲ, Harvard ಗೆ ಹೋಗಲಿಲ್ಲ. English ಬರುತ್ತಿರಲಿಲ್ಲ. ಈ ಸಮಾಜದಲ್ಲಿ ಮುಂದುವರೆದವರು ಅವರನ್ನು ಎಷ್ಟು ಹಂಗಿಸಿದ್ದರು ಎಂದರೆ, convent ಗೆ ಅವರನ್ನು ಭಾಷಣ ಮಾಡುವುದಕ್ಕೆ ಕರೆದು please address the students, ಎಂದರಂತೆ. ಕಾಮರಾಜ್ ರವರಿಗೆ ಅದು ಗೊತ್ತಾಗದೆ ಅವರ ಮನೆಯ address ಹೇಳಿದರಂತೆ. ಅದನ್ನು ಹೇಳಿಕೊಂಡು ಇವರು ನಗುವುದು. It is that Kamraj, who produced the leaders, who could administer this country, Mr. Krishna Byregowda. Please bear it in mind. You should pick a leaf out of their lives. Look to the positive side of the life. ನಿಮಗೆ ಚಿಕ್ಕ ವಯಸ್ಸಿಗೆ ಬಹಳ ದೊಡ್ಡ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ನಮ್ಮ ತಂದೆಯವರ ಹೆಸರನ್ನು ನಿಮಗೆ link ಮಾಡಿದ್ದಾರೆ. ಅನೇಕ ಜನರು ಕೃಷ್ಣ ಎಂಬುದನ್ನು ಮರೆತು ಭೈರೇಗೌಡರೆ ಎಂದೇ ನಿಮ್ಮನ್ನು ಕರೆಯುತ್ತಾರೆ. ನಿಮ್ಮ ತಂದೆಯವರ ಜೊತೆ ನನಗೆ ಸರಸ-ವಿರಸ ಎರಡೂ ಇತ್ತು. ಆದರೆ, ರೈತನ ಬಗ್ಗೆ, ಕೃಷಿಕರ ಬಗ್ಗೆ ಅವರ ಬದ್ಧತೆ ಯಾರು, ಯಾವತ್ತೂ ಪ್ರಶ್ನೆ ಮಾಡುವಂತಿರಲಿಲ್ಲ. ಎಲ್ಲಾ ತಂದೆಯವರಿಗೂ ಒಳ್ಳೆಯ ಮಕ್ಕಳು ಹುಟ್ಟುವುದಿಲ್ಲ. ಹೇಗೆ ಗ್ಯಾರಂಟಿ ಕೊಡುವುದು ? By chance ಆಗಿಬಿಡುತ್ತಾರೆ. ಯಾರ್‍ಯಾರು ಹೇಗೇಗೆ ಆಗುತ್ತಾರೆಂದು ಹೇಳಲು ಬರುವುದಿಲ್ಲ. ಕೆಲವು cases

correct ಆಗುತ್ತದೆ. ಕೆಲವು cases ಆಗುವುದಿಲ್ಲ. ನಿಮ್ಮ case, it is a right case ಎಂದು ನಾನು ತಿಳಿದುಕೊಂಡಿದ್ದೇನೆ. You have to prove by your actions. ಹೇ, ಭೈರೇಗೌಡರ ಮಗನಪ್ಪ, ಭೈರೇಗೌಡರನ್ನು ಮೀರಿಸಿ ಬಿಟ್ಟ, Historyಯಲ್ಲಿ ದಾಖಲೆ ಸ್ಥಾಪಿಸಿ ಬಿಟ್ಟ ಎಂದು ಹೇಳಬೇಕು. ನಮಗೆ ಅಪ್ಪನೂ ಇಲ್ಲ, ತಾತನೂ ಇಲ್ಲ, ಮಕ್ಕಳು ಬರುವುದೂ ಇಲ್ಲ. ನಮಗೆ ಆ ಪ್ರಶ್ನೆ ಬರುವುದಿಲ್ಲ. ನೀವಾಗಿ ನೀವೇ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದೀರಿ. ನಿಮಗೆ ಯಾರು immediate target ? ಭೈರೇಗೌಡರು. ಭೈರೇಗೌಡರಿಗಿಂತಲೂ ಪ್ರಗತಿಪರ. ನಿಮ್ಮ ಹಳೆಯ ಸ್ನೇಹಿತರಲ್ಲವೆ, ಅಧ್ಯಕ್ಷರೆ, so you have to work in that direction. ಮೂಲಭೂತ ಬದಲಾವಣೆಗಳನ್ನು ತರಬೇಕು. ಕೃಷಿಕನಿಗೆ ಸಿಗುವಂತಹ ಸಾಲದ ವ್ಯವಸ್ಥೆಯನ್ನು ಸಹಕಾರಿ ಇಲಾಖೆಯೊಡನೆ ಚರ್ಚೆ ಮಾಡಿ ನೀವು ಸದೃಢಗೊಳಿಸಬೇಕು. ರೈತನ ಉತ್ಪನ್ನಕ್ಕೆ ಅವನೇ ಬೆಲೆ ನಿಗದಿ ಮಾಡುವಂತಹ ಕಾಲ ಬರಬೇಕು. ಯಾವ mechanized agriculture ಮಾಡಬೇಕೆಂದು ಇದ್ದೇವೆ ಆ ಮಟ್ಟಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಅವನಿಗೆ ಎಲ್ಲ ಕೂಡ ಸುಲಭದಲ್ಲಿ ಸಿಗುವ ರೀತಿಯಲ್ಲಿ ಬರಬೇಕು. ರೈತನನ್ನು ದೊಡ್ಡ ರೈತ, ಸಣ್ಣ ರೈತ, ಉದ್ದನೆ ರೈತ, ಕುಳ್ಳನೆ ರೈತ, ಆ ಜಾತಿ ರೈತ, ಈ ಜಾತಿ ರೈತ ಎಂದು ದಯಮಾಡಿ ವಿಂಗಡಿಸುವುದಕ್ಕೆ ಹೋಗಬೇಡಿ. ಬಹಳ ಜನ ಒಕ್ಕಲಿಗರು ಎಂದರೆ ಒಂದು ಜಾತಿ ಎಂದು ತಿಳಿದುಕೊಂಡಿದ್ದಾರೆ. ಒಕ್ಕಲುತನ ಮಾಡುವವರು. ಒಕ್ಕಲುತನ ಎಂದರೆ ಯಾರು ಭೂಮಿಯನ್ನು ನಂಬಿಕೊಂಡು ಬದುಕಿದ್ದಾರೆ ಅವರು. ಇವರು ಕೆಲವರು ಇವರ personal advantageಗೆ ಅದನ್ನು ಜಾತಿ ಮಾಡಿಕೊಂಡಿದ್ದಾರೆ. ಇರಲಿ ಬಿಡಿ ಪರವಾಗಿಲ್ಲ. ಅದು advantageous ಆಗಿದ್ದರೆ ಇಟ್ಟುಕೊಳ್ಳಲಿ, ನಮ್ಮದೇನೂ ಆಕ್ಷೇಪಣೆ ಇಲ್ಲ. ನಾವು ಹೇಳಿದ್ದನ್ನು ಕೆಲವನ್ನು ಹಿಡಿದುಕೊಂಡು, ಕೆಲವನ್ನು ಬಿಟ್ಟು ಬಿಟ್ಟಿದ್ದಾರೆ. ಅದು ಒಳ್ಳೆಯದಲ್ಲ. ಎಲ್ಲವನ್ನೂ ಕೇಳಿ, ನಿಮಗೂ ಒಳ್ಳಯದಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಚಿಕ್ಕ ವಯಸ್ಸು, ಒಂದು ಜವಾಬ್ದಾರಿಯಿಂದ ಕುಳಿತಿದ್ದೀರಿ. ಈ ಸದನದಲ್ಲಿ ಬೇಡಿಕೆಯ ವಿಚಾರ ಇಷ್ಟು ಗಂಭೀರವಾಗಿ ಚರ್ಚೆಯಾಗಿದ್ದು, ಮಂತ್ರಿಗಳಾಗಿದ್ದವರು ಕುಳಿತು notes ಮಾಡಿಕೊಂಡು ಉತ್ತರ ಹೇಳುವಂತಹ ಒಂದು ಸನ್ನಿವೇಶವನ್ನು ಬಹಳ ವರ್ಷಗಳಾದ ಮೇಲೆ ನೋಡುತ್ತಿದ್ದೇವೆ.

ನಾನು ಹೃದಯಪೂರ್ವಕವಾಗಿ ತಮ್ಮನ್ನು ಅಭಿನಂದಿಸುತ್ತೇನೆ ಮತ್ತು ಪ್ರತಿ ಪಕ್ಷದವರು ವಿಶೇಷವಾಗಿ, ಬೇರೆ ಎಷ್ಟೇ ವಿಚಾರಗಳಿದ್ದರೂ ಕೂಡ ಚರ್ಚೆ ಮಾಡಿದರೆ ನೋಡಿ ಎಷ್ಟು ವಿಚಾರಗಳು ಹೊರ ಬರುತ್ತವೆ, ಎಷ್ಟು ಜನರಿಗೆ ಮಾತನಾಡಲು ಅವಕಾಶ ಸಿಗುತ್ತದೆ. ಒಬ್ಬರ ಆಲೋಚನೆ ಇದ್ದಂತೆ ಇನ್ನೊಬ್ಬರದು ಇರುವುದಿಲ್ಲ. ನಾವು ಶಾಲೆಯಲ್ಲಿ ಓದಿಕೊಂಡು ಬಂದವರಲ್ಲ. Training ಮಾಡಿಕೊಂಡು ಬಂದವರಲ್ಲ. ನಮ್ಮ ನಮ್ಮ ಪ್ರದೇಶದಿಂದ ಬಂದ ಜನರ ಧ್ವನಿಯಾಗಿ ನಾವು ಮಾತನಾಡುತ್ತೇವೆ. ಅದೇ ನಿಜವಾದ Assembly. Assembly ಎಂಬುದು ಒಂದು ಚಾವಡಿ ಅಷ್ಟೆ. ನನಗೆ ತೋಚಿದ ನಾಲ್ಕು ಮಾತುಗಳನ್ನು ತಮ್ಮ ಮುಖಾಂತರ ಹೇಳಿಕೊಳ್ಳುವುದಕ್ಕೆ ಅವಕಾಶ ಕೊಟ್ಟು, ಸಾಕಷ್ಟು ಸಮಯವನ್ನು ನನಗೆ ಕೊಟ್ಟಿದ್ದೀರಿ. ನಾನು ತಮಗೆ ಋಣಿಯಾಗಿದ್ದೇನೆ. ಮಾನ್ಯ ಮಂತ್ರಿಗಳು ಅನ್ಯಥಾ ಭಾವಿಸದೆ ಇದನ್ನು ಸಭಿರುಚಿಯಿಂದ ತೆಗೆದುಕೊಂಡು ಅವರು ಪ್ರಾರಂಭ ಮಾಡಲಿ. ಇತರೆ ಇಲಾಖೆಯವರು ಅವರನ್ನು ಅನುಸರಿಸಲಿ. ಈ ಶನಿಗಳ ಕಾಟ ಏನಿದೆ, ಈ ಅನುತ್ಪಾದಕ ಹುದ್ದೆಗಳದ್ದು, ಇದು ಕಡಿಮೆಯಾಗಲಿ ಎಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಗೋವಿಂದ ಎಂ. ಕಾರಜೋಳ ರವರು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, ಕೃಷಿಯಿಂದಲೇ ನಾಗರಿಕತೆ ಹುಟ್ಟಿರತಕ್ಕಂಥದ್ದು, ಪ್ರಾರಂಭವಾಗಿರತಕ್ಕಂಥದ್ದು, ಆದರೆ ಎಲ್ಲಾ ನಾಗರಿಕತೆಗಳಲ್ಲಿ ರೈತನೇ ಶೋಷಣೆಗೆ ಒಳಗಾಗಿರುವುದು. ಈ ದೇಶದಲ್ಲಿ ಪ್ರತಿ ಗಂಟೆಗೆ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಪ್ರತಿ ಗಂಟೆಗೆ 20 ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಾರೆ, ಇದು ಈ ದೇಶದ ಪರಿಸ್ಥಿತಿ. 2014–15ನೇ ಸಾಲಿಗೆ ಕೃಷಿ ಇಲಾಖೆಗೆ ರೂ. 3759 ಕೋಟಿ ಅನುದಾನವನ್ನು ನಿಗದಿ ಮಾಡಿದ್ದಾರೆ. 2013–14ನೇ ಸಾಲಿನಲ್ಲಿ ರೂ. 3095 ಕೋಟಿ ಅನುದಾನವನ್ನು ಕೊಟ್ಟಿದ್ದರು, ಖರ್ಚು ಮಾಡಿರುವುದು ಕೇವಲ ರೂ. 1794 ಕೋಟಿ ಖರ್ಚಾಗಿದೆ. ಇದನ್ನು ನೋಡಿದರೆ ಕೇವಲ 60% ಖರ್ಚು ಮಾಡಿದ್ದಾರೆ, ಉಳಿದದ್ದನ್ನು ಖರ್ಚು ಮಾಡಲಿಕ್ಕಾಗಲಿಲ್ಲ, ಏತಕ್ಕೆ ಆಗಲಿಲ್ಲವೆನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಬೇಕು. ಅನುದಾನದ ಕೊರತೆಯಿಂದಾಯಿತೋ ಅಥವಾ ಖರ್ಚು ಮಾಡುವುದಕ್ಕೆ

ನಮ್ಮಲ್ಲಿ efficient officers ಇಲ್ಲವೋ ಅಥವಾ ಯೋಜನೆಗಳಿಲ್ಲವೋ ಕಾರ್ಯಕ್ರಮಗಳಿಲ್ಲವೋ ಎನ್ನುವುದನ್ನು ಹೇಳಬೇಕು. ರಮೇಶ್ ಕುಮಾರ್ ಅವರು ಇದುವರೆವಿಗೂ ಮಾತನಾಡಿದರು, ಸರ್, ಆಡಳಿತ ಸುಧಾರಣಾ ಆಯೋಗ ಬಂದ ಮೇಲೆ ಈ ರಾಜ್ಯದಲ್ಲಿ ಕೆಲವು ವಿಭಾಗ ಮಟ್ಟದ್ದು, ಕೆಲವು ಜಿಲ್ಲಾಮಟ್ಟದ್ದು, ಕೆಲವು ಕಛೇರಿಗಳಲ್ಲಿ ಅನಾವಶ್ಯಕವಾಗಿರುವ ಹುದ್ದೆಗಳನ್ನು ರದ್ದು ಮಾಡಬೇಕೆಂದು ಆಯೋಗದವರು ಶಿಫಾರಸ್ಸು ಮಾಡಿದರು. ಶಿಫಾರಸ್ಸು ಮಾಡಿದರ ಪ್ರಯುಕ್ತ divisional ಮಟ್ಟದಲ್ಲಿರುವ Divisional Commissioner Office ರದ್ದಾಯಿತು, Joint Director Office ರದ್ದಾಯಿತು, ಅನೇಕ ವಿಭಾಗ ಮಟ್ಟದ ಕಛೇರಿಗಳು ರದ್ದಾದವು. ಆದರೆ, ನಮ್ಮ ಸರ್ಕಾರಗಳು ಏನು ಮಾಡಿದವೆಂದರೆ, ಜಿಲ್ಲಾ ಮಟ್ಟಕ್ಕೆ ಒಂದು Joint Director ಮಾಡಿದರು. ವಿಭಾಗ ಮಟ್ಟದಲ್ಲಿದ್ದನ್ನು ಜಿಲ್ಲಾ ಮಟ್ಟಕ್ಕೆ ಒಬ್ಬ Joint Director ಮಾಡಿದರು, ಒಂದೇ ಒಂದು Deputy Director ಇದ್ದ ಹುದ್ದೆಯನ್ನು ಎರಡು Deputy Director ಹುದ್ದೆ ಮಾಡಿದರು. Watershedಗೆ ಪ್ರತ್ಯೇಕ, ಆಡಳಿತ ಮತ್ತು ತರಬೇತಿಗೆ ಪ್ರತ್ಯೇಕ ಎಂದು ಎರಡು ಮಾಡಿದರು. ಇನ್ನೊಂದು ದೊಡ್ಡ ದುರಂತವೆಂದರೆ, ಒಂದಿಷ್ಟು ಗ್ರಾಮ ಸೇವಕರಿದ್ದರು, ಅವರೇನಾದರು ಸ್ವಲ್ಪ ಹಳ್ಳಿಗಳಿಗೆ ಹೋಗಿ ಹೊಲಪಲ ನೋಡುತ್ತಿದ್ದರು, ರೈತರನ್ನು ಮಾತನಾಡಿಸುತ್ತಿದ್ದರು. ಅವನೆಲ್ಲಾ ಅಪ್‌ಗ್ರೇಡ್ ಮಾಡಿ ಅವರನ್ನು Assistant Agriculture Officer ಮಾಡಿದರು, Assistant Agriculture Officer ಇದ್ದವರನ್ನೆಲ್ಲಾ Agriculture Officer ಮಾಡಿದರು. Agriculture Officer ಇದ್ದವರನ್ನೆಲ್ಲಾ Agriculture Director ಮಾಡಿದರು. ಇದು ಇಲಾಖೆಯಲ್ಲಿ ಸುಧಾರಣೆಯಾಗಿರುವುದು ನಾನು ಮೊಟ್ಟಮೊದಲನೆಯದಾಗಿ ಕೃಷ್ಣ ಭೈರೇಗೌಡರಿಗೆ ವಿನಂತಿ ಮಾಡುವುದೇನೆಂದರೆ, ಪಂಚಾಯಿತಿಗೆ ಒಬ್ಬರು ಗ್ರಾಮ ಸೇವಕರನ್ನು ನೇಮಿಸಿ, ಈ ಮೇಲಿನ ಹುದ್ದೆಗಳನ್ನೆಲ್ಲಾ ತೆಗೆದುಬಿಡಿ. 4–5 ಸಾವಿರ ಅನವಶ್ಯಕ ಹುದ್ದೆಗಳು ನಿಮ್ಮ ಇಲಾಖೆಯಲ್ಲಿ ಇದ್ದಾವೆ. ನಿಮ್ಮ ಒಂದೇ ಇಲಾಖೆಯಲ್ಲಿ ಬಂದಿಲ್ಲ, ಈ ರೀತಿ ಎಲ್ಲಾ ಇಲಾಖೆಗಳಲ್ಲೂ ಬಂದಿದ್ದಾವೆ, ಅವನ್ನು ಕಡಿಮೆ ಮಾಡಿ ಆಡಳಿತ ವೆಚ್ಚ ಕಡಿಮೆಯಾಗುತ್ತದೆ. ಏನಾಗಿದೆ ಎಂದರೆ, ನಿಮ್ಮ ಇಲಾಖೆ, 'ದುಡ್ಡಿನ ದೇವರಿಗೆ ಎರಡು ದುಡ್ಡಿನ ಚಂದ್ರ' ಎನ್ನುತ್ತಾರೆ. ನಮ್ಮ ಕಡೆ ದೇವರ

ಕಿಮ್ಮತ್ತಿನ ಒಂದು ದುಡ್ಡು, ಅದಕ್ಕೆ ಹಚ್ಚತಕ್ಕಂಥ ಬಣ್ಣ ಎರಡು ದುಡ್ಡಿನದ್ದು, ಅದಕ್ಕೆ ದುಡ್ಡಿನ ದೇವರಿಗೆ ಎರಡು ದುಡ್ಡಿನ ಚಂದ್ರ ಎನ್ನುತ್ತಾರೆ, ಆ ಪರಿಸ್ಥಿತಿ ನಿಮ್ಮ ಇಲಾಖೆಯಲ್ಲಾಗಿದೆ. ಸಬ್ಸಿಡಿ ಕೊಡುವುದು, SC/ST ಜನಾಂಗದವರಿಗೆ ಪ್ರತಿವರ್ಷ Agriculture Departmentನವರು implements ಖರೀದಿ ಮಾಡಿ ಕೊಡುತ್ತಾರೆ. Agriculture Departmentನಿಂದ 18% ಹಣದಲ್ಲಿ ಪ್ರತಿ ವರ್ಷ Agriculture implementsಗೆ ಖರೀದಿ ಮಾಡಿ SC/ST ಜನಾಂಗದವರಿಗೆ ಕೊಡುತ್ತಾರೆ. ಭೂಮಿ ಇರುವ SC/ST ಜನಾಂಗದವರು ಬೆರಳೆಣಿಕೆಯಷ್ಟಿದ್ದಾರೆ. ಪ್ರತಿ ವರ್ಷ ಅವೇ ಇಂಪ್ಲಿಮೆಂಟ್ಸ್ ಖರೀದಿ ಮಾಡಿ ಅವರಿಗೇ ಕೊಡುತ್ತಾರೆ, ಅವರು ತೆಗೆದುಕೊಳ್ಳುವುದಿಲ್ಲ. ಏನಾಗಿದೆ ಎಂದರೆ ಅವರ ಹೆಸರಿನಲ್ಲಿ ನಮ್ಮಂಥವರ್‍ಯಾರೋ ಬೇರೆಯವರು ತೆಗೆದುಕೊಳ್ಳುತ್ತಾರೆ. ಅದಕ್ಕೆ ಮೊಟ್ಟ ಮೊದಲಿಗೆ SC/ST ಜನಾಂಗದವರಿಗೇನು agriculture implements ಕೊಡುತ್ತೀರಿ, need-based ಕೊಡಿ. ಸುಮ್ಮನೆ ಹಣವಿದೆ ಎಂದು ತಂದು ಡಂಪ್ ಮಾಡುವ ಕೆಲಸವಾಗಬಾರದು. ಇದು ಮೊದಲನೆಯದು, ಏಕೆಂದರೆ, 18% ಹಣ ಸಂಪೂರ್ಣ ದುರುಪಯೋಗವಾಗುತ್ತಿದೆ. ಇದೊಂದೇ ಇಲಾಖೆಯದ್ದಲ್ಲ, ಇನ್ನೂ ಅನೇಕ ಇಲಾಖೆಗಳಿದ್ದಾವೆ. ಅದಕ್ಕೆ ನಾನು ಏನು ವಿನಂತಿ ಮಾಡುತ್ತೇನೆಂದರೆ, SC/ST ಜನಾಂಗದವರಿಗೆ ಸಹಾಯ ಮಾಡುವುದಾದರೆ ಅವರು ಹತ್ತೇ ಮಂದಿ ಇರಲಿ, ಅವರಿಗೆ ಎತ್ತುಗಳನ್ನು ಕೊಡಿಸಿ, ಅವರು ಬದುಕಲಿ, ಆಕಳು, ಎಮ್ಮೆಗಳನ್ನು ಕೊಡಿಸಿ, ಹೈನುಗಾರಿಕೆ ಮಾಡಿ ಬದುಕಲಿ, ಸುಮ್ಮನೆ ಈ ಹಣವನ್ನು ವೇಸ್ಟ್ ಮಾಡಿ ಸುಮ್ಮನೆ ಯಾವನೋ ಒಬ್ಬ RC holder (rate contract) ತೆಗೆದುಕೊಂಡು ಬರುತ್ತಾನೆ, ಯಾವನೋ ಒಬ್ಬ ಅಧಿಕಾರಿ ಖರೀದಿ ಮಾಡುತ್ತಾನೆ, ಅವನಿಗಿಷ್ಟು ಇವನಿಗಿಷ್ಟಾಗುತ್ತದೆ, ಆ SC/ST ಜನಾಂಗದವರ ಹೆಸರಿನಲ್ಲಿ ಮುಗಿದು ಹೋಗುತ್ತದೆ, ಇದು ವಸ್ತುಸ್ಥಿತಿ ಮತ್ತು ಸತ್ಯ. ರೈತರ ಬಗ್ಗೆ ಎಲ್ಲರೂ ಮಾತನಾಡಿದರು, ಜೋಳ ಮತ್ತು ರಾಗಿ ಬೆಳೆಯುವವರ ಬಗ್ಗೆ ಯಾರಾದರೂ ಮಾತನಾಡುತ್ತಾರೆಯೇ ಎಂದು ನಾನು ಆಲೋಚನೆ ಮಾಡುತ್ತಿದ್ದೆ, ಯಾರೂ ಮಾತನಾಡಲಿಲ್ಲ. ಜೋಳ ಬೆಳೆಯುವ ಪರಿಸ್ಥಿತಿ ಬಹಳ ಕಠಿಣವಾಗಿದೆ, ಈಗ ಜೋಳ ಬೆಳೆಯುವುದನ್ನೇ ಎಲ್ಲರೂ ಬಿಡುತ್ತಿದ್ದಾರೆ, ಜೋಳ ಬೆಳೆಯುವುದು ಬಿಟ್ಟರೆ ತಿನ್ನುವುದಕ್ಕೆ

ನಮ್ಮಲ್ಲಿ ಬೇರೆ ವ್ಯವಸ್ಥೆ ಇಲ್ಲ. ಒಂದು ಎಕರೆಗೆ ಮೂರು ಕ್ವಿಂಟಾಲ್ ಜೋಳ ಬೆಳೆಯುತ್ತಾರೆ. ಒಂದು ಎಕರೆ ಬಿತ್ತನೆ ಮಾಡಬೇಕಾದರೆ, ಕನಿಷ್ಠ ರೂ. 2500 ಖರ್ಚು ಬರುತ್ತದೆ. ಅದಕ್ಕೆ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ಜೋಳಕ್ಕೆ ಬೆಂಬಲ ಬೆಲೆಯನ್ನು ನಿಗದಿ ಮಾಡಿ, ಹೆಚ್ಚು ಕೊಡದಿದ್ದರೂ, ರೈತ ರೂ. 2500 ಖರ್ಚು ಮಾಡುತ್ತಿದ್ದರೆ, ರೂ. 2700 ಕೊಡಿ, ಅದಕ್ಕಾದರೂ ಒಣ ಬೇಸಾಯದಲ್ಲಿ ಜೋಳ ಬೆಳೆಯುವವರು ಮುಂದಕ್ಕೆ ಬರುತ್ತಾರೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟವಾಗುತ್ತದೆ. ರಾಗಿದೂ ಅದೇ ಪರಿಸ್ಥಿತಿ, ಜೋಳದ್ದು ಅದೇ ಪರಿಸ್ಥಿತಿ.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು) : ಮೊದಲ ಬಾರಿಗೆ ಜೋಳವನ್ನು ಬೆಂಬಲ ಬೆಲೆಗೆ ಸರ್ಕಾರ ಖರೀದಿ ಮಾಡಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಖರೀದಿ ಮಾಡಿದಿರಿ, ಅದರ ಬೆಲೆ ರೂ. 1,800 ಆಗಿದೆ, ಅದರಿಂದ ಏನೂ ಆಗುವುದಿಲ್ಲ. ಎಕರೆಗೆ ಖರ್ಚು ರೂ. 2,500 ಆಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):- ಜೋಳಕ್ಕೆ ರೂ. 1,800 ನಾವು ನಿಗದಿ ಮಾಡಿದ್ದೇವಲ್ಲ, ನಾವು ನೀವು ರೊಟ್ಟಿ ತಿನ್ನುವವರೆ; ಆ ರೂ.1,800 ಬೆಲೆ ನಿಗದಿ ಮಾಡಿದಾಗ ಮಾರುಕಟ್ಟೆಯಲ್ಲಿ ಜೋಳದ ಬಲೆ ಏನಿತ್ತು ? ರೂ. 1,300. ನಾವು ಆ ಜೋಳದ ಬೆಲೆಯನ್ನು ನಿಗದಿಪಡಿಸುವಾಗ ಮಾನ್ಯ ಕೃಷ್ಣ ಭೈರೇಗೌಡರು ನಾವು ಏನು ಲೆಕ್ಕ ಹಾಕಿದ್ದೇವೆಂದರೆ, ಜೋಳದ ಬಲೆ ನಿಗದಿ ಮಾಡುವಾಗ ಬರೀ ಜೋಳದ ಮೇಲೆ ಲೆಕ್ಕ ಹಾಕಬಾರದು, ಆ ಜೋಳದ ಜೊತೆಗೆ ರೈತ ಮೇವನ್ನು ಏನು ಬೆಳೆಯುತ್ತಾನೆ, ಅದರಿಂದಾಗುವ ತ್ರಾಸು ಮತ್ತು ಆ ಜೋಳ ಬೆಳೆಯುವ ಆದಾಯ ಏನು ಕಡಿಮೆ ಇರುತ್ತದೆ, ಆ ಹಿನ್ನೆಲೆಯಲ್ಲಿ first time on that basis the price is fixed as regards jawar. ಅದು ಇನ್ನು ಕಡಿಮೆಯಾಗಿದ್ದರೆ, ಇನ್ನು ಹೆಚ್ಚು ಮಾಡಿ ಎಂದು ಹೇಳೋಣ.

ಶ್ರೀ ಗೋವಿಂದ ಎಂ. ಕಾರಜೋಳ : ಜೋಳಕ್ಕೆ ಕನಿಷ್ಠ ರೂ. 2,700 – 2,800 ಬೆಂಬಲ ಬೆಲೆಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಅದರಲ್ಲಿ ಈ ವರ್ಷ ಆವರ್ತನಿಧಿಗೆ ಹಣ ಕಡಿಮೆಯಾಗಿದೆ, ಏಕೆಂದರೆ ಈಗ ಬಜೆಟ್‌ಗೆ ಅನುಮೋದನೆ

ತೆಗೆದುಕೊಳ್ಳುತ್ತೀರಿ, ರೂ.2,000 ಕೋಟಿಯಾದರೂ ಕೊಡಬೇಕು. ಯಾವ್ಯಾವ ರೈತ ಸಂಕಷ್ಟಕ್ಕೆ ಸಿಲುಕುತ್ತಾನೆ, ಆ ಸಂದರ್ಭದಲ್ಲಿ ಸರ್ಕಾರ ಮುಂದೆ ಬರಬೇಕು, ಅದಕ್ಕಾಗಿ ರೂ. 2,000 ಕೋಟಿಯಾದರೂ ನಿಗದಿ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ರಾಜ್ಯದಲ್ಲಿ ಮಳೆ ಆಧಾರಿತ ಕೃಷಿ ಮಾಡುವವರು 70% ಇದ್ದಾರೆ. ಇವತ್ತು 130 ತಾಲ್ಲೂಕುಗಳಲ್ಲಿ ಮಳೆಯೇ ಇಲ್ಲದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತನಿಗೆ ಸಹಾಯ ಮಾಡಲು ಕೂಡಲೇ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಮೇವಿಲ್ಲ, ಜೋಳದ ಕಾಳು ಸಿಗುತ್ತಿಲ್ಲ, ಮುಂಗಾರಿ ಹಂಗಾಮು ಮುಗಿದು ಹೋಯಿತು. ಅದಕ್ಕೆ ಸರ್ಕಾರಕ್ಕೆ ನಾನು ವಿನಂತಿ ಮಾಡುವುದೇನೆಂದರೆ, ನೀವು ರೈತರನ್ನು ಬದುಕಿಸುವುದು, ಕೃಷಿ ಕಾರ್ಮಿಕರನ್ನು ಬದುಕಿಸುವುದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಕಳೆದ ವರ್ಷ ಪಿಡಿಎಸ್ ನಲ್ಲಿ ಜೋಳ, ರಾಗಿ ಕೊಡುತ್ತೇವೆಂದು ಹೇಳುತ್ತಿದ್ದೀರಿ ಇದುವರೆವಿಗೂ ಅದನ್ನು ಮಾಡಲಿಲ್ಲ. ತಾವು ಕೃಷಿ ಮಂತ್ರಿಯಾಗಿ ಸಂಬಂಧಪಟ್ಟ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ ಜೋಳ ಕೊಡುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು : ಅ ಬೇಡಿಕೆ ಮೇಲೆ ಮಾತನಾಡಿ, ಪಿಡಿಎಸ್ ಅಲ್ಲಿ ಬರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾತನಾಡುತ್ತೇನೆ, ಕೃಷಿಗೆ ಸಂಬಂಧಪಟ್ಟದ್ದೆಂದು ಹೇಳಿದೆ ಅಷ್ಟೆ. ಇನ್ನು ಹಂದಿ ಸಾಕಾಣಿಕೆಗೆ ಕೇವಲ ರೂ.65 ಕೋಟಿ ಕೊಡಲಾಗಿದೆ. ಹಂದಿ ಸಾಕಾಣಿಕೆ ಮಾಡುವವರ ಸಂಖ್ಯೆ ಬಹಳ ದೊಡ್ಡದಿದೆ. ಪ್ರತಿಯೊಂದು ಪಟ್ಟಣ, ನಗರಗಳಲ್ಲಿ ಹಂದಿ ಸಾಕಾಣಿಕೆ ಮಾಡುವವರು ಇದ್ದಾರೆ, ದೊಡ್ಡ ಹಳ್ಳಿಗಳಲ್ಲಿ ಹಂದಿ ಸಾಕಾಣಿಕೆ ಮಾಡುವವರಿದ್ದಾರೆ. ಇಷ್ಟು ಹಣ ಸಾಕಾಗುವುದಿಲ್ಲ. ಹಂದಿ ಸಾಕುವವರು ಕೇವಲ ಬಡವರು. ಅದಕ್ಕೆ ಅವರಿಗೆ ಉದ್ಯೋಗ ಸೃಷ್ಟಿ ಮಾಡುವುದಕ್ಕೆ 500 ಕೋಟಿ ಹಣ ಕೊಡಿ. ಒಂದು ಲಕ್ಷ ಮೂವತ್ತು-ನಲವತ್ತು ಸಾವಿರ ಕೋಟಿ ಮಂಡಿಸುವಂತಹ ಸಂದರ್ಭದಲ್ಲಿ ಹಂದಿ ಸಾಕುವವರಿಗೆ 500 ಕೋಟಿ ರೂ. ಕೊಡಿ. ಬರೀ 50 ಕೋಟಿ ರೂ. ಕೊಟ್ಟರೆ ಸಾಕಾಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಹಂದಿ ಸಾಕುವವನು ಪ್ರಾಣಿಯನ್ನು ಹಾಗೆಯೇ ಮಾರಿದರೆ ಹಂದಿ ಸಾಕುವವನಿಗೆ ಏನೂ ದುಡ್ಡು ಬರುವುದಿಲ್ಲ.

Mechanized slaughter house ಇದ್ದು parts separate ಮಾಡಿ ಕಳುಹಿಸಿದರೆ ವಿದೇಶದಲ್ಲಿ ಅಪಾರವಾದ ಬೆಲೆ ಇದೆ. ಅದಕ್ಕೆ ನೀವು ಒಪ್ಪುತ್ತೀರಾ ? ನಿಮಗೆ ಸ್ವಾಮೀಜಿಗಳ ಕಾಟ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ : ಸ್ವಾಮೀಜಿಗಳ ಕಾಟ ಬೇರೆ, ಹಂದಿ ಸಾಕುವವರ ಸಲುವಾಗಿ ನಾನು suggest ಮಾಡುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : Mechanized slaughter houseಗೆ ತಮ್ಮ ಒಪ್ಪಿಗೆ ಇದೆಯೇ ?

ಶ್ರೀ ಗೋವಿಂದ ಎಂ. ಕಾರಜೋಳ : ಸೆಪರೇಟ್ ಆಗಿ ಮಾಡಲಿ ಏನು ತಪ್ಪಿದೆ? ರಾಯರೆಡ್ಡಿಯವರು ತಿನ್ನುವುದಿಲ್ಲ ಅವರು ಹಂದಿ ಮಾಂಸ ತಿನ್ನುವುದನ್ನು ಬಿಟ್ಟಿದ್ದಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಈಗ ಬಿಟ್ಟಿದ್ದಾರೆಂದರೆ ಮೊದಲು ಅವರು ತಿನ್ನುತ್ತಿದ್ದರು ಎಂದಾಯಿತು.

ಶ್ರೀ ಗೋವಿಂದ ಎಂ. ಕಾರಜೋಳ : ಅದನ್ನೆಲ್ಲಾ ಇಲ್ಲಿ ಹೇಳುವುದಕ್ಕಾಗುತ್ತದಾ? ಅವರು ಲಿಂಗಾಯಿತರು. ನೀವು ಅರ್ಥ ಮಾಡಿಕೊಳ್ಳಬೇಕು. ರಾಯರೆಡ್ಡಿಯವರು ಏನೇನು ಮಾಡುತ್ತಿದ್ದರು ಎಂದು ನಮಗಿಂತ ಹೆಚ್ಚು ನಿಮಗೆ ಗೊತ್ತಿದೆ. ಲಕ್ಷ್ಮಣ ಸವದಿಯವರು ಅವರ ದೋಸ್ತ್ ಇದ್ದಾರೆ. ಅವರಿಗೆ ನನಗಿಂತ ಹೆಚ್ಚು ಗೊತ್ತಿದೆ.

ಶ್ರೀ ಬಸವರಾಜ ಬೊಮ್ಮಾಯಿ : ರಾಯರೆಡ್ಡಿಯವರು international ಲಿಂಗಾಯಿತರು.

ಶ್ರೀ ಗೋವಿಂದ ಎಂ. ಕಾರಜೋಳ : ಅದನ್ನೆಲ್ಲಾ ನಾನು ನಿಮಗೆ ಆ ಮೇಲೆ ಕಥೆ ಹೇಳುತ್ತೇನೆ.

ಅಧ್ಯಕ್ಷರು : International, National, domestic ...

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಅಂತರರಾಷ್ಟ್ರೀಯ ಮಠ ಯವುದು ಎಂದು ಸ್ವಲ್ಪ ಬೆಳಕು ಚೆಲ್ಲುವಂತಹ ಕೆಲಸ ಆಗಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಬರೀ International ಲಿಂಗಾಯಿತರು ಅಲ್ಲ. ನಾನು ಇನ್ನೊಂದು ಹೇಳುತ್ತೇನೆ. ಬಸವಣ್ಣನವರು ತಮ್ಮ

ವಚನದಲ್ಲಿ ಬಹಳ ಸುಂದರವಾಗಿ ಹೇಳಿದ್ದಾರೆ. ಹೊನ್ನು, ಹೆಣ್ಣು, ಮಣ್ಣೆಂಬ ಕರ್ಮದಲ್ಲಿ ಸಿಲುಕಿ ವೃತ ಬರುದರೆ ಹೋಹ ಕೆಡುಕ ಹಾರುವ ನಾನಲ್ಲ. ಕೂಡಲಸಂಗಮದೇವನು ವಿಪ್ರ ಕರ್ಮವ ಬಿಡಿಸಿ ಅಶುದ್ಧವನ್ನು ಶುದ್ಧನನ್ನಾಗಿ ಮಾಡಿದನು ಎಂದು " ಆ ಕೆಟಗಿರಿ ಒಳಗೆ ಅವರು ಬರುತ್ತಾರೆ. ನಾವು ನೀವು ಇದ್ದಾಗ ಹೇಳುತ್ತೇನೆ ಅದನ್ನು.

ಅಧ್ಯಕ್ಷರು : ಆಯಿತು ಕೃಷಿಗೆ ಬನ್ನಿ.

ಶ್ರೀ ಗೋವಿಂದ ಎಂ. ಕಾರಜೋಳ : ಬಹಳ ಜನ ಮಾತನಾಡಿದ್ದಾರೆ ಉಳಿದದ್ದು ವಿಷಯ ಅಷ್ಟೆ ಮಾತನಾಡುತ್ತೇನೆ. ಸವಳು ಜವಳದ ಕಾಟ ಬಹಳ ಜಾಸ್ತಿಯಾಗಿದೆ. ಭೂಮಿ ಇವತ್ತು ಬಹಳ ಸವಳು ಜವಳು ಆಗುತ್ತಿದೆ. ಬಂಜರಗುತ್ತಿದೆ. ಅದಕ್ಕೆ ನಾನು ಕೃಷಿ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ, ನಿಮ್ಮ ಇಲಾಖೆಯಿಂದ ಇದಕ್ಕೆ ಒಂದು ವಿಶೇಷ ಕಾರ್ಯಕ್ರಮ ಮಾಡಿ. ಕೇಂದ್ರ ಸರ್ಕಾರದ ಕಡೆ ನೋಡಬೇಡಿ, ಬೃಹತ್ ನೀರಾವರಿ ಕಡೆ ನೋಡಬೇಡಿ, ಮೈನರ್ ಇರಿಗೇಷನ್ ಕಡೆ ನೋಡಬೇಡಿ, ಇದನ್ನು ನೀವೇ ಮಾಡಿ. ಇರುವ ಭೂಮಿಯೇ ಕಡಿಮೆ ಇದೆ. 121 ಲಕ್ಷ ಹೆಕ್ಟೇರ್ ನಿಮಗೆ ಕೃಷಿ ಉಳುಮೆ ಮಾಡತಕ್ಕಂತಹ ಭೂಮಿ ಇದೆ. ನನ್ನ ತಿಳುವಳಿಕೆ ಪ್ರಕಾರ 20 ಲಕ್ಷ ಹೆಕ್ಟೇರ್ ಭೂಮಿ ಬಂಜರಾಗಿ ಹೋಗಿದೆ. ಅದಕ್ಕೆ ನಾವೇ ಕಾರಣರು. ಯಾರೂ ಅಲ್ಲ. ನಮ್ಮ ರೈತರು ದುರಾಸೆಯಿಂದ ಹಳ್ಳ ಒತ್ತುವರಿ ಮಾಡಿದರು ಹೊಳೆ ಒತ್ತುವರಿ ಮಾಡಿದರು, ಭೂಮಿಯಲ್ಲಿರತಕ್ಕಂತಹ ವೇಸ್ಟ್ ಹರಿದು ಹೋಗುವುದಕ್ಕೆ ಬಿಡಲಿಲ್ಲ. ಅಲ್ಲಿಯೇ ನಿಲ್ಲುವ ಹಾಗೆ ಮಾಡಿದರು. ಹೀಗಾಗಿ ರಸ್ತೆ ಬ್ಧಿದಿ ಟಾರ್ ಇದ್ದದ್ದು ಬರೀ ರಸ್ತೆ ಉಳಿಸುವುದಕ್ಕೆ ಅಲ್ಲ ರೈತರ ಭೂಮಿ ಉಳಿಸುವುದಕ್ಕೂ ಆ ಗಟಾರಗಳು ಉಪಯೋಗವಾಗಿದ್ದರವು. ಅವನ್ನೂ ಮುಚ್ಚಿದ್ದಾರೆ.

ಶ್ರೀ ಕೃಷ್ಣ ಭೈರೇಗೌಡ : ಒಂದು ಎಕರೆಗೆ 1.20 ಲಕ್ಷದಿಂದ 1.50 ಲಕ್ಷ ರೂ. ನೀರಾವರಿ ಮಾಡುವುದಕ್ಕೆ ತಗಲತಕ್ಕಂತಹ ವೆಚ್ಚ. ಅದು ಮಾಡಿ ಅದರ ಪಕ್ಕದಲ್ಲಿರುವ ಕಾಲುವೆಯನ್ನು ಒತ್ತುವರಿ ಮಾಡಿ. ಅದರ ಪಕ್ಕದಲ್ಲಿರುವ ನೀರು ಹರಿಯುವಂತಹ ಏನೇನು ವ್ಯವಸ್ಥೆ ಇದೆ ಎಲ್ಲವನ್ನೂ ಒತ್ತುವರಿ ಮಾಡಿ ನನ್ನ ಅತಿ ಆಸೆಯಿಂದ ನಾನು ಭೂಮಿಯನ್ನು ಹಾಳು ಮಾಡಿ ಅದಕ್ಕೆ ಮತ್ತೆ ಒಂದು ಎಕರೆಯನ್ನು ಸವಳಿನಿಂದ ಹೊರಗೆ ತರಬೇಕೆಂದು ಹೇಳಿದರೆ ಒಂದುವರೆ ಲಕ್ಷ ರೂ. ಖರ್ಚಾಗುತ್ತದೆ. ಅದನ್ನು ಮಾಡಿ ಈಗ 20 ಲಕ್ಷ ರೂ. ಹಾಳಾಗಿದೆ, ಈಗ ಇನ್ನೊಂದು 50 ಲಕ್ಷ ಹಾಳಾಗಲಿ ಎಂದು ಹೇಳುತ್ತೀರೇನು ? ಯೋಚನೆ ಮಾಡಿ.

ಅಧ್ಯಕ್ಷರು : ವ್ಯವಸ್ಥೆ ಕೆಟ್ಟಿದೆ, ಅದಕ್ಕೆ ಕಾರಣ ನಮ್ಮ ಆಡಳಿತದಲ್ಲಿ ಬಿಗಿ ತಪ್ಪಿದ್ದರಿಂದ ಇವೆಲ್ಲಾ ಆಗುವುದಕ್ಕೆ ಸಾಧ್ಯವಾಗಿದೆ. ಮಾಡಿ, ಹಿಂದೆ ತಳವಾರ ಇದ್ದ, ಗಂಟಿ ಇದ್ದ, ಅವನ್ನೆಲ್ಲಾ ಮಾಡುವುದಕ್ಕೆ ಪ್ರಾರಂಭ ಮಾಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಬಹಳ ಮುಖ್ಯವಾದ ವಿಷಯ. ತಾವು ಅದಕ್ಕೆ ಆದ್ಯತೆ ಕೊಡಿ. ಯಾವುದಾದರೂ ಒಂದು ಕಾರ್ಯಕ್ರಮ ಕಡಿಮೆ ಮಾಡಿ ಸವಳು ಜವಳು ತೆಗೆಯತಕ್ಕಂತಹ ಕೆಲಸ ಮಾಡಿ. ಮೇಜರ್ ಇರಿಗೇಷನ್‌ನವರು ಏನು ಮಾಡಿದ್ದಾರೆಂದು ಹೇಳುತ್ತೇನೆ. ಅವರು ಕಾಡಾ Administrator ಕೊಟ್ಟಿದ್ದಾರೆ. ಅಲ್ಲಿ Co-operation Department ನಿಂದ ಒಬ್ಬ ಬಂದು Administrator ಆಗಿ ಕೂತಿರುತ್ತಾನೆ. ಎಲ್ಲಿಯೂ ಕೆಲಸ ಇಲ್ಲದೆ retirementಗೆ ಬಂದ ಒಬ್ಬ IAS ಅಲ್ಲಿ ಬಂದು ಕೂತಿರುತ್ತಾನೆ. ಅವರು ಯಾರೂ ಏನೂ ಕೆಲಸ ಮಾಡುವುದಿಲ್ಲ. ಅವರಲ್ಲಿ ಸಿಬ್ಬಂದಿಯೂ ಇಲ್ಲ. ಎಲ್ಲಾ ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಒಂದೊಂದು CADA Administrator Office ಗಳು ಇವೆ. ಯಾರೋ ಒಬ್ಬರು ಆರು ತಿಂಗಳು, ಮೂರು ತಿಂಗಳು ಕಳೆದರೆ ರಿಟೈರ್ಡ್ ಆಗುವವರು ಅನಿವಾರ್ಯವಾಗಿ ಅಲ್ಲಿ ಬಂದು pension settlement ಮಾಡಿಕೊಂಡು ಹೋಗುವುದಕ್ಕೆ ಅಲ್ಲಿ ಬಂದು ಕೂರುತ್ತಾರೆ. ನೀವೆ ಇದನ್ನು ಮಾಡಬೇಕು. ಬೇಕಾದರೆ ಮೇಜರ್ ಇರಿಗೇಷನ್‌ನಿಂದ 10,000 ಕೋಟಿ ರೂ.ಗಳಲ್ಲಿ ಒಂದು ಸಾವಿರ ಕೋಟಿ ರೂ. ನೀವೇ ತೆಗೆದುಕೊಂಡು ಬಿಡಿ. ನೀವೇ ಈ ಕಾರ್ಯಕ್ರಮ ಮಾಡಿ. ಮಾನ್ಯ ಮುಖ್ಯಮಂತ್ರಿಗಳಿಗೂ ನಾನು ವಿನಂತಿ ಮಾಡಿ ಅದರಲ್ಲಿ ಸ್ವಲ್ಪ ಹಣ ಕಡಿಮೆ ಮಾಡಿ ಇದಕ್ಕೆ ಕೊಡಿ ಎಂದು ಹೇಳುತ್ತೇವೆ. ಒಂದು ಬಹಳ ಮಹತ್ವದ ವಿಷಯ ಇದೆ. ನಮ್ಮ ರೈತರು implements ಖರೀದಿ ಮಾಡುವ procedure ಬದಲಾವಣೆಯಾಗಿದೆ. implements ಖರೀದಿ ಮಾಡಿದ್ದಕ್ಕೆ ಸಬ್ಸಿಡಿ ಕೊಡುವುದು ಮೊದಲು ನೂರು ಹಂತದಲ್ಲಿತ್ತು. ರೈತ ಅವನೇ ನೇರವಾಗಿ ಖರೀದಿ ಮಾಡಿ ತಂದರೆ 100% ಚೆಕ್ ನೇರವಾಗಿ ಅವನಿಗೆ ಕೊಡುವ ಪದ್ಧತಿ ಇತ್ತು. ಸಾಲ ತೆಗೆದುಕೊಂಡಿದ್ದರೆ ಬ್ಯಾಂಕಿನ ಅಕೌಂಟಿಗೆ ಕಳುಹಿಸುತ್ತಿದ್ದರು. ಇಲ್ಲವೆಂದರೆ ಡೀಲರ್ ದರ ಕಡಿಮೆ ಮಾಡಿ ಸಬ್ಸಿಡಿ ದರದಲ್ಲಿ ಅವನಿಗೆ implements ಕೊಟ್ಟಿದ್ದರೆ ಡೀಲರ್‌ಗೆ ಕೊಡುತ್ತಿದ್ದರು. ಈ ವ್ಯವಸ್ಥೆ ಸರಿ ಇತ್ತು. ಇವತ್ತು ಮಾಡಿರುವ ವ್ಯವಸ್ಥೆ ಸರಿ

ಇಲ್ಲ. ಅದು ತಮಗೆ ಗೊತ್ತಿದೆ. ಏಕೆ ಸರಿ ಇಲ್ಲವೆಂದು ಹೇಳುತ್ತೇನೆಂದರೆ, ಡೀಲರ್ ನಿಮಗೆ ಒಂದು ಸ್ಪೇಯರ್ ಬೇಕಾಗಿತ್ತು ಎಂದರೆ ಪೂರ್ಣ ಹಣ ಕೊಟ್ಟು ತೆಗೆದುಕೊಂಡು ಹೋಗಿ ಸಬ್ಸಿಡಿ ಯಾವಾಗ ಬರುತ್ತದೋ ಗೊತ್ತಿಲ್ಲ. ಸರ್ಕಾರದಲ್ಲಿ ದುಡ್ಡು ಇಲ್ಲವೆಂದು ಹೇಳುತ್ತಾರೆ, ನಿಮ್ಮ Assistant Directorಗೆ Deputy Directorಗೆ, ನಿಮ್ಮ Joint Directorಗೆ ಕೇಳಿದರೆ ಎರಡು ವರ್ಷಗಳಿಂದ ಸರ್ಕಾರದಿಂದ ಅನುದಾನ ಬಂದಿಲ್ಲವೆಂದು ಹೇಳುತ್ತಾರೆ. ಹೀಗಾಗಿ ಯಾರೂ ರೈತರಿಗೆ ಕೊಡುವುದಿಲ್ಲ. ಅದು ಮೋಸವಾಗುತ್ತಿದೆ. ನಾನು ನಿಮಗೆ ವಿನಂತಿ ಮಾಡುತ್ತೇನೆ, procedure ಬದಲಾವಣೆ ಮಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸವಳು ಜವಳಿನ ಬಗ್ಗೆ ಹೇಳಿದರು. ಮಾನ್ಯ ಕೃಷಿ ಸಚಿವರು ಅದನ್ನು ಮೇಜರ್ ಇರಿಗೇಷನ್‌ನಿಂದ ಮಾಡಿರುವ ಬಗ್ಗೆ ಆಲೋಚನೆ ಮಾಡಿದ್ದೇವೆಂದು ಹೇಳಿದರು. ಅದನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ಸವಳು ಜವಳದ್ದು ನೀವೇ ಪೂರ್ಣ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ರೈತರು ಒತ್ತುವರಿ ಮಾಡಿರುವಂತಹ ಈ ಖರಾಬು ಜಮೀನು ಏನಿದೆ ಅದನ್ನು ಸರ್ವೇ ಮಾಡಿಸಿ ಒಂದು ಕೆನಾಲ್ ಮಾಡಿ ಕೊಡಿ. ನಾವು ನಮ್ಮ ಜಮೀನಿನಲ್ಲಿ ಸವಳು ಜವಳು ಹೇಗೆ ತೆಗೆಯಬೇಕೆಂದು ಹೊಸ technology ಪ್ರಕಾರ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಸ್ವತಃ ನನ್ನ ಹೊಲದಲ್ಲಿ ಸುಮಾರು 40 ಎಕರೆ ಜಮೀನಿನಲ್ಲಿ ಸವಳು ಜವಳು ಆಗಿರುವಂಥದ್ದನ್ನು ತೆಗೆದಿದ್ದೇವೆ. ಆದರೆ ಆ ನೀರು ಎಲ್ಲಿ ಬಿಡಬೇಕೆಂದು ಸಮಸ್ಯೆಯಾಗಿದೆ. ನಾನು ಸುಮಾರು ಮೂರು ಕಿ.ಮೀ. ಪೈಪ್‌ಲೈನ್ ಮಾಡಿಕೊಂಡು ನದಿಗೆ ಹೋಗಿ ಬಿಡುವಂತಹ ಕೆಲಸ ಮಾಡಿದ್ದೇನೆ. ಆದರೆ ಆ ಸ್ಥಿತಿ ಎಲ್ಲರಿಗೂ ಬರುವುದಿಲ್ಲ. ಅದಕ್ಕೆ ನೀವು ಒತ್ತುವರಿ ಆಗಿರತಕ್ಕಂತಹ ಖರಾಬು ಜಮೀನು ತೆಗೆದು ಬರೀ ಕೆನಾಲ್‌ಗಳನ್ನು ಮಾಡಿಕೊಟ್ಟರೆ ನಾವು ಸವಳು ಜವಳು ತೆಗೆಯುವುದಕ್ಕೆ ಅನುಕೂಲವಾಗುತ್ತದೆ. ಆ ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, Horticulture Department ನವರು ಈ ಸಾರಿ ತಾಲ್ಲೂಕಿಗೆ ಒಂದು ಕೃಷಿ ಹೊಂಡ ಕಟ್ಟಿದ್ದಾರೆ.

ಅಧ್ಯಕ್ಷರು : ಉದ್ಯೋಗ ಖಾತರಿ ಯೋಜನೆಯಲ್ಲಿ ಎಷ್ಟು ಬೇಕಾದರೂ ಮಾಡಿಕೊಳ್ಳಬಹುದು.

ಶ್ರೀ ಗೋವಿಂದ ಎಂ. ಕಾರಜೋಳ : ಉದ್ಯೋಗ ಖಾತರಿ ಯೋಜನೆಯಲ್ಲಿ ಯಾರೂ ಮಾಡುವುದಿಲ್ಲ. ಪರಿಸ್ಥಿತಿ ಸರಿ ಇಲ್ಲ.

ಅಧ್ಯಕ್ಷರು : ಏಕೆ ?

ಶ್ರೀ ಗೋವಿಂದ ಎಂ. ಕಾರಜೋಳ : ನಿಮಗೆ ಭೇಟಿ ಆಗಿ ಛೇಂಬರ್‌ನಲ್ಲಿ ಬಂದು ಹೇಳುತ್ತೇನೆ. ಅದರ ಪರಿಸ್ಥಿತಿ ಸರಿ ಇಲ್ಲ.

ಅಧ್ಯಕ್ಷರು : ಏಕೆ ಸರಿ ಇಲ್ಲವೆಂದರೆ, ಬಹಳ ಜನ ಸ್ನೇಹಿತರು ಹೀಗೆಯೇ ಹೇಳುತ್ತಾರೆ. ಇಲ್ಲರೀ ನಾವು ಆ ಜಮೀನು ಮಾರಾಟ ಮಾಡುವುದೇ ಸರಿ ಎಂದು ಹೇಳುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಅದು ಏಕೆಂದು ನಾನು ನಿಮಗೆ ನಂತರ ಹೇಳುತ್ತೇನೆ. ದಾಳಿಂಬೆ ಪ್ರದೇಶ ವಿಸ್ತರಣೆ ಕೊಡುತ್ತಿದ್ದಿರಿ, ಈ ಸಾರಿ ಜಿಲ್ಲೆಗೆ ಐದು ಹೆಕ್ಟೇರ್ ಕೊಟ್ಟಿದ್ದಾರೆ. ಕನಿಷ್ಠ ಒಂದು 25–25 ಹೆಕ್ಟೇರ್ ಒಂದೊಂದು ತಾಲ್ಲೂಕಿಗೆ ಕೊಟ್ಟರೆ ಅನುಕೂಲವಾಗುತ್ತದೆ. ದಾಳಿಂಬೆಗೆ ಒಳ್ಳೆಯ ಬೆಲೆ ಇದೆ. ನಮ್ಮಲ್ಲಿ ಜವಾರಿ ಬಾಳೆ ಬಹಳ ಚೆನ್ನಾಗಿ ಬೆಳೆಯುತ್ತಾರೆ. ಪ್ರತಿ ತಾಲ್ಲೂಕಿಗೆ 30 ಹೆಕ್ಟೇರ್ ಕೊಡುವಂಥದ್ದು ಮಾಡಬೇಕು. ನಮ್ಮ ತೋಟಗಾರಿಕೆ ಮಂತ್ರಿಗಳು ನಿಮ್ಮ ವಿಷಯವೇ ಹೇಳುತ್ತಿದ್ದೇನೆ. ನಿಮ್ಮ ಇಲಾಖೆಯಿಂದ ಒಂದು ತಾಲ್ಲೂಕಿಗೆ ಒಂದು ಕೃಷಿ ಹೊಂಡ ಕೊಟ್ಟಿದ್ದೀರಿ. ಅದನ್ನು ತೆಗೆದುಕೊಂಡು ಏನು ಮಾಡುವುದು ? ಕನಿಷ್ಠ 20 ರಿಂದ 35 ಆದರೂ ಕೊಡಿ. ದಾಳಿಂಬೆ ಪ್ರದೇಶ ವಿಸ್ತರಣೆ ಒಳಗೆ ನೀವು ಕೊಡುತ್ತಿದ್ದಿರಿ, ಪ್ರತಿ ತಾಲ್ಲೂಕಿಗೆ 25 ಹೆಕ್ಟೇರ್ ಆದರೂ ಕೊಡಿ. ಬಾಳೆಗೆ 30 ಹೆಕ್ಟೇರ್ ಆದರೂ ಕೊಡಿ. Small tractors ಒಂದು ತಾಲ್ಲೂಕಿಗೆ ಎರಡು ಕೊಟ್ಟಿದ್ದೀರಿ, ಎರಡು tractor ತೆಗೆದುಕೊಂಡು ಏನು ಮಾಡುವುದು? ಕನಿಷ್ಠ 20 ಆದರೂ ಕೊಡಿ. ರೈತರಿಗೆ ಅನುಕೂಲವಾಗುತ್ತದೆ. Pack house ಒಂದು ತಾಲ್ಲೂಕಿಗೆ ಒಂದು ಕೊಟ್ಟಿದ್ದೀರಿ. ಕನಿಷ್ಠ ಒಂದು ತಾಲ್ಲೂಕಿಗೆ ಐದೈದು ಆದರೂ ಕೊಡಿ. ರೈತರು ಬೆಳೆದದ್ದನ್ನು ಸರಿಯಾಗಿ ಪ್ಯಾಕ್ ಮಾಡಿ ಕಳುಹಿಸುವ ವ್ಯವಸ್ಥೆಯಾಗುತ್ತದೆ. ಅದಕ್ಕೆ ಹೆಚ್ಚಿನ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಇನ್ನು ಒಂದು ತಾಲ್ಲೂಕಿಗೆ ಎರಡು biodigester ಕೊಟ್ಟಿದ್ದೀರಿ. ಬಯೋಡೈಜೆಸ್ಟರ್ ಒಂದು ತಾಲ್ಲೂಕಿಗೆ ಎರಡು ಸಾಕಾಗುವುದಿಲ್ಲ. ಕನಿಷ್ಠ ೩೦ ಕೊಡಿ. ಆಗ ಮಾತ್ರ ನಮ್ಮ

ರೈತರಿಗೆ ಅನುಕೂಲವಾಗುತ್ತದೆ. ಇನ್ನು ೨೦೦೭ ರಲ್ಲಿ ವೈನ್ ಪಾಲಿಸಿಯನ್ನು ನಾವು ತಂದಿದ್ದೇವೆ. ಈ ವೈನ್ ಪಾಲಿಸಿಯಿಂದ ಎಕ್ಸೈಸ್‌ನವರಿಗೆ ಅನುಕೂಲವಾಗಿಬಿಟ್ಟಿದೆ. ನಾವು ಇದು ಕೃಷಿ ಮತ್ತು ತೋಟಗಾರಿಕೆಯಲ್ಲಿ ಬರಲೆಂದು ಮತ್ತು ಇದು ಎಕ್ಸೈಸ್‌ನಿಂದ ಮುಕ್ತವಾಗಬೇಕೆಂದು ಹೇಳಿಯೇ ವಿಶೇಷವಾದಂಥ ವೈನ್ ಪಾಲಿಸಿಯನ್ನು ಮಾಡಿದೆವು. ಆದರೆ ಎಕ್ಸೈಸ್‌ನವರೇ ಅದರ ತಲೆ ಮೇಲೆ ಕುಳಿತುಬಿಟ್ಟಿದ್ದಾರೆ. ಯಾವ ರೈತನನ್ನೂ ಅವರು ಬಿಡುತ್ತಿಲ್ಲ. ನಿಮ್ಮ ಎಕ್ಸೈಸ್‌ನ ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಇವೆಯೋ ಅದರ ಪ್ರಕಾರವೇ ಮಾಡಬೇಕೆಂದು ಹೇಳುತ್ತಾರೆ. ಹೀಗಾಗಿ ವೈನ್ ಪಾಲಿಸಿಯನ್ನು ಮಾಡಿದ್ದರೂ ಕೂಡ ವೈನ್ ಇಂಡಸ್ಟ್ರಿ ಮಾಡಿದವರು ಉದ್ಧಾರವಾಗಿಲ್ಲ. ಅದಕ್ಕಾಗಿ ನೀವು ವಿಶೇಷವಾಗಿ ವೈನ್ ಟವರ್ಸ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟುಬಿಡಿ. ಎಕ್ಸೈಸ್‌ಗೆ ಹೋಗದಂತೆ ಸಣ್ಣ ಸಣ್ಣ ವೈನ್ ಟವರ್‌ಗಳನ್ನು ನೀವು ಮಾಡಿದರೆ ಈ ಕಳ್ಳಬಟ್ಟಿ ಸಾರಾಯಿ ಕೂಡ ಸ್ವಲ್ಪ ಕಡಿಮೆಯಾಗುತ್ತದೆ. ಹಳ್ಳಿಯೊಳಗೆಲ್ಲಾ ಶುರುವಾಗಿಬಿಡುತ್ತದೆ. ಇನ್ನು ಮೀನುಗಾರಿಕೆ ಕೂಡ ಕೃಷಿಯೊಳಗೇ ಬರುತ್ತದೆ. ಒಂದೊಂದು ತಾಲ್ಲೂಕಿಗೆ ಮೀನುಗಾರಿಕೆ ಆಫೀಸ್‌ಗಳನ್ನು ಮಾಡಿದಿರಿ ಅಲ್ಲಿಗೆ ಅಸಿಸ್ಟೆಂಟ್ ಡೈರಕ್ಟರ್‌ಗಳನ್ನು ಹಾಕಿದಿರಿ, ಸಬ್ ಡಿವಿಷನ್‌ಗೆ ಡೆಪ್ಯುಟಿ ಡೈರಕ್ಟರ್‌ನ್ನು ಮಾಡಿದಿರಿ, ಅವರುಗಳು ಎಲ್ಲಿದ್ದಾರೆಂದು ಯಾರಿಗೂ ಗೊತ್ತೇ ಇಲ್ಲ. ಮೀನುಗಾರಿಕೆ ಇಲಾಖೆ ಎನ್ನುವುದು ಅಲ್ಲಿ ಇಲ್ಲವೇ ಇಲ್ಲ. Inland fishing ನಮ್ಮ ಭಾಗದ ಬಯಲು ಸೀಮೆಯಲ್ಲಿ ಇಲ್ಲವೇ ಇಲ್ಲ. ಆ ಆಫೀಸ್‌ಗಳನ್ನು ಕ್ಲೋಸ್ ಮಾಡಿ, ಏತಕ್ಕಾಗಿ ಆ ಆಫೀಸ್‌ಗಳನ್ನು ಇಟ್ಟಿದ್ದೀರಿ. ಕೆರೆಯೊಳಗೂ ನೀರಿಲ್ಲ, ನದಿಯೊಳಗೂ ನೀರಿಲ್ಲ. ಅವರುಗಳಿಗೆ ಎಲ್ಲಿಯೂ ಕೆಲಸವಿಲ್ಲ, ಉಮಾಶ್ರೀಯವರು ಅವರುಗಳನ್ನು ನೋಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ನಾನು ಇಪ್ಪತ್ತು ವರ್ಷದೊಳಗೆ ಒಮ್ಮೆಯೂ Fisheries ಇಲಾಖೆಯವರನ್ನು ನೋಡಿಲ್ಲ. ಅದಕ್ಕಾಗಿ ಇಂಥ unwanted ಇರುವಂಥದ್ದನ್ನು close ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಬಹಳ ಪ್ರಮುಖವಾದ ಒಂದು ವಿಷಯದ ಬಗ್ಗೆ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ೨೦೧೩-೧೪ನೇ ಸಾಲಿನಲ್ಲಿ ೩ ಕೋಟಿ ೮೩ ಲಕ್ಷ ಟನ್ ಕಬ್ಬನ್ನು ನಾವು ಬೆಳೆದೆವು. ಈ ೩ ಕೋಟಿ ೮೩ ಲಕ್ಷ ಟನ್ ಕಬ್ಬನ್ನು ನುರಿಸಿ ಕಾರ್ಖಾನೆಯವರು ೪ ಕೋಟಿ ೨೦ ಲಕ್ಷ ಟನ್ ಸಕ್ಕರೆ ಉತ್ಪಾದನೆಯನ್ನು ಮಾಡಿದ್ದಾರೆ. ೯.೫% ರೆಕವರಿಗೆ FRP Rate

ಅನ್ನು ಕೇಂದ್ರ ಸರ್ಕಾರದವರು ೨೧೦೦ ರೂ. ಎಂದು ನಿಗದಿ ಮಾಡಿದರು. ರಾಜ್ಯ ಸರ್ಕಾರ SAP ಕೆಳಗಡೆ ೨೫೦೦ ರೂ. ಮಾಡಿದರು ಮತ್ತು ರಾಜ್ಯ ಸರ್ಕಾರದಿಂದ ೧೫೦/- ರೂ.ಗಳಂತೆ incentives ಅನ್ನು ಕೂಡ ಕೊಟ್ಟರು. ಆದರೆ ಯಾವ ಕಾರ್ಖಾನೆಯವರು ೨೦೦೦/- ರೂ.ಗಳಿಗಿಂತ ಹೆಚ್ಚಿಗೆ ಕೂಡುವುದಕ್ಕೆ ಆಗಲೇ ಇಲ್ಲ. ಕೆಲವರು ೧೬೦೦ ರೂ. ಕೊಟ್ಟರು, ಕೆಲವರು ೧೫೦೦ ರೂ. ಕೊಟ್ಟರು, ಕೆಲವರು ೧೮೦೦ ರೂ. ಕೊಟ್ಟರು, ಕೆಲವರು ೨೦೦೦ ರೂ.ಗಳಂತೆ ಕೊಟ್ಟರು. ಇದರಿಂದ ರೈತರ ಶೋಷಣೆ ಬಹಳವಾಗುತ್ತಿದೆ. ಇಂದು cost of cultivation ಬಹಳ ಹೆಚ್ಚಾಗಿದೆ. ಕಬ್ಬು ಬೆಳೆಯತಕ್ಕಂಥ ರೈತರು ಸಂಕಷ್ಟದಲ್ಲಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಏನು ವಿನಂತಿ ಮಾಡುತ್ತೇನೆಂದರೆ, ಕಬ್ಬು ಬೆಳೆಯತಕ್ಕಂಥ ರೈತರಿಗೆ ಅನುಕೂಲ ಮಾಡುವುದಕ್ಕಾಗಿ, ೯.೫ % ರೆಕವರಿಗೆ ಏನು ೨೧೦೦ ರೂ.ಗಳಂತೆ ಕೊಟ್ಟಿದ್ದಾರೆ, ನಮ್ಮ ಕಡೆ ೧೧.೫೨% ರೆಕವರಿ ಬರುತ್ತದೆ, ಅದರ ಪ್ರಕಾರ ಇನ್ನೂ ೪೦೦ ರೂ.ಗಳನ್ನು ನ್ಯಾಯಬದ್ಧವಾಗಿ, ಸೇರಿಸಿ ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇದರಲ್ಲೇನು ನಾವು ಇನ್ನೂ ಹೆಚ್ಚಿಗೆ ಕೊಡಿ ಎಂದು ಕೇಳುವುದಿಲ್ಲ, ಕೇಂದ್ರ ಸರ್ಕಾರ FRP fix ಮಾಡಿದ್ದನ್ನು ೨೧೦೦ ರೂ. ಪ್ಲಸ್ ೪೪೬ ರೂ.ಗಳು, ೨.೫೨% ರೆಕವರಿಗೆ ಹೆಚ್ಚಾಗುತ್ತದೆ. ಅದನ್ನು ಸೇರಿಸಿ ನಮಗೆ ೨೫೦೦ ರೂ.ಗಳಂತೆ ಕೊಡುವುದಕ್ಕೆ ಯಾವ ತೊಂದರೆಯೂ ಕೂಡ ಆಗುವುದಿಲ್ಲ. ಅದನ್ನು ರೈತರಿಗೆ ಕೊಡಿಸಬೇಕೆಂದು ವಿನಂತಿ ಮಾಡುತ್ತೇನೆ. ಇನ್ನೊಂದು ವಿಷಯವೆಂದರೆ, ೬ ತಿಂಗಳುಗಳ ತನಕ ಬಿಲ್ ಕೊಡುವುದಿಲ್ಲ, ರೈತರು ಸಾಲ ಮಾಡಿ ಕಷ್ಟಪಟ್ಟು ಕಬ್ಬನ್ನು ಬೆಳೆದಿರುತ್ತಾರೆ. ಅವರಿಗೆ ಬಡ್ಡಿಯನ್ನು ಸೇರಿಸಿ ಕೊಡಿಸಿಕೊಡುತ್ತೇನೆಂದು ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ಕೊಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಒಂದು ವೇಳೆ ಕಾರ್ಖಾನೆಗಳು ಕೊಡದೇ ಹೋದರೆ ಸರ್ಕಾರವೇ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಈಗ ಕೇಂದ್ರ ಸರ್ಕಾರದಲ್ಲಿ ಹೊಸ ಸರ್ಕಾರದವರು ಬಂದಮೇಲೆ ಒಂದು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ನಮ್ಮ ಸಕ್ಕರೆ ರೇಟ್ ಕಡಿಮೆ ಆಗುವುದಕ್ಕೆ, ಸಕ್ಕರೆ ಉದ್ಯಮ ಹಾಳಾಗುವುದಕ್ಕೆ ಹಿಂದಿನ ಕೇಂದ್ರ ಸರ್ಕಾರವೇ ಕಾರಣ. Raw sugar import ಮಾಡಿಕೊಂಡು ಇಲ್ಲಿ white sugar ಮಾಡಿ ಅಲ್ಲಿಯೇ ಕಲ್ಕತ್ತಾದ ಸುತ್ತಮುತ್ತ

ಡಿಸ್ಟಿಲರಿಗಳನ್ನು ಹಾಕಿದ್ದಾರೆ. ಅಲ್ಲಿಯೇ ಮಾಡಿ ಅಲ್ಲಿಯೇ ಮಾರಾಟ ಮಾಡುತ್ತಿದ್ದರು. ಹೀಗಾಗಿ ನಮ್ಮ ಸಕ್ಕರೆ ಮಾರಾಟವಾಗದೆ ಉಳಿದಿದ್ದರಿಂದ ಸಕ್ಕರೆ ಕಾರ್ಖಾನೆಗಳು ಸಂಕಷ್ಟಕ್ಕೆ ಸಿಲುಕಿದ್ದವು. ಈಗ ಅದನ್ನು ೪೦% ಗೆ ಹೆಚ್ಚು ಮಾಡಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ೪೦% ಹೆಚ್ಚು ಮಾಡಿದರೆ ಬಹಳ ಮಂದಿಗೆ ಗ್ರಾಹಕರಿಗೆ ತುಟ್ಟಿಯಾಗುತ್ತದೆ ಎನ್ನುವ ತಪ್ಪು ಕಲ್ಪನೆಯಿದೆ. ಆ ರೀತಿಯೇನೂ ಆಗುವುದಿಲ್ಲ. ಅದರ ಲಾಭ ಬೇರೆಯದೇ ಆಗುತ್ತದೆ. ಕೇಂದ್ರ ಸರ್ಕಾರ ಯಾವ ರೀತಿಯಲ್ಲಿ ಮಾಡಿದೆಯೋ ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಕೂಡ ಕಬ್ಬಿನ ಮೇಲಿರತಕ್ಕಂಥ ಟ್ಯಾಕ್ಸ್ ಅನ್ನು ರದ್ದು ಮಾಡುವುದನ್ನು ಮಾಡಬೇಕು. ಈಗ ಕಬ್ಬು ಬೆಳೆಯಲು ಅಗತ್ಯ ಪ್ರಮಾಣದಲ್ಲಿ ನೀರು ಸಿಗುವುದಿಲ್ಲ. ಮೊದಲೆಲ್ಲಾ ೭೦ ರಿಂದ ೮೦ ಟನ್ ಕಬ್ಬನ್ನು ಏನು ಬೆಳೆಯಲಾಗುತ್ತಿತ್ತೋ ಆ ರೀತಿ ಈಗ ಬೆಳೆಯುವುದಿಲ್ಲ. ಏನಿದ್ದರೂ ೩೦ ರಿಂದ ೩೫ ಟನ್ ಕಬ್ಬನ್ನು ಪ್ರತಿ ಎಕರೆಗೆ ಬೆಳೆಯಲಾಗುತ್ತಿದೆ. ಈಗ cost of cultivation ಜಾಸ್ತಿಯಾಗಿದೆ. ರೇಟ್ ಕೂಡ ಕಡಿಮೆಯಾಗಿದೆ. ಹೀಗಾಗಿ ರೈತರು ಕಬ್ಬನ್ನು ಬೆಳೆಯುವುದನ್ನು ನಿಲ್ಲಿಸುವಂಥ ಪರಿಸ್ಥಿತಿಯೊಳಗೆ ಇದ್ದಾರೆ. ಅದಕ್ಕಾಗಿ ಸರ್ಕಾರ ಕಬ್ಬನ್ನು ಬೆಳೆಯತಕ್ಕಂಥವರಿಗೆ incentive ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇವತ್ತು ಯಾವ ಯಾವ ಕಾರ್ಖಾನೆಗಳು ಸಂಕಷ್ಟದಲ್ಲಿದೆಯೋ ಅಂಥ ಕಾರ್ಖಾನೆಗಳವರಿಗೆ ಸರ್ಕಾರ ಗ್ಯಾರಂಟಿ ನೀಡಿ ಸ್ವಲ್ಪ ಹಣ ಕೊಡಿಸತಕ್ಕಂಥ ವ್ಯವಸ್ಥೆಯಾಗಬೇಕು. ಏಕೆಂದರೆ ಈಗಾಗಲೇ ಅವರುಗಳು ಸಾಕಷ್ಟು ಸಾಲವನ್ನು ಮಾಡಿದ್ದಾರೆ. ಸಾಲವನ್ನು ಪಡೆದು ಅದನ್ನು ಮರುಪಾವತಿ ಮಾಡುವುದಕ್ಕೆ ಆ ಕಾರ್ಖಾನೆಗಳವರಿಗೂ ಆಗಿಲ್ಲ. ಅವರಿಗೂ ಕೂಡ ಅನುಕೂಲ ಮಾಡುವುದಕ್ಕೆ ಸರ್ಕಾರ ಸಹಾಯವನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನೊಂದು ವಿಷಯವೇನೆಂದರೆ ಬೇರೆ ರಾಜ್ಯಗಳಲ್ಲಿ ಕಬ್ಬಿಗೆ ಒಳ್ಳೆಯ ರೇಟ್ ಕೊಟ್ಟಿದ್ದಾರೆ. ಬೇರೆ ರಾಜ್ಯಗಳಲ್ಲಿ ಕಬ್ಬಿನ ರೇಟ್ ಎಷ್ಟಿದೆ ಎಂಬ ಬಗ್ಗೆ ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಗುಜರಾತ್‌ನಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳವರು ಕಬ್ಬಿಗೆ ಪ್ರತಿ ಟನ್‌ಗೆ ೩೩೦೦ ರೂ.ಗಳನ್ನು H&T ಸೇರಿಸಿ ಕೊಟ್ಟಿದ್ದಾರೆ. ತಮಿಳುನಾಡಿನಲ್ಲಿ ೨೬೫೦ ರೂ.ಗಳನ್ನು ಕೊಟ್ಟಿದ್ದಾರೆ, ಉತ್ತರ ಪ್ರದೇಶದಲ್ಲಿ ೨೮೦೦ ರೂ.ಗಳನ್ನು ಕೊಟ್ಟಿದ್ದಾರೆ,

ಮಹಾರಾಷ್ಟ್ರದಲ್ಲಿ ೨೪೦೦ ರಿಂದ ೨೭೦೦ ರೂ.ಗಳವರೆಗೂ ಕೊಟ್ಟಿದ್ದಾರೆ. ಈ ರೀತಿ ಅನೇಕ ಕಾರ್ಖಾನೆಗಳಲ್ಲಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕಬ್ಬಿಗೆ ವಿವಿಧ ದರಗಳನ್ನು ಕೊಡತಕ್ಕಂಥ ವ್ಯವಸ್ಥೆಯಾಗಿದೆ. ನಮ್ಮಲ್ಲಿಯೂ ಕೂಡ ಸರ್ಕಾರ ಮುತುವರ್ಜಿ ವಹಿಸಿ ಕೊಡಿಸತಕ್ಕಂಥ ವ್ಯವಸ್ಥೆಯಾಗಬೇಕು. ಒಂದು ವೇಳೆ ಅವರು ಕೊಡದಿದ್ದರೆ ರೈತರಿಗೆ ಸಹಾಯವನ್ನಾದರೂ ಮಾಡಬೇಕೆನ್ನುವ ಅಭಿಪ್ರಾಯವನ್ನು ನಾನು ವ್ಯಕ್ತಮಾಡುತ್ತೇನೆ. ಇಂದು ರೈತರ ಸಂಕಷ್ಟಕ್ಕೆ ನೆರವಾಗತಕ್ಕಂಥ ಯಾವುದೇ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಿಲ್ಲ. ನಾವು ಕೇವಲ ೩% ನಲ್ಲಿ ಸಾಲ ಕೊಡುತ್ತೇವೆ, 0% ನಲ್ಲಿ ಸಾಲ ಕೊಡುತ್ತೇವೆಂದರೆ ಅದು ಅಗುವುದಿಲ್ಲ. ರೈತರಿಗೆ ಅಗತ್ಯವಾದ ಮಾರ್ಕೆಟಿಂಗ್ ವ್ಯವಸ್ಥೆ ಬಗ್ಗೆ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಜವಾಬ್ದಾರಿಯನ್ನು ತೆಗೆದುಕೊಂಡರೆ ಖಂಡಿತವಾಗಿ ರೈತರಿಗೆ ಅನುಕೂಲವಾಗುತ್ತದೆ. ಈ ಮಧ್ಯವರ್ತಿಗಳ ಹಾವಳಿಯಿಂದ ರೈತರು ಇವತ್ತು ಬಹಳ ಸಂಕಷ್ಟದಲ್ಲಿದ್ದಾರೆ. ಆದನ್ನು ತಡೆಗಟ್ಟುವುದಕ್ಕೆ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶವಿಲ್ಲದಿದ್ದರೂ ಕೂಡ important ಏನೇನು ಹೇಳಬೇಕಾಗಿತ್ತೋ ಅದನ್ನು ಹೇಳಿದ್ದೇನೆ. ದಯವಿಟ್ಟು ಸಂಬಂಧಪಟ್ಟಂಥ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಎರಡೂ ಖಾತೆಗಳ ಮಂತ್ರಿಗಳು ನಾನು ಕೇಳಿರುವಂಥವುಗಳಿಗೆ ಉತ್ತರವನ್ನು ಹೇಳಬೇಕು ಮತ್ತು ಅದನ್ನು ಬಜೆಟ್‌ನಲ್ಲಿ ಸೇರಿಸಿ ಅನುಮೋದನೆ ಪಡೆದು ರೈತರ ಸಂಕಷ್ಟವನ್ನು ಪರಿಹರಿಸಬೇಕೆಂದು ವಿನಂತಿ ಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ): ಮಾನ್ಯ ಅಧ್ಯಕ್ಷರೆ, ಕೊನೆಗೂ ರೈತರಿಗೆ ಸ್ವಾತಂತ್ರ್ಯ ಸಿಕ್ಕಿದ ಹಾಗೆ ನನಗೂ ಇವತ್ತು ಭಾಷಣ ಮಾಡುವುದಕ್ಕೆ ಅವಕಾಶ ಸಿಕ್ಕಿತು. ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಬುದ್ಧಿವಂತಿಕೆಯಿಂದ ಕಾಲವನ್ನು, ಎಲ್ಲರ ಸ್ನೇಹವನ್ನು ಬೆಳೆಸಿಕೊಂಡು ಎರಡು ಗಂಟೆಗಳ ಕಾಲ ತುಂಬಾ ಚೆನ್ನಾಗಿ ಮಾತನಾಡಿದರು. ನಾವೆಲ್ಲರೂ ಮಾತನಾಡಿರುವುದನ್ನು ಕ್ರೋಢೀಕರಿಸಿ ಕಳೆದ ೬೫ ವರ್ಷದಲ್ಲಿ ಏನು ಆಗದೇ ಇರುವುದನ್ನು ನಾಳೆ ಬೆಳಿಗ್ಗೆಯೇ ಮಾಡುತ್ತಾರೆಂದು ನಾನೇನು ತಿಳಿದುಕೊಂಡಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರು

ಹೇಳಿದ ಹಾಗೆ ಒಂದು ಬದಲಾವಣೆಯಾಗಬೇಕಾದರೆ political revolution ಆಗಬೇಕು. ಅದಕ್ಕೆ unanimous resolution ಮಾಡುವುದಕ್ಕೆ ಎಲ್ಲರೂ ತಯಾರಾಗಿದ್ದರೆ ಮಾತ್ರ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ತಾವು ಹೇಳತಕ್ಕಂಥದ್ದು ಎಲ್ಲವೂ ಸತ್ಯ. ಆದರೆ ತಾವು ಯೋಚನೆ ಮಾಡಿ, ಕೃಷಿಯನ್ನು ಒಂದು ಜ್ಞಾನವೆಂದು ಎಲ್ಲಿ ಒಪ್ಪಿಕೊಂಡಿದ್ದೇವೆ? ಮೊದಲು ಕೃಷಿ ಒಂದು ಉದ್ಯಮ, ಶ್ರಮ, ಒಂದು ಜ್ಞಾನವೆಂದು ಒಪ್ಪಿಕೊಂಡ ಮೇಲೆ ಅದಕ್ಕೊಂದು ನೀತಿ ಸೃಷ್ಟಿ ಮಾಡಿ. ಇವತ್ತಿನ ಕೃಷಿ ಆಯೋಗದಲ್ಲಿ ತಾವು ಬಜೆಟ್‌ನಲ್ಲಿ ಕೃಷಿಯನ್ನು ಈ ಸರ್ಕಾರ ಒಂದು ದೊಡ್ಡ ಜ್ಞಾನವೆಂದು ಒಪ್ಪಿಕೊಂಡಿದೆಯೆಂದು ನೀವು ಘೋಷಣೆ ಮಾಡಿದ್ದೀರಿ. ಜ್ಞಾನ ಮತ್ತು ತಂತ್ರಜ್ಞಾನ ಮತ್ತು ಬಸವಣ್ಣನ ಅನುಭವದ ಜ್ಞಾನದ ಬಗ್ಗೆ ಇಡೀ ರಾಜ್ಯದಲ್ಲಿ ತಾವು ಸಮೀಕ್ಷೆ ಮಾಡಿ ನೋಡಿ, IT BT ಯಿಂದ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ?

* ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ

ಸರ್ಕಾರಿ ನೌಕರಿಯಿಂದ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ? ಕೈಗಾರಿಕೆಯಿಂದ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ? ವಿದೇಶಿ ಕಂಪನಿಗಳ ಆಹ್ವಾನದಿಂದ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ? ಇಡೀ ಅನುಭವದ ಮೇಲೆ ರಾಜ್ಯದಲ್ಲಿ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ? ಶ್ರಮ ಮತ್ತು ದುಡಿಯುವವರು ಯಾವ ಡಿಗ್ರಿ ಇಲ್ಲದೆ ಯಾವ ಶಾಲೆಗೆ ಹೋಗದೆ, ಅನುಭವದ ಮೇಲೆ ಸುಮಾರು ೭೫% ಉದ್ಯೋಗವನ್ನು ಸೃಷ್ಟಿ ಮಾಡಿರುವಂತಹ ರೈತರನ್ನು, ಓದಿರುವವರು ಮತ್ತು ಸರ್ಕಾರ ನಡೆಸುವವರು ರಕ್ಷಣೆ ಮಾಡುವುದಕ್ಕೆ ಆಗದಿದ್ದರೆ, ಇದು ಯಾರ ವೈಫಲ್ಯತೆ? ಇದಕ್ಕೆ ಯಾರು ಹೊಣೆಗಾರರು? ಇದಕ್ಕೆ ಶಿಕ್ಷಣ ಕ್ಷೇತ್ರ ಹೊಣೆಗಾರವೆ? ಇಲ್ಲ ರಾಜಕೀಯ ಕ್ಷೇತ್ರ ಹೊಣೆಗಾರವೇ? ಈ ಶಾಸನ ಸಭೆಯಲ್ಲಿ ರೈತರ ಆತ್ಮಹತ್ಯೆ ಬಗ್ಗೆ ಒಂದು ದಿನವಾದರೂ ಚರ್ಚೆ ಮಾಡಿದ್ದೇವೆಯೇ ? ರೈತ ಏಕೆ ಅತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ, ಯಾವ ಕಾರಣಕ್ಕೆ ಮಾಡಿಕೊಳ್ಳುತ್ತಿದ್ದಾನೆ ? ಈ ಸೆಕ್ಟರ್ ಬಿಟ್ಟರೆ ಇನ್ನು ಯಾವ ಸೆಕ್ಟರ್‌ನಲ್ಲಿ ಆತ್ಮಹತ್ಯೆ ಆಗಿದೆ ? ಮೊನ್ನೆ ನೂತನ ಪ್ರಧಾನ ಮಂತ್ರಿಯಾಗಿ ಮಾನ್ಯ ನರೇಂದ್ರ ಮೋದಿಯವರು ಪ್ರಮಾಣ ವಚನ ಸ್ವೀಕಾರ

ಮಾಡಿದ್ದನ್ನು ನೋಡಿದೆವು. ಪ್ರಚಂಡ ಬಹುಮತದಿಂದ ಪ್ರಧಾನ ಮಂತ್ರಿಯಾಗಿ ಸ್ವೀಕಾರ ಮಾಡಿದಾಗ ಸಿನಿಮಾ ನಟ-ನಟಿಯರು, ಉದ್ಯಮಿಗಳು, ಕ್ರೀಡಾ ಪಟುಗಳು, ಸ್ವಾಮೀಜಿಗಳು ಮತ್ತು ರಾಜಕೀಯ ಪ್ರಮುಖ ವ್ಯವಸ್ಥೆಯಲ್ಲಿರತಕ್ಕಂಥವರು ಬಂದಿದ್ದರು. ಒಂದೈದು ಜನ ರೈತ ನಾಯಕರು ಬಂದಿದ್ದರೆ ? ಅವರು ತಪ್ಪು ಮಾಡಿದ್ದಾರೆ ಎಂದಲ್ಲ. ನಮ್ಮ ಕೃಷಿ ವಿಚಾರದಲ್ಲಿ ಎಷ್ಟು negligence ಇದೆ ಎನ್ನುವುದಕ್ಕೆ ಉದಾಹರಣೆ. ೨೮೦ ಮಿಲಿಯನ್ ಟನ್ ಆಹಾರ ಉತ್ಪಾದನೆ ಮಾಡಿ, ೧೨೦ ಕೋಟಿ ಜನರಿಗೆ ಅನ್ನ ಕೊಡುವಂತಹ ಒಬ್ಬ ರೈತರನ್ನು ಕರೆದಿಲ್ಲ. ನಾವು ಮಾನ್ಯ ಮೋದಿಯವರಿಗೆ ಒಂದು ಪತ್ರವನ್ನು ಕೂಡ ಬರೆದಿದ್ದೇವೆ. ಏಕೆ ರೈತರ ಬಗ್ಗೆ ಈ ರೀತಿಯಾದ ಭಾವನೆ? ಅವರು ಹೇಳಿದರು, ಮೇರಾ ಮಾ ಹೈ ಭಾರತ್ ಮಾತಾ, ದೋ ಬೇಟೇ ಉದರ್ ಬೈಟ್ ರಹಾ ಹೈ. ಏಕ್ ಜವಾನ್ ಓರ್ ಏಕ್ ಕಿಸಾನ್. ಮೋದಿ ತಿಸ್ರಾ ಬೇಟಾ ಹೈನಾ. ಸ್ವಾಗತ್ ಕರ್ ರಹಾ ಹೈ ಹಮ್ ಕೊ ಭಿ. ಆದರೆ ಆ ರೈತನ ಬಗ್ಗೆ ಏಕೆ ಆಲೋಚನೆ ಮಾಡಲಿಲ್ಲವೆನ್ನುವುದು ಆಶ್ಚರ್ಯಕರ ಸಂಗತಿ. ಕೃಷಿಯಲ್ಲಿ ಮೂರು ವಿಧ. ನೀವು ರಸ್ತೆಯಲ್ಲಿ ಹೋಗುತ್ತಿರುವಾಗ ಯಾವ ರಾಸಾಯನಿಕ ಗೊಬ್ಬರ ಇಲ್ಲದೆ ಬೆಳೆದಿರುವಂತಹ ಗಿಡಗಳನ್ನು ಗಮನಿಸಿ. ಅದು ನಿಸರ್ಗದಲ್ಲಿ ಬೆಳೆದಿರುವಂತಹ ಗಿಡ, ಅದಕ್ಕೆ ಯಾವ ರಾಸಾಯನಿಕ ಗೊಬ್ಬರ ಇಲ್ಲ, ಯಾವ decease ಇಲ್ಲ, ಆ ಗಿಡಗಳು ಹೇಗೆ ಬೆಳೆದವು ? ನಾವು ರಾಸಾಯನಿಕ ಗೊಬ್ಬರ ಹಾಕಿ ಬೆಳೆಯುತ್ತಿರುವಂತಹ ಗಿಡಗಳು ಹೇಗೆ ಬೆಳೆದವು ? ಸಾವಯವ ಕೃಷಿ ಎಂದು ಹೇಳಿ ಒಂದು ಮೆಷಿನ್ ತಯಾರು ಮಾಡಿ ಅದಕ್ಕೆ ನೂರಾರು ಕೋಟಿ ರೂಪಾಯಿ ಖರ್ಚು ಮಾಡಿದರು. ಅದರಿಂದ ಏನು ಪರಿಣಾಮವಾಯಿತು? ಶ್ರೀ ಸುಭಾಷ್ ಪಾಳೆಕರು ಎನ್ನುವ ವಿಜ್ಞಾನಿ ಮೂರು ವರ್ಷಗಳ ಕಾಲ ಕಾಡಿಗೆ ಹೋಗಿ ಬಹಳ ದೊಡ್ಡ ಕ್ರಾಂತಿಯನ್ನು ಮಾಡಿ ನೈಸರ್ಗಿಕ ಕೃಷಿಯನ್ನು ಪರಿಚಯ ಮಾಡಿದರು. ಆದರೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಎಂ.ಎಸ್ಸಿ, (ಅಗ್ರಿ)., ಓದಿರುವವರನ್ನು ಕೇಳಿ. ನೈಸರ್ಗಿಕ ಕೃಷಿಗೆ ಸಂಬಂಧಪಟ್ಟಂತಹ ಜ್ಞಾನ ನಮ್ಮ ಪುಸ್ತಕದಲ್ಲಿ ಇದೆ. ಅದನ್ನು ಹೆಚ್ಚು ಪರಿಚಯ ಮಾಡುವುದರಲ್ಲಿ ನಾವು failure ಆಗಿದ್ದೇವೆ. ಏಕೆಂದರೆ ಈ ರಾಸಾಯನಿಕ ಗೊಬ್ಬರದ ಲಾಬಿ, pesticides ಲಾಬಿ,

ಏನಿದೆ ಇವುಗಳು ನೈಜತೆಗೆ ತೆಗೆದುಕೊಂಡು ಹೋಗುವುದಕ್ಕೆ ಬಿಡುವುದಿಲ್ಲ. Food is a culture. ಮಾನವನ ದೇಹಕ್ಕೆ ಗುಣಾತ್ಮಕವಾದ ಪೌಷ್ಟಿಕಾಂಶವನ್ನು ಕೊಡುವಂತಹ ಆಹಾರ ಸಂಸ್ಕೃತಿ ಮತ್ತು ಆಹಾರ ಸಂಸ್ಕಾರ ಏನಿದೆ ಅದನ್ನೇ culture ಎಂದು ಕರೆಯುವುದು. ಆದರೆ ಕೃಷಿಗೆ ಏಕೆ ನೀತಿ ಮಾಡುವುದಕ್ಕೆ ಆಗುತ್ತಿಲ್ಲ? ನೀವು ಯುವಕರಿದ್ದೀರಿ, ಜಗತ್ತಿನ ಜ್ಞಾನವನ್ನು ಸ್ವಲ್ಪ ತಿಳಿದುಕೊಂಡಿದ್ದೀರಿ. ನಾನು ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನೀವು ಒಂದು ಪುಸ್ತಕವನ್ನು ಬರೆಸಿ ಸಾಕು ಆಮೇಲೆ ಏನಾದರೂ ಮಾಡಿ. Agriculture investment, Agriculture loss ಎನ್ನುವ ವಿಷಯದ ಬಗ್ಗೆ ಒಂದು ಪುಸ್ತಕವನ್ನು ನೀವು ಯಾರಾದರೂ ಬರೆಯುತ್ತೀರಾ? ಈ ದೇಶದ ಆರ್ಥಿಕ ತಜ್ಞರಿಗೆ ನಾನು challenge ಮಾಡುತ್ತೇನೆ, ತಾಕತ್ತಿದ್ದರೆ ಪುಸ್ತಕ ಬರೆಯಲಿ, ಬರೆಯಬೇಕು. ಬರೆದಾಗಲೇ ನಿಜವಾದ ಅಂಶ ಗೊತ್ತಾಗುವುದು. ಉದಾಹರಣೆಗೆ ನೀವು ತೆಂಗಿನ ನಷ್ಟದ ಬಗ್ಗೆ ಮಾತನಾಡುತ್ತೀರಿ. ಅದಕ್ಕೆ ವಿಮೆ introduce ಮಾಡಿದರೆ ಏನಾಗಬಹುದು ? ೮೦ ವರ್ಷ ಬಾಳತಕ್ಕಂಥ ತೆಂಗಿನ ಮರ ೪೦ ವರ್ಷಕ್ಕೆ ಸತ್ತರೆ, ಇನ್ನು ನಾಲ್ಕು ಸಾವಿರ ಕಾಯಿ ಕೊಡುತ್ತಿತ್ತು, ಆಗ ಒಂದು ಮರಕ್ಕೆ ೪೦ ಸಾವಿರ ರೂಪಾಯಿ ಪರಿಹಾರ ಕೊಡಬೇಕಾಗುತ್ತದೆ. ಒಟ್ಟು ಈ ಮರಕ್ಕೆ ಸುಳಿಗೋಡು ಸತ್ತರೆ ೪೦,೦೦೦ ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಆದರೆ ನೀವು ಕೊಟ್ಟಿರುವುದು ೨೯ ರೂಪಾಯಿ ಪರಿಹಾರ ಮಾತ್ರ. ಪುಟ್ಟಣ್ಣಯ್ಯ ಆಕ್ಸಿಡೆಂಟ್ ಆಗಿ ಸತ್ತರೆ ಇನ್ನು ಎಂಟು ವರ್ಷ ಬದುಕುತ್ತಿದ್ದ ಎಂದರೆ ಅವನಿಗೆ ಪರಿಹಾರ ಎಷ್ಟು ಬರುತ್ತಿತ್ತು ? ಅವನು ಎಂಟು ವರ್ಷ ಬದುಕಿದ್ದರೆ ಆರು ಲಕ್ಷ ರೂಪಾಯಿ ಕೊಡಬೇಕೆಂದು ಕೋರ್ಟ್ declare ಮಾಡಿತು. ಹಾಗಿದ್ದಾಗ ಒಂದು ತೆಂಗಿನ ಮರಕ್ಕೆ ಹೇಗೆ declare ಮಾಡಬೇಕು ? ತಾವು ಯಾವ ಆಧಾರದ ಮೇಲೆ declare ಮಾಡುತ್ತೀರಿ? ಇಡೀ ಕೃಷಿಯನ್ನು ನಾವು ರಕ್ಷಣೆ ಮಾಡುವುದಕ್ಕೆ ಆಗದೇ ಇದ್ದ ಮೇಲೆ ಆ ಸುದ್ದಿ ಏತಕ್ಕೋಸ್ಕರ ಎಂದರೆ ಮೂರು ಸಾವಿರ ಕೋಟಿ ಎಂದು ಹೇಳಿದರೂ ಕರ್ನಾಟಕದ ಭೂಮಿಯನ್ನು ಎರಡು ಬಾರಿ ಉಳುವುದಕ್ಕೆ ಮೂರು ಸಾವಿರ ಕೋಟಿ ರೂಪಾಯಿ ಬೇಕು. ನಾವು ಯಾವ ರೀತಿ ಕೃಷಿ ನೀತಿಯನ್ನು

ಮಾಡಿದ್ದೇವೆ ? ಎಲ್ಲಿದೆ ಕೃಷಿ ನೀತಿ ? ಜಗತ್ತಿನ ಯಾವುದೇ ದೇಶದಲ್ಲಿ ಎಂಎಸ್‌ಪಿ, ಎಫ್‌ಆರ್‌ಪಿ, ಎಸ್‌ಎಂಪಿ ಇಲ್ಲ. ಇದು ಬ್ರಿಟಿಷ್‌ರ ಗುಲಾಮಗಿರಿ ದೇಶದ ಶಬ್ದಗಳು. ಇಡೀ ದೇಶದ ಯಾವುದೇ ಉದ್ಯೋಗಕ್ಕೆ minimum remunerative price, minimum supporting price statutory minimum price ಎಂದು ಯಾವ ಉದ್ಯೋಗಕ್ಕೆ ಘೋಷಣೆ ಮಾಡಿದ್ದಾರೆ ಎಂದು ಹೇಳಿ ನೋಡೋಣ. ಮಾನವ ಶಕ್ತಿಗೆ ಬೆಂಬಲ ಬೆಲೆ ಎಂದು ಘೋಷಣೆ ಮಾಡಿದ್ದಾರಲ್ಲ, ಯಾವುದು ಇದು ? ಆದ್ದರಿಂದ ಇದರ ಬಗ್ಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕು. ಅಲ್ಲಿಯವರು ಇಲ್ಲಿದ್ದೀರಿ, ಇಲ್ಲಿಯವರು ಅಲ್ಲಿದ್ದೀರಿ, ಅದು ಬೇರೆ ಪ್ರಶ್ನೆ. ನಾವು ರೈತರನ್ನು ರಕ್ಷಣೆ ಮಾಡುವುದಕ್ಕೆ ಏಕೆ ಆಗುತ್ತಿಲ್ಲ. ಏಕೆ ಕೃಷಿ ನೀತಿ ಮಾಡುವುದಕ್ಕೆ ಆಗುತ್ತಿಲ್ಲ. ಒಂದು ಸಲ ರಾಜಕೀಯವಾಗಿ consumer ಎಂದು ಹೇಳುತ್ತೀರಿ, producer ಎಲ್ಲಿ ? ಕೇಂದ್ರ ಸರ್ಕಾರದಲ್ಲಿ ಆಹಾರ ಭದ್ರತೆ ಕಾಯಿದೆ ತಂದಿದ್ದೀರಿ. ಯಾರೂ ಕೂಡ ದೇಶದಲ್ಲಿ ಹಸಿದುಕೊಂಡು ಇರಬಾರದು. ಆದರೆ ರೈತ ಭದ್ರತೆ ಕಾಯಿದೆ ಏಕೆ ತರಲಿಲ್ಲ? ನಾವೇನು ಇಲ್ಲಿ ಟವೆಲ್ ಹಾಕಿಕೊಂಡು ೩೦ ವರ್ಷದಿಂದ ಹೋರಾಟ ಮಾಡುತ್ತಿರುವುದು ಕಬ್ಬು ಅಥವಾ ಭತ್ತದ ರೇಟಿಗೆ ಅಲ್ಲ. ಕರ್ನಾಟಕದ ಆರೂವರೆ ಕೋಟಿ ಜನರು ಯಾವತ್ತು ಹಸಿದುಕೊಂಡು ಇರದಿರುವಂತಹ ಆಹಾರ ಭದ್ರತೆ ಬೇಕು. ಹಳ್ಳಿಯಿಂದ ಗುಳೆ ಹೋಗಬಾರದು, ಕೃಷಿ ನಾಶವಾಗಬಾರದು. ಕೃಷಿ ಆರ್ಥಿಕವಾಗಿ ಭದ್ರತೆಯಿಂದ ಇರಬೇಕೆನ್ನುವ ಕಾರಣದಿಂದ ಚಳುವಳಿ ಮಾಡಿದ ಉದ್ದೇಶ. ಬೆಂಬಲ ಬೆಲೆ ಮೂಲಕ ಈ ದೇಶದಲ್ಲಿ ಏನೇನಾಗುತ್ತಿದೆ ಎಂದು ನನಗೆ ಗೊತ್ತಿಲ್ಲವೇ ? ೨೫ ವರ್ಷ ಈ ಭೂಮಿಯಲ್ಲಿ ದುಡಿಮೆ ಮಾಡಿ, ಶ್ರಮ ಮಾಡಿಕೊಂಡು ನಾನು ಇಲ್ಲಿ ಬಂದು ಭಾಷಣ ಮಾಡುತ್ತಿರುವುದು. ನಾನು ಬಿಎಸ್ಸಿ (ಅಗ್ರಿ)., ಓದಿಲ್ಲ, ಎಂಎಸ್ಸಿ., ಓದಿಲ್ಲ. ನನ್ನ qualification ಗುದ್ದಲಿ, ಪಿಕಾಸಿ, ಹಾರೆ, ಪಿಕಾಸಿ, ಕಳಾರಿ, ಎತ್ತಿನ ಕುಕ್ಕೆ, ಗೊಬ್ಬರದ ಕುಕ್ಕೆ, ಕಬ್ಬಿನ ಕಂತೆ. ಆ ಡಿಗ್ರಿ ತೆಗೆದುಕೊಂಡೇ ನಾನು ಇಲ್ಲಿಗೆ ಬಂದಿರುವುದು. ಇದು ಎಷ್ಟು ಜನಕ್ಕೆ ಗೊತ್ತು? ಈತೇರಿ, ಮೆದೇರಿ ಎಂದರೆ ಏನು, ಯಾವ ಗುದ್ದಲಿ ಇಟ್ಟುಕೊಂಡರೆ ಯಾವ ಕಾಲು ಮುಂದಕ್ಕೆ ಬರಬೇಕೆಂದು

ಹೇಳಿಕೊಡುವುದಕ್ಕೆ ಯಾವ ತಜ್ಞರು ಅಥವಾ ಯಾವ ಶಾಲೆ ಇದೆ? ಇದು ಅನುಭವದ ಜ್ಞಾನ. ಮಾನ್ಯ ರಮೇಶ್ ಕುಮಾರ್‌ರವರೆ, ಕೃಷಿ ಆಯೋಗ ಏಕೆ ಬೇಕು ಎಂದು ಹೇಳಿ? Cost of cultivation, cost of living, ಇದರ ಮೇಲೆ ಒಂದು ಬೆಲೆ ನೀತಿ ನಿಗದಿ ಮಾಡುವುದಕ್ಕೆ ಸಿಕ್ಕಾಪಟ್ಟೆ ಓದುವುದೇನಿದೆ ? ಈಗಾಗಲೇ ವಿಶ್ವವಿದ್ಯಾಲಯಗಳು ಬರೆದು ಮಡಗಿವೆ. ಒಂದು ಬೆಳೆ ಬೆಳೆಯುವುದಕ್ಕೆ ಇಷ್ಟು ಖರ್ಚಾಗುತ್ತದೆ. ಸರಿ ನಮ್ಮದು ಒಂದು ಜೀವನ ಇರಬೇಕಲ್ಲ. ಸರ್ಕಾರಿ ನೌಕರರಿಗೆ 6th or 7th Pay Commission ಅನ್ನು ಯಾವ ಆಧಾರದ ಮೇಲೆ ಮಾಡುತ್ತಾರೆ ? Cost of Living ಆಧಾರದ ಮೇಲೆ ಮಾಡುತ್ತಾರೆ ಹಾಗಾದರೆ ನಮ್ಮದು living ಇಲ್ಲವೇ? ನಮಗೆ ಹೆಂಡತಿ ಇಲ್ಲ, ಮಕ್ಕಳು ಇಲ್ಲ. ಏನೂ ಇಲ್ಲ, ನಮಗೆ ಲಿವಿಂಗ್ ಇಲ್ಲ. ಮಾನ್ಯ ನಾಗೇಗೌಡರು ಒಂದು ಬಾರಿ ಹೇಳುತ್ತಿದ್ದರು. ಒಬ್ಬ ಹುಡುಗ ಲವ್ ಮಾಡಿದ್ದಾನೆ. ಅವನಿಗೆ ಮದುವೆ ಮಾಡಬೇಕೆಂದರೆ ಅವನು ಓದಿಲ್ಲ, ತಿಳುವಳಿಕೆ ಇಲ್ಲದೆ ಲವ್ ಮಾಡಿದ್ದಾನೆ ಕಣ್ರಿ ಎಂದು ಹೇಳುತ್ತಾರೆ. ಓದಿಲ್ಲವೆಂದರೆ, ಓದಿರುವ ಲವ್ ಬೇರೆ, ಓದದಿರುವ ಲವ್ ಬೇರೆ ಇದೆಯೇ ? ಅವನು ತಿಳುವಳಿಕೆ ಇಲ್ಲದೆ ಲವ್ ಮಾಡಿದ್ದಾನಂತೆ. ಆದ್ದರಿಂದ ತಾವು ಆಲೋಚನೆ ಮಾಡಬೇಕು, ಇದು ಬಹಳ ದೊಡ್ಡ ಸುದ್ದಿ. ಪ್ರಪಂಚ ಸುತ್ತಿ ಇದಕ್ಕೆ ಒಂದು ಕಾನೂನು ಬರೆಯುವುದಕ್ಕೆ ಏನು ಕಷ್ಟ ಎಂದು ನನಗೆ ಗೊತ್ತಾಗುತ್ತಿಲ್ಲ. ಪ್ರಕೃತಿ ವಿಕೋಪಕ್ಕೆ ನಷ್ಟವಾದಾಗ ಎರಡು ಭಾಗ ಮಾಡಿಕೊಳ್ಳಬೇಕು. ಒಂದು ಹಸಿ ಬರ ಇನ್ನೊಂದು ಒಣ ಬರ. ಹಸಿರು ಬಂದು ನಾಶವಾಗುವುದಕ್ಕೆ ಹಸಿ ಬರ ಎಂದು, ಸಂಪೂರ್ಣ ಮಳೆ ಬರದೆ ಬೆಳೆ ಆಗದಿರುವುದಕ್ಕೆ ಒಣ ಬರ ಎಂದೂ ಹೇಳುತ್ತಾರೆ. ನಾನು ಒಬ್ಬ ಡಿ.ಸಿ. ಯವರನ್ನು ಬರದಲ್ಲಿ ಎಷ್ಟು ವಿಧ ಎಂದು ಕೇಳಿದೆ. ಅವರು ನೀವು ಇಂತಹ ಸಭೆಗೆ ಬರಬೇಡಿ, ನೀವು ಬಹಳ ದೊಡ್ಡ ಸಭೆಗೆ ಹೋಗಬೇಕೆಂದು ಹೇಳಿದರು. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಹಸಿ ಬರ ಮತ್ತು ಒಣ ಬರ ಎಂದು ಎಲ್ಲಿ ಬರೆದಿದ್ದಾರೆ. ಬರ ಎಂದರೆ ಏನು ಬರ ಅದು ? ಖುಷ್ಕಿ ಪ್ರದೇಶದಲ್ಲಿ ರಾಗಿ ನಾಟಿ ಮಾಡಿ, ಅದು ತೆನೆ ಹೊಡೆಯುವ ಸಮಯದಲ್ಲಿ ಅದಕ್ಕೆ ಬೆಪ್ಪೊಡೆ ಎಂದು ಕರೆಯುತ್ತಾರೆ. ಈ ಬೆಪ್ಪೊಡೆ ವಿಷಯ ಬಹಳ ಜನ ಬೆಪ್ಪರಿಗೆ ಗೊತ್ತೆ ಇಲ್ಲ.

ಈ ಬೆಷ್ಪೊಡೆಯನ್ನು ಹಸಿ ಬರವೆಂದು ಕರೆಯುವುದು. ಒಂದು ಕಾಳು ಬೆಳೆಯಾಗದೇ ಇರುವಂಥದ್ದನ್ನು ಒಣ ಬರವೆಂದು ಕರೆಯುವುದು. ಇದಕ್ಕೆ ನಿಮ್ಮ ಹಣ ಎಲ್ಲಿದೆ ? ನಾನು ಅದನ್ನೇ ಹೇಳುತ್ತಿರುವಂಥದ್ದು, ಏನಾದರೂ ಕೃಷಿ ಆಯೋಗವನ್ನು challenge ಮಾಡಿ ಮಾಡಬೇಕೆಂದರೆ ಹದಿನೈದು ಸಾವಿರ ಕೋಟಿ ರೂ.ಗಳ ವಿಶೇಷ tax ಹಾಕಿ. ಸಮಗ್ರ ಕರ್ನಾಟಕದ ರೈತರ ಸಂಪೂರ್ಣ ರಕ್ಷಣೆ ಮಾಡಿ. ಅವರನ್ನು ಆರ್ಥಿಕವಾಗಿ ರಕ್ಷಣೆ ಮಾಡುವ ವಿಚಾರದ ಮೇಲೆ ೧೫,೦೦೦ ಕೋಟಿ ರೂ.ಗಳ ಸಂಗ್ರಹಣೆ ಮಾಡಿ. ಈ ಹಣವನ್ನು ಏಕೆ ವಸೂಲಿ ಮಾಡುವುದಿಲ್ಲ ? ೨೦೦೭ ರಿಂದ ೨೦೧೧ರವರೆಗೆ ಕೈಗಾರಿಕೆ ಉದ್ಯಮಿಗಳ ನಷ್ಟಕ್ಕೆ ಐದು ಲಕ್ಷ ಕೋಟಿ ರೂ.ಗಳ ಸಾಲ ಕೊಟ್ಟಿದ್ದಾರೆ. ಏಕೆ ? ನಮಗೆ ಏನು ಇಲ್ಲವೇ ? ನಮಗೆ ಯಾವ ಸಾಲವನ್ನು ಕೊಟ್ಟಿದ್ದೀರೆಂಬುದನ್ನು ಹೇಳಬೇಕಲ್ಲವೇ? ನಮಗೆ ಸಾಲ ಎಲ್ಲಿ ಕೊಡುತ್ತಿದ್ದೀರಿ? ನಾನು ಬದುಕುವ ಒಂದು ಸಾಲವನ್ನು ಎಲ್ಲಿ ಕೊಟ್ಟಿದ್ದೀರಿ ? ಹೇಳಿ Nationalized Banks ಮತ್ತು ಸಹಕಾರಿ ಸಂಘಗಳು ನಾನು ಬದುಕತಕ್ಕಂಥ, ನನ್ನ ಸಂಸಾರ, ನನ್ನ ಜೀವನದ ಆರ್ಥಿಕವಾಗಿ ಭದ್ರತೆಯಿಂದ ಬದುಕುವಂಥ ಒಂದು ಸಾಲ ಎಲ್ಲಿದೆ ? ಅದಕ್ಕೆ ನಾನು package loan declare ಆಗಬೇಕೆಂದು ಹೇಳುತ್ತಿರುವುದು, package loan ಒಂದು ಸಂಕುಚಿತ ಸಾಲ ಪದ್ಧತಿ ಅದು ಆರೋಗ್ಯಕರವಾದ ಬೆಳವಣಿಗೆಯಲ್ಲ. ರೈತ ತಾನು ಸಂಪೂರ್ಣವಾಗಿ ಬದುಕಿ, ಸಾಲವನ್ನು ತೀರಿಸುವಂಥ ಒಂದು ಆರ್ಥಿಕ ನೀತಿಯ ಮೇಲೆ package loan declare ಆಗಬೇಕು. ಈಗ ನನಗೆ ಎರಡು ಎಕರೆ, ಒಂದು ಎಕರೆ ಭೂಮಿ ಇದೆ, ಒಂದು ಎಕರೆ ಭೂಮಿ ಇರುವಂಥ ನನಗೆ ೫ ಲಕ್ಷ ರೂ.ಗಳ ಸಾಲ ಕೊಟ್ಟು ೬ ಹಸುಗಳನ್ನು ಸಾಕುವಂಥ ಅವಕಾಶ ಕೊಡಬೇಕು, ಹಂದಿ ಸಾಕುವುದಕ್ಕೆ ಅವಕಾಶ ಮಾಡಿಕೊಡಬೇಕು, ಎತ್ತು, ಗಾಡಿ ತೆಗೆದುಕೊಂಡು ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕು, ಸಂಪೂರ್ಣವಾಗಿ ಆರ್ಥಿಕವಾಗಿ ಮೇಲೆತ್ತಬೇಕು, ರಾಜ್ಯದ ಉತ್ಪಾದನೆ ಜಾಸ್ತಿಯಾಗಬೇಕು. ಅದನ್ನು ನಾವು ಎಲ್ಲಿ ಮಾಡುತ್ತಿದ್ದೇವೆ ? ಇವತ್ತು ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲ, ಈಗ ನಾವೆಲ್ಲಾ ಮಾತನಾಡುತ್ತಿದ್ದೇವೆ, ಕೂಲಿಕಾರರು ಯಾರೂ ಬರುವುದಿಲ್ಲ, ಮಾಡಿ. ಪ್ರತಿ

ಹಳ್ಳಿಗಳಲ್ಲೂ ಒಂದೊಂದು ಎಕರೆ ಇರುವಂಥವರ ಒಂದು Co-operative movement start ಮಾಡಿ, ಅವರಿಗೆ ಗುಂಪು ಸಾಲವೆಂದು ೨೫ ಲಕ್ಷ ರೂ.ಗಳ ಸಾಲವನ್ನು ಕೊಡಲಿ. ಬೆಳೆ ಸಾಲವಲ್ಲದೇ, ಗುಂಪು ಸಾಲವೆಂದು ಒಂದು ಎಕರೆಯಲ್ಲಿ ೧೫ ಗುಂಟೆ ಕಬ್ಬು, ೧೦ ಗುಂಟೆ ರೇಷ್ಮೆ, ೫ ಗುಂಟೆ ತರಕಾರಿ, ಇನ್ನು ೫ ಗುಂಟೆ ಅವನ ಜೀವನದ ಆಹಾರ ಭದ್ರತೆ, ೧೦ ಗುಂಟೆ ಮೇವು, ಯಾವುದೇ ಕೃಷಿ pattern ಮಾಡಿದರೆ ಭತ್ತ ಹಾಕು, ರಾಗಿ ಹಾಕು, ಜೋಳ ಹಾಕು, ಯಾವುದಕ್ಕೂ ಮಾರ್ಕೆಟ್ ಇಲ್ಲ, ಎಲ್ಲಿದೆ ನಮ್ಮ ಮಾರ್ಕೆಟ್? ೧೪೦ ಎ.ಪಿ.ಎಂ.ಸಿ.ಮಾರ್ಕೆಟ್ ನಮ್ಮದೇ? ನಮ್ಮ ಮಾರ್ಕೆಟ್‌ನಲ್ಲಿ ನಮ್ಮ ಆಹಾರ ಪದಾರ್ಥವನ್ನು ಶೇಖರಣೆ ಮಾಡಿ, ರೇಟ್ ಬಂದಾಗ ಮಾರಾಟ ಮಾಡುತ್ತೇವೆನ್ನುವಂಥ ಯಾವುದೇ ಒಂದು ಮಾರ್ಕೆಟ್ ಎಲ್ಲಿದೆ ? "ಹಮಾರ ಮಾರ್ಕೆಟ್ ಕಹಾ ಹೈ? ನಮ್ಮ ಮಾರ್ಕೆಟ್ ಎಲ್ಲಿದೆ ? ಯಾವುದು ಎ.ಪಿ.ಎಂ.ಸಿ? ಏನದು ? ಮತ್ತೆ ನಾವು ೧೦% ಕಮಿಷನ್ ಅನ್ನು ನಿಲ್ಲಿಸುವುದಕ್ಕೆ ಆಗದೇ ಇರುವಂಥವರು, ರೈತರನ್ನು ಹೇಗೆ ಸರಿ ಮಾಡುತ್ತೇವೆ? ಮದ್ದೂರುನಲ್ಲಿ ಎಳನೀರು ಒಂದರಲ್ಲೇ ೨೫ ಕೋಟಿ ರೂ.ಗಳಿಗೆ ೧೦% ತೆರಿಗೆ ಇದೆ, ಅದು ಮಧ್ಯವರ್ತಿಗಳದ್ದು, ಏನೂ ಮಾಡುವುದಕ್ಕೆ ಆಗುವುದಿಲ್ಲ. ೨೫ ಕೋಟಿ ರೂ.ಗಳಿಗೆ ೧೦% ಇದೆ, ಯಾವ ಎ.ಪಿ.ಎಂ.ಸಿ.ಗೆ ಹೋಗಿ ಅಲ್ಲಿ ೧೦% ಕೊಡಬೇಕು. ರೈತರು ಏಕೆ ಹೆದರುತ್ತಾರೆಂದರೆ ನಮ್ಮ ಮಾಲು ಉಳಿದುಕೊಂಡರೆ ಗತಿ ಏನು ? ನನ್ನನ್ನು ರಕ್ಷಣೆ ಮಾಡುವವರು ಯಾರು? ಆಮೇಲೆ ಮಾರ್ಕೆಟ್‌ನಲ್ಲಿರುವಂಥವರ ಬಳಿ ೪%, ೫% ನಂತೆ ಹಣವನ್ನು ಬಡ್ಡಿಗೆ ತೆಗೆದುಕೊಂಡಿರುತ್ತಾರೆ. ಉತ್ತರ ಕರ್ನಾಟಕದಲ್ಲಿ ೪%, ೫% ಬಡ್ಡಿಯಂತೆ ಸಾಲವನ್ನು ಮಾಡಿ, ತನ್ನ ಆಹಾರ ಪದಾರ್ಥಗಳನ್ನು ಅಲ್ಲಿ ಇಡಲು ಆಗದೇ, ಅವರು ಹೇಳಿದ ರೇಟ್‌ಗೆ ಮಾರಾಟ ಮಾಡುವಂಥ ಪರಿಸ್ಥಿತಿ ಇದೆ. ಈ ರೀತಿ ಇರುವಾಗ ಅವರನ್ನು ಹೇಗೆ ರಕ್ಷಣೆ ಮಾಡುತ್ತೀರಿ ? ಸುಮಾರು ೧೩೦ ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡುವಂಥ ರೈತನಿಗೆ ಕನಿಷ್ಠ ರಕ್ಷಣೆ ಇಲ್ಲದೇ ಇದ್ದರೆ ಏನು ಮಾಡುವುದಕ್ಕೆ ಸಾಧ್ಯ ? ನಾವು ಯಾವ ರೀತಿ ರೈತರನ್ನು ರಕ್ಷಣೆ ಮಾಡುವುದಕ್ಕೆ ಕೃಷಿ ಆಯೋಗ ಮಾಡಿ, ಅದರ ಮುಂದೆ ಚರ್ಚೆ ಮಾಡಿ, ಬದಲಾವಣೆ

ಮಾಡುವುದಕ್ಕೆ ಎಲ್ಲಿ ಆಗುತ್ತದೆ ? ಆದ್ದರಿಂದ ತಾವು ಆಲೋಚನೆ ಮಾಡಬೇಕು. ಮತ್ತೆ ಭೂಮಿಯನ್ನು ಹಂಚಿಕೊಂಡರೆ ತಲಾವಾರು ೨೦ ಗುಂಟೆ ಬರುತ್ತದೆ. ನಾವು ಕರ್ನಾಟಕ ರಾಜ್ಯದ ಭೂಮಿಯನ್ನು ತಲಾವಾರು ಹಂಚಿಕೆ ಮಾಡಿಕೊಂಡರೆ ೨೦ ಗುಂಟೆ ಬರುತ್ತದೆ. ನಾನು ಅಮೆರಿಕಾ ಮತ್ತು ಕೆನಡಾ ದೇಶಗಳಿಗೆ ಹೋಗಿದ್ದೇನೆ. ಅಲ್ಲಿ ಒಂದೇ ಕುಟುಂಬಕ್ಕೆ ೧೫,೦೦೦ ಎಕರೆ ಭೂಮಿ ಇದೆ. ಅಲ್ಲಿ ಮೂರು ಜನರು ಆರಂಭ ಮಾಡುತ್ತಾರೆ, ನಮ್ಮಲ್ಲಿ ೨೦ ಗುಂಟೆಯಲ್ಲಿ ಆರೂವರೆ ಕೋಟಿ ಜನರಿಗೆ ಅನ್ನ ಕೊಟ್ಟು, ನಾವು ಊಟ ಮಾಡಿ ಬದುಕುತ್ತೇವೆಂದರೆ ನಮ್ಮನ್ನು ರಕ್ಷಣೆ ಮಾಡುವುದಕ್ಕೆ ಇಷ್ಟೊಂದು ದೊಡ್ಡ ವಿಸ್ತೃತವಾದ ಚರ್ಚೆ ೬೬ ವರ್ಷಗಳಿಂದ ಮಾಡುತ್ತಿದ್ದು, ಅದಕ್ಕೊಂದು Central Agriculture Price Commission, ಅದಕ್ಕೆ ಹತ್ತು ವರದಿ, ಅದಕ್ಕೆ ವಿಜ್ಞಾನಿಗಳ ಸಂಶೋಧನೆ, ಜ್ಞಾನ–ವಿಜ್ಞಾನಿಗಳ ಸಂಶೋಧನೆ ಆಗುವುದು. ಜ್ಞಾನ ಎಲ್ಲಿದೆ ? ಆಯಿತು, ಕಂಪ್ಯೂಟರ್‌ಗೆ ಎರಡು ಪೇಪರ್ ಹಾಕಿದರೆ, ಕಂಪ್ಯೂಟರ್ ಎರಡು ಪೇಪರ್ ಕೊಡಬಹುದು. ಈ ಕಂಪ್ಯೂಟರ್ ಜಗತ್ತೆಲ್ಲಾ ಮಾಡುವುದಕ್ಕೆ ಆಗುತ್ತದೆಯೇ ? ಹಾಗಾದರೆ ೪ ಟೊಮ್ಯಾಟೊ ಹಾಕಿದರೆ ೮ ಟೊಮ್ಯಾಟೊ ಹಣ್ಣು ಆಗುತ್ತದೆಯೇ ? ಕಂಪ್ಯೂಟರ್ ಜಗತ್ತಿನ ಯಾವುದೋ ಒಂದು ಭಾಗ ಆಗಿದೆ. ಅಮೆರಿಕಾಕ್ಕೆ ನಮ್ಮನ್ನು ಹೋಲಿಸುವುದಕ್ಕೆ ಆಗುತ್ತದೆಯೇ? ನಮ್ಮ food system, ನಮ್ಮ culture, ನಮ್ಮ ಸಂಸ್ಕೃತಿಯೇ ಬೇರೆಯಾಗಿದೆ. ಮತ್ತೆ ಎಲ್ಲಾ ವಿದೇಶ, ವಿದೇಶವೆಂದು ಹೇಳುವುದು, ಬೀಜಗಳ ಕೃಷಿ ಪ್ರಧಾನವಾದ ದೇಶ ಚೈನಾ ಮತ್ತು ನಮ್ಮ ದೇಶ. ನಮ್ಮ ಬೀಜವನ್ನು ನಾವೇ ತಯಾರು ಮಾಡಿಕೊಳ್ಳಲು ಆಗದೇ ಇರುವಂಥ ಅಸಮರ್ಥ ಕೃಷಿ ಮಂತ್ರಾಲಯ. ವಿದೇಶಿ ಬೀಜಕ್ಕೆ ಕಾದುಕೊಂಡಿರುವಂಥ ನಾವು ಗುಲಾಮಗಿರಿಯ ಸಂಕೇತ. ನಾವು FDI ಅನ್ನು ಸ್ವಾಗತ ಮಾಡುತ್ತೇವೆ, Foreign *Direct* Investment, ಸಗಟು ವ್ಯಾಪರಕ್ಕೆ ನೀವು ಬಾ, ನಮಗೆ ಗಂಡಸುತನವಿಲ್ಲ, ನಮಗೆ ತಾಕತ್ತು ಇಲ್ಲ, ನೀವು ಬನ್ನಿ.

ಅಧ್ಯಕ್ಷರು : ನಿಮ್ಮ ಮನೆಯಲ್ಲಿ ಬೀಜ ಬೆಳೆಯುವುದಿಲ್ಲವೇ ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಮ್ಮ ಬೀಜ ಬೆಳೆಯುವುದು ಎಲ್ಲಿದೆ ? ನಮ್ಮದು ಬೀಜ ಬೆಳೆದಿದೆ, ೧೨೦ ಕೋಟಿ ಜನಸಂಖ್ಯೆ ಇದ್ದೇವೆ, ಅದು ಬೇರೆ

ಪ್ರಶ್ನೆ. ಈ ಬೀಜ ಇಲ್ಲವಲ್ಲಾ. ಅದು ಭಾರಿ ಬೆಳೆದಿದೆ, ಅದರಲ್ಲಿ ಯಾರೂ ಏನೂ challenge ಮಾಡುವುದಕ್ಕೆ ಆಗಿಲ್ಲ, ಅದು ಬೇರೆ ಪ್ರಶ್ನೆ. Family planning ಏನಾದರೂ ಇಲ್ಲದೇ ಇದ್ದಿದ್ದರೆ ಇದು ೧೮೦ ಕೋಟಿ, ೨೦೦ ಕೋಟಿ ಜನಸಂಖ್ಯೆಯಾಗುತ್ತಿತ್ತು. ಅದಕ್ಕೆ permission ಇಲ್ಲ, ಅದಕ್ಕೆ ಜನರು ಸ್ವಲ್ಪ ತಡೆದುಕೊಂಡಿದ್ದಾರೆ, ಅಷ್ಟೆ. ಇದು ಒಂದೇ ಅಲ್ಲ. ನಾನು ಹೇಳುತ್ತೇನೆ, ಹಸುವಿಗೆ ವಿದೇಶಿ ಹೋರಿ ತೆಗೆದುಕೊಂಡು ಬಂದಿದ್ದಾರೆ. ನಾನು ಅಮೆರಿಕಾದವರಿಗೆ ಹಳ್ಳಿಕಾರ್ ಹೋರಿಯನ್ನು ಕಳುಹಿಸಬೇಕೆಂದು ಮಾಡಿದ್ದೇನೆ. ದಯವಿಟ್ಟು ಯಾರದಾದರೂ ಸಂಪರ್ಕ ಮಾಡಿ. Globalization ಆದಮೇಲೆ ನಮ್ಮ ಹೋರಿಯನ್ನು ಕಳುಹಿಸುವುದಕ್ಕೆ ಏನು? ಹಳ್ಳಿಕಾರು ತಳಿ ಎಂದರೆ ಏನೆಂದು ಗೊತ್ತಾ? ಮತ್ತೆ ನೀವು anti-globalization ತೆಗೆದುಕೊಂಡಿದ್ದೀರಲ್ಲಾ, ಅದು ಹೇಗೆ ವಾಪಸ್ಸು ತರಿಸಿಕೊಂಡಿದ್ದೀರಿ ? ತಾವು clean ಆಗಿ ಬೀಜವನ್ನು, ಹಸುವನ್ನು ತರಿಸಿಕೊಂಡಿದ್ದೀರಿ, FDI ಗೆ ಸಹಿ ಹಾಕಿದ್ದೀರಿ. ಎಲ್ಲಾ ಕಡೆಗಳಲ್ಲೂ Foreign Direct Investment ಮಾಡುತ್ತಿದ್ದೀರಿ. ಜಾಗತೀಕರಣಕ್ಕೆ ಸಹಿ ಹಾಕಿದ್ದೀರಿ, ಉದಾರೀಕರಣಕ್ಕೆ ಸಹಿ ಹಾಕಿದ್ದೀರಿ, ಅದು ಹಾಕಿದ ಮೇಲೆ.. ..

ಶ್ರೀ ಬಸವರಾಜ ರಾಯರೆಡ್ಡಿ : FDI ಎಲ್ಲಿ ಬಂದಿದೆ ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಬರುತ್ತಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಚೈನಾಗೆ FDI ಬಂದಿರುವುದು more than Rs. 900 Crore.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಬರುತ್ತಾ ಇದೆ, ಬಂದಿದೆ, ತಾವು defend ಮಾಡಿಕೊಳ್ಳುವುದು ಬೇಡ, ಕುಳಿತುಕೊಳ್ಳಿ, ಸಹಿ ಹಾಕಿ ಬಿಟ್ಟಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ : ಇಲ್ಲಿಗೆ FDI ಬರುವುದಿಲ್ಲ, ನಾನು ಹೇಳುವುದನ್ನು ಅರ್ಥ ಮಾಡಿಕೊಳ್ಳಿ, ಇಲ್ಲಿ FDI ಹಾಕುವವರು ಇಲ್ಲ. ೮೦ million ಮಾತ್ರ ಇಂಡಿಯಾಗೆ, whereas in China 900 million. ಇಲ್ಲಿ ಯಾರೂ ಹಾಕುವವರು ಇಲ್ಲ.

ಅಧ್ಯಕ್ಷರು : ತಾವು ಈ ಕಡೆ ಹೇಳಿ ಮಾನ್ಯ ಬಸವರಾಜ ರಾಯರೆಡ್ಡಿಯವರೆ, ಸಮಯ ಆಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮೊನ್ನೆ ಬಹಳ ನಿಧಾನಗತಿಯಲ್ಲಿ FDI ಗೆ ಸಹಿ ಹಾಕಿದ್ದೀರಿ. ಸನ್ಮಾನ್ಯ ಪ್ರಧಾನ ಮಂತ್ರಿಯವರು ರಕ್ಷಣಾ ಇಲಾಖೆ, ರೈಲ್ವೆ ಇಲಾಖೆ, ಸಗಟು ವ್ಯಾಪಾರಕ್ಕೆ FDI ಅನ್ನು ಬಹಳ ತ್ವರಿತವಾಗಿ ತರಬೇಕೆಂದು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿತ್ತು, ಅವರು ಅದನ್ನು ಹೇಳಿದ್ದಾರೆ. ಆದರೆ ಅದರ ಪರಿಣಾಮ ಏನಾಗುತ್ತದೆಂದರೆ ಯಾವುದೇ ವಿದೇಶಿ ಕಂಪನಿಗಳು ನಮ್ಮ ದೇಶದಲ್ಲಿ ಬಂಡವಾಳವನ್ನು ಹೂಡುವುದು, ನಮ್ಮ ದೇಶವನ್ನು ಉದ್ಧಾರ ಮಾಡುವುದಕ್ಕೆ ಅಲ್ಲ, ವಸಾಹತು ಶಾಹಿ ವಾಪಸ್ಸು ಬರುವಂಥ ಪರಿಸ್ಥಿತಿ. ಆದುದರಿಂದ ಇದನ್ನು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕು. ಮತ್ತೊಂದು ವಿನಂತಿ ಏನೆಂದರೆ, ನೀರಿನ ಬಗ್ಗೆ ಇಲ್ಲಿ ನಾವೆಲ್ಲರೂ ಮಾತನಾಡುತ್ತಿದ್ದೇವೆ. ನಮಗೆ underground water ಎಷ್ಟಿದೆ ? ೬೦೦ ಟಿ.ಎಂ.ಸಿ.ಇದೆ. ಈ ೬೦೦ ಟಿ.ಎಂ.ಸಿ. ನೀರನ್ನು ವೈಜ್ಞಾನಿಕವಾಗಿ ಬಳಕೆ ಮಾಡುವುದಿದ್ದರೆ ನಾಲ್ಕು ಕೋಟಿ ಎಕರೆ ನೀರಾವರಿಯಾಗುತ್ತದೆ. ಫ್ಲಡ್ ಇರಿಗೇಷನ್‌ನಲ್ಲಿ ಭತ್ತ ಬೆಳೆಯುವುದಕ್ಕೆ ಏಳು ಸಾವಿರ ಎಕರೆಗೆ ಒಂದು ಟಿ.ಎಂ.ಸಿ. ನೀರು ಬೇಕು. ಕಬ್ಬು ಬೆಳೆಯುವುದಕ್ಕೆ ೧೦ ಸಾವಿರ ಎಕರೆಗೆ ಒಂದು ಟಿ.ಎಂ.ಸಿ. ಬೇಕು. ರಾಗಿ, ಜೋಳ ಇಂಥ ಬೆಳೆಗಳನ್ನು ಬೆಳೆಯುವುದಕ್ಕೆ ೧೬ ಸಾವಿರ ಎಕರೆಗೆ ಒಂದು ಟಿ.ಎಂ.ಸಿ. ಬೇಕು. ಶೇಂಗಾ, ಹೆಸರು, ಉದ್ದು, ಸೂರ್ಯಪಾನ ಇವುಗಳನ್ನು ಬೆಳೆಯಲು ಸ್ಪ್ರಿಂಕ್ಲರ್ ಇರಿಗೇಷನ್‌ಗೆ ಹೋದರೆ ಒಂದು ಲಕ್ಷ ಎಕರೆ ಬರಬಹುದು. ಏಕೆ ಕ್ರಾಪಿಂಗ್ ಪ್ಯಾಟ್ರನ್ ಮಾಡಿ ಮಾಡುವುದಕ್ಕೆ ಆಗುವುದಿಲ್ಲ ? ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೇ, ಏಕೆ ನಾವು ಐದ್ಯೆದು ಸಾವಿರ ಎಕರೆಯ ಒಂದು ಪ್ಲಾಟ್ ಮಾಡಿ ಡ್ರಿಪ್ ಇರಿಗೇಷನ್ ಮಾಡಬಾರದು? ಕ್ರಾಪಿಂಗ್ ಪ್ಯಾಟ್ರನ್ ಇಂಟ್ರೊಡ್ಯೂಸ್ ಮಾಡಿ, ಆ ಕ್ರಾಪ್‌ಗೆ ಇವತ್ತೇ ಬೆಲೆ ನಿಗದಿ ಮಾಡಿಬಿಡಿ. ನಾನು ಒಂದು ಡಾಕ್ಯುಮೆಂಟರಿ ಫಿಲಂ ನೋಡಿದೆ, ಅಮೆರಿಕಾದಲ್ಲಿ ೨೪ ಸಾವಿರ ಎಕರೆಗೆ ೨೪ ಗಂಟೆಯಲ್ಲಿ ಡ್ರಿಪ್ ಇರಿಗೇಷನ್‌ನಲ್ಲಿ ನೀರು ಹಾಯಿಸುತ್ತಾರೆ.

ಅಧ್ಯಕ್ಷರು : ಬೊಮ್ಮಾಯಿಯವರು ಹೇಳಿದರು, ಅವರ ಕಡೆ ಮಾಡಿದ್ದಾರಂತೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಶಿಗ್ಗಾಂವಿಯಲ್ಲಿ ಮಾಡಿದ್ದೇವೆ ಎಂದು ಹೇಳುತ್ತಾರೆ, ನಾವು ಶಿಗ್ಗಾಂವಿಗೆ ಹೋಗಿ ನೋಡಬೇಕಾಗಿದೆ. ನೀರನ್ನು ಎಲ್ಲಿಂದ ತರುತ್ತೀರಿ ? ಸರ್ಕಾರದ ಅಂಕಿಅಂಶದ ಪ್ರಕಾರ ೯೦೦ ಟಿ.ಎಂ.ಸಿ. ನೀರು ಬೇಕು.

ಫ್ಲಡ್ ಇರಿಗೇಷನ್‌ನಲ್ಲಿ ಈಗ ನೀರು ಹಾಯಿಸಬೇಕಾದರೆ ೨೫೦-೩೦೦ ಟಿ.ಎಂ.ಸಿ. ನೀರು ಕಡಿಮೆಯಿದೆ. ಒಂದು ದೊಡ್ಡ ಕಾರ್ಯಕ್ರಮವನ್ನು ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಎರಡು ಸಾವಿರ ಎಕರೆ, ಮೂರು ಸಾವಿರ ಎಕರೆ, ನಾಲ್ಕು ಸಾವಿರ ಎಕರೆಗಳಿಗೆ ಸಾಮೂಹಿಕವಾಗಿ ಡ್ರಿಪ್ ಇರಿಗೇಷನ್ ಮಾಡುವಂಥ ದೊಡ್ಡ ಆಲೋಚನೆಗಳನ್ನು ಮಾಡುವುದರ ಮೂಲಕ ಸಂರಕ್ಷಣೆ ಮಾಡಬಹುದು, ಬೆಳಿಗ್ಗೆಯಿಂದ ಕ್ರಾಪ್ ಪ್ಯಾಟ್ರನ್ ಎಂದು ಮಾತನಾಡುತ್ತಿದ್ದಾರೆ. ಯಾವುದೇ ದೇಶದಲ್ಲಿ ಬೆಳೆ ವೈವಿಧ್ಯತೆ ಬಗ್ಗೆ ಮಾತನಾಡಬೇಕಾದರೆ ಆ ಬೆಲೆಯನ್ನು ಹಾಕುವುದಕ್ಕೆ ಮೊದಲೇ ಅದರ ಬೆಲೆ ನಿಗದಿಯಾಗಬೇಕು. ಆಗ ರೈತ ಕ್ರಾಪ್ ಪ್ಯಾಟ್ರನ್‌ಅನ್ನು ಒಪ್ಪಿಕೊಳ್ಳುತ್ತಾನೆ. ಸುಮ್ಮನೆ ನೀವು ಬೆಳೆ ಬೆಳೆಯಿರಿ ಎಂದು ಹೇಳಿಬಿಟ್ಟು, ನಾಳೆ ಅದಕ್ಕೆ ಮಾರುಕಟ್ಟೆ ಇಲ್ಲದಿದ್ದರೆ ನಾವೇನು ಮಾಡಬೇಕು ? ಆದ್ದರಿಂದ ಈ ವಿಚಾರವನ್ನು ಯೋಚನೆ ಮಾಡಬೇಕು. ಆಹಾರ ಪದಾರ್ಥಗಳ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕೆ ಒಂದು ಕೃಷಿ ನೀತಿ ಬೇಕು. ಕಾಳು ಮಂಡಳಿ ರಚನೆಯಾಗಬೇಕು. ಅವುಗಳ ರಕ್ಷಣೆಯಾಗಬೇಕು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರ್‌ರವರನ್ನು ನಾನು ಕೇಳುವುದೇನೆಂದರೆ, ೭೦% ಇರುವಂಥ ರೈತರಿಗೆ ಖುಷ್ಕಿ ಪ್ರದೇಶದ ಕೃಷಿ ನೀತಿ ಇದೆಯೇ ? ಇಸ್ರೇಲ್‌ನವನು ನಮ್ಮಲ್ಲಿಗೆ ಬಂದು ಮೂರು ಲಕ್ಷ ಹೊಂಗೆ ಗಿಡಗಳನ್ನು ತೆಗೆದುಕೊಂಡು ಹೋಗಿದ್ದಾನೆ, ಇನ್ನೂ ಬೇಕು ಎಂದು ಡಿಮ್ಯಾಂಡ್ ಮಾಡಿದ್ದಾನೆ. ನಮ್ಮ ಒಂದು ಕೋಟಿ ಎಕರೆ ಪ್ರದೇಶದಲ್ಲಿ ಒಂದು ಎಕರೆಗೆ ೩೦ ಗಿಡಗಳ ಹಾಗೆ ಹೊಂಗೆ ಮರವನ್ನು ನೆಡೆಸಿದರೆ ಒಂದು ಎಕರೆಗೆ ೭೫ ಸಾವಿರ ರೂಪಾಯಿ ಆಗುತ್ತದೆ. ಬಯೋ ಡೀಸೆಲ್‌ನಿಂದ ಬರಗಾಲವನ್ನು ೭೫% ನಾಶ ಮಾಡಬಹುದು. You declare a war in this regard. ಅದನ್ನು ಬಿಟ್ಟು ಬರಗಾಲಕ್ಕೆ ನಾನು ದುಡ್ಡು ಕೊಡುತ್ತೇನೆ ಎಂದರೆ ಆಗುವುದಿಲ್ಲ. ದುಡ್ಡಿಲ್ಲದೇ ಕೋಟ್ಯಂತರ ಹೊಂಗೆ ಗಿಡಗಳನ್ನು ರೈತರ ಹೊಲಗಳ ಬದುವಿನಲ್ಲಿ ನೆಡೆಸುವುದಕ್ಕೆ you declare a war. ಇನ್ನು ೧೫ ವರ್ಷಗಳಲ್ಲಿ ಆಯಿಲ್ ಮತ್ತು ಡೀಸೆಲ್‌ಗೆ ಅಭಾವ ಬರುವ ಸಂಭವವಿದೆ. ಆಗ ಏನು ಮಾಡುತ್ತೀರಿ ? ಅಷ್ಟರೊಳಗೆ ಒಂದು ಕೋಟಿ ಎಕರೆಗೆ ಹೊಂಗೆ ಗಿಡಗಳನ್ನು ನೆಡೆಸಿದರೆ ೩೦ ಕೋಟಿ ಮರಗಳು

ಬರುತ್ತವೆ. ಒಂದು ಎಕರೆಗೆ ೭೫ ಸಾವಿರ ರೂಪಾಯಿಗಳೆಂದರೆ ಎಷ್ಟು ಆಗುತ್ತದೆ ಎಂದು ನೀವೇ ಲೆಕ್ಕ ಹಾಕಿಕೊಳ್ಳಿ. ಇದರಿಂದ ಸುಮಾರು ೨೧ ಸಾವಿರ ಕೋಟಿ ರೂಪಾಯಿಗಳ ಹಣವನ್ನು ಖುಷ್ಕಿ ಪ್ರದೇಶದ ರೈತರಲ್ಲಿ ತರುವುದಕ್ಕೆ ವ್ಯವಸ್ಥೆಯಾಗುತ್ತದೆ. ಭೂಮಿ ಮತ್ತು ಬದುಕಿನ ಬಗ್ಗೆ ಆಲೋಚನೆ ಮಾಡುವಂಥ ತಾವು ಹೊಸ ಆಲೋಚನೆಯಿಂದ ಹೊಸ ದಿಕ್ಕಿಗೆ ತೆಗೆದುಕೊಂಡು ಹೋಗಬೇಕು. ಇದನ್ನು ಬಿಟ್ಟು ಕೃಷಿ ಆಯೋಗ ಮಾಡುತ್ತೇವೆ ಎಂದು ಹೇಳಿ, ಅದನ್ನು ಮಾಡಿ, ಅದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳ ಹಣವನ್ನಿಟ್ಟು ರೈತರನ್ನು ರಕ್ಷಣೆ ಮಾಡಲು ಸಾಧ್ಯವೇ? ಸಾಧ್ಯವೇ ಇಲ್ಲ. ೧೩೦ ಲಕ್ಷ ಟನ್ ಆಹಾರಧಾನ್ಯವನ್ನು ಮಾರ್ಕೆಟಿಂಗ್ ಮಾಡುವುದಾಗಲೀ, ರೈತನನ್ನು ರಕ್ಷಣೆ ಮಾಡುವುದಾಗಲೀ ಸಾಧ್ಯವಿದೆಯೇ? ಕೃಷಿಯಿಂದ ಉದ್ಯೋಗ ಸೃಷ್ಟಿಯಾಗಿದೆ. ಕಬ್ಬು ಬೆಳೆ ಒಂದರಿಂದಲೇ ೨೬ ಕೋಟಿ ಜನರಿಗೆ ಉದ್ಯೋಗ ಸೃಷ್ಟಿಯಾಗಿದೆ. ಹತ್ತಿ ಒಂದರಿಂದಲೇ ೩೦ ಕೋಟಿ ಉದ್ಯೋಗ ಸೃಷ್ಟಿಯಾಗಿದೆ. ತಂಬಾಕು ಮತ್ತು ರೇಷ್ಮೆಯಿಂದ ೧೦ ಕೋಟಿ ಉದ್ಯೋಗ ಸೃಷ್ಟಿಯಾಗಿದೆ. ಇಡೀ ಹೋಟೆಲ್ ಉದ್ಯಮ ಯಾವುದರ ಮೇಲೆ ನಿಂತಿದೆ? ಪ್ರತಿವರ್ಷ ೧೪ ಸಾವಿರ ಕೋಟಿ ರೂಪಾಯಿ ಎಕ್ಸೈಸ್‌ನಿಂದ ಬರುತ್ತದೆ. ೫ ವರ್ಷಕ್ಕೆ ಅದು ೭೦ ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ಅದನ್ನು ಹಂಚಿಕೊಂಡರೆ ಪ್ರತಿಯೊಂದು ಪಂಚಾಯಿತಿಗೆ ಹನ್ನೆರಡೂವರೆ ಕೋಟಿ ರೂಪಾಯಿ ಬರುತ್ತದೆ. ಅದರೆ ನಮಗೆ ಇನ್ನೂ ನೀರಿಲ್ಲ, ಮೋರಿಗಳಾಗಿಲ್ಲ, ರಸ್ತೆಗಳಾಗಿಲ್ಲ. ನಮ್ಮ ಬದುಕು ಏನು? ಕೃಷಿ ಎಂದರೆ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಕೃಷಿ ಸಚಿವರು, ಒಂದು ಹಳ್ಳಿಯನ್ನು ಸ್ಯಾಂಪಲ್ ಆಗಿ ತೆಗೆದುಕೊಂಡು co-operative movement ಮಾಡಬೇಕು. ಆಗ ಕೃಷಿ ಕಾರ್ಮಿಕರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬಹುದು. ಯಾವುದೇ ತೊಂದರೆಯಿಲ್ಲ. ಇಡೀ ಕರ್ನಾಟಕದಲ್ಲಿ ಒಂದು ಎಕರೆ ಜಮೀನು ಇರುವಂಥ ಕುಟುಂಬಗಳು ೭೦% ಇವೆ. ಇಂಥ ಒಂದು movement ಪ್ರಾರಂಭವಾದರೆ ಯಾವ ಕಾರ್ಮಿಕ ಸಮಸ್ಯೆಯೂ ಇರುವುದಿಲ್ಲ, ಸಂಪೂರ್ಣವಾಗಿ ಕಡಿಮೆಯಾಗುತ್ತದೆ. ರೈತನಿಗೆ ಬೇಕಾದಂಥ, ಅವಶ್ಯಕತೆಯಿರುವ ಎಲ್ಲ ಸಾಲವನ್ನು ಬ್ಯಾಂಕುಗಳು ಕೊಡಬೇಕು ಎಂದು ಇದೆ. ಒಬ್ಬ

ಕೂಲಿ ಮಾಡುವವನಿಗೆ ಯಾವುದೇ ಗ್ಯಾರಂಟಿ ಇಲ್ಲದೇ ೨೫ ಸಾವಿರ ರೂಪಾಯಿ ಸಾಲ ಕೊಡಬೇಕು ಎಂದು ಇದೆ. ಒಂದು ಬ್ಯಾಂಕಿನವರೂ ಆ ರೀತಿ ದುಡ್ಡು ಕೊಡುತ್ತಿಲ್ಲ. ಎಲ್ಲಿ ಕೊಡುತ್ತಿದ್ದಾರೆ ? ಬಡವರ ಮಕ್ಕಳಿಗೆ ನಾಲ್ಕು ಲಕ್ಷ ರೂಪಾಯಿಗಳ ಎಜುಕೇಷನ್ ಲೋನ್‌ಅನ್ನು ಒಬ್ಬ ಬ್ಯಾಂಕಿನವರೂ ಕೊಡುವುದಕ್ಕೆ ತಯಾರಿಲ್ಲ. ಬರಗಾಲದಿಂದ ನಷ್ಟ ಹೊಂದಿ, ಕಷ್ಟವನ್ನು ಅನುಭವಿಸುತ್ತಿರುವ ರೈತನಿಗೆ ಎಲ್ಲ ಸಾಲದ ಸವಲತ್ತುಗಳನ್ನು ಕೊಡುವುದರ ಮೂಲಕ ರೈತರನ್ನು ಮತ್ತು ಕೃಷಿಯನ್ನು ರಕ್ಷಣೆ ಮಾಡಬೇಕು ಎಂದು ಇದೆ. ಬ್ಯಾಂಕುಗಳಲ್ಲಿ ಆ ರೀತಿಯ ಬೋರ್ಡ್ ಎಲ್ಲಿದೆ ? ನಾವು ಕೇವಲ ರೆಕಾರ್ಡ್‌ಗೆ ಹೋಗಲಿ ಎಂದು ಭಾಷಣ ಮಾಡುತ್ತಿದ್ದೇವೆಯೇ ಹೊರತು ಕ್ರಾಂತಿ ಮಾತ್ರ ಆಗುವುದಿಲ್ಲ. ರೈತನನ್ನು ರಕ್ಷಣೆ ಮಾಡದಿದ್ದರೆ ಅವರು ಗುಳೆ ಹೋಗುತ್ತಾರೆ. ಈಗ ರೈತರು ಗುಳೆ ಹೋಗುತ್ತಿದ್ದಾರೆ ನೋಡಿ. ಕರ್ನಾಟಕದಲ್ಲಿ ವ್ಯವಸಾಯ ಮಾಡದೇ ಎಷ್ಟು ಭೂಮಿ ತಕಲು ಬಿಟ್ಟಿದ್ದಾರೆ? ಎಷ್ಟು ರೈತರು ಗುಳೆ ಹೋಗುತ್ತಿದ್ದಾರೆ ? ಎನ್ನುವ ಬಗ್ಗೆ ಅವರು ವರದಿಯನ್ನು ತರಿಸಿಕೊಳ್ಳಲಿ. ಅದಕ್ಕಾಗಿ ಬೆಂಗಳೂರು, ಮೈಸೂರಿನಲ್ಲೇ ಒಂದು ಕಮಿಷನ್ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಕಮಿಷನ್ ಮಾಡಿ, ಗುಳೆ ಬಂದಿರತಕ್ಕಂಥ ರೈತರಿಗೆ, ಏಕೆ ನೀವು ಗುಳೆ ಬಂದಿದ್ದೀರಿ, ಒಂದು ಕೌನ್ಸಿಲಿಂಗ್ ಮಾಡಿ ಒಂದು ರಿಪೋರ್ಟ್ ತೆಗೆದುಕೊಳ್ಳಿ. ೧೦ ಎಕರೆ ಭೂಮಿಯನ್ನು ತಕ್ಕಲು ಬಿಟ್ಟು ಇಲ್ಲಿಗೆ ಏಕೆ ಬಂದಿದ್ದೀಯಾ ? ಯಾವ ಕಾರಣದಿಂದ ಬಂದಿದ್ದೀಯಾ ? ನಿನಗೇನು ಸವಲತ್ತು ಬೇಕು ? ಎಂದು ಕೌನ್ಸಿಲಿಂಗ್ ಮಾಡಿ. ಯಾರೋ ಒಬ್ಬ ತಲೆಕೆಟ್ಟವನಿಗೆ ಕೌನ್ಸಿಲಿಂಗ್ ಮಾಡುತ್ತೀರಿ. ಒಳ್ಳೆಯವನಿಗೆ ಕೌನ್ಸಿಲಿಂಗ್ ಮಾಡಲು ತೊಂದರೆಯೇನು? ಇಲ್ಲಿ ಏಕೆ ಕೌನ್ಸಿಲಿಂಗ್ ಮಾಡುವುದಕ್ಕೆ ಆಗುವುದಿಲ್ಲ? ಗಂಡ ಹೆಂಡತಿಗೇ ಕೌನ್ಸಿಲಿಂಗ್ ಮಾಡುತ್ತೀರಿ. ಬೆಂಗಳೂರಿನಲ್ಲಿ ಆರು ಸಾವಿರ ಡೈವೋರ್ಸ್ ಆಗಿವೆ. ಅವರಿಗೆ ಕೌನ್ಸಿಲಿಂಗ್ ಮೇಲೆ ಕೌನ್ಸಿಲಿಂಗ್ ಮಾಡುತ್ತಾರೆ. ದುಡಿಯುವ ವರ್ಗ ಬೆಂಗಳೂರಿಗೆ ಗುಳೆ ಬಂದಿದ್ದೇವೆ, ನಮಗೆ ಏಕೆ ಕೌನ್ಸಿಲಿಂಗ್ ಮಾಡಬಾರದು? ವೀರಪ್ಪ ಮೊಯ್ಲಿ ಮನೆಯ ಹತ್ತಿರ ಫುಟ್‌ಪಾತ್ ಮೇಲೆ ೧೫ ಜನ ಮಲಗಿದ್ದಾರೆ. ಅವರಲ್ಲಿ ಮೂರು ಮಕ್ಕಳಿಗೆ ಅನ್ನ ತಿನ್ನಿಸುತ್ತಿದ್ದಾಳೆ, ಅವು ಬೀದಿಯಲ್ಲಿ ಮಲಗಿವೆ. ನೀವು ಯಾರು

ಎಂದು ಅವರನ್ನು ಕೇಳಿದೆ, ನಮಗೆ ೧೫ ಎಕರೆ ಹೊಲ ಇದೆ, ಮಳೆ ಇಲ್ಲ, ಅದಕ್ಕಾಗಿ ಇಲ್ಲಿಗೆ ಬಂದಿದ್ದೇವೆ ಎಂದು ಹೇಳಿದರು. ಯಾವ ಕಾರಣಕ್ಕೆ ಅವರು ಗುಳೆ ಬಂದಿದ್ದಾರೆ ? ರೈತರನ್ನು ಹೇಗೆ ರಕ್ಷಣೆ ಮಾಡುತ್ತೀರಿ? ದುಡಿಯುವ ಕ್ಷೇತ್ರ ಗುಳೆ ಹೋಗುತ್ತಿದೆ ಎಂದರೆ ಅದು ದೇಶಕ್ಕೆ ಅವಮಾನವಲ್ಲವೇ? ಅದು ಯಾವ ಸರ್ಕಾರಗಳಾಗಲೀ, ಗುಳೆ ಹೋಗುವುದನ್ನು ನಿಲ್ಲಿಸದಿದ್ದರೆ, ಆ ಸರ್ಕಾರ ಸತ್ತಿದೆ ಎಂದಾಗುತ್ತದೆ. ತಾನು ಹುಟ್ಟಿದ ಮಣ್ಣನ್ನು ಬಿಟ್ಟು ಬಂದು, ಯಾವುದೋ ಫುಟಾಪಾತ್‌ನಲ್ಲಿ ಮಲಗುವಂಥ ಪರಿಸ್ಥಿತಿಯನ್ನು ರೈತರಿಗೆ ತಂದು, ನಾವು ಕೃಷಿ ಆಯೋಗವನ್ನು ಮಾಡಿ ಅವರೆಲ್ಲರನ್ನು ರಕ್ಷಣೆ ಮಾಡುತ್ತೇವೆ ಎಂದರೆ ಹೇಗೆ? ಅವರನ್ನು ರಕ್ಷಣೆ ಮಾಡುವುದಕ್ಕೆ ನಿಮ್ಮ ಹತ್ತಿರ ದುಡ್ಡು ಎಲ್ಲಿದೆ ? ಪ್ಯಾಕೇಜ್ ಲೋನ್ ಕೊಡುವಿರಾ ? ಅಪೆಕ್ಸ್ ಬ್ಯಾಂಕ್, ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್‌ಗಳಿಂದ ನಾಳೆ ಬೆಳಗ್ಗೆ ಪ್ಯಾಕೇಜ್ ಲೋನ್ ಡಿಕ್ಲೇರ್ ಮಾಡುವಿರಾ ? ಸಹಕಾರಿ ಕ್ಷೇತ್ರದ ಮಂತ್ರಿಗಳು ಹೇಳಿ, ನೀವು ಏನೇನು ಸಾಲವನ್ನು ಕೊಡುತ್ತೀರಿ? ೩ ಲಕ್ಷದವರೆಗೆ ಬೆಳೆ ಸಾಲ ಕೊಡುತ್ತೇವೆ ಎಂದು ಹೇಳಿದ್ದೀರಿ. ೩ ಲಕ್ಷವನ್ನು ಒಂದೇ ಬಾರಿಗೆ ಕೊಡುವಿರಾ ? ಕಬ್ಬಿಗೆ ೩೦ ಸಾವಿರ, ಭತ್ತಕ್ಕೆ ೧೦ ಸಾವಿರ ಎಂದು ಕೊಡುತ್ತೀರಿ. ನನಗೆ ಅರ್ಜೆಂಟಾಗಿ ೩ ಲಕ್ಷ ಬೇಕು ಎಂದರೆ ಯಾವ ಬ್ಯಾಂಕಿನವರು, ಯಾವ ಸೊಸೈಟಿಯವರು ಕೊಡುತ್ತಾರೆ ? ನಾವು ಬದುಕಲಿ ಎಂದು ಸಾಲ ಕೊಡುತ್ತಿಲ್ಲ. ಎಲ್ಲರೂ ಅನ್ನ ತಿನ್ನುವುದಕ್ಕಾಗಿ, ನಾವು ಕೆಲಸ ಮಾಡುವುದಕ್ಕಾಗಿ ಇಟ್ಟುಕೊಂಡಿರುವ ಕಾರ್ಮಿಕರು ಎಂದು ನೀವು ಅವರಿಗೆ ಸಾಲ ಕೊಡುತ್ತೀರಿ. ನಾನು ಒಂದು ವಿಷಯ ಹೇಳುತ್ತೇನೆ, ಕೇಳಿ. ಇಡೀ ಜಗತ್ತಿನಲ್ಲಿ ಈ ರೀತಿ ಎಲ್ಲಿಯಾದರೂ ಉಂಟೇ ? ರಿಸರ್ವ್ ಬ್ಯಾಂಕಿನವರು ಒಂದು ಹಸುವಿಗೆ ಸಾಲವನ್ನು ಪುಟ್ಟಣ್ಣಯ್ಯ ಮತ್ತು ಪುಟ್ಟಣ್ಣಯ್ಯನ ಹೆಂಡತಿಗೆ ಕೊಡುತ್ತಾರೆ. ಅದನ್ನು ಅವರು ಒಂಭತ್ತು ತಿಂಗಳು ಮೇಯಿಸಿ ಹಾಲನ್ನು ಕರೆದು, ಅದರಿಂದ ಬರುವ ಆದಾಯದಲ್ಲಿ ಸಾಲವನ್ನು ಸರಿಯಾಗಿ ತೀರಿಸಿದರೆ ಅವನಿಗೆ ಎರಡನೇ ಹಸುವನ್ನು ಕೊಡುತ್ತಾರೆ. ಜಗತ್ತಿನಲ್ಲಿ ಈ ರೀತಿ ಯಾವ ದೇಶದಲ್ಲಾದರೂ ಉಂಟೇ ? ಎರಡನೇ ಹಸುವಿಗೆ ಸಾಲ ಕೊಡಬೇಕಾದರೆ, ಒಂದು ಹಸುವನ್ನು ನಾನೂ, ನನ್ನ ಹೆಂಡತಿ, ಆ ಹಸುವಿನ

ಹಾಲನ್ನು ಕುಡಿಯದ ಹಾಗೆ, ಅದರ ತೊಪ್ಪೆಯನ್ನೆಲ್ಲ ಎತ್ತಿ ಸರಿಯಾಗಿ ಸಾಲ ತೀರಿಸಿದರೆ ಎರಡನೇ ಹಸುವಿಗೆ ಸಾಲವನ್ನು ಕೊಡುತ್ತಾರಂತೆ. ನಾಲ್ಕು ಹಸುವಿಗೆ ಕೊಟ್ಟರೆ ಅವರಿಗೆ ಏನು ತೊಂದರೆ ? ಹಸುವನ್ನು ತೆಗೆದುಕೊಳ್ಳಲು ಯಾರಿಗೆ ಸಾಲ ಕೊಡುತ್ತಿದ್ದೇವೆ ? ಕೃಷಿ ಉದ್ಯಮ ಎಂದರೆ ಇವುಗಳೆಲ್ಲವನ್ನು ಒಳಗೊಂಡಂಥ ಒಂದು ಕಾರ್ಯಕ್ರಮ ಆಗಬೇಕು. ಮೊನ್ನೆ ನಾನೇ ಬ್ಯಾಂಕಿನವರಿಗೆ ಹೇಳಿದೆ, ನೀವೇ ಎರಡೆರಡು ಹಸುವಿಗೆ ಸಾಲ ತೆಗೆದುಕೊಳ್ಳಿ, ನಾನೇ ಸಾಲ ಕೊಡಿಸುತ್ತೇನೆ ಎಂದು ಹೇಳಿದೆ. ಅವರು ಎರಡೆರಡು ಹಸು, ಎಮ್ಮೆಗಳನ್ನು ತೆಗೆದುಕೊಂಡು ಹೋಗಿ ಮೇಯಿಸಿದರೆ ಅದರ ಕಷ್ಟ ಅವರಿಗೆ ಗೊತ್ತಾಗುತ್ತದೆ. ಬ್ಯಾಂಕಿನವರು, ನಾನು, ದೇವೇಗೌಡರು ಎಲ್ಲರೂ ಎಮ್ಮೆಯನ್ನು ವಿಧಾನಸೌಧಕ್ಕೆ ಬರುವಾಗ ಹೊಡೆದುಕೊಂಡು ಬರುವುದು, ಮತ್ತೆ ತೆಗೆದುಕೊಂಡು ಹೋಗಿ ಕಟ್ಟಿ ಹಾಕುವುದು ಆಗುತ್ತದೆ.

ಶ್ರೀ ಸಿ.ಟಿ. ರವಿ: ಬ್ಯಾಂಕ್ ಮ್ಯಾನೇಜರ್‌ರವರ ಹೆಂಡತಿ ಮನೆ ಬಿಟ್ಟು ಹೋಗಲಿ ಎಂದು ನೀವು ಈ ರೀತಿ ಹೇಳುತ್ತಿರುವಿರಾ ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ತೊಪ್ಪೆಯನ್ನೇ ಮುಟ್ಟದಿರುವವರು, ತೊಪ್ಪಯನ್ನು ಕಂಡರೆ ದೂರ ಇರುವವರು ತೊಪ್ಪೆ ಹಿಡಿದುಕೊಂಡಿರುವವನು ಅಸಹ್ಯ ಎಂದು ಹೇಳುವವನಿಗೆ ಈ ನೀತಿ ಮಾಡಿದ್ದಾರೋ ? ಯಾವ ನೀತಿ ಅದು ? ನಮಗೆಲ್ಲ ಅವಮಾನ. ಇದು ಈ ದೇಶದಲ್ಲಿ ಗುಲಾಮಗಿರಿ ಪದ್ಧತಿಯೇ ? ಎಮ್ಮೆ ಮೇಯಿಸುವವರು ಯಾರು ಎಂದು ನೋಡಿದ್ದೀರಾ? ಹರಕಲು ಸೀರೆ, ಹರಕಲು ರವಿಕೆ ತೊಟ್ಟುಕೊಂಡು ಎಮ್ಮೆ ಮೇಯಿಸುತ್ತಾರೆ. ಆ ಹೆಣ್ಣುಮಕ್ಕಳ ಕಾಲಿಗೆ ನಮಸ್ಕಾರ ಮಾಡಬೇಕು. ೬೦ ಸಾವಿರ ಜನ ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಹ ಆ ತಾಯಂದಿರು ತಮ್ಮ ಮಕ್ಕಳಿಗೋಸ್ಕರ ಆತ್ಮಹತ್ಯೆ ಮಾಡಿಕೊಳ್ಳದೆ ಬದುಕಿಕೊಂಡಿರುವವರನ್ನು ಸರ್ಕಾರ identify ಮಾಡಬೇಕು. ಯಾರು ಯಾವ ಕಾರಣಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಳ್ಳಬೇಕು? ವೀರಯೋಧರು ಸತ್ತರೆ ಅವರನ್ನು ನಾವು ಗೌರವಿಸುವುದಿಲ್ಲವೇ ? ಇವನೇನು ವೀರ ಯೋಧ ಅಲ್ಲವೇ? ಇವನು ನಿರ್ವೀರ್ಯನೆ ? ದುರ್ಬಲ ವ್ಯಕ್ತಿಯೇ? ಹಾಗಾದರೆ ಯಾರು ಇವನು ? ಹುಡುಗಾಟಕ್ಕೋಸ್ಕರ ಹೇಳುತ್ತಿಲ್ಲ. ಇಲ್ಲಿ ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಯೇ,

ಕೈ ಎತ್ತಿ ನೋಡೋಣ. ಅಪ್ಪನಾಣೆ, ೩ ಕೋಟಿ ರೂ. ಕೊಟ್ಟರೂ ಸಹ ನಾನು ಮಾತ್ರ ಸಾಯುವುದಿಲ್ಲ. ಸಾಯಕೆ ಆಗದಿರುವಂಥ ಬದುಕನ್ನು ಬಿಟ್ಟು ಸಾಯುತ್ತಾನೆಂದರೆ ಏನರ್ಥ ? ಎಲ್ಲಿ ಖುಷ್ಕಿ ಪ್ರದೇಶದ ರೈತರು ೧೦೦ಕ್ಕೆ ೮೦% ಸತ್ತಿದ್ದಾರೆ. ಮಹಿಳೆಯರನ್ನು ರಕ್ಷಣೆ ಮಾಡತಕ್ಕಂಥ ಆರ್ಥಿಕ ನೀತಿ ಮಾಡಿ, ಆ ತಾಯಿ ಕಾಲಿಗೆ ನಮಸ್ಕಾರ ಮಾಡಿ ಎಂದು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದೆ.

'ಓ ಲೋಗ್ ಕಂಹಾ ಹೈ, ಸಬ್ ಗಾಂವ್ ಮೆ ಹೈ ಸಮಾಜ್ ಕೇ ಲಿಯೆ, ದೇಶ್ ಕೇ ಲಿಯೆ ಕುರ್ಬಾನ್ ಕಿಯಾ ಹೈ, ಕುರ್ಬಾನ್ ಕರ್ತೇ ಕರ್ತೇ ಮರ್ ರಹೇ ಹೈ ಉನ್ ಕೆ ಬಾರೇ ಮೇ ಕಿಸೀ ಕಿತಾಬ್ ಯಾ ಕಿಸೀ ಅಕ್ಬಾರ್ ಮೇ ಲಿಖಾ ನಹೀ ಓ ತ್ಯಾಗ್ ಕಿಯಾ ಹೈ, ಓ ಮರಾ ಹೈ.'

ಹುಡುಗಾಟಕ್ಕೋಸ್ಕರ ನಾವೆಲ್ಲ ಮಾತನಾಡುವುದಕ್ಕೆ ಆಗುವುದಿಲ್ಲ. ಆತ್ಮಸ್ಥೈರ್ಯ ಇದ್ದರೆ ನಮ್ಮೆಲ್ಲರ ಹೊಣೆಗಾರಿಕೆ, ಜವಾಬ್ದಾರಿ ಹಳ್ಳಿಯನ್ನು ರಕ್ಷಣೆ ಮಾಡುವುದು. ಬಿಜೆಪಿಯೋ, ಕಾಂಗ್ರೆಸ್ಸೋ, ರೈತ ಸಂಘವೋ ಬೇರೆ ಯಾರೋ ಅದು ಬೇರೆ ಪ್ರಶ್ನೆ. ಬಿಜೆಪಿಯ ನೀವು ಒತ್ತಾಯ ಮಾಡಬೇಕು. Absolute majority ಇದೆ. ತಾವು ಬಿಜೆಪಿಯವರು ಆ ಕೃಷಿ ನೀತಿ ಬಗ್ಗೆ ದೊಡ್ಡ ಕ್ರಾಂತಿ ಮಾಡಿ. Central Agriculture Price Commission ಅದಕ್ಕೆ ಪ್ರತಿವರ್ಷ ೨೫ ಕೋಟಿ ರೂ.ಗಳಷ್ಟು ಖರ್ಚಾಗುತ್ತಿದೆ. ಭಾರತ ದೇಶದ ಎಲ್ಲಾ ಬೆಳೆಗಳನ್ನು ಗುರುತಿಸಿ ಬೆಲೆಯನ್ನು ನಿಗದಿ ಮಾಡುವುದಕ್ಕೆ Central Agriculture Price Commission ಎಂದು ಇದೆ. ಕೃಷಿ ಇಲಾಖೆಯವರು ಅಲ್ಲಿಗೆ ನಮ್ಮನ್ನೂ ಕರೆದುಕೊಂಡು ಹೋಗಿದ್ದರು. ಕರೆದುಕೊಂಡು ಹೋಗಿ ಅಲ್ಲಿ ಬೆಂಬಲ ಬೆಲೆ ಹೇಗೆ ಕೊಡಬೇಕೆಂದು ನಮ್ಮ ಸಲಹೆ ಕೇಳಿದರು. ನಾವೆಲ್ಲ ಬೆಂಬಲಕ್ಕೆ ಹುಟ್ಟಿದ್ದೇವೆಯೇ? Originally ಹುಟ್ಟಿಲ್ಲವೇನೂ ? ನಮ್ಮ ತಂದೆ ತಾಯಿ ನಮ್ಮನ್ನು ಬೆಂಬಲಕ್ಕೋಸ್ಕರ ಹೆತ್ತಿದ್ದಾರೆಯೇ ? ನನ್ನ ೩೦ ವರ್ಷಗಳ ಅನುಭವದ ಮೇಲೆ ನಾನು ಮಾತನಾಡುತ್ತಿದ್ದೇನೆ. ಒಂದು ಸಾರಿ ನಾನು ಕುಂಬಳಕಾಯಿ ಬೆಳೆದಿದ್ದೆ. ಮೈಸೂರಿನ ಕಕ್ಕಸು ಗೊಬ್ಬರ ಹೊತ್ತು ತಂದು ನಾನು ಬೆಳೆದಿದ್ದೆ. ನನ್ನ ಅಪ್ಪನವರಿಗೆ ಕಾಣದ

ಹಾಗೆ ನಾನು ೪೦೦೦ ರೂ.ಗಳ ಸಾಲ ಮಾಡಿದ್ದೆ. ನಮ್ಮ ಅಪ್ಪ ಬಹಳ ಕೋಪಿಷ್ಠ, ಹೊಡೆಯುತ್ತಾರೆಂದು ನಾನು ಹಗಲು ರಾತ್ರಿ ಗೇದು ಕಕ್ಕಸು ಗೊಬ್ಬರ ಹೊತ್ತು ತಂದು ಹಾಕಿ ಕುಂಬಳಕಾಯಿ ಬೆಳೆದು ಅದನ್ನು ನನ್ನ ಚಿಕ್ಕಪ್ಪನ ಮುಖಾಂತರ ಬೆಂಗಳೂರಿಗೆ ಕಳುಹಿಸಿದೆ. ನನ್ನ ಚಿಕ್ಕಪ್ಪ B.Sc.(Agri) ಓದಿದ್ದರು. ಒಂದು load ಕುಂಬಳಕಾಯಿಯನ್ನು ಮಾರಿ ದುಡ್ಡು ತೆಗೆದುಕೊಂಡು ಬಾ ಎಂದು ಕಳುಹಿಸಿದ್ದೆ. ನನ್ನ ಚಿಕ್ಕಪ್ಪ ಬಂದು ಕೈಯಿಂದ ಬಾಡಿಗೆಗೆಂದು ೨೦೦ ರೂ. ಖರ್ಚಾಯಿತು ಎಂದು ಹೇಳಿದರು. ಆಗ ನಾವು ಗೆದ್ದೆಯಲ್ಲಿದ್ದ ಕುಂಬಳಕಾಯಿಯನ್ನೆಲ್ಲ ಕತ್ತರಿಸಿ ಎಮ್ಮೆಗೆ ಹಾಕಿದೆವು. ಇದು ಹುಡುಗಾಟವಲ್ಲ. ಕೃಷಿ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಹಾಗೆಯೇ ತೋಟಗಾರಿಕೆ ಬೆಳೆಗಳ ಬಗ್ಗೆ ಹೇಳುವುದಾದರೆ, ತೋಟಗಾರಿಕೆ ಬೆಳೆಗಳಿವೆ. ತೋಟಗಾರಿಕೆ ಬೆಳೆಗಳನ್ನು ಯಾವತ್ತು ನೀವು National Horticulture Board, Central Horticulture Board, CFTRI ಇದು ಬಿಳಿ ಆನೆ. ದತ್ತಾರವರೆ, ೨.೫ಲಕ್ಷ, ೩ ಲಕ್ಷ ರೂ. ಸಂಬಳ ತೆಗೆದುಕೊಳ್ಳುವಂಥ ಬಿಳಿ ಆನೆ ಎಲ್ಲ ಅಲ್ಲಿವೆ. ಕೇಂದ್ರೀಯ ಆಹಾರ ಸಂಶೋಧನಾ ವಿಭಾಗ 'ಗಂಡರ ಗಂಡ ರಣಭೇರುಂಡ ಗೋರ್‌ಕಂಡ ಇದ್ದ ಹಣವನ್ನೆಲ್ಲ ದೋಚಿಕೊಂಡು ಆರಾಮವಾಗಿರುವಂಥ...' ಅಲ್ಲಿ ಯಾವತ್ತಾದರೂ ೩ ಜನ ಸೇರಿ ಒಂದು ದಿವಸವಾದರೂ ಈ ದೇಶದಲ್ಲಿ ಈ ರಾಜ್ಯಕ್ಕೆ ನಾವು ಏನಾದರೊಂದು contribution ಕೊಡೋಣ ಎಂದು ಯೋಚನೆ ಮಾಡಿದ ಹಾಗೆ ಕಾಣುವುದಿಲ್ಲ. Pepsi, Mirinda ಮತ್ತು ಕೋಕೋಕೋಲಾದವರು ಇಲ್ಲಿ ಬಂದು market ಮಾಡಿದ್ದಾರೆ. ಸುಮಾರು ೫೦ ಲಕ್ಷ ಎಕರೆ Horticulture ನಲ್ಲಿ ಎಂಥ ಕೆಲಸ ಮಾಡುತ್ತಾರೆ. ತೋಟಗಾರಿಕೆ ಬೆಳೆಯಾದ ದಾಳಿಂಬೆ ಬಗ್ಗೆ ಹೇಳುತ್ತೇನೆ. ನನ್ನ ಮಗಳು ಅಮೆರಿಕಾದಲ್ಲಿದ್ದಳು. ಅವಳು ಏನು ಊಟ ಮಾಡುತ್ತಿದ್ದಳೋ ಅದು ಹಾಗೆಯೇ motion ನಲ್ಲಿ ಹೊರಟುಹೋಗುತ್ತಿತ್ತು. ಇಂಡಿಯಾಕ್ಕೆ ಬಂದು, ಕರ್ನಾಟಕಕ್ಕೆ ಬಂದು ದಾಳಿಂಬೆ ಒಳಗಿರುವ ಬೆಳ್ಳಗಿನ ಭಾಗ ಮತ್ತು ದಾಳಿಂಬೆ ಎರಡನ್ನೂ ಸೇರಿಸಿ ಒಂದು ತಿಂಗಳು ತಿಂದಳು. Complete ಆಗಿ ಕಾಯಿಲೆ ಹೊರಟುಹೋಯಿತು. ಆಯುರ್ವೇದಿಕ್ ಔಷಧಿ ಬಗ್ಗೆ ಹೇಳುತ್ತಿದ್ದೇನೆ. Pepsi,

coca cola ದಲ್ಲಿ ಏನಿದೆ? ಸರ್. ಅದರಲ್ಲಿ ೩ ಕಲ್ಲು ಅನ್ನು ಹಾಕಿದರೆ ಅದು ಸೀದು ಹೋಗುತ್ತದೆ. ಎಲ್ಲ ಕಾಲೇಜು ಹುಡುಗರು 'ಮಿರಿಂಡಾ! ಪೆಪ್ಸಿ ಹಾಯ್! very soft drinks! Nice!! ಎಂದು ಹೇಳುತ್ತಾರೆ. ಅದೇ milk ಅನ್ನು ಹೇಳುವುದಕ್ಕೆ ತೊಂದರೆ ಏನು? ನಂದಿನಿ ಹಾಲು ಕುಡಿಯಿರಿ, ನಿಮ್ಮ ಜೀವನ ಎಲ್ಲ ಚೆನ್ನಾಗಿರುತ್ತದೆ' ಎಂದು ಹೇಳಬಹುದಲ್ಲವೇ. ಆದರೆ, ಅದು ಇಲ್ಲವೇ ಇಲ್ಲ. ಮಿರಿಂಡಾ ಎಂದು ಜಾಹೀರಾತಿನಲ್ಲಿ ಹೇಳುತ್ತಾ ಹಿಂದಕ್ಕೆ ಬಿದ್ದುಹೋಗುತ್ತಾರೆ. ಅದು ಯಾವುದೂ ನನಗೆ ಅರ್ಥವಾಗುತ್ತಿಲ್ಲ. ಅದು ಮಿರ್ ಹೆಂಡಾ ಅಂತೆ. ಪ್ರತಿ ದಿನ ಮಜ್ಜಿಗೆ ಕುಡಿಯುತ್ತಾ ಬಂದರೆ ಕಿಡ್ನಿ ಕಾಯಿಲೆ ವಾಸಿಯಾಗುತ್ತದೆ. ನಾವು ಹೇಳಬೇಕು – ನಿನ್ನ ಕಿಡ್ನಿ ಉಳಿಯಲು ನಿನ್ನ ಕಿಡ್ನಿ ಯಾವಾಗಲೂ ಸದಾಕಾಲ ಅಲ್ಲಾಡಲು, ಲವಲವಿಕೆಯಿಂದ ಇರಲು ಮಜ್ಜಿಗೆಯನ್ನೇ ಕುಡಿ' ಎಂದು ಹೇಳುವುದಕ್ಕೇನು ? ಮಜ್ಜಿಗೆ ಏಕೆ ಆಗುವುದಿಲ್ಲ ? ಮಜ್ಜಿಗೆ ನಿಮ್ಮ kidney functions ಗೆ ಬಹಳ ಒಳ್ಳೆಯದು ಸರ್.

ಶ್ರೀ ಕೆ.ಆರ್. ರಮೇಶ್ ಕುಮಾರ್ : TV channel ಮಾಲೀಕರು ಎಲ್ಲ ಒಬ್ಬರೇ. ನೀವು ಹೀಗೆ ಹೇಳಿದರೆ ಹುಚ್ಚರೆಲ್ಲ ಕರ್ನಾಟಕದ Assembly ಗೆ ಬಂದಿದ್ದಾರೆಂದು ಹೇಳುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಿಜ, ನಾವು ಅವರ ಕಣ್ಣಿಗೆ ಹುಚ್ಚರು, ಅವರು ನಮ್ಮ ಕಣ್ಣಿಗೆ ಹುಚ್ಚರು. ಅದು ಮಾತ್ರ ನಿಜ. ಇದೆಲ್ಲವೂ ಹುಚ್ಚಾಸ್ಪತ್ರೆಯದು ಎಂದು ಗೊತ್ತಾಯಿತು. ಒಟ್ಟಿನಲ್ಲಿ ಅದು ಕುಡಿಯುವವರಿಗೆ ಹುಚ್ಚೋ, ಕುಡಿಯಬೇಡ ಎಂದು ಹೇಳುವವರಿಗೆ ಹುಚ್ಚೋ ನನಗೆ ಗೊತ್ತಾಗುತ್ತಿಲ್ಲ. ಇನ್ನೊಂದು ಔಷಧಿಯನ್ನು ಹೇಳುತ್ತೇನೆ. ಸ್ವಲ್ಪ ಹುರುಳಿಕಾಳನ್ನು ರಾತ್ರಿ ನೀರಿನಲ್ಲಿ ನೆನೆ ಹಾಕಿ. ಬೆಳಗ್ಗೆ ಎದ್ದು ಆ ಹುರುಳಿ ಕಾಳನ್ನು ಬೇರ್ಪಡಿಸಿ ಅದರ ನೀರನ್ನು ಕುಡಿಯಿರಿ. ಇದರಿಂದ ನಿಮ್ಮ kidney function ಗೆ ಯಾವ ತೊಂದರೆಯೂ ಆಗುವುದಿಲ್ಲ. ನಿಮ್ಮ shock observer ಬಹಳ ಚೆನ್ನಾಗಿರುತ್ತದೆ. ಆದ್ದರಿಂದ ಪೆಪ್ಸಿ, ಕೋಕೋಕೋಲಾ ವನ್ನು ಕುಡಿಯುವುದಕ್ಕೆ ಬಿಡಬೇಡಿ. ಒಂದು ಕೆಲಸ ಮಾಡಿ, ನಿಮ್ಮ ಮಗಳಿಗೆ ೫೦

ಎಳನೀರನ್ನು ಕುಡಿಸಿ. ಸುಂದರವಾದ ಮಗು ಹುಟ್ಟುತ್ತದೆ. ಅದೇ ೧೫ Pepsi, Coca Cola ವನ್ನು ಕುಡಿಸಿದರೆ ಹುಟ್ಟುವ ಮಗುವನ್ನು ನೋಡುವುದಕ್ಕಾಗುವುದಿಲ್ಲ. ಇದೆಲ್ಲದರ ಬಗ್ಗೆ advertisement ಆಗಬೇಕು. ಸಮಯದ ಅಭಾವವಿರುವುದರಿಂದ ಜಾಸ್ತಿ ಮಾತನಾಡುವುದಿಲ್ಲ. ನಮಗೆ ಕೃಷಿ ಆಯೋಗ ಮಾಡಿ ಈ ರಾಜ್ಯದಲ್ಲಿ ಹೊಸ ಕ್ರಾಂತಿ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಈ seeds ಬಗ್ಗೆ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಮಾನ್ಯ ರಮೇಶ್‌ಕುಮಾರ್‌ರವರೆ, ಪಂಚಾಯತ್‌ಗೆ ಒಂದು seed bank ಅಥವಾ ಹೋಬಳಿಗೊಂದು seed bank ಮಾಡುವುದಕ್ಕೆ ತೊಂದರೆ ಏನು ? ಸರ್ಕಾರ ಯೋಚನೆ ಮಾಡಿ ನೋಡಬೇಕು. ೫೬೦೦ ಪಂಚಾಯತ್‌ಗಳಲ್ಲಿ ಗ್ರಾಮ ಸೇವಕ ಬೇಡ, ಆಶಾ ಕಾರ್ಯಕರ್ತರು ಎಂದು ನಾವು ಸೃಷ್ಟಿ ಮಾಡಿದ್ದೇವೆ. ಪಂಚಾಯತಿಗೊಬ್ಬನಂತೆ ೬ ತಿಂಗಳು training ಕೊಟ್ಟರೆ ಆಶಾ ಕಾರ್ಯಕರ್ತರ ಕೈಗೆ ಕೊಟ್ಟು ಇಡೀ ಕೃಷಿ ಕೆಲಸವನ್ನು ಮಾಡಿಸಬಹುದು. ಈ ಬಗ್ಗೆ ತಾವು ಆಲೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರೆ, ತಾವು ಭೂಮಿ ಬಗ್ಗೆ ನಮ್ಮ ಜೊತೆ ಬಹಳ ಹೋರಾಟ ಮಾಡಿದ್ದೀರಿ. ಭೂಮಿಯ ಸಂರಕ್ಷಣೆ, ಸವಳು–ಜವಳು ಬಗ್ಗೆ ಬಹಳ ಹೊತ್ತು ಮಾಡನಾಡಿದ್ದಾರೆ. Black soil ಗೆ ಸಂಬಂಧಿಸಿದಂತೆ ಇಲ್ಲಿ ಒಂದು resolution pass ಆಗಬೇಕು. ಉತ್ತರ ಕರ್ನಾಟಕದ ರೈತರು ಇಲ್ಲಿದ್ದೀರಿ, ಕಪ್ಪು ಮಣ್ಣನ್ನು ರಕ್ಷಣೆ ಮಾಡುವುದಕ್ಕೆ ಒಂದು ದೊಡ್ಡ resolution pass ಮಾಡಬೇಕು. Flood irrigation ಹೀಗೇ ಮಾಡಿದರೆ ಇನ್ನು ೧೦ ವರ್ಷಗಳಲ್ಲಿ ಕರಿ ಮಣ್ಣು complete saline ಆಗಿಬಿಡುತ್ತದೆ, ಸಂಪೂರ್ಣ ನಾಶವಾಗುತ್ತದೆ. ಅದು very delicate soil. ಆ soil ಅನ್ನು ಸಂರಕ್ಷಣೆ ಮಾಡಬೇಕಾದರೆ drip irrigation, sprinkler ಮೂಲಕ ಮಾಡಬೇಕು. ಸಾಮೂಹಿಕವಾಗಿ ನೀರು ಹೋಗುವಂಥದ್ದಕ್ಕೆ ಒಂದು ನಿರ್ಣಯ ಮಾಡಿ, ಅದಕ್ಕೆ ಎಷ್ಟೇ ಹಣ ಖರ್ಚಾದರೂ ಅದನ್ನು ಮಾಡದಿದ್ದರೆ, ಆ soil ರಕ್ಷಣೆ ಮಾಡುವುದಕ್ಕೆ ನೀವು ಏನು drip irrigation ಮಾಡುವುದಕ್ಕೆ ಖರ್ಚು ಮಾಡುತ್ತೀರಿ, ಇದನ್ನು ಮಾಡದಿದ್ದರೆ ಇದರ ೧೦ ರಷ್ಟು ಹೆಚ್ಚು ಖರ್ಚು ಮಾಡಬೇಕಾದ ಪರಿಸ್ಥಿತಿ ಬರುತ್ತದೆ. Under-ground water recharge is the priority sector of the Government. ದಯವಿಟ್ಟು Under-

ground water recharge ಬಗ್ಗೆ ಹೆಚ್ಚು ಆಸಕ್ತಿ ಕೊಟ್ಟು ಕೆಲಸ ಮಾಡಿಸಬೇಕು. ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಎಲ್ಲರಿಗೂ ಕರೆ ಕೊಡಬೇಕು.

ಅಧ್ಯಕ್ಷರು : ಖಂಡಿತ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇಲ್ಲಿ press ನವರೂ ಸಹ ಇದ್ದಾರೆ. ೪೮ ಸಾವಿರ ಲೀಟರ್ ನೀರು ಬೇಕು. ಎಲ್ಲಿಂದ ತರುತ್ತೀರಿ? Bisleri ನೀರಿಗೆ rate ಲೆಕ್ಕ ಹಾಕಿದರೆ ೯.೫ ಲಕ್ಷ ರೂ. ಆಗುತ್ತದೆ. ಪ್ರತಿಯೊಬ್ಬ ತನ್ನ ಮನೆಯಲ್ಲೇ ಆಗಲಿ, ಇನ್ನೆಲ್ಲಿಯೇ ಆಗಲಿ ಕಾಲೇಜು ಹುಡುಗರಿಂದ ಹಿಡಿದು ಎಲ್ಲರು ಬಹಳ ದೊಡ್ಡ ಕಾರ್ಯಕ್ರಮವನ್ನು ಮಾಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಬೆಳಗ್ಗೆಯಿಂದ ಸಂಜೆಯವರೆಗೆ ಇಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚೆಯಾಯಿತು. ನಮಗೆ ೧೨೦ ಟಿಎಂಸಿ ನೀರು ಬೇಕು. ಸ್ವಾತಂತ್ರ್ಯ ಬಂದಂದಿನಿಂದ ೧೨೦ ಟಿಎಂಸಿ ನೀರನ್ನು ಕುಡಿಯುವುದಕ್ಕೆ ಉಪಯೋಗಿಸಿಕೊಳ್ಳದೆ ಇರುವುದರಿಂದ ನಮಗೆ ಮಾಡನಾಡುವ ಸಾಮರ್ಥ್ಯ ಏನಿರಬೇಕೆಂದು ತಾವು ಆಲೋಚನೆ ಮಾಡಿ. ಇಷ್ಟು ಕಾಲ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪ್ರಮೋದ್ ಮಧ್ವರಾಜ್(ಉಡುಪಿ) : ಮಾನ್ಯ ಅಧ್ಯಕ್ಷರೆ, ಇವತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ಹಿರಿಯರು ಮಾತನಾಡಿದ ಬಹಳಷ್ಟು ಭಾಷಣವನ್ನು ನಾನು ಕೇಳಿದೆ. ಒಮ್ಮೆ ಜಪಾನ್ ದೇಶದ ಬಹಳ ದೊಡ್ಡ ಕಂಪನಿಯ MD ಭಾರತ ದೇಶಕ್ಕೆ ಬಂದಿದ್ದರಂತೆ. ಅವರ ಕಂಪನಿ ಬಹಳ ಬೆಳೆದಿತ್ತು, ಬಹಳ ಯಶಸ್ವಿಯಾಗಿ ನಡೆದಿತ್ತು. ಅದಕ್ಕೆ ಅವರ ಭಾಷಣ ಕೇಳುವಂಥ ಸಂದರ್ಭದಲ್ಲಿ ಒಬ್ಬರು ಯುವಕರು ಕೇಳಿದರಂತೆ, ಭಾರತ ದೇಶ ಕೂಡ ಅಷ್ಟು ಅಭಿವೃದ್ಧಿಯಾಗಬೇಕಿದ್ದರೆ ಏನು ಪರಿಹಾರ ? ಆ ಪರಿಹಾರವನ್ನು ಸೂಚನೆ ಮಾಡಬೇಕೆಂದು ಹೇಳಿದಾಗ, ಜಪಾನ್ ದೇಶದ CEO ಯಾರಿದ್ದರು ಅವರು ಹೇಳಿದರಂತೆ, ಭಾರತ ದೇಶದಲ್ಲಿ ಭಾಷಣ ಮಾಡತಕ್ಕಂಥ ಈ oratory power, ಏನಿದೆ ಅದನ್ನು electrical power ಆಗಿ convert ಮಾಡುವಂಥ technique ಅನ್ನು ಎಲ್ಲಿಯಾದರೂ ಭಾರತ ದೇಶದವರು ಕಂಡುಹಿಡಿದರೆ

ನೂರಕ್ಕೆ ನೂರು ಭಾರತ ದೇಶ ಸಂಪೂರ್ಣವಾಗಿ ಯಶಸ್ವಿಯಾಗಿ ನಡೆಯುತ್ತದೆ ಎನ್ನುವ ಮಾತನ್ನು ಹೇಳಿದರಂತೆ. ಹಾಗಾಗಿ ಈ ಸದನದಲ್ಲಿ ಕೂಡ ಹೆಚ್ಚಿನಂಶ ಶ್ರೀ ಡಿ.ಕೆ. ಶಿವಕುಮಾರ್‌ರವರಿಗೆ ಬಹಳಷ್ಟು power problem ಇದೆ. ನಾವು ಇಲ್ಲೂ ಕೂಡ ಒಂದು ರೀತಿಯಲ್ಲಿ ನಮ್ಮ oratory power ಅನ್ನು electrical power ಆಗಿ convert ಮಾಡುವಂಥ ಒಂದು technique ಬಂದರೆ ಬಹಳಷ್ಟು ವಿದ್ಯುತ್ ಉತ್ಪಾದನೆಯನ್ನು ಇಲ್ಲಿಂದಲೇ ಮಾಡಲಿಕ್ಕೆ ಪ್ರಾರಂಭ ಮಾಡಬಹುದು ಎನ್ನತಕ್ಕಂಥ ಅಭಿಪ್ರಾಯವನ್ನು ಕೊಡುತ್ತಾ, ಪ್ರಾಯಶ: ಕೃಷಿಯನ್ನೇ ನಂಬಿ ಕೋಟ್ಯಂತರ ಮಂದಿ ಇವತ್ತು ಜೀವನ ಮಾಡುತ್ತಿದ್ದಾರೆ. ನಮ್ಮ ರೈತರಿಗೆ ಬೇಕಾಗಿರುವುದು ಇಷ್ಟೆ, ಒಂದನೆಯದಾಗಿ, ಅವರ productivity ಯನ್ನು ಹೆಚ್ಚಿಸುವ ಒಂದು ವಿಧಾನವನ್ನು ಹೇಳಿಕೊಡುವಂಥದ್ದು, ಎರಡನೆಯದಾಗಿ ಅವರಿಗೆ working capital ಕೊಡುವಂಥದ್ದು, ಮೂರನೆಯದಾಗಿ ಅವರಿಗೆ ಉತ್ತಮ ಮಾರುಕಟ್ಟೆಯನ್ನು ಮಾಡುವಂಥದ್ದು. ಇವು ಮೂರನ್ನೂ ನಾವು ಸಮಗ್ರವಾಗಿ, ಯಶಸ್ವಿಯಾಗಿ ಮಾಡಿದರೆ ಪ್ರಾಯಶಃ ನಮ್ಮ ರೈತರ ಸಮಸ್ಯೆಗಳು ನೂರಕ್ಕೆ ನೂರು ಪರಿಹಾರವಾಗುತ್ತವೆ. ಆದರೆ, ಇದನ್ನು ಮಾತನಾಡಿದಷ್ಟು ಅನುಷ್ಠಾನಕ್ಕೆ ತರಲಿಕ್ಕೆ ಸುಲಭವಿಲ್ಲ. ನಾನು ಮಾನ್ಯ ಕೃಷಿ ಮಂತ್ರಿಯವರಿಗೆ ಹೇಳಿ ಬಂದೆ. ಈ ಸದನ ನಿಮ್ಮ ಮೇಲೆ ಹಾಕುವಂಥ ಭಾರದಲ್ಲಿ ನೀವು ಕುಸಿಯುವಂಥ ಸಂದರ್ಭ ಕೂಡ ಉದ್ಭವವಾಗಬಹುದು, ಅಷ್ಟೊಂದು ಭಾರವನ್ನು ನಾವೆಲ್ಲ ಕೃಷಿ ಮಂತ್ರಿಯವರ ಮೇಲೆ ಈ ಸದನದ ಮೂಲಕ, ನಮ್ಮ ಮಾತುಗಳ ಮೂಲಕ ಹಾಕುತ್ತಿದ್ದೇವೆನ್ನುವ ಮಾತನ್ನು ನಾನು ಹೇಳಿದ್ದೇನೆ. ಪ್ರಾಯಶಃ ನಮ್ಮ Research & Development ಏನಿದೆ, ಅದರಲ್ಲಿ ನಾವು ಬಹಳ ಹಿಂದೆ ಇದ್ದೇವೆ. ಹಿರಿಯ ಸದಸ್ಯರಾದ ಸನ್ಮಾನ್ಯ ರಮೇಶ್ ಕುಮಾರ್ ಸಾಹೇಬರು ಮಾತನಾಡುವಾಗ ಹೇಳಿದರು. ನಮ್ಮಲ್ಲಿ professors ಗೆ, ವಿಜ್ಞಾನಿಗಳಿಗೆ ಕಲಿತಂಥವರಿಗೆ ಯಾವುದೇ ಕೊರತೆ ಇಲ್ಲ. ಅದರೆ ನಾವು ಅವರಿಗೆ ಎಷ್ಟು ಸಂಬಳ ಕೊಡುತ್ತಿದ್ದೇವೆ, ಅವರನ್ನು ನಾವು ಎಷ್ಟು ಸಲಹುತ್ತಿದ್ದೇವೆ, ಅದಕ್ಕೆ ತಕ್ಕಂಥ productivity ಅವರಲ್ಲಿ ಇದೆಯೇ ಎಂದು ನಾವು ನೋಡಬೇಕಾಗುತ್ತದೆ. ಇವತ್ತು ನಾವು ಜಮೀನಿನ productivity ಯನ್ನು

ನೋಡುವುದಕ್ಕಿಂತ ಮೊದಲು ನಮ್ಮ ಸರ್ಕಾರದಲ್ಲಿ ದುಡಿಯುವಂಥ, research ಮಾಡತಕ್ಕಂಥ ಯಾರೆಲ್ಲ ಅಧಿಕಾರಿಗಳು, ವಿಜ್ಞಾನಿಗಳು ಇದ್ದಾರೆ, ಅವರ productivity ಯನ್ನು auditing ಮಾಡುವಂಥ ಕೆಲಸವಾಗಬೇಕು. ಅವರು ಎಷ್ಟನ್ನು ಪಡೆದುಕೊಳ್ಳುತ್ತಾರೆ, ಅಷ್ಟನ್ನು ಕೃಷಿ ಇಲಾಖೆಗೆ ವಾಪಸ್ಸು ಕೊಟ್ಟಿದ್ದಾರೆಯೇ ಎನ್ನುವುದನ್ನು auditing ಮಾಡುವುದನ್ನು ನಾವು ಮಾಡಿದರೆ ಮತ್ತು ಅವರು laboratary ಯಲ್ಲಿ ಏನೆಲ್ಲಾ ಮಾಡುತ್ತಾರೆ ಅದನ್ನು ಕೃಷಿಕರಿಗೆ ಮುಟ್ಟಿಸುವಂಥ ಕೆಲಸ ಸಮಂಜಸವಾಗಿ ಆದರೆ ಪ್ರಾಯಶಃ ನಮ್ಮ ಸಮಸ್ಯೆಗಳು ಪರಿಹಾರವಾಗುವಂಥ ಸಾಧ್ಯತೆಗಳು ಇವೆ. ನನಗೆ ಪೇರಳೆ ಕಾಯಿ ಎಂದರೆ ಬಹಳ ಇಷ್ಟ. ಅದು ಹೆಚ್ಚು ಹಣ್ಣಾಗಬಾರದು. ನಾನು ತೈವಾನ್‌ಗೆ ಹೋಗಿದ್ದಂಥ ಸಂದರ್ಭದಲ್ಲಿ ಅಲ್ಲಿಯ ದೊಡ್ಡ ದೊಡ್ಡ ಪೇರಳೆ ಕಾಯಿಯನ್ನು ನೋಡಿದಾಗ ಅದು ಎಷ್ಟು ಸಿಹಿ ಇತ್ತು ಎಂದರೆ ಪ್ರಾಯಶಃ ಅಂಥ ತಳಿಗಳನ್ನು, ನಾವು ಎಲ್ಲವನ್ನು ಕೂಡ ವಿದೇಶದಿಂದ ತರುವುದು ಬೇಡ, ವಿದೇಶದ ತಂತ್ರಜ್ಞಾನ ತರುವುದು ಬೇಡ ಎಂದು ನಾವು ಸ್ವಲ್ಪ ಕೂಪ ಮಂಡೂಕ ನ್ಯಾಯ ಮಾಡಿದರೆ ತಪ್ಪಾಗುತ್ತದೆ. ಯಾವ್ಯಾವ ದೇಶಗಳ ಕೃಷಿ ಇಲಾಖೆಯಲ್ಲಿ ಒಳ್ಳೊಳ್ಳೆಯ ಕೆಲಸಗಳು ಆಗಿವೆ, ಅದನ್ನು ನಮ್ಮ ರಾಜ್ಯಕ್ಕೂ ತರುವಂಥ ವ್ಯವಸ್ಥೆ ಮಾಡಬೇಕು. ಉದಾಹರಣೆಗೆ, ಕೇರಳ ರಾಜ್ಯಕ್ಕೆ ಹೋದರೆ, ಅಲ್ಲಿ multiple cropping ಎಂದು ಇದೆ. ಒಂದು ಎಕರೆ ತೋಟದಲ್ಲಿ ಕೇರಳದಲ್ಲಿ ಬೇರೆ ಬೇರೆ ಕೃಷಿಯನ್ನು ಬೆಳೆಸುವುದರ ಮೂಲಕ, multiple cropping ಮಾಡುವುದರ ಮೂಲಕ ಅಲ್ಲಿ ಅವರ ಲಾಭವನ್ನು ಇನ್ನಷ್ಟು ಹೆಚ್ಚಿಸುವಂಥ ಕೆಲಸವನ್ನು ಕೇರಳದಲ್ಲಿ ಮಾಡುವಂಥ ನಿದರ್ಶನಗಳನ್ನು ನಾವು ಕಾಣುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಪ್ರಾಯಶಃ ರೈತರ ಬದುಕನ್ನು ನಾವು ಲಾಭದಾಯಕವಾಗಿ ಮಾಡಬೇಕು. ಇವತ್ತು ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡುತ್ತಾ ರೈತರ migration ನಡೆಯುತ್ತಿದೆ ಎಂದು ಹೇಳಿದರು. ನಮ್ಮ ಉಡುಪಿ ಕಡೆಗೂ ಸಹ ಸಾವಿರಾರು ಜನ ರೈತರು ಬರುತ್ತಾರೆ. ಮಳೆ ಬರುವ ವರೆಗೆ ಕಾಯುತ್ತಾರೆ. ಮಳೆ ಬಂದಾಗ ನಮ್ಮ ಊರು ಬಿಟ್ಟು ಎಲ್ಲರೂ ಅವರವರ ಊರಿಗೆ ಹೋಗುತ್ತಾರೆ. ಇದು ಅತ್ಯಂತ ಬೇಸರದ ಮತ್ತು ನೋವಿನ ವಿಚಾರವಾಗಿದೆ. ಇವತ್ತು ಅನೇಕ

ದೇಶಗಳಲ್ಲಿ ಕೃಷಿ ಮಾಡಲಿಕ್ಕೆ ಭೂಮಿಯೇ ಇಲ್ಲ. ಆದರೆ ದೇವರ ದಯೆಯಿಂದ ನಮಗೆ ಭೂಮಿಯೂ ಇದೆ, ಬೇಕಾಗುವಂಥ ಮಾನವ ಸಂಪನ್ಮೂಲವೂ ಇದೆ. ನಾನು ಶಾಲೆಗಳಿಗೆ ಹೋದಾಗ ಯಾವಾಗಲೂ ಮಕ್ಕಳ ಹತ್ತಿರ ಸಂವಾದ ಮಾಡುವಂಥ ಒಂದು ಅಭ್ಯಾಸ ನನಗಿದೆ. ನಾನು ಮಕ್ಕಳಲ್ಲಿ ನೀವು ಭವಿಷ್ಯದಲ್ಲಿ ಏನಾಗುತ್ತೀರಿ ಎಂದು ಕೇಳುವಾಗ, ವಿಶೇಷವಾಗಿ ಗಂಡು ಮಕ್ಕಳಲ್ಲಿ ಪೋಲೀಸರು ಯಾರು ಆಗುತ್ತೀರಿ ಎಂದರೆ ಅತೀ ಹೆಚ್ಚು ಕೈ ಮೇಲೆ ಎತ್ತುವುದು ಪೋಲೀಸ್ ಆಗಲಿಕ್ಕೆ. ಅದರ ನಂತರ ಡಾಕ್ಟರುಗಳು, ಇಂಜಿನಿಯರುಗಳು ಅವೆಲ್ಲ ಬರುತ್ತದೆ. ಆದರೆ, ಎಷ್ಟು ಮಂದಿ ರೈತರಾಗುತ್ತೀರಿ, ಎಷ್ಟು ಮಂದಿ ಕೃಷಿಕರಾಗುತ್ತೀರಿ, ಎಷ್ಟು ಮಂದಿ ಮೀನುಗಾರರಾಗುತ್ತೀರಿ ಎಂದು ಕೇಳಿದರೆ ಒಬ್ಬರೂ ಸಹ ಕೈ ಮೇಲೆತ್ತುವುದಿಲ್ಲ. ಇಂಥ ಪರಿಸ್ಥಿತಿ ಬಂದಿದೆ. ಅಂದರೆ, ನಮ್ಮ ಮಕ್ಕಳಲ್ಲಿಯೂ ಕೂಡ ಕೃಷಿಯ ಬಗ್ಗೆ ಒಂದು ರೀತಿಯ ತಾತ್ಸಾರ ಭಾವನೆ ಉಂಟಾಗುವಂಥ ಇವತ್ತಿನ ಪರಿಸ್ಥಿತಿಯಲ್ಲಿ ಕೃಷಿಯನ್ನು ಅತ್ಯಂತ ಲಾಭದಾಯಕವಾಗಿ ಈ ದೇಶಕ್ಕೆ, ನಮ್ಮ ರಾಜ್ಯಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ ಮತ್ತು ಸ್ವ-ಉದ್ಯೋಗವನ್ನು ನಿರ್ಮಿಸುವ ರೀತಿಯಲ್ಲಿ ವಿಶೇಷವಾದ ವ್ಯವಸ್ಥೆಯನ್ನು ಇವತ್ತು ಮಾನ್ಯ ಕೃಷಿ ಮಂತ್ರಿಯವರು ಮಾಡಬೇಕಾಗಿದೆ. ಪ್ರಾಯಶಃ ನಮ್ಮ ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಕಿರಿಯ ಕೃಷಿ ಮಂತ್ರಿಯವರು ಶ್ರೀ ಕೃಷ್ಣ ಬೈರೇಗೌಡರು ಎಂದು ನಾನು ಭಾವಿಸುತ್ತೇನೆ. ಇವತ್ತಿನಿಂದಲೇ ಅವರು ಒಂದು ಕ್ರಾಂತಿಯನ್ನು ಮಾಡಬೇಕು, ಬರೀ ಅಧಿಕಾರಿಗಳ ಮಾತನ್ನೇ ಕೇಳಿಕೊಂಡಿದ್ದರೆ ಆಗುವುದಿಲ್ಲ. ಮಂತ್ರಿಗಳ ಮಾತು ಕೂಡ ಅಲ್ಲಿ ನಡೆಯುವಂತಾಗಬೇಕು ಎಂದು ಹಾರೈಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಜಿ.ಟಿ. ದೇವೇಗೌಡ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ಕಳೆದ ಎರಡು ದಿನಗಳಿಂದ ಕೃಷಿ ಬಗ್ಗೆ ಒಳ್ಳೆಯ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಅದರಲ್ಲೂ ಕೂಡ ನಮ್ಮ ರೈತ ನಾಯಕರಾದ ಪುಟ್ಟಣ್ಣಯ್ಯನವರು ಬಹಳಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಿದ್ದಾರೆ, ಇನ್ನೂ ಬಹಳಷ್ಟು ಜನ ಕೃಷಿ ಬಗ್ಗೆ ಮಾತನಾಡಬೇಕೆನ್ನುವ ಆಸಕ್ತಿ ಇರತಕ್ಕಂಥವರೂ

ಕೂಡ ಇದ್ದಾರೆ. ಅದರೆ, ಇವತ್ತು ನನಗಾದರೂ ಕೂಡ ಅನಿಸುತ್ತದೆ. ಪ್ರೊ.ನಂಜುಂಡಸ್ವಾಮಿಯವರು, ರುದ್ರೇಶ್‌ಗೌಡರವರು, ಶಾಮಣ್ಣನವರು ರೈತರ ಹೋರಾಟವನ್ನು ಮಾಡುವ ಮೂಲಕ ರೈತರಿಗೆ ಗೌರವವನ್ನು ತಂದು ಕೊಟ್ಟಿದ್ದರು. ಅವರ ಶಿಷ್ಯರೇ ಈ ರಾಜ್ಯದ ಮುಖ್ಯಮಂತ್ರಿಯಾಗಿರುವುದು ಕೂಡ ನಾವು ಕಾಣುತ್ತಿದ್ದೇವೆ. ಸನ್ಮಾನ್ಯ ನಂಜುಂಡಸ್ವಾಮಿಯವರು ನನ್ನನ್ನು ರಾಜಕೀಯಕ್ಕೆ ಎಳೆದು ತಂದರು ಎಂದು ಅವರೇ ಮೈಸೂರಿನಲ್ಲಿ ಹೇಳಿದ್ದಾರೆ. ರಾಜ್ಯದ ರೈತರಿಗೆ ಕಳೆದ ಬಜೆಟ್‌ನಲ್ಲಿ ಅಪಾರವಾದ ವಿಚಾರವನ್ನು, ನಂಬಿಕೆಯನ್ನು ಕೊಟ್ಟಿದ್ದಾರೆ. ಕೃಷಿ ಆಯೋಗವನ್ನು ನಾವು ರಚನೆ ಮಾಡಿಯೇ ಮಾಡುತ್ತೇವೆ, ಆ ಮೂಲಕ ರೈತರಿಗೆ ಹೆಚ್ಚಿನ ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ೧೯೬೩-೭೦ರವರೆಗೆ ಯಾರೂ ರಾಸಾಯನಿಕ ಗೊಬ್ಬರವನ್ನು ಬಳಸುತ್ತಿರಲಿಲ್ಲ. ೧೯೬೭-೬೮ರಿಂದ ಈಚೆಗೆ ಯೂರಿಯಾ, ಕಾಂಪ್ಲೆಕ್ಸ್ ಇವುಗಳು ಪ್ರಾರಂಭವಾಗಿದ್ದು. ಅಲ್ಲಿಯವರೆಗೂ ಕೂಡ ದನದಕೊಟ್ಟಿಗೆ ಗೊಬ್ಬರ, ಕುರಿ ಗೊಬ್ಬರ, ಮೇಕೆ ಗೊಬ್ಬರ, ಕೆರೆಹೂಳು, ಬೆಳಗ್ಗೆವರೆಗೆ ೩೦೦ ಗಾಡಿ ೪೦೦ ಗಾಡಿ ೫೦೦ ಗಾಡಿ ಭೂಮಿ ಮೇಲೆ ಅಡ್ಡಾಡಿ ಕೆರೆ ಮಣ್ಣನ್ನು ಫಲವತ್ತತೆಯನ್ನು ಕೂಡ ಮಾಡುವುದು ನಿಮಗೆ ಚೆನ್ನಾಗಿ ಗೊತ್ತಿರತಕ್ಕಂಥ ವಿಚಾರ. ಕೆ.ಟಿ. ರಾಮಣ್ಣ ಎನ್ನುವ ಗ್ರಾಮಸೇವಕರು ಇದ್ದರು. ನಾನು ೧೯೬೫ನೇ ಇಸವಿಯಲ್ಲಿ ವ್ಯವಸಾಯ ಪ್ರಾರಂಭ ಮಾಡಿದ್ದು. ಆ ಗ್ರಾಮಸೇವಕರು ನಮಗೆ ಪ್ರೇರಣೆ ಕೊಡುತ್ತಿದ್ದರು. ೧೦೦ ಕೆ.ಜಿ.ಬಾಳೆ, ೮೦ ಟನ್ ಕಬ್ಬು, ಆಲೂಗಡ್ಡೆ ಕೂಡ ಬೆಳೆಯುತ್ತಿದ್ದೆ. ರೇಷ್ಮೆ ಚಾಕಿ ಸೆಂಟರ್, ಕನಕಾಂಬರ ಹೂ, ಮೆಣಸು, ತೊಗರಿ ಎಲ್ಲವನ್ನೂ ನಾನು ಬೆಳೆದು ಪ್ರಗತಿಪರ ರೈತ ಎಂದು ಸರ್ಕಾರದಿಂದ ಒಂದು ಪ್ರಶಸ್ತಿಯನ್ನು ಕೂಡ ಪಡೆದಿದ್ದೇನೆ. ಆದರೆ, ಅಂದಿನ ಗ್ರಾಮ ಸೇವಕರು ರೈತರ ಸಂಪರ್ಕವನ್ನು, ಹಳ್ಳಿಯ ಸಂಪರ್ಕವನ್ನು ಇಟ್ಟುಕೊಂಡು ಏನು ಸೇವೆಯನ್ನು ಸಲ್ಲಿಸುತ್ತಿದ್ದರೋ ಅವತ್ತು ಅಂಥ ಪರಿಣಿತಿಯನ್ನು ಪಡೆದಿಲ್ಲದಿದ್ದರೂ ಕೂಡ ಗ್ರಾಮಸೇವಕರುಗಳು ಆ ರೀತಿ ಕೆಲಸ ಮಾಡುತ್ತಿದ್ದರು. ತಾಲ್ಲೂಕು ಬೋರ್ಡ್‌ನಿಂದ ೫ ಸಾವಿರ ರೂಪಾಯಿಗೆ ಬಾವಿ ತೆಗೆಯಿರಿ ಎಂದು ಹೇಳುತ್ತಿದ್ದರು. ಆದರೆ, ಇವತ್ತು

ಹೋಬಳಿ ಮಟ್ಟದಲ್ಲಿ ರೈತ ಸಂಪರ್ಕ ಕೇಂದ್ರ ಇದೆ. ಅಲ್ಲಿರತಕ್ಕಂಥವರು ಪರಿಕರ ಮಾರಾಟ ಮಾಡುವಂಥದ್ದು, ಬಿತ್ತನೆ ಬೀಜ ಮಾರಾಟ ಮಾಡುವಂಥದ್ದು, ಕ್ರಿಮಿನಾಶಕಗಳನ್ನು ಮಾರಾಟ ಮಾಡುವಂಥದ್ದಕ್ಕೆ ಮಾತ್ರ ಸೀಮಿತರಾಗಿರತಕ್ಕಂಥದ್ದು. ಅವರ್ಯಾರೂ ಕೂಡ ರೈತರ ಬಳಿಗೆ ಹೋಗಿ ರೈತರಿಗೆ ಮಾಹಿತಿಯನ್ನು ಕೂಡತಕ್ಕಂಥ, ತಂತ್ರಜ್ಞಾನವನ್ನು ಕೊಡತಕ್ಕಂಥ, ಅಧಿಕಾರಿಗಳು ಯಾರೂ ಕೂಡ ರೈತ ಸಂಪರ್ಕದಲ್ಲಿ ಇಲ್ಲ.

ಅಧ್ಯಕ್ಷರು : ಅಲ್ಲಿಗೆ ಹೋದರೆ ಅವರಿಗೆ ಕೆಸರು ಮೆತ್ತಿಕೊಳ್ಳುತ್ತದೆ!

ಶ್ರೀ ಜಿ.ಟಿ. ದೇವೇಗೌಡ : ಸನ್ಮಾನ್ಯ ಕೃಷ್ಣ ಬೈರೇಗೌಡರೆ, ಕಳೆದ ಬಾರಿ ಕೂಡ ನಾನು ಚರ್ಚೆ ಮಾಡುವ ಸಂದರ್ಭದಲ್ಲಿ ತಮಗೆ ಹೇಳಿದ್ದೇನೆ. ಗ್ರಾಮ ಮಟ್ಟಕ್ಕೆ ಒಬ್ಬ ಅಧಿಕಾರಿ, ಗ್ರಾಮ ಪಂಚಾಯಿತಿಗೆ ಒಬ್ಬ ಅಧಿಕಾರಿಯನ್ನು ತಾವು ಮಾಡಬೇಕಾಗುತ್ತದೆ. ತಮಗೆಲ್ಲರಿಗೂ ಕೂಡ ಗೊತ್ತಿದೆ. ಹಿಂದೆ ಜಿಲ್ಲಾ ಮಟ್ಟದಲ್ಲಿ District Rural Development Authority (DRDA) ಎಂದು All India level ನಲ್ಲಿತ್ತು. ಎಲ್ಲಾ ಇಲಾಖೆಗಳೂ ಅದರಡಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದವು. ಅನಂತರ Soil Conservation ಬಂತು. ಶ್ರೀ ರಾಮಕೃಷ್ಣ ಹೆಗಡೆಯವರು DLDB ಮಾಡಿ, Soil Conservation ಅನ್ನೂ ಕೂಡ ಅಲ್ಲಿಗೇ ಹಾಕಿದರು. ಈಗ ಅದು ಜಲಾನಯನ ಇಲಾಖೆಯಾಗಿದೆ. ಈ ಜಲಾನಯನ ಇಲಾಖೆಗೆ ಕೇಂದ್ರ ಸರ್ಕಾರದ ಹಣ ಕೂಡ ಬಡುತ್ತದೆ ತಾವೂ ಕೂಡ ರಾಜ್ಯ ಸರ್ಕಾರದಿಂದ ಹಣ ಕೊಡುತ್ತೀರಿ. ಆದರೆ ಜಲಾನಯನ ಇಲಾಖೆಗೆ ಅರಣ್ಯ ಇಲಾಖೆಯಿಂದ ೬೦%, ತೋಟಗಾರಿಕೆ ಇಲಾಖೆಯಿಂದ ೪೦% ಗಿಡಗಳನ್ನು ಕೊಟ್ಟು ಬೆಳೆಸತಕ್ಕಂಥದ್ದು, ಚೆಕ್ ಬಂಡ್ ಹಾಕತಕ್ಕಂಥದ್ದು ಆಗುತ್ತಿದೆಯಲ್ಲ ಅದನ್ನು ಎಲ್ಲಾದರೂ ಒಂದು ಕಡೆ ತಾವು ತೋರಿಸುವುದಕ್ಕೆ ಸಾಧ್ಯವೇ ಎಂದು ಕೃಷಿ ಮಂತ್ರಿಗಳು ಹೇಳಬೇಕು. ತಾವೇ ೧೭ ಮತ್ತು ೧೮ನೇ ತಾರೀಖಿನಂದು ಮೈಸೂರಿಗೆ ಬಂದು ಒಂದು review meeting ಮಾಡಿ ಹೇಳಿದ್ದೀರಿ, ಅದು ಪತ್ರಿಕೆಗಳಲ್ಲಿ ಬಂದಿದೆ. ಈ ಇಲಾಖೆಯ ಅಧಿಕಾರಿಗಳಿಗೆ ಜ್ಞಾನ ಇಲ್ಲ, ಜ್ಞಾನ –

zero, ನಮಗೆ ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತಿದೆ ಎಂದು ಹೇಳಿ ನಿಮ್ಮ ಅಸಮಾಧಾನವನ್ನು ಮೈಸೂರಿನಲ್ಲಿ ವ್ಯಕ್ತಪಡಿಸಿದ್ದೀರಿ. ಅದು ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಒಬ್ಬ ಕೃಷಿ ಮಂತ್ರಿಯಾಗಿ ಈ ರೀತಿ ಹೇಳಿದ್ದೀರಿ. ನಿಮ್ಮ ತಂದೆಯವರಾದ ಶ್ರೀ ಬೈರೇಗೌಡರು ದೊಣ್ಣೆ ಊರಿಕೊಂಡು spot ಗೆ ಬಂದು ಚೆಕ್ ಬಂಡ್‌ಗಳನ್ನು ನೋಡಿ ಅಲ್ಲಿಯೇ ತಪ್ಪಿತಸ್ಥ ಅಧಿಕಾರಿಗಳನ್ನು suspend ಮಾಡುತ್ತಿದ್ದರು. ಅಧಿಕಾರಿಗಳು ನಡುಗುತ್ತಿದ್ದರು. ತಾವು ಅಸಮಾಧಾನವನ್ನು ವ್ಯಕ್ತಪಡಿಸಿ ಬಂದಿದ್ದೀರೇ ಹೊರತು ಯಾವುದಾದರೂ ಜಲಾನಯನ ಪ್ರದೇಶಗಳಿಗೆ ಹೋಗಿ ಅಲ್ಲಿ ಗಿಡ-ಮರಗಳನ್ನು ಬೆಳೆಸಿದ್ದಾರೆಯೇ, ನೀರು ಉಣಿಸಿದ್ದಾರೆಯೇ ಎನ್ನತಕ್ಕಂಥದ್ದನ್ನೂ ಸಹ ನೋಡಿ spot ನಲ್ಲಿ ತಪ್ಪಿತಸ್ಥ ಅಧಿಕಾರಿಗಳನ್ನು suspend ಮಾಡಿ ಬರಬಹುದಾಗಿತ್ತು. ಆ ರೀತಿಯ ಕ್ರಮ ನೀವು ಕೈಗೊಳ್ಳದೇ ಹೋದರೆ ಹೇಗೆ ? ಎಲ್ಲರೂ ಕೂಡ ಜಲಾನಯನ ಇಲಾಖೆಯ ಅಧಿಕಾರಿಗಳಾಗಿ ಕೆಲಸ ಮಾಡಬೇಕು ಎಂದು ಹೇಳುತ್ತಾರೆ. ಯಾರಿಗೂ ಕೂಡ ಕೃಷಿ ಇಲಾಖೆ ಬೇಡ.

ಶ್ರೀ ಕೃಷ್ಣ ಭೈರೇಗೌಡ : ತಾವು ಭಾಗಶಃ ಪತ್ರಿಕೆ ವರದಿಯನ್ನು ನೋಡಿದ್ದೀರಿ. ಪತ್ರಿಕೆಯಲ್ಲಿ ಸಂಪೂರ್ಣ ವರದಿ ಏನು ಬಂದಿದೆ ಎಂದು ನೋಡಿಲ್ಲ. ಸಂಪೂರ್ಣವಾಗಿ ವರದಿ ನೋಡಿ ಮಾತನಾಗಿದರೆ ಚರ್ಚೆಗೆ ಇನ್ನೂ ಅರ್ಥ ಬರುತ್ತದೆ.

ಶ್ರೀ ಜಿ.ಟಿ. ದೇವೇಗೌಡ : ನೀವು ಆ ಸಭೆಯಲ್ಲಿ ಏನು ಹೇಳಿದ್ದಿರೆಂದು ಅವರಿಗೆ ಹೇಳಿ ಸಾಕು. ಛೀಮಾರಿ ಹಾಕಿದ್ದೀರಿ.

ಶ್ರೀ ಕೃಷ್ಣ ಭೈರೇಗೌಡ : ಅದನ್ನು ನೀವು ಹೇಳಿದ್ದೀರಿ. ಪತ್ರಿಕೆಗಳಲ್ಲಿ ನಾನು ಯಾವ ಯಾವ ಸ್ಥಳಕ್ಕೆ ಹೋಗಿದ್ದೆ, ಎಲ್ಲಿ, ಯಾರ ಮೇಲೆ ನಾನು ಕ್ರಮ ತೆಗೆದುಕೊಂಡಿದ್ದೇನೆ ಅದೂ ಸಹ ಪತ್ರಿಕೆಗಳಲ್ಲಿ ಬಂದಿದೆ. ಅದನ್ನೂ ಸ್ವಲ್ಪ ನೋಡಿಕೊಂಡು ಹೇಳಿದರೆ ಚರ್ಚೆ ಮುಂದಕ್ಕೆ ಹೋಗುತ್ತದೆಂದು ಹೇಳಿದೆ ಅಷ್ಟೆ.

ಶ್ರೀ ಜಿ.ಟಿ. ದೇವೇಗೌಡ : ಆಗಬಹುದು. ಕ್ರಮ ತೆಗೆದುಕೊಂಡಿದ್ದರೆ ತಮಗೆ ಧನ್ಯವಾದಗಳು.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಜಲಾನಯನ ಇಲಾಖೆಯಲ್ಲಿ Forest department ಮತ್ತು Horticulture Department ಅಧಿಕಾರಿಗಳೂ ಸಹ ಇರುತ್ತಾರೆ. ಮಾನ್ಯ ಸಚಿವರೆ, ಕಳೆದ ಬಾರಿ ನಾನು ೨೦೦೪ರಲ್ಲಿ ಎಂ.ಎಲ್.ಎ. ಆಗಿದ್ದಾಗ ನಾನು ಇಡೀ ನಾಲ್ಕು ವರ್ಷ ಹುಡುಕಿದರೂ ಯಾವ ಅಧಿಕಾರಿಯ ಮುಖವೂ ಕಾಣಲಿಲ್ಲ. ಅವರು ಯಾರಿದ್ದಾರೋ, ಎಲ್ಲಿದ್ದಾರೋ, ಎಲ್ಲಿ ಕೆಲಸ ಮಾಡುತ್ತಾರೋ, ಗೊತ್ತಾಗಲಿಲ್ಲ. ಜಲಾನಯನ ಇಲಾಖೆಯಲ್ಲಿ ಈ ಪರಿಸ್ಥಿತಿ ಇದೆ. ದಯಮಾಡಿ ಒಂದು evaluation ಮಾಡಿಸಿ.

ಅಧ್ಯಕ್ಷರು : KDP meeting ಮಾಡುವುದಿಲ್ಲವೇ ?

ಶ್ರೀ ಬಿ.ಆರ್. ಪಾಟೀಲ್ : ಮಾಡುತ್ತೇವೆ ಸರ್. ಆದರೆ ಯಾರೂ ಅಧಿಕಾರಿಗಳು ಬರುವುದಿಲ್ಲ. ಅಧಿಕಾರಿಗಳು ಯಾರು ಎಂದು ಕೊನೆಯವರೆಗೂ ಗೊತ್ತಾಗಲಿಲ್ಲ. ಕಡೆಗೆ ನಾನು Chief Secretary ಯವರಿಗೆ ಪತ್ರವನ್ನು ಬರೆದೆ.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ರೈತರಿಗೆ ಆಲಿಕಲ್ಲು ಮಳೆ, ಬಿರುಗಾಳಿ ಮಳೆಯಿಂದ ಬೆಳೆ ನಷ್ಟವಾಗುತ್ತದೆ. ಉದಾಹರಣೆಗೆ ಕೆ.ಆರ್. ನಗರ ತಾಲ್ಲೂಕಿನಲ್ಲಿರುವ ಶ್ರೀ ವೆಂಕಟೇಶಗೌಡ ಎನ್ನುವವರು ಒಬ್ಬ ಪ್ರಗತಿಪರ ರೈತ. ಅವರ ಬೆಳೆ ನಷ್ಟ ನೋಡಲು ತಹಶೀಲ್ದಾರ್‌ರವರು ಹೋಗಿದ್ದಾರೆ, ಕೃಷಿ ಇಲಾಖೆಯ ಅಧಿಕಾರಿಗಳು ಹೋಗಿದ್ದಾರೆ. ಒಂದು ವರ್ಷದಿಂದ ಅವರು ಖರ್ಚು ಮಾಡಿ ತಿರುಗಿದ್ದಾರೆ. ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. ನಮ್ಮಲ್ಲಿ ಹಣ ಇಲ್ಲವೆಂದು ತಹಶೀಲ್ದಾರ್‌ರವರು ಹಿಂಬರಹವನ್ನು ಕೊಡುತ್ತಾರೆ. ಆ ರೈತನಿಗೆ ಪರಿಹಾರ ಕೊಡಬೇಕೆಂದು ಇವರು recommend ಮಾಡಿದ್ದಾರೆ. ಸರ್ಕಾರದಿಂದ ಕೊಡುವುದಕ್ಕೆ ಖಜಾನೆಯಲ್ಲಿ ನಮ್ಮ ಖಾತೆಯಲ್ಲಿ ಹಣ ಇಲ್ಲವೆಂದು ಅವರಿಗೆ ತಹಶೀಲ್ದಾರ್‌ರವರು ಹಿಂಬರಹವನ್ನು ಕೊಟ್ಟಿದ್ದಾರೆ. ಬೆಳೆ ನಷ್ಟ ಆದಂಥದ್ದಕ್ಕೆ, ಪರಿಹಾರ ಕೊಡುವಂಥದ್ದಕ್ಕೆ ವರ್ಷಗಟ್ಟಲೆ ಅಲೆಸತಕ್ಕಂಥದ್ದು, ಲಂಚ ಪಡೆಯತಕ್ಕಂಥದ್ದು, ಈ ರೀತಿಯಾದದ್ದನ್ನು ಮಾಡುತ್ತಿರುವಂಥದ್ದನ್ನು ಇಲಾಖೆಯ ಸಚಿವರ ಗಮನಕ್ಕೆ ನಾನು ತರುವುದಕ್ಕೆ ಬಯಸುತ್ತೇನೆ.

ಮತ್ತೊಂದು ವಿಚಾರ, ತೊಗರಿ ಬೆಳೆ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಬಿ.ಆರ್. ಪಾಟೀಲ್‌ರವರು ಮಾತನಾಡಿದರು. ಅಲ್ಲಿ ತೊಗರಿಗೆ

ತೇವಾಂಶ ಇಲ್ಲವೆಂದು ಒಂದು condition ಅನ್ನು ಹಾಕಿಬಿಟ್ಟಿದ್ದಾರೆ. ತೇವಾಂಶ ಇಲ್ಲದೇ ಇರತಕ್ಕಂಥ ತೊಗರಿಯನ್ನು ಅವರು ಖರೀದಿಸುವುದಿಲ್ಲ. ೫೦೦೦ ರೂಪಾಯಿ ಎಂದು ನಿಗದಿ ಮಾಡಿದ್ದರೂ ಸಹ ೩೭೦೦ ರೂಪಾಯಿಗಳಿಗೆ ಕೊಡುವುದಕ್ಕೆ ಅವರು ತಯಾರಿದ್ದಾರೆ. ಮಹಿಕೋ ಕಂಪನಿಯ ಹತ್ತಿ ಕಳೆದ ಬಾರಿ ೫೫,೦೦೦ ಹೆಕ್ಟೇರ್‌ನಲ್ಲಿ ನಷ್ಟವಾಗಿದೆ. ಮಹಿಕೋ ಕಂಪನಿಯನ್ನು ಬ್ಯಾನ್ ಮಾಡಿದ್ದಾರೆ. ಅವರು ಹೈಕೋರ್ಟ್‌ನಿಂದ stay ತಂದಿದ್ದಾರೆ. ಅಧಿಕಾರಿಗಳು ರೈತರಿಗೆ ಆ ಕಂಪನಿಗೆ ಹೋಗಬೇಡಿ ಎಂದು ಪ್ರಚಾರ ಮಾಡುವುದಕ್ಕೇನೂ stay ಇಲ್ಲ. ಅದನ್ನೂ ಹೇಳುತ್ತಿಲ್ಲ. ಕಡಲೆಬೇಳೆಯನ್ನೂ purchase ಮಾಡುತ್ತಿಲ್ಲ. ತೊಗರಿ import ಮಾಡಿಕೊಳ್ಳುತ್ತಿದ್ದಾರೆ. ಮಾನ್ಯ ಸಹಕಾರ ಮಂತ್ರಿಗಳು ಇಲ್ಲಿಯೇ ಇದ್ದಾರೆ, ಅವರು ಗಮನಿಸಬೇಕು. ೧೯೪೯ರಲ್ಲಿ ಜಾರಿಗೆ ಬಂದಿರತಕ್ಕಂಥ Banking Regulation Act ನ Section ೧೮ ಮತ್ತು ೨೪, ಜೂನ್ ೫, ೨೦೧೪ರಂದು Statutory Liquidity Ratio (SLR), ಶಾಸನಬದ್ಧ ಮೀಸಲು ಅನುಪಾತ ಎಂದು ಹೇಳಿ ಕರ್ನಾಟಕದಲ್ಲಿ DCC Bank ನಲ್ಲಿರತಕ್ಕಂಥ ಹಣವನ್ನು ಅಪೆಕ್ಸ್ ಬ್ಯಾಂಕ್‌ನಲ್ಲಿ ಮೂರೂವರೆ ಸಾವಿರ ಕೋಟಿ ರೂಪಾಯಿಗಳನ್ನೇನು ಇಟ್ಟಿದ್ದಾರೆ ಇದನ್ನು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳು ಆ ಮೊತ್ತವನ್ನು ಕೇಂದ್ರ ಸರ್ಕಾರದ ಭದ್ರತಾ ಠೇವಣಿ ಬಾಂಡ್‌ಗಳಲ್ಲಿ ತೊಡಗಿಸಬೇಕೆಂದು Regulation Act ಗೆ ತಿದ್ದುಪಡಿ ಮಾಡಿದ್ದಾರೆ. ಇದರಿಂದ ಮೂರೂವರೆ ಸಾವಿರ ಕೋಟಿ ರೂಪಾಯಿ ಸಾಲ ಕೊಡತಕ್ಕಂಥದ್ದು ನಮಗೆ ಕಡಿಮೆಯಾಗುತ್ತದೆ. ಮತ್ತೊಂದು Cash Reserve Ratio (CRR), ನಗದು ಮೀಸಲು ಅನುಪಾತ ಇಲ್ಲಿಯವರೆಗೂ ಸಹಕಾರ ಬ್ಯಾಂಕ್‌ಗಳಲ್ಲಿ ಶೇಕಡ ೩ ರಷ್ಟು ಕಡ್ಡಾಯವಾಗಿರಬೇಕಾಗಿತ್ತು, ಇದೆ. Banking Regulation Act ಗೆ ತಿದ್ದುಪಡಿ ತರುವ ಮೂಲಕ ಶೇಕಡ ೪ಕ್ಕೆ ಹೆಚ್ಚಿಸಲಾಗಿ ಇದೂ ಕೂಡ ಸಹಕಾರ ಸಂಸ್ಥೆಗಳ ಮೇಲೆ ಗದಾಪ್ರಹಾರವಾಗಿದೆ. ಇದರಿಂದ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳನ್ನೇನು ನಾವು ರೈತರಿಗೆ ಸಾಲವಾಗಿ ಕೊಡುತ್ತಿದ್ದೆವು ಅದು ಮುಂದಿನ ವರ್ಷದಿಂದ ಕುಂಠಿತವಾಗುತ್ತದೆ. ಸನ್ಮಾನ್ಯ ಪ್ರಧಾನ ಮಂತ್ರಿಗಳು ಸಹಕಾರ ಸಂಸ್ಥೆಗಳ ಮೂಲಕ ಕೃಷಿಗೆ ಏನು. ಹೆಚ್ಚು

ಒತ್ತನ್ನು ಕೊಡುತ್ತೇವೆಂದು ಹೇಳಿದ್ದರೋ ಅದರ ಮೇಲೆ ಗದಾ ಪ್ರಹಾರ ಮಾಡಿದ್ದಾರೆ. ಈ ಹಣ ಸಹಕಾರ ಕ್ಷೇತ್ರದಿಂದ ಹೊರಗೆ ಹೋಗುತ್ತದೆ. ಆದ್ದರಿಂದ ವಿಧಾನ ಸಭೆಯ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕೂಡಲೇ ಹಿಂಪಡೆಯಬೇಕೆಂದು ಕೇಂದ್ರ ಸರ್ಕಾರಕ್ಕೆ ಆಗ್ರಹ ಪಡಿಸಬೇಕು. ಇಲ್ಲದಿದ್ದರೆ ಕೃಷಿ ಕ್ಷೇತ್ರದ ರೈತರ ಮೇಲೆ ಅಗಾಧವಾದ ಪರಿಣಾಮ ಬೀರುತ್ತದೆ. ಮುಂದೆ ಸಾಲವನ್ನೇ ಕೊಡದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕೋಸ್ಕರ ಕೇಂದ್ರ ಸರ್ಕಾರವನ್ನು, ಪ್ರಧಾನ ಮಂತ್ರಿಗಳನ್ನು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಈ ರೀತಿ ಮಾಡಬಾರದು ಎನ್ನತಕ್ಕಂಥ ಆಗ್ರಹವನ್ನು ನಾನು ಇವತ್ತು ಮಾಡುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ತಮಗೂ ಸಹ ಗೊತ್ತಿದೆ, ಶ್ರೀ ಜಾಲಪ್ಪನವರು ಸಹಕಾರ ಸಚಿವರಾಗಿದ್ದರು. ಮೈಸೂರಿನಲ್ಲಿ ತರಕಾರಿ ನಿಯಂತ್ರಣಕ್ಕೆ ಒಳಪಟ್ಟದ್ದು ಅಂದು ಮೊದಲನೇ ಬಾರಿಗೆ. ನಾನೂ ಕೂಡ APMC ಯಲ್ಲಿ ಉಪಾಧ್ಯಕ್ಷನಾಗಿದ್ದೆ. ಅವರು ಬೆಳಗಿನ ಜಾವ ಐದು ಗಂಟೆಗೆ ತರಕಾರಿ ಮಾರುಕಟ್ಟೆಗೆ visit ಮಾಡುತ್ತಿದ್ದರು. ೧೦% commission ವಸೂಲಿ ಮಾಡುತ್ತಿದ್ದರೆಂದು ನಮ್ಮ ಪುಟ್ಟಣ್ಣಯ್ಯನವರು ಮತ್ತು ನಂಜುಂಡಸ್ವಾಮಿಯವರು ರೈತಭವನದಲ್ಲಿ ಇರುತ್ತಿದ್ದರು. ದೇವರಾಜ ಮಾರುಕಟ್ಟೆಯಲ್ಲಿ ಬೊಜ್ಜಣ್ಣ ಎನ್ನುವವರು ಪ್ರೈವೇಟ್‌ನಲ್ಲಿ ಮಾಡುತ್ತಿದ್ದರು. ರೈತರಿಗೆ ಅನ್ಯಾಯವಾಗುತ್ತಿರುವುದನ್ನು ಜಾಲಪ್ಪನವರು ಬಹಳಷ್ಟು ಬಾರಿ ನೋಡಿ, weighing machine ಕೊಟ್ಟು ತರಕಾರಿಯನ್ನು ನಿಯಂತ್ರಣಕ್ಕೆ ಒಳಪಡಿಸಿ ಅದನ್ನು ಜಾರಿಗೆ ಕೊಟ್ಟಿದ್ದು ಮೊದಲನೆಯ ಬಾರಿಗೆ ಮೈಸೂರಿನಲ್ಲಿ. ಆದರೆ ಇವತ್ತು regulatory Market ನಲ್ಲಿ ಏನಾಗುತ್ತಿದೆ ? ದಳ್ಳಾಳಿಗಳ ಹಾವಳಿ, percentage, ಮಂತ್ರಿಗಳು visit ಮಾಡುತ್ತಿಲ್ಲ, ಯಾವುದೇ ಅಧಿಕಾರಿಯ control ಇಲ್ಲ, ರೈತರಿಗೆ ಏನೂ ಇಲ್ಲದ ಹಾಗೆ ಆಗಿದೆ. KMF ಮೂಲಕ ರೈತರು ಉತ್ಪಾದನೆ ಮಾಡಿದ ಹಾಲನ್ನು ನಾವು ಯಾವ ರೀತಿ ಗ್ರಾಹಕರಿಗೆ ಒದಗಿಸುತ್ತಿದ್ದೇವೆಯೋ ಅದೇ ರೀತಿ ಮಾಡಬೇಕು. ನಾನು ಮೊದಲನೆಯ ಬಾರಿ ಹೇಳಿದ್ದೆ, ಈ ಬಗ್ಗೆ ನಮ್ಮ ಕೃಷಿ ಸಚಿವರು ಕ್ರಮ ಕೈಗೊಳ್ಳಬೇಕು. ರೈತ ಬೆಳೆಯತಕ್ಕಂಥ ತರಕಾರಿ, ತೋಟಗಾರಿಕೆ ಉತ್ಪನ್ನಗಳನ್ನು ನೇರವಾಗಿ ಜಮೀನಿನಿಂದ

APMC ಮಾರುಕಟ್ಟೆಗೆ free ಯಾಗಿ ತರತಕ್ಕಂಥದ್ದನ್ನು ಮಾಡಬೇಕು. ಅದನ್ನು ಮತ್ತೆ ಗ್ರಾಹಕರಿಗೆ ಪ್ಯಾಕೆಟ್‌ಗಳ ಮೂಲಕ, ಸ್ಟೋರ್‌ಗಳ ಮೂಲಕ ಮಾರಾಟ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. Marketing ಮಾಡುವುದು ನಮ್ಮ ಕೈಯಲ್ಲಿಯೇ ಇದೆ. Export ಮಾಡುವುದು ಬೇರೆ. ನಮ್ಮಲ್ಲಿರತಕ್ಕಂಥ, ರೈತರು ಬೆಳೆಯತಕ್ಕಂಥ ಪದಾರ್ಥಗಳನ್ನು ಗ್ರಾಹಕರಿಗೆ ಒದಗಿಸತಕ್ಕಂಥ ಕೆಲಸವನ್ನೂ ಕೂಡ ನಮ್ಮ ಕೃಷಿ ಇಲಾಖೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯಗಳ ಬಗ್ಗೆ, ತಜ್ಞರ ಬಗ್ಗೆ, ಸಂಶೋಧನೆ ಬಗ್ಗೆ ನಾವೆಲ್ಲರೂ ಮಾತನಾಡುತ್ತಿದ್ದೇವೆ. ಅವರೆಲ್ಲರೂ ಕೂಡ ಒಂದೊಂದು ಹಳ್ಳಿಗಳನ್ನು ದತ್ತು ತೆಗೆದುಕೊಳ್ಳಲಿ. ಸಮಗ್ರವಾದಂಥ ಕೃಷಿ ನೀತಿ ಮಾಡಲಿ. ರೈತರು ಅಲ್ಲಿ ಬಂದು ನೋಡಲಿ. ಒಂದು ಕಡೆ ಬಯಲು ಪ್ರದೇಶದಲ್ಲಿ ಕೃಷಿ ಈ ರೀತಿಯಾದರೆ, ಇನ್ನೊಂದು ಕಡೆ ನೀರಾವರಿ ಪ್ರದೇಶದಲ್ಲಿ ಬೇರೆ ರೀತಿ ಇದೆ. ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡುತ್ತಿದ್ದರು. ಪುಟ್ಟಣ್ಣಯ್ಯನವರೂ ಸಹ ಹೇಳಲಿ, ಅವರದ್ದೂ ಸಹ ಜವಾಬ್ದಾರಿ ಇದೆ. ಅಣ್ಣ ಹಜಾರೆಯವರು ಮುಖ್ಯ ಮಂತ್ರಿಯಾಗಿ ಮಾಡಲಿಲ್ಲ, ಯಾವುದೇ ಸರ್ಕಾರದ ಅಧಿಕಾರ ಇಟ್ಟುಕೊಂಡು ಮಾಡಲಿಲ್ಲ, ಜನರನ್ನು ಒಟ್ಟು ಗೂಡಿಸಿ ನೀರನ್ನು ಬಳಕೆ ಮಾಡತಕ್ಕಂಥದ್ದು, ಜಲ ಸಂವರ್ಧನೆ ಮಾಡತಕ್ಕಂಥದ್ದು, ಅಂತರ್ಜಲ ಮೇಲೆ ತರತಕ್ಕಂಥ ಕೆಲಸ ಮಾಡಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಕಬ್ಬಿಗೆ ಬೆಲೆ ಇಲ್ಲವೆಂದರೂ ಸಹ ಅದನ್ನೇ ಬೆಳೆಯುತ್ತಾರೆ. ಬತ್ತಕ್ಕೆ ಬೆಲೆ ಇಲ್ಲವೆಂದರೂ ಅದನ್ನೇ ಬೆಳೆಯುತ್ತಾರೆ. ಈ cropping pattern ಅನ್ನು ಬದಲಾವಣೆ ಮಾಡಬೇಕೆಂದರೆ ನಮ್ಮ ವಿಶ್ವವಿದ್ಯಾನಿಲಯಗಳು, ತಜ್ಞರು ಇವರೆಲ್ಲರೂ ಹೋಗಿ ರೈತರ ಸಂಘಟನೆ ಮಾಡಿ ನೀರಿಗೆ ತಕ್ಕಂತೆ cropping pattern ಅನ್ನು ಮಾಡಬೇಕು. ೩೩,೦೦೦ ಹೆಕ್ಟೇರ್ ಭೂಮಿ ಅಸಮರ್ಪಕವಾದಂಥ ನೀರಿನ ಬಳಕೆಯಿಂದ ಸವಳು ಮಣ್ಣು ಪ್ರದೇಶವಾಗಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಇದು ಆಗಿದೆ. ಕೃಷ್ಣಾ, Upper Krishna, ಬೇರೆ ಕಡೆಗಳಲ್ಲಿ ಎಷ್ಟಾಗಿದೆ ಎಂಬುದು ಗೊತ್ತಿಲ್ಲ. ಆದರೆ ನಮ್ಮ ಕೆ.ಆರ್. ಸಾಗರದ ಕಾವೇರಿ ಅಚ್ಚುಕಟ್ಟಿನಲ್ಲಿ ೩೩,೦೦೦ ಹೆಕ್ಟೇರ್ ಜವಳು ಪ್ರದೇಶವಾಗಿದೆ. ನಮ್ಮ ಕೃಷಿ ಮಂತ್ರಿಗಳು, ನಮ್ಮ

ಮುಖ್ಯಮಂತ್ರಿಗಳು, ನಂಜುಂಡಸ್ವಾಮಿಯವರೂ ಸಹ ರೈತ ಸಂಘಟನೆ, ರೈತ ಹೋರಾಟದಲ್ಲಿ ಬೆಳೆದಿರುವುದರಿಂದ ಹೆಚ್ಚು ಒತ್ತನ್ನು ಇದಕ್ಕೆ ಕೊಡಬೇಕು. ತಾವು ಏನೇ ಹೇಳಿದರೂ ಕೂಡ ಎಲ್ಲ ರೈತರ ಭಾವನೆ ಇದೆ, ರೈತರಿಗೆ ಆದ್ಯತೆಯನ್ನು ಕೊಡಬೇಕು. ಕೃಷಿ ಇಲಾಖೆಗೆ ಕ್ಯಾಬಿನೆಟ್ ದರ್ಜೆ ಸಚಿವರನ್ನು ಕೊಡಬೇಕು. ಅವರು ಕ್ಯಾಬಿನೆಟ್‌ನಿಂದ ಹೊರಗಿದ್ದಾರೆ. ಯಾವುದೇ ತೀರ್ಮಾನವನ್ನು ಕೈಗೊಳ್ಳಬೇಕೆಂದರೆ ಕೃಷಿ ಮಂತ್ರಿಗಳು ಕ್ಯಾಬಿನೆಟ್‌ನ ಒಳಗೆ ಇರಬೇಕು. Agri-in Agriculture ಎಂದು ಹೇಳಿ, ಮುಂದೆ ಇರತಕ್ಕಂಥದ್ದು. ಕೃಷಿ ಮಂತ್ರಿಗಳನ್ನು ಕ್ಯಾಬಿನೆಟ್ ದರ್ಜೆ ಮಂತ್ರಿಗಳನ್ನಾಗಿ ಮಾಡಲೇಬೇಕೆಂದು ನಾನು ಒಬ್ಬ ರೈತನಾಗಿ ಆಗ್ರಹಪೂರ್ವಕವಾಗಿ ಒತ್ತಾಯ ಮಾಡುತ್ತಿದ್ದೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಅಧ್ಯಕ್ಷರು : ಇನ್ನೂ ಕೆಲವರು ಉಪ ಮುಖ್ಯಮಂತ್ರಿ ಮಾಡಬೇಕೆಂದು ಚಳುವಳಿ ನಡೆಸುತ್ತಿದ್ದಾರೆ. ಆದ್ದರಿಂದ, ಕ್ಯಾಬಿನೆಟ್ ಸಚಿವರನ್ನಾಗಿ ಮಾಡಬೇಕೆಂದು ನೀವೂ ಸಹ ಚಳುವಳಿ ಮಾಡಿ. ಈಗ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಬೇಡಿಕೆ ಮೇಲಿನ ಚರ್ಚೆ ಮುಕ್ತಾಯವಾಗಿದೆ. ಇದರ ಬಗ್ಗೆ ಉತ್ತರವನ್ನು ನಾಳೆ ಕೊಡಲಾಗುತ್ತದೆ. ಈಗ ಗಮನ ಸೆಳೆಯುವ ಸೂಚನೆಗಳು. ಮೊದಲಿಗೆ ಎಸ್.ಅಂಗಾರರವರದಿದೆ. ಆದರೆ, ಇದಕ್ಕೆ ಉತ್ತರ ಬಂದಿಲ್ಲ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಬೇಡಿಕೆ ಬಗ್ಗೆ ನಾನೂ ಸಹ ಮಾತನಾಡಬೇಕಾಗಿದೆ. ಆದ್ದರಿಂದ, ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ಬೇಡಿಕೆ ಮೇಲಿನ ಚರ್ಚೆ ಮುಗಿದಿದೆ, ಮಾನ್ಯ ದೇಶಪಾಂಡೆಯವರೇ, ಮಾನ್ಯ ಅಂಗಾರರವರ ಗಮನ ಸೆಳೆಯುವ ಸೂಚನೆಗೆ ಉತ್ತರ ಹೇಳುತ್ತೀರಾ ? ಇದೇನು ತುಂಬಾ ಸಣ್ಣ ವಿಚಾರವಾಗಿದೆ, ಈಗಲೇ ಉತ್ತರ ಹೇಳಿ.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ಬಂದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಉತ್ತರದ ಪ್ರತಿಯನ್ನು ಮಧ್ಯಾಹ್ನ ಕಳುಹಿಸಲಾಗಿದೆ. ಒಂದು ವೇಳೆ ಬಂದಿಲ್ಲದೆ ಇದ್ದರೆ ನನ್ನ ಫೈಲ್‌ನಲ್ಲಿರುವ ಉತ್ತರದ ಪ್ರತಿಯನ್ನು ಅವರಿಗೆ ಕೊಡುತ್ತೇನೆ.

ಅಧ್ಯಕ್ಷರು : ಸ್ಥಳಾಂತರ ಮಾಡಲಾಗಿದೆ ಎಂದು ಕೇಳಿದ್ದಾರೆ, ಇದು ಬಹಳ ಸಣ್ಣ ವಿಚಾರ ಇದೆ, ಉತ್ತರ ಕೊಡಿ. ಮಾನ್ಯ ಸದಸ್ಯರೇ, ಮೊದಲಿಗೆ ಮಾನ್ಯ ಸಚಿವರ ಗಮನ ಸೆಳೆಯಿರಿ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:– ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಕಾಣಿಯೂರುನಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನುಬೆಳಂದೂರಿಗೆ ಸ್ಥಳಾಂತರಿಸುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ.

ಶ್ರೀ ಎಸ್. ಅಂಗಾರ : ಸುಳ್ಯ ವಿಧಾನಸಭ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಕಾಣಿಯೂರುನಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ : (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಸರ್ಕಾರವು 2009–10ನೇ ಸಾಲಿನಿಂದ ಪುತ್ತೂರು ತಾಲ್ಲೂಕು, ಕಾಣಿಯೂರು ಇಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಮಂಜೂರು ಮಾಡಿದ್ದು, ಅದೇ ಸಾಲಿನಿಂದ ಪ್ರಾರಂಭಿಸಲಾಗಿತ್ತು.

ದಿನಾಂಕ : 14.12.2009 ರಲ್ಲಿ ಆರ್.ಐ.ಡಿ.ಎಫ್.ನಬಾರ್ಡ್–15ರಡಿ ರೂ.121.00 ಲಕ್ಷಗಳ ಅನುದಾನವನ್ನು ಒದಗಿಸಿ ಕರ್ನಾಟಕ ಗೃಹ ಮಂಡಳಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗಿತ್ತು. ಸದರಿ ಕಾಲೇಜಿನ ಕಟ್ಟಡಕ್ಕೆ ನಿವೇಶನ ಪಡೆಯಲು ಸಾಕಷ್ಟು ಪ್ರಯತ್ನಗಳನ್ನು ಮಾಡಲಾಗಿತ್ತು, ಆದರೆ ನಿವೇಶನ ಲಭ್ಯವಾಗದ ಕಾರಣ ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಿರುವುದಿಲ್ಲ.

ದಿನಾಂಕ: 30.01.2014 ರಲ್ಲಿ ಸರ್ಕಾರಿ ಕಿರಿಯ ಶಾಲೆ, ಬೆಳಂದೂರು ಈ ಶಾಲೆಗೆ ಸೇರಿದ 05 ಎಕರೆ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹಸ್ತಾಂತರಿಸಲಾಯಿತು.

ಇಲಾಖಾ ಕ್ಷೇತ್ರಾಧಿಕಾರಿಗಳ ಶಿಫಾರಸ್ಸಿನನ್ವಯ ಸರ್ಕಾರವು ಆದೇಶ ಸಂಖ್ಯೆ:ಇಡಿ/65/ಹೆಚ್‌ಪಿಸಿ/2013, ದಿನಾಂಕ : 28.05.2014ರ ಆದೇಶದಲ್ಲಿ ಕಾಣಿಯೂರಿನಲ್ಲಿ ನಡೆಯುತ್ತಿರುವ ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸಲಾಯಿತು.